ಕನ್ನಡಪ್ರಭ

ನೇರ.ದಿಟ್ಟ.ನಿರಂತರ



ಹುಚ್ಚರಿಗೆ ಅಣ್ವಸ್ತ್ರ ಸಿಗಬಾರದು ಎಂದು ಇರಾನ್ ಯುದ್ಧ: ಡೊನಾಲ್ಡ್ ಟ್ರಂಪ್

ಇರಾನ್ ವಿರುದ್ಧ ಯುದ್ಧ ಮಾಡಿದ್ದಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಮರ್ಥನೆ. 'ಹುಚ್ಚರ ಕೈಗೆ ಅಣ್ವಸ್ತ್ರ ಸಿಗದೇ ಇರಲಿ ಎಂದು ನಾವು ಅವರ ಮೇಲೆ ಆಕ್ರಮಣ ಮಾಡಿದೆವು. ನಮ್ಮ ಸಮರವು ಇರಾನ್ ಕಪಿಮುಷ್ಟಿಯಿಂದ ಮಧ್ಯಪ್ರಾಚ್ಯವನ್ನು ರಕ್ಷಿಸಿದೆ' ಎಂದ ಅಧ್ಯಕ್ಷ. 9


ವಿವೇಕಾ ವಿದ್ಯಾ ಸಂಸ್ಥೆ (ರಿ.)
ಎಂ. ಶ್ರೀನಿವಾಸ್ ಎಜುಕೇಷನಲ್ & ಚಾರಿಟೇಬಲ್ ಟ್ರಸ್ಟ್ (ರಿ.)
ಹನಕೆರೆ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ – 571404
-M SRINIVAS- INTERNATIONAL PUBLIC SCHOOL
2026 - 2027 ನೇ ಸಾಲಿನ ಶಾಲಾ ದಾಖಲಾತಿ ಪ್ರಾರಂಭವಾಗಿದೆ.
ಕನ್ನಡ ಮಾಧ್ಯಮ
100% RESULT
2025 - 2026 ನೇ ಸಾಲಿನ SSLC ಪರೀಕ್ಷೆಯಲ್ಲಿ 100% ಫಲಿತಾಂಶ
ಆಂಗ್ಲ ಮಾಧ್ಯಮ
M Srinivas international public school English medium - 2026 - 27 Admission Open now
ನುರಿತ, ಉತ್ಸಾಹಿ ಮತ್ತು ಅನುಭವಿ ಬೋಧಕ ವರ್ಗ
ಕ್ರೀಡೆ ಮತ್ತು ಕಲೆಗಳ ಮೂಲ ಕೌಶಲ್ಯಗಳ ತರಬೇತಿ
ಸುಸಜ್ಜಿತ ಕ್ರೀಡಾಂಗಣ ಮತ್ತು ಗ್ರಂಥಾಲಯಗಳ ವ್ಯವಸ್ಥೆ
ವಿಶೇಷ ಕಾಳಜಿಯ ಮೂಲಕ ಮಕ್ಕಳ ಕಲಿಕೆಗೆ ಒತ್ತು
ಶಾಲಾ ವಾಹನ ಮತ್ತು ವಸತಿ ನಿಲಯ ಸೌಲಭ್ಯ
ಮಾಹೆವಾರು ನಿಯಮಿತ ಪೋಷಕರ ಸಭೆ ಆಯೋಜನೆ
* 1 ರಿಂದ 7 ನೇ ತರಗತಿ ಸರ್ಕಾರದ ಅನುದಾನಕ್ಕೆ ಒಳಪಟ್ಟಿದೆ. * ಉಚಿತ ಗುಣಾತ್ಮಕ ಶಿಕ್ಷಣ. * ಉಚಿತ ಪಠ್ಯಪುಸ್ತಕ ವಿತರಣೆ.
* ಕ್ಷೀರ ಭಾಗ್ಯ ಯೋಜನೆ * ಮಧ್ಯಾಹ್ನದ ಬಿಸಿ ಊಟ ವಿತರಣೆ. * ವಾರದ ಆರು ದಿನದಲ್ಲಿ ಪೌಷ್ಟಿಕಾಂಶ ಮೊಟ್ಟೆ/ಬಾಳೆಹಣ್ಣು ವಿತರಣೆ.
ಹಾಸ್ಟೆಲ್ ಸೌಲಭ್ಯವಿದೆ
ಉಚಿತ ವಿದ್ಯಾಭ್ಯಾಸ ಕನ್ನಡ ಮಾಧ್ಯಮದವರಿಗೆ
ನಾವು ಶಿಕ್ಷಕರನ್ನು ನೇಮಿಸಿಕೊಳ್ಳುತ್ತಿದ್ದೇವೆ (ಅರ್ಹತೆ TGT / PGT)
1 ರಿಂದ 7 ನೇ ತರಗತಿ: ಯಾವುದೇ ಪದವಿ, ಡಿ.ಎಡ್, ಬಿ.ಎಡ್
8 ರಿಂದ 10 ನೇ ತರಗತಿ: ಯಾವುದೇ ಪದವಿ, ಬಿ.ಎಡ್ ಜೊತೆಗೆ ಸ್ನಾತಕೋತ್ತರ ಪದವಿ
vvshs1997@gmail.com
ಹನಕೆರೆ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ – 571404
+91 98450 41912 / +91 91485 76991 / +91 96636 09416 / +91 98441 36279

ಕನ್ನಡಪ್ರಭ

ನೇರ.ದಿಟ್ಟ.ನಿರಂತರ



ಸಾಹಿತ್ಯಪ್ರಭ ದಲ್ಲಿ ಈ ಸಲ ಏನೇನಿದೆ?

1 70ನೇ ವಸಂತಕ್ಕೆ ಕಾಲಿಡುತ್ತಿರುವ ಖ್ಯಾತ ಹನಿಗವಿ ಡುಂಡಿರಾಜ್ ಸಂದರ್ಶನ

2 'ಸ್ವಗತದಲ್ಲಿ ಸಂವಾದ' ಕೃತಿ ರಚನಾ ಅನುಭವ ಕುರಿತು ವಿಕ್ರಂ ವಿಸಾಜಿ ಬರಹ

3 ಬ್ರಾಹ್ಮಣರ ಕಾಫಿಬಾರ್ ಮಾಲೀಕ ರಾಧಾ ಕೃಷ್ಣ ಅಡಿಗ ಜೀವನಕಥನದ ಆಯ್ದ ಭಾಗ

4 ಎಲ್.ಪಿ. ಕುಲಕರ್ಣಿ ಬರೆದ 'ಜವಾಬ್ದಾರಿ, ಪ್ರೀತಿ ಹಾಗೂ ಛಲ' ಕಥೆಯ ಓದು

ಸಾಹಿತ್ಯಕ್ಕೇ ಸಂಪೂರ್ಣ ಮೀಸಲಾಗಿರುವ 'ಕನ್ನಡಪ್ರಭ' ಇ-ಪುರವಣಿ ಹೊಸ ಆವೃತ್ತಿ ಲಭ್ಯ.

ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಪತ್ರಿಕೆ ಓದಿ.



ಟಿ20 ಮಹಿಳಾ ವಿಶ್ವಕಪ್ ಟೀಂಗೆ ಕನ್ನಡತಿ ಶ್ರೇಯಾಂಕ ಪಾಟೀಲ್ ↘13



ಮೊಬೈಲ್ 'ಎಮರ್ಜೆನ್ಸಿ ಅಲರ್ಟ್' ಮೆಸೇಜ್‌ನಿಂದ ಬೆಚ್ಚಿಬಿದ್ದ ಜನತೆ! ↘11



ಪ್ರಸಾರ ಭಾರತಿ ಮುಖ್ಯಸ್ಥರಾಗಿ ಚಿತ್ರ ಸಾಹಿತಿ ಪ್ರಸೂನ್ ಜೋಶಿ ↘11



ತಿರುಪತಿ ಲಡ್ಡು ತುಪ್ಪದ ಅಕ್ರಮ ಇನ್ನೂ 1 ತನಿಖೆಯಲ್ಲಿ ಸಾಬೀತು ↘11

565 ಘೋಷಣೆಗಳ ಆದೇಶಕ್ಕೆ ಮಾಸಾಂತ್ಯದ ಡೆಡ್‌ಲೈನ್

ಬಜೆಟ್ ಘೋಷಣೆಗಳೆಲ್ಲ ಮೇ ಒಳಗೇ ಜಾರಿ ಆಗಬೇಕು: ಸಿದ್ದು

ಅನುಷ್ಠಾನ ಆಗದಿದ್ದರೆ ಕಾರ್ಯದರ್ಶಿಗಳೇ ಹೊಣೆ: ಸಿಎಂ ವಾರ್ನಿಂಗ್

ಕಳೆದ ವರ್ಷದ ಆಯವ್ಯಯದ 13 ಘೋಷಣೆ ಜಾರಿ ಆಗದ್ದಕ್ಕೆ ಆಕ್ರೋಶ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

'ಕಳೆದ ಬಜೆಟ್‌ನಲ್ಲಿ ಬಾಕಿ .ಇರುವ ಘೋಷಣೆಗಳನ್ನು ತುರ್ತು ಕಾರ್ಯಗತಗೊಳಿಸಿ. 2026-27ನೇ ಸಾಲಿನ ಬಜೆಟ್‌ನ 565 ಘೋಷಣೆಗಳ ಜಾರಿಗೆ ಹಣಕಾಸು ಇಲಾಖೆಯಿಂದ ಅನುಮೋದನೆ ಪಡೆದು ಮೇ ತಿಂಗಳೊಳಗೆ ಆದೇಶಗಳ ಮೂಲ ಅನುಷ್ಠಾನ ಪ್ರಕ್ರಿಯೆ ಆರಂಭಿಸಿ. ಇಲಾಖಾವಾರು ಬಾಕಿ ಇರುವ ಕಡತಗಳನ್ನು ಶೀಘ್ರ ವಿಲೇವಾರಿ ಮಾಡಿ, ಹಣಕಾಸು ಇಲಾಖೆ ಮಂಜೂರಾತಿ ನೀಡಿರುವ 24,300 ಹುದ್ದೆಗಳ ಭರ್ತಿಗೆ ಕ್ರಮ ವಹಿಸಿ.'

ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದಲ್ಲಿ ಶನಿವಾರ ಮುಖ್ಯ ಕಾರ್ಯದರ್ಶಿ ಅವರ ಸಮ್ಮುಖದಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳ ಸಭೆಯಲ್ಲಿ ನೀಡಿದ ಖಡಕ್ ಸೂಚನೆ. ಅಧಿಕಾರ ಹಂಚಿಕೆ, ಮುಖ್ಯಮಂತ್ರಿ ಬದಲಾವಣೆ ಗೊಂದಲ ಮುಂದುವರೆದಿರುವ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಡಳಿತಕ್ಕೆ ಚುರುಕು ಮುಟ್ಟಿಸುವ ಕೆಲಸ ಮಾಡಿದ್ದಾರೆ.

ಕಳೆದ ವರ್ಷದ ಬಜೆಟ್‌ನ 15 ಘೋಷಣೆಗಳು ಇನ್ನೂ ಅನುಷ್ಠಾನಗೊಂಡಿಲ್ಲ. ಇದಕ್ಕೆ ಯಾರು ಹೊಣೆ? ↘10



ವಿಧಾನಸೌಧದಲ್ಲಿ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳ ಸಭೆ ನಡೆಸಿ 'ಪ್ರಗತಿ ಕೈಪಿಡಿ' ಬಿಡುಗಡೆ ಮಾಡಿದರು.

ಸಮಸ್ಯೆ ಇತ್ಯರ್ಥ ಆಗದಿದ್ರೆ ನಂಬಿಕೆಯೇ ಹೋಗುತ್ತದೆ



ಸಾರ್ವಜನಿಕರ ಕುಂದುಕೊರತೆಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡದಿದ್ದರೆ ಜನರಿಗೆ ಸರ್ಕಾರದ ಮೇಲಿನ ನಂಬಿಕೆಯೇ ಹೊರಟು ಹೋಗುತ್ತದೆ. ಇದಕ್ಕೆ ಅವಕಾಶ ನೀಡಬಾರದು. ಸಕಾಲ ಅಡಿ ಸ್ವೀಕರಿಸಲಾಗುವ ಅರ್ಜಿಗಳನ್ನು ಸಕಾಲದಲ್ಲಿಯೇ ವಿಲೇವಾರಿ ಮಾಡಬೇಕು.

• **ಸಿದ್ದರಾಮಯ್ಯ** ಮುಖ್ಯಮಂತ್ರಿ

ಸಿದ್ದು ಸೂಚನೆಗಳು

- ಹಣಕಾಸು ಇಲಾಖೆ ಮಂಜೂರಾತಿ ನೀಡಿರುವ 24,300 ಹುದ್ದೆಗಳ ಭರ್ತಿಗೆ ಕ್ರಮ ವಹಿಸಿ
- ಬಜೆಟ್‌ನ 565 ಘೋಷಣೆಗಳಿಗೆ ಅನುಮೋದನೆ ಪಡೆದು ಮೇ ಅಂತ್ಯದೊಳಗೆ ಜಾರಿ ಮಾಡಿ
- ಕಳೆದ ವರ್ಷದ ಬಜೆಟ್‌ನ 15 ಘೋಷಣೆ ಇನ್ನೂ ಅನುಷ್ಠಾನಗೊಂಡಿಲ್ಲ, ಇದಕ್ಕೆ ಯಾರು ಹೊಣೆ?
- ಬಾಕಿ ಇರುವ ಕಡತಗಳು 10000 ಕ್ಕಿಂತ ಹೆಚ್ಚಿವೆ. ಅವುಗಳ ಶೀಘ್ರ ವಿಲೇವಾರಿಗೆ ಕ್ರಮ ವಹಿಸಿ
- ಮಳೆ ಶೇ.5ರಷ್ಟು ಮಳೆ ಕಡಿಮೆ ಆಗುವ ಆತಂಕ. ಕುಡಿವ ನೀರಿಗೆ ತೊಂದರೆ ಆಗಕೂಡದು

ತುಮಕೂರಿನಲ್ಲಿ 20ಕ್ಕೆ ಸಿದ್ದು ಸರ್ಕಾರದ 3ನೇ ವರ್ಷದ ಸಂಭ್ರಮ

2 ಲಕ್ಷ ಜನರನ್ನು ಸೇರಿಸಿ ಬೃಹತ್ ಸಮಾವೇಶ ವಿವಿಧ ಕಾಮಗಾರಿ ಉದ್ಘಾಟನೆ, ಶಂಕುಸ್ಥಾಪನೆ ಡಾ.ಪರಂ ನೇತೃತ್ವದಲ್ಲಿ ನಿನ್ನೆ ಪೂರ್ವ ಸಿದ್ಧತೆ ಸಭೆ

• **ಕನ್ನಡಪ್ರಭ ವಾರ್ತೆ** ತುಮಕೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಮೇ 20ಕ್ಕೆ 3 ವರ್ಷ ತುಂಬಲಿದ್ದು, ಈ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ಅಂದು ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ.



ಈ ನಿಮಿತ್ತ ನಗರದ ಸರ್ಕಾರಿ ಜೂನಿಯರ್‌ಕಾಲೇಜುಮೈದಾನದಲ್ಲಿ ಕಾರ್ಯಕ್ರಮ ನಡೆಸಲು ತಾತ್ಕಾಲಿಕವಾಗಿ ಚಿಂತಿಸಿದ್ದು, ಸಕಲ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾಡಳಿತಕ್ಕೆ ಗೃಹ ಸಚಿವ ಡಾ.ಜಿ.ಪರಮೇಶ್ವರ ಸೂಚನೆ ನೀಡಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶನಿವಾರ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು, 'ಜಿಲ್ಲೆಯಲ್ಲಿ ಕಂದಾಯ ಇಲಾಖೆ ಹಾಗೂ ವಿವಿಧ ಇಲಾಖೆಗಳ ಅಭಿವೃದ್ಧಿ ಸಮಾವೇಶವನ್ನು ಸಿದ್ದರಾಮಯ್ಯ ಅವರನೇತೃತ್ವದಲ್ಲಿನಡೆಸಲು ಉದ್ದೇಶಿಸಲಾಗಿತ್ತು. ಆದರೆ, ಈಗ ಮೇ 20ರಂದೇ ರಾಜ್ಯ ಸರ್ಕಾರಕ್ಕೆ 3 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ತುಮಕೂರಿನಲ್ಲೇ ರಾಜ್ಯ ಮಟ್ಟದ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗುತ್ತಿದೆ' ಎಂದು ತಿಳಿಸಿದರು.

ಬುಧವಾರ ನಡೆಯುವ ಸಮಾವೇಶಕ್ಕೆ ರಾಜ್ಯಾದ್ಯಂತ 2 ಲಕ್ಷಕ್ಕೂ ಅಧಿಕ ಫಲಾನುಭವಿಗಳು ಭಾಗವಹಿಸಲಿದ್ದು, ರಾಜ್ಯಾದ್ಯಂತ ಆಗಮಿಸುವ ಫಲಾನುಭವಿಗಳಿಗಾಗಿ 4 ಸಾವಿರ ಬಸ್‌ಗಳ ಅಗತ್ಯವಿರುತ್ತದೆ. ಅಲ್ಲದೆ, ರಾಜ್ಯ ಸರ್ಕಾರದ ಅಭೂತಪೂರ್ವ ಯಶಸ್ವಿ ಯೋಜನೆಗಳ ಅನುಷ್ಠಾನ ಮತ್ತಿತರ ಇಲಾಖೆಗಳ ಪ್ರಗತಿ ದರ್ಶನ ಕುರಿತ ವಸ್ತುಪ್ರದರ್ಶನ ನಡೆಯಲಿದ್ದು, ಫಲಾನುಭವಿಗಳಿಗೆ ಸವಲತ್ತುಗಳ ವಿತರಣೆ ಮಾಡಲಾಗುತ್ತದೆ. ↘10



- ರಾಜ್ಯಾದ್ಯಂತ 2 ಲಕ್ಷಕ್ಕೂ ಅಧಿಕ ಫಲಾನುಭವಿಗಳು ಸಮಾವೇಶದಲ್ಲಿ ಭಾಗಿ
- ಫಲಾನುಭವಿಗಳಿಗಾಗಿ ರಾಜ್ಯದ ವಿವಿಧೆಡೆಯಿಂದ 4000 ಬಸ್‌ಗಳ ವ್ಯವಸ್ಥೆ
- ಸರ್ಕಾರದ 3 ವರ್ಷದ ಸಾಧನೆ ವಿವರಿಸಲು ವಿವಿಧ ಇಲಾಖೆಗಳ ವಸ್ತು ಪ್ರದರ್ಶನ ಏರ್ಪಾಡು
- ಅಂದು ಮುಖ್ಯಮಂತ್ರಿಗಳಿಂದ ವಿವಿಧ ಕಾಮಗಾರಿಗಳ ಉದ್ಘಾಟನೆ, ಗುದ್ದಲಿಪೂಜೆ
- ಸಮಾರಂಭಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಿ: ಸಚಿವ ಪರಂ ಸೂಚನೆ



ಜೀವನದಲ್ಲಿ ಕಳೆದು ಹೋಗಿರುವ ಹೊಳಪನ್ನು ಮರಳಿ ತರುವ ಸ್ಥಳಗಳನ್ನು ಅರಸುವ ಜೆನ್‌ಜೀಗಳ ಹೊಸ ಟ್ರಾವೆಲ್ ಟ್ರೆಂಡ್ 'ಗ್ಲೋಕೇಷನ್'. ಈ ಕುರಿತು ಮಾಹಿತಿಯುಕ್ತ ಬರಹ. ಪುಟ 14

ರಿಷಬ್ ಶೆಟ್ಟಿ ಭೇಟಿ ವೇಳೆ ಕಾಂತಾರಕ್ಕೆ ಅಮಿತ್ ಶಾ ಪ್ರಶಂಸೆ



ನಟ ರಿಷಬ್ ಶೆಟ್ಟಿ ಶನಿವಾರ ದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾದರು. ಈ ವೇಳೆ ಕಾಂತಾರ ಹಾಗೂ ಕಾಂತಾರ ಚಾಪ್ಟರ್-1 ಬಗ್ಗೆ ಶಾ ಮೆಚ್ಚುಗೆ ವ್ಯಕ್ತಪಡಿಸಿದರು. ವಿವರ ↘9

ನಾಳೆ ಉಪಚುನಾವಣೆ ಮತಗಳ ಎಣಿಕೆ: ಭಾರೀ ಕುತೂಹಲ

ನವದೆಹಲಿ/ಬೆಂಗಳೂರು: 5 ರಾಜ್ಯಗಳ ವಿಧಾನಸಭೆ ಚುನಾವಣೆ ಹಾಗೂ ಕರ್ನಾಟಕದ ದಾವಣಗೆರೆ ಮತ್ತು ಬಾಗಲಕೋಟೆ ವಿಧಾನ ಸಭೆ ಉಪಚುನಾವಣೆ ಫಲಿತಾಂಶ ಸೋಮವಾರ ಪ್ರಕಟವಾಗಲಿದೆ. ವಿವರ ↘9, 11

ನೀತಿ ಆಯೋಗಕ್ಕೆ ಮೈಸೂರು ಮೂಲದ ಬಾಲಸುಬ್ರಹ್ಮಣಿಯಂ



ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಮುಖ್ಯಸ್ಥರಾಗಿರುವ ನೀತಿ ಆಯೋಗದ ಶಾಶ್ವತ ಸದಸ್ಯರಾಗಿ ಮೈಸೂರು ಮೂಲದ ಲೇಖಕ ಆರ್. ಬಾಲಸುಬ್ರಹ್ಮಣಿಯಂ ಅವರನ್ನು ನೇಮಿಸಲಾಗಿದೆ. ವಿವರ ↘8

ಪುಟ ↘11

ಇಂದು ದೇಶಾದ್ಯಂತ ನೀಟ್ ಯುಜಿ ಪರೀಕ್ಷೆ

ಪುಟ ↘10


ಕೆಪಿಎಸ್‌ಸಿ ಅಕ್ರಮ: ಮಾಜಿ ಅಧ್ಯಕ್ಷ ಕೃಷ್ಣ ಸೇರಿ 6 ಜನ ಖುಲಾಸೆ

ಶೃಂಗೇರಿ ಮತ ಎಣಿಕೆ ಪೂರ್ಣ: ಗೆದ್ದಿದ್ದು ಯಾರೆಂಬ ಕುತೂಹಲ

ಶಾಸಕ ರಾಜೇಗೌಡ ಗೆದ್ದರೆಂದು ಕಾಂಗ್ರೆಸ್ಸಿಗರ ಸಂಭ್ರಮಾಚರಣೆ ಜೀವರಾಜ್ ಜಯಶಾಲಿ: ಬಿಜೆಪಿಗರು | ಗೊಂದಲ, ಹೈಡ್ರಾಮಾ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಹೈಕೋರ್ಟ್ ಆದೇಶದಂತೆಶನಿವಾರಚಿಕ್ಕಮಗಳೂರಲ್ಲಿ ನಡೆದ ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ ತೀವ್ರ ಕುತೂಹಲ, ಗೊಂದಲ ಮತ್ತು ಹೈಡ್ರಾಮಾಗೆ ಸಾಕ್ಷಿಯಾಗಿದೆ. ಬೆಳಗ್ಗೆ 9 ಗಂಟೆಗೆ ಆರಂಭವಾದ



1,822 ಅಂಚೆ ಮತಗಳ ಮರು ಎಣಿಕೆ ತಡರಾತ್ರಿ ಮುಕ್ತಾಯ ಹಂತಕ್ಕೆ ಬಂದಿದೆ. ಎಣಿಕೆ ವೇಳೆ ಚಿತ್ರಣವೇ ಬದಲಾಗಿದೆ ಎನ್ನಲಾಗಿದ್ದು, ಕಾಂಗ್ರೆಸ್‌ನ ಹಾಲಿ ಶಾಸಕ ಟಿ.ಡಿ. ರಾಜೇಗೌಡ ಗೆದ್ದರೆ ಅಥವಾ ಬಿಜೆಪಿಯ ಜೀವರಾಜ್ ಗೆದ್ದರೆ ಎಂಬುದು ಕುತೂಹಲ ಕೆರಳಿಸಿದೆ. ↘9

ಕೊಲೆ ದೋಷಿ ವಿನಯ ಕುಲಕರ್ಣಿಗೆ ಮತ್ತೊಂದು ಶಾಕ್: ಶಾಸಕತ್ವ ರದ್ದು

ಯೋಗೇಶಗೌಡ ಕೊಲೆ ಕೇಸಲ್ಲಿ ಶಿಕ್ಷೆ ಪ್ರಕಟ ದಿನದಿಂದಲೇ ಅನರ್ಹ ಶಿಕ್ಷೆ ಅನುಭವಿಸಿ ಬಿಡುಗಡೆ ಆದ 6 ವರ್ಷಗಳ ಅವಧಿಗೆ ಅನರ್ಹತೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಧಾರವಾಡದ ಜಿಪಂ ಮಾಜಿ ಸದಸ್ಯ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆಗುರಿಯಾಗಿರುವ ಧಾರವಾಡ ಗ್ರಾಮಾಂತರ ಕ್ಷೇತ್ರದ ಶಾಸಕ ವಿನಯ್ ಕುಲಕರ್ಣಿ ಅವರು ಶಾಸಕ ಸ್ಥಾನದಿಂದ ಅನರ್ಹಗೊಂಡಿದ್ದಾರೆ. ಈ ಸಂಬಂಧ ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಅವರು ಶನಿವಾರ ಅಧಿಕೃತ ಅಧಿ



ಸೂಚನೆ ಹೊರಡಿಸಿದ್ದಾರೆ. ಈ ಮುಖಾಂತರ ವಿಧಾನಸಭೆಯ ಒಂದು ಸ್ಥಾನ ಖಾಲಿಯಾಗಿದೆ ಎಂದು ಅಧಿಸೂಚನೆಯಲ್ಲಿ ಉಲ್ಲೇಖಿಸಿದ್ದಾರೆ. ನಗರದ 82ನೇ ಸಿಸಿಎಚ್(ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ) ನ್ಯಾಯಾಲಯವು ಕೊಲೆ ಪ್ರಕರಣ ಸಂಬಂಧ ವಿನಯ್ ಕಲುಕರ್ಣಿ ಅವರನ್ನು ದೋಷಿ ಎಂದು ನಿರ್ಧರಿಸಿ ಏ.15ರಂದು ಶಿಕ್ಷೆ ಪ್ರಕಟಿಸಿದೆ. ↘10

ಬಿಎಸ್‌ವೈ ರಾಜಕೀಯ ಪಯಣಕ್ಕೆ 50 ವರ್ಷ: ಸಂತೋಷ್ ಶುಭಾಶಯ



ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಶನಿವಾರ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಬೆಂಗಳೂರಲ್ಲಿ ಭೇಟಿ ಮಾಡಿದರು. ಈ ವೇಳೆ ಪಂಚರಾಜ್ಯ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದರು ಹಾಗೂ ಬಿಎಸ್‌ವೈ ಅವರ 50 ವರ್ಷಗಳ ರಾಜಕೀಯ ಪಯಣಕ್ಕೆ ಶುಭ ಕೋರಿದರು. ವಿವರ ↘9

ಕೊತಕೊತ | ಬಿಸಿಲ ಬೇಗೆಗೆ ಬಸವಳಿದ ಜನ

ಕಲಬುರಗಿಯಲ್ಲಿ ಈ ಬೇಸಿಗೆಯ ದಾಖಲೆ 45 ಡಿಗ್ರಿ ತಾಪಮಾನ

ಜಿಲ್ಲೆಯ ಬಹುತೇಕ ಕಡೆ 44 ಡಿಗ್ರಿ ತಾಪ



• **ಕನ್ನಡಪ್ರಭ ವಾರ್ತೆ** ಕಲಬುರಗಿ

ರಾಜ್ಯದಲ್ಲಿ ಬೇಸಿಗೆಯ ಬಿಸಿಲಿನ ತಾಪ ದಿನದಿಂದ ದಿನಕ್ಕೆ ಏರುತ್ತಿದ್ದು, 'ಬಿಸಿಲ ನಗರಿ' ಕಲಬುರಗಿ ಅಕ್ಷರಶಃ ಕೆಂಡದಂತಾಗಿದೆ. ಜಿಲ್ಲೆಯ ಕಾಳಗಿಯ ಕೋಡ್ಲಿ ಗ್ರಾಮದಲ್ಲಿ ಶನಿವಾರ ರಾಜ್ಯದಲ್ಲೇ ಗರಿಷ್ಠ ತಾಪಮಾನ 45.4 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಇದು ಈ ಬೇಸಿಗೆಯ ಅತ್ಯಧಿಕ ತಾಪಮಾನ ಎನಿಸಿದೆ. ಹವಾಮಾನ ಇಲಾಖೆಯ ವರದಿಗಳ ಪ್ರಕಾರ ಶನಿವಾರ, ಕಾಳಗಿಯ ಕೋಡ್ಲಿ ಗ್ರಾಮದಲ್ಲಿ 45.4 ಡಿಗ್ರಿ ಸೆಲ್ಸಿಯಸ್, ಚಿಂಚೋಳಿಯ ಐನಾಪುರದಲ್ಲಿ 45 ಡಿಗ್ರಿ, ಆಳಂದದ ನರೋಣಾದಲ್ಲಿ 44. 7 ಡಿಗ್ರಿ, ಅಫಜಲಪುರದ ಆತನೂರಲ್ಲಿ 44.6 ಡಿಗ್ರಿ ತಾಪಮಾನ ದಾಖಲಾಗಿದೆ. ↘10

ಸುರಪುರದಲ್ಲಿ ಬಿಸಿಲ ತಾಪಕ್ಕೆ ಕಾರ್ಮಿಕ ಸಾವು ↘10

ಕನ್ನಡಪ್ರಭ
ಭಾನುವಾರ 3.05.2026

ಗರಿಷ್ಠ 35°c | ಕನಿಷ್ಠ 23°c

ನಗರದಲ್ಲಿ ಇಂದು ಪೆಟ್ರೋಲ್-ಡೀಸೆಲ್ ದರ

ಪೆಟ್ರೋಲ್	ಡೀಸೆಲ್
102.92	90.99

ಸುದ್ದಿ ಸಿಂಚನ

ಕೆಐಎನಲ್ಲಿ ₹ 18 ಕೋಟಿ ಮೌಲ್ಯದ ಡ್ರಗ್ಸ್ ವಶಕ್ಕೆ

ಬೆಂಗಳೂರು: ಅಂತಾರಾಷ್ಟ್ರೀಯ ಡ್ರಗ್ಸ್ ಮಾಫಿಯಾ ವಿರುದ್ಧ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಮತ್ತೊಂದು ಭರ್ಜರಿ ಕಾರ್ಯಾಚರಣೆ ನಡೆಸಿ ವಿದೇಶದಿಂದ ರಾಜ್ಯಕ್ಕೆ ತರುತ್ತಿದ್ದ 21.53 ಕೋಟಿ ರು ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ. ಶುಕ್ರವಾರ ರಾತ್ರಿ ಪ್ರತ್ಯೇಕವಾಗಿ ನಾಲ್ವರು ಬ್ಯಾಂಕಾಕ್ ಪ್ರವಾಸಿಗರನ್ನು ಸೆರೆ ಹಿಡಿದ ಕಸ್ಟಮ್ಸ್ ಅಧಿಕಾರಿಗಳು, ಆರೋಪಿಗಳಿಂದ 21.53 ಕೋಟಿ ರು. ಬೆಲೆಯ 61.68 ಕೆಜಿ ಹೈಡ್ರೋ ಗಾಂಜಾ ಜಪ್ತಿ ಮಾಡಿ ದ್ದಾರೆ. ಕಳೆದ 4 ತಿಂಗಳ ಅವಧಿಯಲ್ಲಿ ಡ್ರಗ್ಸ್ ಮಾಫಿಯಾ ವಿರುದ್ಧ ಕಸ್ಟಮ್ಸ್ ಅಧಿಕಾರಿಗಳು ನಡೆಸಿದ ಬಹುದೊಡ್ಡ ದಾಳಿಗಳಲ್ಲೊಂದಾಗಿದೆ. ಕೆಐಎಗೆ ರಾತ್ರಿ ಬಂದಿಳಿದ ಮೂವರು ಬ್ಯಾಂಕಾಕ್ ಪ್ರವಾಸಿಗರನ್ನು ಬಂಧಿಸಿ ಆರೋಪಿ ಗಳಿಂದ 18.68 ಕೋಟಿ ರು ಮೌಲ್ಯದ 52.68 ಕೆಜಿ ಗಾಂಜಾ ಜಪ್ತಿ ಮಾಡಿದ್ದಾರೆ. ಅದೇ ದಿನ ಮತ್ತೊಬ್ಬನಿಂದ 3.15 ಕೋಟಿ ರು ಮೌಲ್ಯದ 9 ಕೆಜಿ ಹೈಡ್ರೋ ಗಾಂಜಾ ವಶಪಡಿಸಿಕೊಂಡಿದ್ದಾರೆ. ಬ್ಯಾಂಕಾಕ್‌ನಿಂದ ಡ್ರಗ್ಸ್ ಕಳ್ಳ ಸಾಗಾಣಿಕೆ ಬಗ್ಗೆ ಖಚಿತ ಮಾಹಿತಿ ಪಡೆದು ಕಸ್ಟಮ್ಸ್ ಕಾರ್ಯಾಚರಣೆ ನಡೆಸಿದೆ.

ಬೆಸ್ಕಾಂ ಜಾಗೃತದಳದ ಎಸ್‌ಪಿ ಲಾವಣ್ಯ ನಿಧನ

ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ ಮಹಿಳಾ ಪೊಲೀಸ್ ಅಧಿಕಾರಿ ಲಾವಣ್ಯ ಅವರು ಚಿಕಿತ್ಸೆ ಫಲಕಾರಿಯಾಗದೇ ನಿಧನರಾಗಿದ್ದಾರೆ. ಬೆಸ್ಕಾಂನ ವಿಜಿಲೆನ್ಸ್ ಎಸ್‌ಪಿಯಾಗಿದ್ದ ಬಿ.ಎನ್. ಲಾವಣ್ಯ (39) ಮೃತ ಮಹಿಳಾ ಅಧಿಕಾರಿ. ಲಾವಣ್ಯ ಅವರು ಚಿಂತಾಮಣಿಯ ದೊಡ್ಡಗಂಜೂರು ಗ್ರಾಮದವರು. ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೆ



ಶನಿವಾರ ಮೃತಪಟ್ಟಿದ್ದಾರೆ. ಇವರು ಕರುಳಿನ (ಕೊಲೊನ್) ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. 2010ರ ಬ್ಯಾಚ್‌ನ ಕೆಎಸ್‌ಪಿಎಸ್ ಅಧಿಕಾರಿಯಾಗಿ ದ್ದರು. ಮಂಡ್ಯ – ಹೆಚ್ಚುವರಿ ಪೊಲೀಸ್ ಅಧೀಕ್ಷರಾಗಿ, ಬಳ್ಳಾರಿ– ಹೆಚ್ಚುವರಿ ಪೊಲೀಸ್ ಅಧೀಕ್ಷರಾಗಿ, ಬೆಂಗಳೂ ರಿನಲ್ಲಿ ಇಂಟಲಿಜೆನ್ಸ್, ಬೆಂಗಳೂ ರಿನಲ್ಲಿ ಡಿಸಿಆರ್‌ಇ ಎಸ್‌ಪಿಯಾಗಿ ಸೇವೆ ಸಲ್ಲಿಸಿದ್ದಾರೆ. 2023 ರಿಂದ ಬೆಸ್ಕಾಂ ಎಸ್ಪಿಯಾಗಿದ್ದರು. ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ ಸಲೀಂ ಮತ್ತು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ಲಾವಣ್ಯ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು. ಲಾವಣ್ಯ ಅವರಿಗೆ 10 ವರ್ಷದ ಪುತ್ರ, 3 ವರ್ಷದ ಪುತ್ರಿ ಇದ್ದಾರೆ.

ಒಳ ಮೀಸಲು: ಕೃಷಿ ಅಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆಗೆ ತಡೆ

ಬೆಂಗಳೂರು: ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿಗಳ ನೇಮಕಾತಿ ಸಂಬಂಧ ಹೊರಡಿಸಿರುವ ಅಧಿಸೂಚನೆಯನ್ನು ಹಿಂಪಡೆಯಲು ಕೃಷಿ ಇಲಾಖೆ ಕೋರಿರುವ ಕಾರಣ ಅರ್ಜಿ ಸಲ್ಲಿಕೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ. ಪರಿಶಿಷ್ಟ ಜಾತಿಗೆ ಶೇ.15ರಷ್ಟು ಮೀಸಲಾತಿ ನಿಗದಿಪಡಿಸಿ ಸರ್ಕಾರ ಆದೇಶ ಹೊರಡಿಸಿದೆ. ಇದರಲ್ಲಿ ಒಳಮೀಸಲಾತಿ ಪ್ರಮಾಣವನ್ನೂ ಹಂಚಿಕೆ ಮಾಡಿದೆ. ಅದನ್ನು ಅಳವಡಿಸಿಕೊಂಡು ಪರಿಷ್ಕೃತ ಅಧಿಸೂಚನೆ ಹೊರಡಿಸಬೇಕಿರುವ ಕಾರಣ ಚಾಲ್ತಿಯಲ್ಲಿರುವ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಳಿಸಲು ಕೃಷಿ ಆಯುಕ್ತರು ಕೋರಿದ್ದಾರೆ.

ಇನ್ನಷ್ಟು ನಗರ ಸುದ್ದಿಗಳು ಪುಟ 12ರಲ್ಲಿ



ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಹಾಗೂ ಮಾಜಿ ಸಚಿವ ಸಿ.ಟಿ.ರವಿ ಅವರು ಶನಿವಾರ ಸಂಜೆ ನಗರದ ಚಾಮರಾಜಪೇಟೆಯ ಎಸ್‌ಎಲ್‌ವಿ ಕಾಫಿ ಬಾರ್‌ಗೆ ತೆರಳಿ ಉಪಾಹಾರ ಸೇವಿಸಿದರು.

ಕಾಫಿ, ತಿಂಡಿ ಸವಿದ ಬಿಜೆಪಿ ನಾಯಕರು

ವಿದ್ಯುತ್ ಶಾಕ್: ತಾಯಿ ಎದುರೇ ಮಗನ ಸಾವು!

ಬಟ್ಟೆ ತರಲು ಹೋದಾಗ ಘಟನೆ

ಬೆಂಗಳೂರು: 3 ದಿನಗಳ ಹಿಂದೆ ಸುರಿದ ಮಳೆಯಿಂದ ರಸ್ತೆ ಬದಿಯ ಕಂಬದಿಂದ ವಿದ್ಯುತ್ ಪ್ರವಹಿಸಿ ಬಾಲಕನೊಬ್ಬ ಸಾವನ್ನಪ್ಪಿರುವ ದಾರುಣ ಘಟನೆ ಶಿವಾಜಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ತಡವಾಗಿ ಬೆಳಕಿಗೆ ಬಂದಿದೆ.ಕೆ.ಜಿ.ಹಳ್ಳಿನಿವಾಸಿಸೈಯದ್‌ಸೋಫಿಯಾನ್ (16) ಮೃತ ದುರ್ದೈವಿ. ತನ್ನ ತಾಯಿ ಜತೆ ಶಿವಾಜಿನಗರಕ್ಕೆ ಬಟ್ಟೆ ಖರೀದಿಸಲು ಸೈಯದ್ ಬಂದಿದ್ದಾಗ ಈ ಅವಘಡ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದ ಸೈಯದ್, ಕಾಲೇಜಿಗೆ ಸೇರಲು ಸಿದ್ಧತೆ ನಡೆಸಿದ್ದ. ತನ್ನ ಮಗನಿಗೆ ಹೊಸ ಬಟ್ಟೆ ಕೊಡಿಸಲು ಶಿವಾಜಿನಗರಕ್ಕೆ ತಾಯಿ ಕರೆತಂದಿದ್ದರು. ಆ ವೇಳೆ ರಸ್ತೆಯಲ್ಲಿ ಹೋಗುವಾಗ ವಿದ್ಯುತ್ ಕಂಬದಿಂದ ಆಕಸ್ಮಿಕವಾಗಿ ಆತನಿಗೆ ವಿದ್ಯುತ್ ಪ್ರವಹಿಸಿದೆ. ಆಗ ಕುಸಿದು ಬಿದ್ದ ಮಗನನ್ನು ತಾಯಿ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದರೆ ಅಷ್ಟರಲ್ಲಿ ಸೈಯದ್ ಕೊನೆಯುಸಿರೆಳೆದಿದ್ದ ಎಂದು ಪೊಲೀಸರು ಹೇಳಿದ್ದಾರೆ.



ಕಬ್ಬನ್ ಪಾರ್ಕ್‌ನಲ್ಲಿಂದು ಶ್ವಾನದತ್ತು ಕಾರ್ಯಕ್ರಮ

ಬೆಂಗಳೂರು: ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಶ್ವಾನಗಳ ದತ್ತು ಪಡೆದುಕೊಳ್ಳಲು ನಂಬಿಕೆ ಮತ್ತು ಒಳಗೊಳ್ಳುವಿಕೆ ಆಂದೋಲನ ಎಂಬ ಕಾರ್ಯಕ್ರಮವನ್ನು ಭಾನುವಾರ ಮೇ 3 ರಂದು ಬೆಳಿಗ್ಗೆ 7.00 ರಿಂದ 11.00 ಗಂಟೆವರೆಗೆ ನಗರದ ಕಬ್ಬನ್ ಪಾರ್ಕ್‌ನಲ್ಲಿ ಆಯೋಜಿಸಲಾಗಿದೆ.ಸಾರ್ವಜನಿಕರು, ಪ್ರಾಣಿ ಪ್ರಿಯರು, ಸಂಘ ಸಂಸ್ಥೆಗಳು, ಎನ್‌ಜಿಓಗಳು, ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕೇಂದ್ರ ನಗರ ಪಾಲಿಕೆ ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್‌ತಿಳಿಸಿದ್ದಾರೆ. ಸಮುದಾಯದ ಶ್ವಾನ ದತ್ತು ಪಡೆದುಕೊಳ್ಳುವ ಸಂದರ್ಭದಲ್ಲಿ ಅಗತ್ಯ ಲಸಿಕೆ ನೀಡಿ, ಶ್ವಾನಗಳಿಗೆ ಆಹಾರ ಕುತ್ತಿಗೆ ಪಟ್ಟಿ, ಚೈನ್ ಒಳಗೊಂಡ ಕಿಟ್ ನೀಡಲಾಗುವುದು. ಸಮುದಾಯದ ಶ್ವಾನಗಳ ದತ್ತು ಸ್ವೀಕಾರ ಅಭಿಯಾನ ಸಹಾನುಭೂತಿ ಮತ್ತು ಸಹಜೀವನವನ್ನು ಉತ್ತೇಜಿಸಲು ಡಾಗ್ ಥಾನ್, ವಾರ್ಡ್ ಮಟ್ಟದ ನಾಗರಿಕರ ಭಾಗವಹಿಸಲು ಸ್ವಯಂಸೇವಕರ ನೋಂದಣಿ, ಮಕ್ಕಳಿಂದ ಪೇಂಟಿಂಗ್ ಚಟುವಟಿಕೆ ಮತ್ತು ಸಂವಹನಾತ್ಮಕ ಚಟುವಟಿಕೆಗಳ ಆಯೋಜಿಸಲಾಗಿದೆ.

ತನಗೆ ಹೇಳದೆ ಬೈಕ್ ಓಡಿಸಿಕೊಂಡು ಹೋದ ಪುತ್ರಗೆ ಬೆಂಕಿ ಇಟ್ಟ ತಂದೆ!

40% ಸುಟ್ಟ ಗಾಯದಿಂದ ಯುವಕನ ಸ್ಥಿತಿ ಗಂಭೀರ | ಆಸ್ಪತ್ರೆಯಲ್ಲಿ ಚಿಕಿತ್ಸೆ
ಕೋಪದಲ್ಲಿ ತಾಳ್ಮೆ ಕಳೆದುಕೊಂಡ ಅಪ್ಪನಿಗೂ ತಗುಲಿದ ಬೆಂಕಿ: ಆಸ್ಪತ್ರೆಗೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ತನಗೆ ಹೇಳದೆ ಬೈಕ್ ತೆಗೆದುಕೊಂಡು ಹೋಗಿದ್ದರಿಂದ ಮದ್ಯದ ಅಮಲಿನಲ್ಲಿ ಸಿಟ್ಟಿಗೆದ್ದು ಮಗನ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ತಂದೆ ಕೊಲೆಗೆ ಯತ್ನಿಸಿದ್ದು, ಈ ವೇಳೆ ತಂದೆಗೂ ಸಹ ಬೆಂಕಿ ತಗುಲಿ ತೀವ್ರವಾಗಿ ಗಾಯಗೊಂಡಿರುವ ಘಟನೆ ಕುಮಾರಸ್ವಾಮಿ ಲೇಔಟ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಪ್ರಗತಿಪುರ ನಿವಾಸಿಗಳಾದ ಮಲ್ಲಿಕಾರ್ಜುನ್ (19) ಹಾಗೂ ಆತನ ತಂದೆ ಆನಂದ್ ದೊಡ್ಡಮನಿ (45) ಗಾಯಗೊಂಡಿದ್ದು, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಪೈಕಿ ಶೇ.40 ರಷ್ಟು ಸುಟ್ಟು ಗಾಯವಾಗಿರುವ ಮಲ್ಲಿಕಾರ್ಜುನ್ ಪರಿಸ್ಥಿತಿ ಗಂಭೀರವಾಗಿದೆ. ಆನಂದ್ ಅವರಿಗೆ ಶೇ.18 ರಷ್ಟು ಸುಟ್ಟುಗಾಯವಾಗಿದೆಎಂದುಪೊಲೀಸರು ಹೇಳಿದ್ದಾರೆ.



ಸಾಂದರ್ಭಿಕ ಚಿತ್ರ

ಆನಂದ್ ನಿರ್ಮಾಣ ಹಂತದ ಕಟ್ಟಡದಲ್ಲಿ ಗಾರೆ ಕೆಲಸಗಾರನಾಗಿ ಕೆಲಸ ಮಾಡುತ್ತಿದ್ದಾರೆ. ಮಕ್ಕಳು ಟೈಲ್ಸ್ ಕೆಲಸ ಮಾಡುತ್ತಿದ್ದರು. ಬೆವರು ಸುರಿಸಿ ದುಡಿದು ಅವರು ಜೀವನ ಸಾಗಿಸುತ್ತಿದ್ದರು. ಆದರೆ ಪ್ರತಿ ದಿನ ಸಣ್ಣಪುಟ್ಟ ಕಾರಣಗಳಿಗೆ ಮನೆಯಲ್ಲಿ ಕುಡಿದ ಮತ್ತಿನಲ್ಲಿ ಮಕ್ಕಳ ಜತೆ ಆನಂದ್ ಗಲಾಟೆ ಮಾಡುತ್ತಿದ್ದ ಎನ್ನಲಾಗಿದೆ.

ಕಾರ್ಮಿಕ ದಿನಾಚರಣೆ ನಿಮಿತ್ತ ಕೆಲಸಕ್ಕೆ ಬಿಡುವಿದ್ದ ಕಾರಣ ತಂದೆ-ಮಕ್ಕಳು ಮನೆಯಲ್ಲಿದ್ದರು. ಸಂಜೆ ತನ್ನ ತಂದೆಯ ಬೈಕ್ ಅನ್ನು ತೆಗೆದುಕೊಂಡು ಹೊರ ಹೋಗಿದ್ದ ಮಲ್ಲಿಕಾರ್ಜುನ್ ರಾತ್ರಿ ಮನೆಗೆ ಮರಳಿದ್ದಾನೆ. ಆಗ ತನಗೆ ಹೇಳದೆ ಬೈಕ್ ಯಾಕೆ ತೆಗೆದುಕೊಂಡು ಹೋಗಿದ್ದೆ ಎಂದು ಮಗನನ್ನು ಆನಂದ್ ಪ್ರಶ್ನಿಸಿದ್ದಾನೆ. ಈ ವೇಳೆ ಪರಸ್ಪರ ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿದೆ. ಈ ಹಂತದಲ್ಲಿ ಕೆರಳಿದ ಆನಂದ್, ಬಾಟಲ್‌ನಲ್ಲಿದ್ದ ಪೆಟ್ರೋಲ್ ತೆಗೆದು ಮಗನ ಮೇಲೆ ಎರಚಿ ಬೆಂಕಿ ಹಚ್ಚಿದ್ದಾನೆ. ಅದೇ ಹೊತ್ತಿಗೆ ಅವರ ಪಕ್ಕದ ಮನೆಯವರು ಹೊರಗೆ ಅಡುಗೆ ಮಾಡುತ್ತಿದ್ದರಿಂದ ಸೌದೆ ಒಲೆಗೆ ಪೆಟ್ರೋಲ್ ಬಿದ್ದು ಧಗ್ಗನೆ ಬೆಂಕಿ ಹೊತ್ತಿಕೊಂಡಿದೆ. ಈ ಕಿಡಿ ಆನಂದ್‌ಗೂ ತಾಕಿದೆ. ಕೂಡಲೇ ತಂದೆ-ಮಗನ ರಕ್ಷಣೆಗೆ ಸ್ಥಳೀಯರು ಧಾವಿಸಿದ್ದಾರೆ. ಬಳಿಕ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದು ತಂದೆ-ಮಗನನ್ನು ಸ್ಥಳೀಯರು ದಾಖಲಿಸಿದ್ದಾರೆ.

ಪೆಟ್ರೋಲ್ ಬಳಸಲು ನಿಯಮ!

ಮನೆಯಿಂದ ಯಾರು ಬೈಕ್ ತೆಗೆದುಕೊಂಡು ಹೋಗುತ್ತಾರೆ ಅವರೇ ಪೆಟ್ರೋಲ್ ಹಾಕಿಸಬೇಕು ಎಂಬ ನಿಯಮವನ್ನು ಆನಂದ್ ಹಾಗೂ ಆತನ ಮಕ್ಕಳು ಪಾಲಿಸುತ್ತಿದ್ದರು. ಅಂತೆಯೇ ಮನೆಯಿಂದ ಹೊರಟವರು ಬೈಕ್‌ಗೆ ಪೆಟ್ರೋಲ್ ಹಾಕಿಸಿ ಮನೆಗೆ ಮರಳಿದ ಕೂಡಲೇ ಆ ಪೆಟ್ರೋಲ್ ಅನ್ನು ಬಾಟಲ್‌ನಲ್ಲಿ ತುಂಬಿಡುತ್ತಿದ್ದರು. ನಂತರ ಯಾರು ಬೈಕ್ ಬಳಸುತ್ತಾರೆ ಅವರು ಬಂಕ್‌ಗೆ ಹೋಗಿ ಪೆಟ್ರೋಲ್ ಹಾಕಿಸಿ ಓಡಿಸಬೇಕಿತ್ತು. ಹೀಗಾಗಿ ಮನೆಯಲ್ಲಿ ಬಾಟಲ್‌ನಲ್ಲಿದ್ದ ಪೆಟ್ರೋಲ್ ಅನ್ನೇ ಮಗನ ಮೇಲೆ ಆನಂದ್ ಎರಚಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ರಾಜಧಾನಿಯಲ್ಲಿ ಪ್ರತ್ಯೇಕ ಅಪಘಾತ: 5 ಜನ ಸಾವು

ಕೂಲಿ ಕಾರ್ಮಿಕ, ಪಾದಚಾರಿ, ಬೈಕ್ ಸವಾರ, ಆಸ್ಪತ್ರೆಯ ಸಿಬ್ಬಂದಿ ಅಪಘಾತಕ್ಕೆ ದಾರುಣ ಬಲಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ನಡೆದ ಐದು ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಐವರು ಪುರುಷರು ಮೃತಪಟ್ಟಿದ್ದಾರೆ. ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಕೂಲಿ ಕಾರ್ಮಿಕ ಸುಬ್ಬಯ್ಯಪಾಳ್ಯದ ನಿವಾಸಿ ನಾಗರಾಜ್(25) ಮೃತಪಟ್ಟಿರುವ ಘಟನೆ ಕೆಂಗೇರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.



ಕೆಂಗೇರಿ ಸಮೀಪದ ಕಣಿಮಿಣಿಕೆ ಬಳಿ ಶುಕ್ರವಾರ ರಾತ್ರಿ 10 ಗಂಟೆಯ ಸುಮಾರಿಗೆ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ನಾಗರಾಜ್ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ವಾಹನ ಡಿಕ್ಕಿ ಕಾರ್ಮಿಕ ಸಾವು: ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ದಿನಗೂಲಿ ಕಾರ್ಮಿಕ ಕುಂಬಳಗೋಡಿನ ನಿವಾಸಿ ಮನುಕುಮಾರ್(25) ಮೃತಪಟ್ಟಿರುವ ಘಟನೆ ಕೆಂಗೇರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಮೈಸೂರು ರಸ್ತೆಯ ನೈಸ್ ರಸ್ತೆ ಜಂಕ್ಷನ್ ಬಳಿ ವೇಗವಾಗಿ ಬಂದ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಮನುಕುಮಾರ್ ತೀವ್ರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ.

ಆ್ಯಂಬುಲೆನ್ಸ್ ಡಿಕ್ಕಿಗೆ ಪಾದಚಾರಿ ಸಾವು: ವೇಗವಾಗಿ ಬಂದ ಆ್ಯಂಬುಲೆನ್ಸ್ ಡಿಕ್ಕಿಯಾಗಿ ಪಾದಚಾರಿ ಶ್ರೀನಿವಾಸ್(68) ಮೃತಪಟ್ಟಿರುವ ಪ್ರಕರಣ ಯಲಹಂಕ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಶುಕ್ರವಾರ ರಾತ್ರಿ 11 ಗಂಟೆಯ ಸುಮಾರಿಗೆ ಯಲಹಂಕದ ಡೇರಿ ವೃತ್ತದ ಬಳಿ ವೇಗವಾಗಿ ಬಂದ ಆ್ಯಂಬುಲೆನ್ಸ್ ಡಿಕ್ಕಿ ಹೊಡೆದದೆ. ಗಾಯಗೊಂಡಿದ್ದ ಶ್ರೀನಿವಾಸ್ ಅವರನ್ನು ಅದೇ ಆ್ಯಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಚಿಕಿತ್ಸೆ ಫಲಿಸದೆ ಶನಿವಾರ ಬೆಳಗ್ಗೆ ಮೃತಪಟ್ಟಿದ್ದಾರೆ.

ವಾಹನ ಡಿಕ್ಕಿಯಾಗಿ ವ್ಯಕ್ತಿ ಸಾವು: ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಪ್ರಕರಣ ಯಲಹಂಕ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಶುಕ್ರವಾರ ರಾತ್ರಿ 11 ಗಂಟೆಯ ಸುಮಾರಿ ಕೋಗಿಲು ಕ್ರಾಸ್ ಬಳಿ ಈ ಅಪಘಾತ ಸಂಭವಿಸಿದೆ. ಮೃತರು ಸುಮಾರು 35 ವರ್ಷದವರಾಗಿದ್ದು, ಅವರ ಹೆಸರು ವಿಳಾಸ ಪತ್ತೆಯಾಗಿಲ್ಲ. ಮೃತದೇಹವನ್ನು ಯಲಹಂಕ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ.

ಆಸ್ಪತ್ರೆಯ ಸಿಬ್ಬಂದಿ ಸಾವು: ಬೈಕ್‌ನಿಂದ ನಿಯಂತ್ರಣ ತಪ್ಪಿ ಬಿದ್ದು ಸವಾರ ಮೃತಪಟ್ಟಿರುವ ಘಟನೆ ಯಲಹಂಹ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಒಡಿಶಾ ಮೂಲದ ಕೆ.ಶಶಾಂಕ್(35) ಮೃತಪಟ್ಟವರು. ಖಾಸಗಿ ಆಸ್ಪತ್ರೆಯಲ್ಲಿಸಹಾಯಕನಾಗಿ ಕೆಲಸ ಮಾಡುತ್ತಿದ್ದ ಶಶಾಂಕ್ ಅಟ್ಟೂರಿನಲ್ಲಿರುವ ತಮ್ಮ ನಿವಾಸಕ್ಕೆ ಹೋಗಲು ಬೈಕ್‌ನಲ್ಲಿ ಹೋಗುತ್ತಿರುವಾಗ ನಾಗೇನಹಳ್ಳಿ ಜಂಕ್ಷನ್ ಬಳಿ ಆಕಸ್ಮಿಕವಾಗಿ ನಿಯಂತ್ರಣ ಬಿದ್ದು ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಕಲಿ ದಾಖಲೆಗಳ ಸೃಷ್ಟಿಸಿ ಬಿಡಿಎಗೆ ಸೇರಿದ 2 ಎಕ್ರೆ ಭೂಮಿ ಕಬಳಿಕೆ ಯತ್ನ

ಮಾಜಿ ಕೆಎಎಸ್ ಅಧಿಕಾರಿ ಸೇರಿ ನಾಲ್ವರ ವಿರುದ್ಧ ಎಫ್‌ಐಆರ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ್ದ ಕೋಟ್ಯಂತರ ರು. ಮೌಲ್ಯದ 2.35 ಎಕರೆ ಭೂಮಿಯನ್ನು ನಕಲಿ ದಾಖಲೆ ಸೃಷ್ಟಿಸಿ ಯತ್ನಿಸಿದ ಆರೋಪದ ಮೇರೆಗೆ ಮಾಜಿ ಕೆಎಎಸ್ ಅಧಿಕಾರಿ ಮತ್ತು ಬಿಜೆಪಿ ಮುಖಂಡ ಎಲ್. ಸಿ. ನಾಗರಾಜ್ ಸೇರಿದಂತೆ ನಾಲ್ವರ ವಿರುದ್ಧ ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್‌ದಾಖಲಾಗಿದೆ.



ಜೆ.ಪಿ.ನಗರದ 2ನೇ ಹಂತದಲ್ಲಿರುವ ಜಮೀನು ಕಬ್ಜಾಕ್ಕೆ ಯತ್ನವಾಗಿದ್ದು, ಈ ಸಂಬಂಧ ಬಿಡಿಎ ವಿಚಕ್ಷಣಾ ದಳದ ಡಿವೈಎಸ್ಪಿ ಬಿ.ಹನುಮಂತರಾಯ ಅವರು ನೀಡಿದ ದೂರಿನ ಅನ್ವಯ ಸಿ.ಲಕ್ಷ್ಮೀನಾರಾಯಣ, ಮಾರುತಿ ಕುಮಾರ್, ಎಚ್.ಆರ್ ಪ್ರದೀಪ್ ಹಾಗೂ ಎಲ್.ಸಿ ನಾಗರಾಜು ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಜೆ.ಪಿ. ನಗರ 8ನೇ ಹಂತದ ಬಡಾವಣೆ ಅಭಿವೃದ್ಧಿಗೆ ಕೊತ್ತನೂರು ಸರ್ವೇ ನಂಬರ್ 176/1ರಲ್ಲಿನ 2 ಎಕರೆ 13 ಗುಂಟೆ ಜಮೀನು ಬಿಡಿಎ ಸ್ವಾಧೀನಡಿಸಿಕೊಂಡಿತ್ತು. ಅಲ್ಲದೆ ಈ ಜಮೀನು ಮೂಲಕ ಮಾಲೀಕರಾದ ಮೇರಿಯಮ್ಮ ಅವರಿಗೆ ಭೂ ಪರಿಹಾರ ಸಹ ಸಂದಾಯವಾಗಿತ್ತು. ಆದರೆ 2008ರಲ್ಲಿ ಮೇರಿಯಮ್ಮ ಗಂಡ ಫಾಲ್ಕನ್ ಅವರು ಮಾರುತಿ ಕುಮಾರ್ ಅವರಿಗೆ ದಾನ ನೀಡಿದಂತೆ ನಕಲಿ ದಸ್ತಾವೇಜು ಸೃಷ್ಟಿಸಿದ್ದರು. ಬಳಿಕ ಅಂದು ಬೆಂಗಳೂರು ದಕ್ಷಿಣ ಉಪ ವಿಭಾಗಾಧಿಕಾರಿ ಆಗಿದ್ದ ಎಲ್.ಸಿ ನಾಗರಾಜು ಅವರ ಮುಂದೆ ದಾವೆ ಸಲ್ಲಿಸಿ ತಮ್ಮ ಪರವಾಗಿ ಆದೇಶವನ್ನು ಮಾರುತಿ ಪಡೆದುಕೊಂಡಿದ್ದರು. ಈ ಮೂಲಕ ಜಮೀನಿಗೆ ದಾಖಲೆ ಸೃಷ್ಟಿಸಿಕೊಂಡು ಬಿಡಿಎ ಭೂಮಿ ಕಬಳಿಸಿದ್ದರು ಎಂದು ದೂರಿನಲ್ಲಿ ಉಲ್ಲೇಖವಾಗಿದೆ. ಈ ವಂಚನೆಯಲ್ಲಿ ಸಿ. ಲಕ್ಷ್ಮೀನಾರಾಯಣ, ಮಾರುತಿಕುಮಾರ್, ಎಚ್. ಆರ್ ಪ್ರದೀಪ್ ಭಾಗಿಯಾಗಿದ್ದಾರೆ. ವಂಚಕರು ಸಲ್ಲಿಸಿದ್ದ ನಕಲಿ ದಾಖಲೆ ಪರಿಶೀಲಿಸದೆ ಉಪವಿಭಾಗಾಧಿಕಾರಿ ಆಗಿದ್ದ ನಾಗರಾಜು ಆದೇಶ ಹೊರಡಿಸಿ ಕರ್ತವ್ಯಲೋಪ ಎಸಗಿದ್ದಾರೆ. ಹೀಗಾಗಿ,ನಾಲ್ವರ ವಿರುದ್ಧವೂ ತನಿಖೆ ನಡೆಸಿ ಕಾನೂನು ಕ್ರಮ ಜರುಗಿಸಬೇಕೆಂದು ಡಿವೈಎಸ್ಪಿ ಹನುಮಂತರಾಯ ಆಗ್ರಹಿಸಿದ್ದಾರೆ. ಐಎಂಎ ಬಹುಕೋಟಿ ಹಗರಣದಲ್ಲಿ ನಾಗರಾಜ್ ಸಂಕಷ್ಟಕ್ಕೆ ತುತ್ತಾಗಿದ್ದರು. ಈ ಪ್ರಕರಣದ ಬಳಿಕ ಸರ್ಕಾರಿ ಸೇವೆಯಿಂದ ಸ್ವಯಂ ನಿವೃತ್ತಿ ಪಡೆದು ಅವರು, 2023ರಲ್ಲಿ ಮಧುಗಿರಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಜಿತರಾಗಿದ್ದರು.

3 ತಿಂಗಳ ಬಾಣಂತಿ ನೇಣಿಗೆ ಶರಣು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೌಟುಂಬಿಕ ಕಲಹ ಹಿನ್ನಲೆಯಲ್ಲಿ ಜಿಗುಪ್ಸೆಗೊಂಡು 3 ತಿಂಗಳ ಬಾಣಂತಿಯೊಬ್ಬರು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಹುಳಿಮಾವು ಸಮೀಪದ ನಿವಾಸಿ ವಂದನಾ (24) ಮೃತ ಬಾಣಂತಿ. ಮನೆಯಲ್ಲಿ ಶುಕ್ರವಾರ ವಂದನಾ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಕೆಲ ಹೊತ್ತಿನ ಬಳಿಕ ಮೃತನ ಕೋಣೆಗೆ ಕುಟುಂಬದವರು ತೆರಳಿದಾಗ ಘಟನೆ ಬೆಳಕಿಗೆ ಬಂದಿದೆ ಎಂದು ತಿಳಿದು ಬಂದಿದೆ.


3 ವರ್ಷಗಳ ಹಿಂದೆ ಅರ್ಚಕ ವಿಕ್ರಂ ಹಾಗೂ ವಂದನಾ ವಿವಾಹವಾಗಿದ್ದು, ಈ ದಂಪತಿಗೆ ಮಗುವಿದೆ. ಇತ್ತೀಚೆಗೆ ಕೌಟುಂಬಿಕ ವಿಚಾರವಾಗಿ ಸತಿ-ಪತಿ ಮಧ್ಯೆ ಮನಸ್ತಾಪವಾಗಿದೆ. ಗಲಾಟೆ ಆದಾಗ ರಾಜಿ ಸಂಧಾನ ನಡೆಸಿದರೂ ಕೊನೆಯಾಗಿರಲಿಲ್ಲ. ಈ ಕಲಹ ಹಿನ್ನಲೆಬೇಸರಗೊಂಡು ವಂದನಾ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ವರದಕ್ಷಿಣೆ ಕಿರುಕುಳ ಆರೋಪ: ತಮ್ಮ ಮಗಳ ಸಾವಿಗೆ ವರದಕ್ಷಿಣೆ ಸಲುವಾಗಿ ನಡೆದ ದೌರ್ಜನ್ಯವೇ ಕಾರಣವಾಗಿದೆ ಎಂದು ಆರೋಪಿಸಿ ಹುಳಿಮಾವು ಠಾಣೆಗೆ ಮೃತಳ ಪೋಷಕರು ದೂರು ಸಲ್ಲಿಸಿದ್ದಾರೆ.

ತಲೆ ತಿರುಗಿ ಬಿದ್ದ ಬಾಲಕನ ಮೇಲೆ ಹರಿದ ಖಾಸಗಿ ಬಸ್

ಚಿಕನ್ ತೆಗೆದುಕೊಂಡು ಬರುವಾಗ ಸುಸ್ತಾಗಿ ಬಿದ್ದ ಬಾಲಕ

ಬೆಂಗಳೂರು: ರಸ್ತೆ ದಾಟುವಾಗ ಖಾಸಗಿ ಬಸ್ ಡಿಕ್ಕಿಯಾಗಿ ಬಾಲಕನೊಬ್ಬ ಮೃತಪಟ್ಟ ಘಟನೆ ಹೆಣ್ಣೂರು ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶುಕ್ರವಾರ ನಡೆದಿದೆ. ದುರ್ಘಟನೆಯ ದೃಶ್ಯ ಸಿಸಿ ಕ್ಯಾಮೆರಾದ ದೃಶ್ಯ ವೈರಲ್ ಆಗಿದ್ದು, ಅದರಲ್ಲಿ ತಲೆ ತಿರುಗಿ ಬಿದ್ದ ಬಾಲಕನ ಮೇಲೆ ಖಾಸಗಿ ಬಸ್‌ನ ಚಕ್ರ ಹರಿದು ಆತ ಮೃತಪಟ್ಟಿರುವುದು ಬೆಳಕಿಗೆ ಬಂದಿದೆ. ಬಾಗಲೂರು ಸಮೀಪದ ನಿವಾಸಿ ವರುಣ್ (16) ಮೃತಪಟ್ಟ ಬಾಲಕ. ಚಿಕನ್ ತರಲು ಹೋಗಿದ್ದ ವೇಳೆ ರಸ್ತೆ ಮಧ್ಯದಲ್ಲಿಯೇ ತಲೆ ತಿರುಗಿ ಕುಸಿದು ಬಿದ್ದಿದ್ದಾನೆ. ಆತನ ತಲೆಯ ಮೇಲೆ ಬಸ್‌ನ ಹಿಂಭಾಗದ ಚಕ್ರಗಳು ಹರಿದು ಹೋಗಿದೆ. ಆರಂಭದಲ್ಲಿ ಖಾಸಗಿ ಬಸ್ ಚಾಲಕನೇ ಬಾಲಕನಿಗೆ ಡಿಕ್ಕಿ ಹೊಡೆದಿದ್ದ ಎನ್ನಲಾಗಿತ್ತು. ಬಾಲಕ ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದ ವರುಣ್, ಕಾಲೇಜು ಪ್ರವೇಶಕ್ಕೆ ಸಿದ್ಧತೆ ನಡೆಸಿದ್ದನು.



ಅಪಘಾತದ ದೃಶ್ಯ ಸಿಸಿಟೀವಿಯಲ್ಲಿ ಸೆರೆ

ತೀರ್ಪು | 7 ವರ್ಷ ಕಠಿಣ ಜೈಲು ಶಿಕ್ಷೆ, 30 ಸಾವಿರ ರು. ದಂಡ ವಿಧಿಸಿ ಎನ್‌ಐಎ ವಿಶೇಷ ಕೋರ್ಟ್ ತೀರ್ಪು | ಪ್ರಕರಣದ 9ನೇ ಆರೋಪಿ ಭೋಟಾ ಉಸ್ಮಾನ್‌ಗೆ ಶಿಕ್ಷೆ

ಜೈಲಿಂದಲೇ ಉಗ್ರ ದಾಳಿಗೆ ಸಂಚು ರೂಪಿಸಿದವಗೆ ಜೈಲು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಿಂದಲೇ ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ ಪ್ರಕರಣದ 9ನೇ ಆರೋಪಿ ವಿಕ್ರಮ್ ಕುಮಾರ್ ಅಲಿಯಾಸ್ ಭೋಟಾ ಉಸ್ಮಾನ್ ತಪ್ಪೊಪ್ಪಿಕೊಂ ಡ ಹಿನ್ನೆಲೆಯಲ್ಲಿ ನಗರದ ಎನ್‌ಐಎ ವಿಶೇಷ ನ್ಯಾಯಾಲಯ ಅಪ ರಾಧಿಗೆ ಏಳು ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ₹30 ಸಾವಿರ ದಂಡ ವಿಧಿಸಿ ಶನಿವಾರ ಆದೇಶಿದೆ.

ಈ ಮೂಲಕ ಈ ಪ್ರಕರಣದಲ್ಲಿ 8 ಮಂದಿಗೆ ಶಿಕ್ಷೆ ವಿಧಿಸಿದಂತಾಗಿದೆ. ಈ ಹಿಂದೆ ಇದೇ ಪ್ರಕರಣದಲ್ಲಿ ಬೆಂಗಳೂರು ಸರಣಿ ಬಾಂಬ್ ಸ್ಫೋಟ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಉಗ್ರ ಟಿ.ನಾಸೀರ್, ಆತನ ಸಹಚರರಾದ ಸಯ್ಯದ್ ಸುಹೇಲ್, ಮೊಹಮ್ಮದ್ ಉಮರ್, ಜಾಹೀದ್ ತಬ್ರೇಜ್, ಸೈಯದ್ ಮುದಾಸೀರ್‌ಪಾಷಾ, ಮೊಹಮ್ಮದ್ ಫೈಜಲ್ ರಬಾನಿ, ಸಲ್ಮಾನ್ ಖಾನ್‌ಗೆ ನ್ಯಾಯಾಲಯ 7 ವರ್ಷ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿತ್ತು. ನ್ಯಾಯಾಂಗ ಬಂಧನದಲ್ಲೇ ಇರುವ ಪ್ರಕರಣದ ಇತರೆ ಮೂವರು ಆರೋಪಿಗಳಾದ ಸಿಎಆರ್ ಎಎಸ್‌ಐ ಚಾಂದ್ ಪಾಷಾ, ಜೈಲಿನ ವೈದ್ಯ ನಾಗರಾಜ್ ಮತ್ತು ಜುನೈದ್ ಅಹ್ಮದ್ ತಾಯಿ ಅನೀಸ್ ಫಾತೀಮಾ ವಿರುದ್ಧದ ಆರೋಪ ಗಳ ಸಂಬಂಧ ವಿಚಾರಣೆ ಮುಂ ದುವರೆದಿದೆ. ಪ್ರಕರಣದ 2ನೇ ಆರೋಪಿ ಜುನೈದ್ ಅಹಮ್ಮದ್ ವಿದೇಶದಲ್ಲಿ ತಲೆಮರೆಸಿಕೊಂಡಿದ್ದು, ಆತನ ಬಂಧನಕ್ಕೆ ಎನ್‌ಐಎ ಅಧಿಕಾರಿಗಳು ಪ್ರಯತ್ನ ಮುಂದುವರೆಸಿದ್ದಾರೆ.



ಜೈಲಿನಲ್ಲಿ ಉಗ್ರ ಟಿ.ನಾಸಿರ್ ಪರಿಚಯ: ಇದೀಗ ಶಿಕ್ಷೆಗೆ ಗುರಿಯಾಗಿರುವ ಅಪರಾಧಿ ವಿಕ್ರಂ 2017ರಲ್ಲಿ ನಡೆದ ನೂರ್ ಎಂಬಾತನ ಕೊಲೆ ಪ್ರಕರಣದಲ್ಲಿ ಜುನೈದ್ ಅಹ್ಮದ್ ಹಾಗೂ ಇತರೆ ಆರೋಪಿಗಳ ಜತೆ ಬಂಧನಕ್ಕೆ ಒಳಗಾಗಿ ಜೈಲು ಸೇರಿದ್ದ. ಈ ವೇಳೆ ಜೈಲಿನಲ್ಲೇ ಇದ್ದ ಲಷ್ಕರ್ ಎ ತೋಯ್ಬಾ ಉಗ್ರ ಸಂಘಟನೆ ಸದಸ್ಯ ಟಿ.ನಾಸೀರ್‌ನ ಪರಿಚಯವಾಗಿತ್ತು. ಬಳಿಕ ಆತನ ಪ್ರಚೋದನೆಯಿಂದ ವಿಕ್ರಮ್ ಕುಮಾರ್ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡು ಭೋಟಾ ಉಸ್ಮಾನ್ ಎಂದು ಹೆಸರು ಬದಲಿಸಿಕೊಂಡಿದ್ದ ಎಂದು ಎನ್‌ಐಎ ತನಿಖೆಯಲ್ಲಿ ಬೆಳಕಿಗೆ ಬಂದಿತ್ತು.

ಟಿ.ನಾಸಿರ್ ಸೂಚನೆ ಮೇರೆಗೆ ಸಂಚು: ಬಳಿಕ ಇದೇ ಉಗ್ರ ಟಿ.ನಾಸೀರ್, ಜುನೈದ್ ಅಹ್ಮದ್ ಮತ್ತು ವಿಕ್ರಮ್ ಹಾಗೂ ಇತರೆ ಆರೋಪಿಗಳು ಜಾಮೀನು ಪಡೆದು ಜೈಲಿನಿಂದ ಬಿಡುಗಡೆಯಾಗಲು ಸಹಕರಿಸಿದ್ದ. ಆ ಬಳಿಕ ಟಿ.ನಾಸೀರ್ ಸೂಚನೆ ಮೇರೆಗೆ ಜುನೈದ್ ಅಹ್ಮದ್, ವಿಕ್ರಂ ಸೇರಿ ಇತರೆ ಆರೋಪಿಗಳು ದೇಶದ ವಿವಿಧೆಡೆ ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ್ದರು. ಬಳಿಕ ಈ ಜುನೈದ್ ಅಹಮ್ಮದ್ ವಿದೇಶಕ್ಕೆ ಪರಾರಿಯಾಗಿದ್ದ. ನಂತರ ಟಿ.ನಾಸೀರ್ ಮತ್ತು ಜುನೈದ್ ಅಹ್ಮಮದ್ ಜೊತೆಗೆ ಈ ವಿಕ್ರಂ ಫೋನ್ ಕರೆಗಳ ಮೂಲಕ ನಿರಂತರವಾಗಿ ಸಂಪರ್ಕದಲ್ಲಿದ್ದ. ವಿದೇಶದಲ್ಲಿ ಇದ್ದುಕೊಂಡೇ ಜುನೈದ್ ಅಹಮ್ಮದ್, ವಿಕ್ರಂಗೆ ಹಣಕಾಸು ಪೂರೈಸುತ್ತಿದ್ದ ಎಂಬುದು ತನಿಖೆಯಲ್ಲಿ ಬಯಲಾಗಿತ್ತು.

ಅಂಬಾಲಾದಿಂದ ಹ್ಯಾಂಡ್ ಗ್ರೆನೇಡ್ ತಂದಿದ್ದ: ಶಂಕಿತ ಉಗ್ರ ಜುನೈದ್ ಅಹ್ಮಮದ್ ಸೂಚನೆ ಮೇರೆಗೆ 2023ರ ಮೇನಲ್ಲಿ ವಿಕ್ರಮ್ ಕುಮಾರ್, ಹರಿಯಾಣದ ಅಂಬಾಲಕ್ಕೆ ಹೋಗಿ ಹ್ಯಾಂಡ್‌ಗ್ರೆನೇಡ್‌ಮತ್ತುವಾಕಿ-ಟಾಕಿಗಳಿರುವ ಪಾರ್ಸೆಲ್ ತೆಗೆದುಕೊಂಡು ಬೆಂಗಳೂರಿಗೆ ಬಂದಿದ್ದ. ಬಳಿಕ ಸೈಯದ್ ಸುಹೇಲ್ ಖಾನ್ ಮನೆಯಲ್ಲಿ ಉಳಿದುಕೊಂಡು ಜುನೈದ್ ಅಹ್ಮಮದ್ ತಂದೆ ಅಬ್ದುಲ್ ಬಶೀರ್ ಮತ್ತ ಜಾಹಿದ್ ತಬ್ರೇಜ್‌ಗೆ ಆ ಹ್ಯಾಂಡ್ ಗ್ರೆನೇಡ್ ಮತ್ತು ವಾಕಿಟಾಕಿಗಳನ್ನು ಹಸ್ತಾಂತರಿಸಿದ್ದ.

ಉಗ್ರ ಟಿ.ನಾಸೀರ್‌ನನ್ನು ಜೈಲಿನಿಂದ ನ್ಯಾಯಾಲಯಕ್ಕೆ ಕರೆತರುವಾಗ ಮಾರ್ಗ ಮಧ್ಯೆ ಹ್ಯಾಂಡ್ ಗ್ರೆನೇಡ್ ಸ್ಫೋಟಿಸಿ ತಪ್ಪಿಸಿಕೊಳ್ಳಲು ಸಂಚು ರೂಪಿಸಲಾಗಿತ್ತು. ಈ ಸಂಚು ಕಾರ್ಯರೂಪಕ್ಕೆ ತರಲು ಜುನೈದ್ ಅಹ್ಮದ್, ಮೊಹಮ್ಮದ್ ಉಮರ್, ಜಾಹೀದ್ ತಬ್ರೇಜ್ ಹಾಗೂ ಇತರರು ವಿಕ್ರಮ್ ಕುಮಾರ್ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಿರುವುದು ಎನ್‌ಐಎ ತನಿಖೆಯಲ್ಲಿ ಬೆಳಕಿಗೆ ಬಂದಿತ್ತು.

ಪ್ರಕರಣದ ಹಿನ್ನೆಲೆ: ಸಿಸಿಬಿ ಪೊಲೀಸರು 2023 ರಲ್ಲಿ ಆರ್.ಟಿ.ನಗರದ ಜುನೈದ್ ಅಹಮ್ಮದ್ ಮನೆ ಮೇಲೆ ದಾಳಿ ಮಾಡಿ ಶೋಧಿಸಿದಾಗ ಜೀವಂತ ಗ್ರೆನೇಡ್‌ಗಳು, ಪಿಸ್ತೂಲ್, ಜೀವಂತ ಗುಂಡುಗಳು ಪತ್ತೆಯಾಗಿದ್ದವು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದರು. ಆರೋಪಿಗಳ ವಾಸವಿದ್ದ ಮನೆಗಳಲ್ಲಿ ವಾಕಿಟಾಕಿ, ಮದ್ದುಗುಂಡುಗಳು, ಡಿಜಿಟೆಲ್ ಸಾಧನಗಳನ್ನು ಜಪ್ತಿ ಮಾಡಿದ್ದರು. ಆರೋಪಿಗಳು ಉಗ್ರ ಸಂಘಟನೆಗಳೊಂದಿಗೆ ಸಂಪರ್ಕದಲ್ಲಿರುವ ವಿಚಾರ ಬೆಳಕಿಗೆ ಬಂದಿತ್ತು. ಎನ್‌ಐಎ 12 ಮಂದಿ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿತ್ತು. ಈ ಭಯೋತ್ಪಾದನಾ ಪಿತೂರಿಯಲ್ಲಿ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿರುವ ಎಲ್‌ಇಟಿ ಉಗ್ರ ಟಿ.ನಾಸೀರ್ ಪ್ರಮುಖ ಮಾಸ್ಟರ್‌ಮೈಂಡ್ ಎಂಬುದು ಬೆಳಕಿಗೆ ಬಂದಿತ್ತು.

ನಾಡಿದ್ದಿನಿಂದ 3 ದಿನ ಪೀಣ್ಯ ಫ್ಲೈಓವರಲ್ಲಿ ಸಂಚಾರ ಬಂದ್

ಕೇಬಲ್‌ಗಳ ದುರಸ್ತಿ ಕಾಮಗಾರಿ ಪರಿಶೀಲನೆ ಹಿನ್ನೆಲೆ

• **ಕನ್ನಡಪ್ರಭವಾರ್ತೆ** ಬೆಂಗಳೂರು

ಲೋಡ್ ಟೆಸ್ಟಿಂಗ್ ನಡೆಸುವ ಹಿನ್ನೆಲೆಯಲ್ಲಿ ಮೇ 5 ರಿಂದ 8 ರವರೆಗೆ ಪೀಣ್ಯ ಮೇಲ್ಸೆತುವೆ ಮೇಲೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ. ಫ್ಲೈಓವರ್ ಮೇಲೆ ಅಳವಡಿಸಲಾದ ಕೇಬಲ್‌ಗಳ ದುರಸ್ತಿ ಕಾಮಗಾರಿ ಪೂರ್ಣಗೊಂಡಿದ್ದು, ಅವುಗಳನ್ನು ಪರಿಶೀಲಿಸಲು ಮೂರು ದಿನಗಳ ಕಾಲ ಲೋಡ್ ಟೆಸ್ಟಿಂಗ್ ನಡೆಸುವ ಹಿನ್ನೆಲೆಯಲ್ಲಿ 3 ದಿನಗಳ ಕಾಲ ಎಲ್ಲ ರೀತಿಯ ವಾಹನ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಮೇ 5 ರಂದು ಬೆಳಗ್ಗೆ 5 ಗಂಟೆಯಿಂದ ಮೇ 8ರಂದು ಬೆಳಿಗ್ಗೆ 11 ಗಂಟೆಯವರೆಗೆ ರಾಷ್ಟ್ರೀಯ ಹೆದ್ದಾರಿ-4 ರ ಪೀಣ್ಯ ಮೇಲ್ಸೇತುವೆ ಮೇಲೆ ಕೆನ್ನಮೆಟಲ್ ವಿಡಿಯಾ ಅಪ್ಪರ್ ರಾಂಪ್ ಎಸ್‌ಆರ್‌ಎಸ್ ಡೌನ್ ರಾಂಪ್‌ವರೆಗೆ ಎರಡು ಕಡೆಗಳಲ್ಲಿ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ.

ಪರ್ಯಾಯ ಮಾರ್ಗ: ನೆಲಮಂಗಲದಿಂದ ಬೆಂಗಳೂರು ಕಡೆಗೆ ಬರುವ ವಾಹನಗಳು ಕೆನ್ನಮೆಟಲ್ ಫ್ಯಾಕ್ಟರಿ ಹತ್ತಿರ ಫ್ಲೈಓವರ್‌ನ ಕೆಳಭಾಗದ ಎನ್‌ಹೆಚ್-4 ಮತ್ತು ಸರ್ವಿಸ್ ರಸ್ತೆ ಮೂಲಕ 8ನೇ ಮೈಲಿ, ದಾಸರಹಳ್ಳಿ, ಜಾಲಹಳ್ಳಿ ಕ್ರಾಸ್, ಪೀಣ್ಯ ಪೊಲೀಸ್ ಠಾಣೆ ಜಂಕ್ಷನ್, ಎಸ್‌ಆರ್‌ಎಸ್ ಜಂಕ್ಷನ್ ಮೂಲಕ ಗೊರಗುಂಟೆಪಾಳ್ಯ ತಲುಪಬಹುದಾಗಿದೆ. ಸಿಎಂಟಿಐನಿಂದ ನೆಲಮಂಗಲ ಕಡೆಗೆ ಹೋಗುವ ವಾಹನಗಳು ಫ್ಲೈಓವರ್ ಕೆಳಭಾಗದ ಎನ್‌ಹೆಚ್-4 ಮತ್ತು ಸರ್ವಿಸ್ ರಸ್ತೆ ಮೂಲಕ ಎಸ್‌ಆರ್‌ಎಸ್ ಜಂಕ್ಷನ್, ಪೀಣ್ಯ ಪೊಲೀಸ್ ಠಾಣೆ ಜಂಕ್ಷನ್, ಜಾಲಹಳ್ಳಿ ಕ್ರಾಸ್, ದಾಸರಹಳ್ಳಿ, 8ನೇ ಮೈಲಿ ಮಾರ್ಗವಾಗಿ ಪಾರ್ಲೆ ಜಿ ಟೋಲ್ ತಲುಪಬಹುದಾಗಿದೆ ನಗರ ಸಂಚಾರ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮರ ತೆರವಿಗೆ ಸಿಬ್ಬಂದಿ ಕೊರತೆ

ಹೊರ ಜಿಲ್ಲೆಗಳಿಂದ ಸಿಬ್ಬಂದಿ ಕರೆಸಿ ರಾಜಧಾನಿಯಲ್ಲಿ ಮರ ತೆರವು ಕಾರ್ಯ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಭಾರಿ ಮಳೆ, ಗಾಳಿಗೆ ಬಿದ್ದಿರುವ 460ಕ್ಕೂ ಹೆಚ್ಚು ಮರಗಳು ಹಾಗೂ 1,200ಕ್ಕೂ ಹೆಚ್ಚು ಮರದ ರೆಂಬೆ-ಕೊಂಬೆಗಳನ್ನು ತೆರವುಗೊಳಿಸಲು ಜಿಬಿಎ ಅರಣ್ಯ ಇಲಾಖೆಗೆ ಸಿಬ್ಬಂದಿ ಕೊರತೆ ಎದುರಾಗಿರುವ ಹಿನ್ನೆಲೆಯಲ್ಲಿ ಸಕಲೇಶಪುರದಿಂದ ಮರ ಕಡಿಯುವ ತಂಡಗಳನ್ನು ಕರೆಸಿಕೊಂಡಿದೆ.

ಜಿಬಿಎ ಅರಣ್ಯ ಇಲಾಖೆಯಲ್ಲಿ ಪ್ರಸ್ತುತ 13 ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಾರೆ. ಇವರ ಅಧೀನದಲ್ಲಿ ಮರ ಗಿಡಗಳ ನಿರ್ವಹಣೆಗಾಗಿ ಗುತ್ತಿಗೆ ಆಧಾರದ ಮೇಲೆ ತಲಾ 8 ಸಿಬ್ಬಂದಿ ಇರುವ 33 'ಟ್ರಿ ಕೆನಾಪಿ ಮ್ಯಾನೇಜ್‌ಮೆಂಟ್' ತಂಡಗಳು ಕಾರ್ಯ ನಿರ್ವಹಿಸುತ್ತಿವೆ. ಆದರೆ, ಒಂದೇ ದಿನದಲ್ಲಿ ಸಾವಿರಾರು ಮರಗಳಿಗೆ ಹಾನಿಯಾಗಿರುವ ಕಾರಣ ಸೀಮಿತ ಸಂಖ್ಯೆಯ ಸಿಬ್ಬಂದಿಯಿಂದ ಮರಗಳನ್ನು ತೆರವುಗೊಳಿಸುವುದು ಸವಾಲಿನ ಕೆಲಸವಾಗಿದೆ.



ಮರ ಕಡಿಯಲು ಹೊರಜಿಲ್ಲೆಯ ಸಿಬ್ಬಂದಿ ಬಳಕೆ: ಮರಗಳನ್ನು ಕಡಿಯಲು ಸಕಲೇಶಪುರದಿಂದ ಕಾರ್ಮಿಕರನ್ನು ಕರೆಸಲಾಗುತ್ತಿದೆ. ಆದರೆ, ಅಲ್ಲಿಯು ಸ್ಥಳೀಯವಾಗಿ ಆಚರಿಸುವ ಸುಗ್ಗಿ ಹಬ್ಬ, ಮದುವೆ ಕಾರ್ಯಕ್ರಮಗಳು, ಸಾಲು ರಜೆಗಳು ಇರುವುದರಿಂದ ಕಾರ್ಮಿಕರು ಸಿಗುತ್ತಿಲ್ಲ. ಆದರೂ, ಇಲಾಖೆಯ ಸಂಪರ್ಕದಿಂದ ಹೆಚ್ಚೆಚ್ಚು ಕಾರ್ಮಿಕರನ್ನು ಮರ ಕಡಿಯುವ ಕೆಲಸಕ್ಕೆ ಬಳಸಿಕೊಳ್ಳಲಾಗುತ್ತಿದೆ ಎಂದು ಜಿಬಿಎ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಿ.ಕೆ.ಸುದರ್ಶನ್ ಹೇಳಿದರು. ನಗರದ ಕಾರ್ಮಿಕರು ಒಂದು ಮರ ತೆರವು ಮಾಡಲು 50 ಸಾವಿರರು. ಕೇಳುತ್ತಿದ್ದಾರೆ. ಹೀಗಾಗಿ, ಇಲಾಖೆ ನಿಗದಿಪಡಿಸಿರುವ ದರದಲ್ಲಿ ಕಾರ್ಮಿಕರ ಸೇವೆ ಪಡೆಯಲು ಪ್ರಯತ್ನ ನಡೆದಿದೆ. ಜಿಬಿಎ ಎಂಜಿನಿಯರಿಂಗ್ ವಿಭಾಗ, ಅಗ್ನಿಶಾಮಕ ಇಲಾಖೆ, ಎನ್‌ಜಿಒಗಳು ಹಾಗೂ ಶಾಸಕರು, ಸಚಿವರು ಸಹಾಯದಿಂದ ಮರ, ಕೊಂಬೆಗಳನ್ನು ತೆರವುಗೊಳಿಸಲಾಗುತ್ತಿದೆ ಎಂದು ಅವರು ತಿಳಿಸಿದರು. 'ಹೊಸದಾಗಿ 66 ಟ್ರಿ ಕೆನಾಪಿ ಮ್ಯಾನೇಜ್ಮೆಂಟ್ ಸೇವೆಯನ್ನು ಪಡೆಯಲು ಟೆಂಡರ್ ಕರೆಯಲಾಗಿದ್ದು ಹೊಸ ಟೆಂಡರ್ ಅಂತಿಮಗೊಂಡರೆ ಮರಗಳನ್ನು ಇನ್ನು ಬೇಗ ತೆರವುಗೊಳಿಸಬಹುದು ಎಂದು ಅವರು ಹೇಳಿದರು.

ಮಳೆಗೆ ದುರ್ಬಲ ಮರಗಳೇ ಹೆಚ್ಚು ಧರಾಶಾಯಿ

ನಗರದ ಕೇಂದ್ರ, ದಕ್ಷಿಣ ಮತ್ತು ಪಶ್ಚಿಮ ಪಾಲಿಕೆ ವ್ಯಾಪ್ತಿಯಲ್ಲಿ ಹೆಚ್ಚು ಮರಗಳು ಬಿದ್ದಿವೆ. ಅದರಲ್ಲೂ ದುರ್ಬಲ ತಳಿಯ ಮರಗಳು ಎನ್ನಲಾಗುವ ಸ್ಪತೋಡಿಯಾ, ಕಾಪರ್‌ಪಾಡ್, ಗುಲ್ ಮೋಹರ್‌ಮುಂತಾದ ಮರಗಳೇ ಹೆಚ್ಚಾಗಿ ಬಿದ್ದಿವೆ. ಇನ್ನು ಬಹಳ ವಿಶಾಲವಾಗಿ ಬೆಳೆದಿರುವ ಮರಗಳು ದಶಕಗಳ ಹಿಂದೆ ನೆಟ್ಟಿರುವ ಮರಗಳು ಕೂಡ ಬುಡ ಸಮೇತ ಬಿದ್ದಿವೆ. ಕಟ್ಟಡ ನಿರ್ಮಾಣ, ಕಾಮಗಾರಿಯಿಂದ ಬೇರು ದುರ್ಬಲಗೊಂಡಿರುವುದು ಕೂಡ ಮರಗಳು ಬೀಳಲು ಕಾರಣವಾಗಿದೆ. ಕೇಂದ್ರ ಪಾಲಿಕೆ, ಪಶ್ಚಿಮ ಮತ್ತು ದಕ್ಷಿಣ ಪಾಲಿಕೆ ವ್ಯಾಪ್ತಿಯಲ್ಲೇ ಹೆಚ್ಚು ಮರಗಳು ಬಿದ್ದಿವೆ. ಈಗಾಗಲೇ ಶೇ.75ಕ್ಕಿಂತ ಹೆಚ್ಚು ಮರಗಳನ್ನು ತೆರವುಗೊಳಿಸಲಾಗಿದೆ ಎಂದು ಜಿ.ಕೆ. ಸುದರ್ಶನ್ ತಿಳಿಸಿದರು.

ಬಿದ್ದಿರುವ ಮರಗಳನ್ನು ತೆರವುಗೊಳಿಸಲು ಅಗತ್ಯವಿರುವ ಹೆಚ್ಚಿನ ಸಿಬ್ಬಂದಿಯನ್ನು ಸಕಲೇಶಪುರದಿಂದ ಕರೆಸಿಕೊಳ್ಳಲಾಗಿದೆ. ಹೊಸ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡರೆ ಹೆಚ್ಚಿನ ಸಿಬ್ಬಂದಿ ಲಭ್ಯವಾಗುತ್ತಾರೆ.

• **ಜಿ.ಕೆ. ಸುದರ್ಶನ್**
ಉಪ ಅರಣ್ಯ ಸಂರಕ್ಷಣಾಧಿಕಾರಿ ಜಿಬಿಎ

ಮಾಸಾಂತ್ಯದೊಳಗೆ ಡಾಂಬರೀಕರಣಕ್ಕೆ ಸೂಚನೆ

ಮಳೆಗಾಲದ ಆರಂಭದೊಳಗೆ ಕೆಲಸ ಮುಗಿಸಿ | ಅಧಿಕಾರಿಗಳಿಗೆ ಮುಖ್ಯ ಆಯುಕ್ತರ ತಾಕೀತು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದ ಪಶ್ಚಿಮ ಹಾಗೂ ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡಿರುವ ಡಾಂಬರೀಕರಣ ಕಾಮಗಾರಿಗಳನ್ನು ಮೇ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಶನಿವಾರ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರರಾವ್ ಮಳೆಗಾಲಕ್ಕೆ ಮುಂಜಾಗ್ರತೆ ಕುರಿತು ಹಾಗೂ ಮಳೆಯಿಂದಾದ ಅವಾಂತರ ಸರಿಪಡಿಸಲು ಅಧಿಕಾರಿಗಳ ಸಭೆ ನಡೆಸಿದರು.

ಶನಿವಾರ ಆಯಾ ಪಾಲಿಕೆ ವ್ಯಾಪ್ತಿಗಳಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, ರಸ್ತೆ ಡಾಂಬರೀಕರಣ ಕಾಮಗಾರಿಗಳು ಹಾಗೂ ಮಳೆಗಾಲಕ್ಕೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಸರ್ಕಾರದ ಅನುದಾನದಡಿ ನಗರದ ಪ್ರಮುಖ ರಸ್ತೆಗಳು ಹಾಗೂ ವಾರ್ಡ್‌ಗಳ ಡಾಂಬರೀಕರಣ ಮತ್ತು ಸಮಗ್ರ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪಾದಚಾರಿ ಮಾರ್ಗಗಳು ಹಾಗೂ ಚರಂಡಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ, ಡಾಂಬರೀಕರಣ ಕಾಮಗಾರಿಗಳನ್ನು ಮೇ ಅಂತ್ಯದೊಳಗೆ ಮುಕ್ತಾಯಗೊಳಿಸುವಂತೆ ನಿರ್ದೇಶನ ನೀಡಿದರು.

ರಸ್ತೆ ಡಾಂಬರೀಕರಣ ಪೂರ್ಣಗೊಂಡಿರುವ ಸ್ಥಳಗಳಿಗೆ ಅಧಿಕಾರಿಗಳು ಭೇಟಿ ನೀಡಿ ಕಾಮಗಾರಿ ಗುಣಮಟ್ಟ ಪರಿಶೀಲಿಸಬೇಕು ಎಂದು ಸೂಚಿಸಿದರು.

ಪ್ರಗತಿಯಲ್ಲಿರುವ ಕಾಮಗಾರಿಗಳ ನಿರಂತರ ಮೇಲ್ವಿಚಾರಣೆಗಾಗಿ ಪ್ರಾಜೆಕ್ಟ್ ಮಾನಿಟರಿಂಗ್ ಡ್ಯಾಶ್ ಬೋರ್ಡ್ ರಚಿಸಬೇಕು. ಕಾಮಗಾರಿಗಳ ಸಂಬಂಧ ಸಲ್ಲಿಸಲಾದ ಆರ್‌ಎಫ್‌ಐಗಳು, ಗುಣಮಟ್ಟ ಪ್ರಮಾಣಪತ್ರಗಳು ಹಾಗೂ ಕಾಮಗಾರಿ ಛಾಯಾ ಚಿತ್ರಗಳನ್ನು ಪ್ರತಿನಿತ್ಯ ಡ್ಯಾಶ್‌ಬೋರ್ಡ್‌ನಲ್ಲಿ ಅಪ್ಲೋಡ್ ಮಾಡುವ ವ್ಯವಸ್ಥೆಯನ್ನು ಜಾರಿಗೊಳಿಸುವಂತೆ ಸೂಚಿಸಿದರು.

ಈವರೆಗೆ ಪ್ರಾರಂಭಿಸದ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ಸ್ಥಳಗಳಲ್ಲಿ ಪಾದಚಾರಿ ಮಾರ್ಗ ಮತ್ತು ಚರಂಡಿಗಳ ಅಭಿವೃದ್ಧಿ ಕಾರ್ಯಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳಬೇಕು. ಇತ್ತೀಚಿನ ಮಳೆ ಸಂದರ್ಭದಲ್ಲಿ ಜಲಾವೃತಗೊಂಡ ಪ್ರದೇಶಗಳಲ್ಲಿ ಮುಂದಿನ ದಿನಗಳಲ್ಲಿ ಸಮಸ್ಯೆ ಮರುಕಳಿಸದಂತೆ ಚರಂಡಿಗಳ ಹೂಳೆತ್ತುವುದು, ಶೋಲ್ಡರ್‌ಡ್ರೇನ್‌ಗಳ ಸ್ವಚ್ಛತೆ ಹಾಗೂ ತ್ಯಾಜ್ಯ ತೆರವು ಕಾರ್ಯಗಳನ್ನು ಇನ್ನೆರಡು ದಿನಗಳಲ್ಲಿ ಪೂರ್ಣಗೊಳಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಕೆರೆಗಳ ಪೈಕಿ ಅಭಿವೃದ್ಧಿಪಡಿಸಬಹುದಾದ ಕೆರೆಗಳನ್ನು ಗುರುತಿಸಿ, ಅವುಗಳ ಸಮಗ್ರ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ಕೆ.ವಿ.ರಾಜೇಂದ್ರ ಮಾತನಾಡಿ, ರಸ್ತೆ ಕಾಮಗಾರಿಗಳು ಪೂರ್ಣಗೊಂಡ ಬಳಿಕ ಉಳಿಯುವ ಅವಶೇಷಗಳನ್ನು ಕೂಡಲೇ ತೆರವುಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದರು.

ಪ್ರಗತಿಯಲ್ಲಿರುವ ಕಾಮಗಾರಿಗಳ ಸ್ಥಳಗಳಲ್ಲಿ ಸೂಚನಾ ಫಲಕಗಳು ಹಾಗೂ ಸುರಕ್ಷತಾ ಪರಿಕರಗಳನ್ನು ಕಡ್ಡಾಯವಾಗಿ ಅಳವಡಿಸಬೇಕು. ರಸ್ತೆ ಅಭಿವೃದ್ಧಿಗೊಂಡ ಪ್ರದೇಶಗಳಲ್ಲಿ ಪಾದಚಾರಿ ಮಾರ್ಗಗಳ ಮೇಲೆ ಅನಗತ್ಯ ಮೆಟ್ಟಿಲು ಹಾಗೂ ರ್‍ಯಾಂಪ್ ನಿರ್ಮಿಸದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು. ದಕ್ಷಿಣ ನಗರ ಪಾಲಿಕೆಯ ಕೆ.ಎನ್.ರಮೇಶ್ ಅವರು ಮಾತನಾಡಿ, ಡಾಂಬರೀಕರಣ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಹದಗೆಟ್ಟಿರುವ ರಸ್ತೆಗಳ ದುರಸ್ತಿ ಕಾರ್ಯಕ್ಕೂ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಮುಖ್ಯ ಇಂಜಿನಿಯರ್ ಬಸವರಾಜ್ ಕಬಾಡೆ, ರವಿ, ರಾಜೇಶ್, ಸ್ವಯಂ ಪ್ರಭಾ ಉಪಸ್ಥಿತರಿದ್ದರು.

ಮರ ತೆರವಿಗೆ ಖಾಸಗಿ ತಂಡಗಳು: ರಾವ್

ಬುಧವಾರ ಸುರಿದ ಮಳೆಯಿಂದ ಮರಗಳು ಹಾಗೂ ಮರದ ಕೊಂಬೆಗಳು ಧರೆಗುರುಳಿದ್ದು, ಕತ್ತರಿಸಿದ ಭಾಗಗಳನ್ನು ರಸ್ತೆ ಬದಿಯಲ್ಲೇ ಬಿಟ್ಟಿರುವುದು ಕಂಡು ಬಂದಿದೆ. ಇಂತಹ ಮರದ ಅವಶೇಷಗಳನ್ನು ಹೆಚ್ಚುವರಿ ಖಾಸಗಿ ತಂಡಗಳನ್ನು ಬಾಡಿಗೆ ಆಧಾರದ ಮೇಲೆ ನಿಯೋಜಿಸಿ ತಕ್ಷಣ ತೆರವುಗೊಳಿಸುವಂತೆ ಮಹೇಶ್ವರ ರಾವ್ ಸೂಚಿಸಿದರು.

ಬೀಳುವ ಹಂತದಲ್ಲಿರುವ ಕಟ್ಟಡಗಳ ಗುರುತಿಸಿ ತೆರವು: ಜಿಬಿಎ ಆಯುಕ್ತ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೀಳುವ ಹಂತದಲ್ಲಿರುವ ಕಾಂಪೌಂಡ್ ಹಾಗೂ ಅಪಾಯಕಾರಿ ಕಟ್ಟಡಗಳನ್ನು ಗುರುತಿಸಿ ತೆರವುಗೊಳಿಸುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್‌ರಾವ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ದುಸ್ಥಿತಿಯಲ್ಲಿರುವ ಮರಗಳು ಬಿದ್ದಿರುವುದರಿಂದ ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಗಳಿಗೆ ಹಾನಿಯಾಗಿದ್ದು, ವಾಹನ ಸಂಚಾರಕ್ಕೂ ಅಡಚಣೆ ಉಂಟಾಗಿದೆ. ಅನೇಕ ಕಡೆ ಮರಗಳು ಹಾಗೂ ಮರದ ಕೊಂಬೆಗಳು ಮುರಿದು ಬೀಳುವ ಸಂಭವವಿದೆ. ಆದ್ದರಿಂದ, ಅಪಾಯಕಾರಿ ಮರಗಳು, ಗೋಡೆಗಳು ಹಾಗೂ ಕಟ್ಟಡಗಳನ್ನು ತಕ್ಷಣವೇ ಗುರುತಿಸಿ, ಯಾವುದೇ ಅನಾಹುತ ಸಂಭವಿಸದಂತೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಅವರು ಸೂಚಿಸಿದ್ದಾರೆ.

ಎಲ್ಲ 5 ನಗರಪಾಲಿಕೆಗಳ ಆಯುಕ್ತರುಗಳು, ಹೆಚ್ಚುವರಿ ಆಯುಕ್ತರು ಅಪಾಯದ ಕುರಿತು ಖುದ್ದಾಗಿ ಗಮನಹರಿಸಿ, ಅಗ್ನಿಶಾಮಕ ಹಾಗೂ ಪೊಲೀಸ್ ಸಿಬ್ಬಂದಿ ಮತ್ತು ನಗರಪಾಲಿಕೆ ಅಧಿಕಾರಿಗಳು, ಸಿಬ್ಬಂದಿಯನ್ನು ಒಳಗೊಂಡ ವಿಶೇಷ ತಂಡಗಳನ್ನು ರಚಿಸಿ, ಮುಂದಿನ ದಿನಗಳಲ್ಲಿ ಹೆಚ್ಚಿನ ಮಳೆಯ ಸಾಧ್ಯತೆಯನ್ನು ಮನಗಂಡು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ರಾವ್ ಸೂಚನೆ ನೀಡಿದ್ದಾರೆ.

ಶಿಥಿಲಾವಸ್ಥೆಯ ಗೋಡೆಗಳ ತೆರವು ಆರಂಭ: ನಗರದ ಬಿನ್ನಿಮಿಲ್ ರಸ್ತೆಯಲ್ಲಿ ಹಳೆಯ ಕಾಂಪೌಂಡ್ ಶಿಥಿಲಾವಸ್ಥೆಯಲ್ಲಿದ್ದು, ಬೀಳುವ ಹಂತದಲ್ಲಿತ್ತು. ಶನಿವಾರ 25 ಅಡಿ ಎತ್ತರದ 300 ಮೀ.ಗೋಡೆಯನ್ನು ಈಗಾಗಲೇ ನೆಲಸಮಗೊಳಿಸಲಾಗಿದೆ. 10 ಅಡಿ ಎತ್ತರದ 100 ಮೀ. ಗೋಡೆಯ ತೆರವು ಕಾರ್ಯಾಚರಣೆ ಪ್ರಗತಿಯಲ್ಲಿದೆ.

ಮೈಸೂರು ಲ್ಯಾಂಪ್ಸ್ ಕಾಂಪೌಂಡ್: ಮಲ್ಲೇಶ್ವರದ ಮೈಸೂರು ಲ್ಯಾಂಪ್ಸ್‌ನ 240 ಮೀ.ಉದ್ದದ ಕಾಂಪೌಂಡ್ ಶಿಥಿಲಾವಸ್ಥೆಯಲ್ಲಿದ್ದು, ಜೆಸಿಬಿ ಬಳಸಿ ತೆರವು ಮಾಡಲಾಗಿದೆ ಎಂದು ಜಿಬಿಎ ಹೇಳಿದೆ.

ಗ್ಯಾಸ್ ಬೆಲೆ ಇಳಿಸಲು ಮೋದಿಗೆ ರಾವ್ ಪತ್ರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಾಣಿಜ್ಯ ಬಳಕೆಯ ಅನಿಲ ಸಿಲಿಂಡರ್ ಬೆಲೆ ಹೆಚ್ಚಳದಿಂದ ಹೋಟೆಲ್ ಉದ್ಯಮಕ್ಕೆ ಬಹಳ ಹೊಡೆತ ಉಂಟಾಗುವುದರಿಂದ ದರ ಇಳಿಸಬೇಕು ಬೆಂಗಳೂರು ಹೋಟೆಲುಗಳ ಸಂಘ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದೆ. ಸಂಘದ ಗೌರವಾಧ್ಯಕ್ಷ ಪಿ.ಸಿ.ರಾವ್ ಈ ಕುರಿತು ಬರೆದಿರುವ ಪತ್ರದಲ್ಲಿ ವಾಣಿಜ್ಯ ಬಳಕೆಯ ಅನಿಲ ಸಿಲಿಂಡರ್ ಸಿಗದೇ ಈಗಾಗಲೇ ಹೋಟೆಲ್ ಮಾಲೀಕರು ಕಂಗಾಲಾಗಿದ್ದಾರೆ. ಇಂತಹ ವೇಳೆ ಸಿಲಿಂಡರ್ ಬೆಲೆಯನ್ನು 991 ರು. ಹೆಚ್ಚಿಸಲಾಗಿದೆ. ಕಳೆದ 2 ತಿಂಗಳಲ್ಲೇ ಸಿಲಿಂಡರ್‌ಗೆ 1200 ರು. ಹೆಚ್ಚಳ ಮಾಡಿರುವುದರಿಂದ ಹೋಟೆಲ್ ಉದ್ಯಮ ಸಂಕಷ್ಟಕ್ಕೆ ಒಳಗಾಗಿದೆ ಎಂದು ವಿವರಿಸಿದ್ದಾರೆ. ಆದ್ದರಿಂದ ತಕ್ಷಣ ಅನಿಲ ಸಿಲಿಂಡರ್ ಬೆಲೆಯನ್ನು ಕಡಿಮೆ ಮಾಡಬೇಕು. ಜಿಎಸ್‌ಟಿಯನ್ನು ಶೇ.18 ರಿಂದ 5ಕ್ಕೆ ಇಳಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಕಲಾ ಪ್ರಪಂಚ 5 ದಿನ ಆಯೋಜನೆ | 80 ಚಿತ್ರ ಕಲಾವಿದರು ಭಾಗಿ | 1500 ಕಲಾಕೃತಿಗಳು ಪ್ರದರ್ಶನ

6ಕ್ಕೆ ನಮ್ಮ ಆರ್ಟ್-ಬೆಂಗ್ಳೂರು ಕಲಾಮೇಳ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ದೇಶದ ಖ್ಯಾತ ಚಿತ್ರಕಲಾವಿದರಿಂದ ರಚಿಸಲ್ಪಟ್ಟ ಉತ್ಕೃಷ್ಟ ಕಲಾಕೃತಿಗಳ ಪ್ರದರ್ಶನ ಹಾಗೂ ವಸ್ತು ಪ್ರದರ್ಶನ 'ನಮ್ಮ ಆರ್ಟ್- ಬೆಂಗಳೂರು ರಾಷ್ಟ್ರೀಯ ಕಲಾಮೇಳ-2026' ಇದೇ ಮೇ 6ರಿಂದ 10ರವರೆಗೆ ಏರ್ಪಡಿಸಲಾಗಿದೆ ಎಂದು ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್ ತಿಳಿಸಿದ್ದಾರೆ.

ಶನಿವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಬುಧವಾರ ಸಂಜೆ 5 ಗಂಟೆಗೆ ಕುಮಾರಕೃಪಾ ರಸ್ತೆಯ ಚಿತ್ರಕಲಾ ಪರಿಷತ್ ಆವರಣದಲ್ಲಿ ಮೇಳ ಉದ್ಘಾಟನೆಯಾಗಲಿದೆ. ಮುಖ್ಯ ಅತಿಥಿಗಳಾಗಿ ಕಿರ್ಲೋಸ್ಕರ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕ ಗೀತಾಂಜಲಿ ವಿಕ್ರಮ್ ಕಿರ್ಲೋಸ್ಕರ್, ಬೆಂಗಳೂರು ಭಾರತೀಯ ವಿದ್ಯಾಭವನದ ಅಧ್ಯಕ್ಷ ಕೆ.ಜಿ.ರಾಘವನ್, ಕಲಾ ವಿಮರ್ಶಕ, ಕ್ಯುರೇಟರ್ ಚನ್ನೈನ ಡಾ.ಅಶ್ರಫಿ ಎಸ್.ಭಗತ್, ಮುಂಬೈನ ಕಲಾ ಸಂಗ್ರಹಕಾರ ಸೌತ್ ಏಷ್ಯಾ ಲುಮಿನಾ ಲರ್ನಿಂಗ್ ಪಾಲುದಾರ ರಾಹುಲ್ ಬಸ್ವಾನಿ ಆಗಮಿಸಲಿದ್ದಾರೆ ಎಂದರು.



ಬಿ.ಎಲ್.ಶಂಕರ್ ಹಾಗೂ ಇತರೆ ಪದಾಧಿಕಾರಿಗಳು ಕಲಾಕೃತಿಗಳನ್ನು ಬಿಡುಗಡೆಗೊಳಿಸಿದರು.

70 ರಿಂದ 80 ಖ್ಯಾತ ಚಿತ್ರ ಕಲಾವಿದರು ಮೇಳದಲ್ಲಿ ಭಾಗವಹಿಸುವರು, ಇವರಿಂದ ಸುಮಾರು 1500ಕ್ಕೂ ಹೆಚ್ಚು ಅಪರೂಪದ ಕಲಾಕೃತಿಗಳು ಪ್ರದರ್ಶನದಲ್ಲಿ ಇರಲಿವೆ. ಉತ್ಕೃಷ್ಟ ಕಲಾಕೃತಿಗಳನ್ನು ಇಷ್ಟಪಡುವ ಅಭಿಮಾನಿಗಳಿಗಾಗಿ ಈ ಮೇಳ ಆಯೋಜಿಸಲಾಗಿದೆ. ಕಳೆದ ವರ್ಷವೂ ಮೇಳ ಹಮ್ಮಿಕೊಳ್ಳಲಾಗಿತ್ತು. ಆಗ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು ಎಂದು ಹೇಳಿದರು.

ಮೇಳದಲ್ಲಿ ಹಿರಿಯ ವಿಷಯ ತಜ್ಞರಿಂದ ಚರ್ಚೆ, ಸಂವಾದ, ವಿಷಯ ಮಂಡನೆಗಳು ಇರಲಿದೆ. ಇದು ಬೆಂಗಳೂರಿನಲ್ಲಿ 2ನೇಯ ಮೇಳವಾಗಿದೆ. ಪ್ರತಿವರ್ಷ ಪರಿಷತ್ ಆಯೋಜಿಸುವ ಚಿತ್ರಸಂತೆಗಿಂತಲೂ ಇದು ಗಂಭೀರ ವಿಷಯ, ಕಲಾಕೃತಿಗಳನ್ನು ಒಳಗೊಂಡ ಮೇಳವಾಗಿದ್ದು, ಉತ್ಕೃಷ್ಟ ಕಲಾಭಿಮಾನಿಗಳಿಗಾಗಿ ಆಯೋಜಿಸಲಾಗಿದೆ. ಕಳೆದ ಸಾಲಿನ ಮೇಳದಲ್ಲಿ ತಾತ್ಕಾಲಿಕವಾಗಿ ಮಳಿಗೆಗಳನ್ನು ನಿರ್ಮಿಸಲಾಗಿತ್ತು. ಆದರೆ, ಈಗ ಚಿತ್ರಕಲಾ ಪರಿಷರ್‌ನಲ್ಲಿ ಶಾಶ್ವತವಾಗಿ 60 ಮಳಿಗೆಗಳನ್ನು ನಿರ್ಮಿಸಲಾಗಿದೆ. ಹೊರಗಡೆ 20 ಮಳಿಗೆ ನಿರ್ಮಿಸಲಾಗಿದೆ. ಸಾರ್ವಜನಿಕರಿಗೆ ಪ್ರವೇಶ ಉಚಿತವಿದೆ. ಈ ಮೇಳಕ್ಕೆ 3.5 ಕೋಟಿ ರು. ವೆಚ್ಚವಾಗಿದೆ. ಈ ಹಣವನ್ನು ಸರ್ಕಾರದಿಂದಾಗಲಿ ಬೇರೆ ವ್ಯಕ್ತಿಗಳಿಂದಾಗಲಿ ಪಡೆದಿಲ್ಲ. ಈ ವೇಳೆ ಉಪಾಧ್ಯಕ್ಷ ಪ್ರಭಾಕರ ಟಿ.ಪಿ, ಶಶಿಧರರಾವ್, ವಿಮಲನಾಥನ್, ಬಿ.ಎಲ್.ಶ್ರೀನಿವಾಸ, ಟಿ.ವಿ.ತಾರಕೇಶ್ವರಿ, ಸುಬ್ರಮಣ್ಯ ಕುಕ್ಕೆ ಹಾಜರಿದ್ದರು.

ವಾಣಿಜ್ಯ ಸಿಲಿಂಡರ್ ದರ ಏರಿಕೆ ವಿರುದ್ಧ ಯುವ ಕಾಂಗ್ರೆಸ್ ಧರಣಿ

ಬಿಜೆಪಿ 'ಅಂಧ ಭಕ್ತರಿಗೆ' ಪ್ರತ್ಯೇಕ ಕಾರ್ಡ್ ನೀಡಿ: ಮಂಜುನಾಥ್ ಗೌಡ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇಂದ್ರ ಸರ್ಕಾರ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಬೆಲೆಯನ್ನು ಭಾರೀ ಪ್ರಮಾಣದಲ್ಲಿ ಏರಿಕೆ ಮಾಡಿರುವುದನ್ನು ಖಂಡಿಸಿ ನಗರದ ಫ್ರೀಡಂ ಪಾರ್ಕ್‌ನಲ್ಲಿ ಶನಿವಾರ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಕಾರ್ಯಕರ್ತರು ಖಾಲಿ ಸಿಲಿಂಡರ್ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು. ವಾಣಿಜ್ಯ ಬಳಕೆ ಸಿಲಿಂಡರ್‌ಗಳಿಗೆ ಹಾರ ಹಾಕಿ, ಕೇಂದ್ರ ಸರ್ಕಾರ, ಪ್ರಧಾನಿ ಮೋದಿ ವಿರುದ್ಧ ಧಿಕ್ಕಾರ ಕೂಗಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು. ಕೂಡಲೇ ಬೆಲೆ ಏರಿಕೆ ಹಿಂಪಡೆಯದಿದ್ದರೆ ರಾಜ್ಯಾದ್ಯಂತ ಯುವ ಕಾಂಗ್ರೆಸ್ ವತಿಯಿಂದ ತೀವ್ರ ಹೋರಾಟ ರೂಪಿಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

ಈ ವೇಳೆ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಎಚ್.ಎಸ್.ಮಂಜುನಾಥ್ ಗೌಡ ಮಾತನಾಡಿ, ಕೇಂದ್ರದ ಬಿಜೆಪಿ ಸರ್ಕಾರಕ್ಕೆ ಬೆಲೆ ಏರಿಕೆ ಮಾಡುವ ಅಷ್ಟೊಂದು ಹಂಬಲವಿದ್ದರೆ, ಮೊದಲು ತನ್ನ ಪಕ್ಷದ ಅಂಧ ಭಕ್ತರಿಗೆ ಪ್ರತ್ಯೇಕ ಕಾರ್ಡ್‌ಗಳನ್ನು ನೀಡಲಿ.

ಬೆಲೆ ಏರಿಕೆಯನ್ನು ಸಮರ್ಥಿಸಿಕೊಳ್ಳುವ ಅಪ್ಪಟ ಬಿಜೆಪಿ ಬೆಂಬಲಿಗರು ಮಾತ್ರ ಹೆಚ್ಚಿನ ಮೊತ್ತ ಪಾವತಿಸಲಿ. ಆದರೆ, ಜನಸಾಮಾನ್ಯರಿಗೆ ಮಾತ್ರ ಹಳೆಯ ದರದಲ್ಲೇ ಸಿಲಿಂಡರ್ ವಿತರಿಸಲಿ ಎಂದು ಆಗ್ರಹಿಸಿದರು.

ಈ ಬೆಲೆ ಏರಿಕೆ ನಿರ್ಧಾರದಿಂದಾಗಿ ಬೀದಿ ಬದಿಯ ಸಣ್ಣ ವ್ಯಾಪಾರಿಗಳು ಮತ್ತು ಹೋಟೆಲ್ ಉದ್ಯಮಿಗಳು ಬೀದಿಗೆ ಬೀಳುವಂತಾಗಿದೆ. ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆಯು ಹೋಟೆಲ್‌ಗಳಲ್ಲಿ ಕಾಫಿ, ಟೀ, ತಿಂಡಿ, ಊಟ ಎಲ್ಲವುಗಳ ಬೆಲೆ ಏರಿಕೆಗೂ ಕಾರಣವಾಗಲಿದ್ದು, ಸಾರ್ವಜನಿಕರ ಮೇಲೆ ನೇರ ಪರಿಣಾಮ ಬೀರಲಿದೆ. ಆರ್ಥಿಕ ಕುಸಿತದಿಂದ ದೇಶದ ಜನತೆ ಈಗಾಗಲೇ ಕಂಗಾಲಾಗಿದ್ದು, ಈ ದರ ಏರಿಕೆ ಗಾಯದ ಮೇಲೆ ಬರೆ ಎಳೆದಂತಿದೆ ಎಂದು ಕಿಡಿಕಾರಿದರು.



ಯುವ ಕಾಂಗ್ರೆಸ್ ಕಾರ್ಯಕರ್ತರು ಖಾಲಿ ಸಿಲಿಂಡರ್ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು.

ಎಪಿಎಂಸಿ ಪರ ತೀರ್ಪು: 450 ಎಕ್ರೆ ವಶಕ್ಕೆ

ಎಪಿಎಂಸಿಯಿಂದ 410 ಕೋಟಿ ರು. ಪರಿಹಾರ ನೀಡಿ 450 ಎಕರೆ ಭೂಮಿ ಸ್ವಾಧೀನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಎಪಿಎಂಸಿಗಳಿಗೆ ಸಂಬಂಧಿಸಿದಂತೆ ಹಲವು ವರ್ಷಗಳಿಂದ ನ್ಯಾಯಾಲಯದಲ್ಲಿದ್ದ 3 ಭೂಸ್ವಾಧೀನ ಪ್ರಕರಣಗಳಲ್ಲಿ ಎಪಿಎಂಸಿ ಪರ ತೀರ್ಪು ಬಂದಿದ್ದು, ಅದರಂತೆ 450 ಎಕರೆ ಭೂಸ್ವಾಧೀನ ಮಾಡಿಕೊಳ್ಳಲಾಗಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ತಿಳಿಸಿದ್ದಾರೆ.

ರಾಜ್ಯ ಕೃಷಿ ಮಾರಾಟ ಮಂಡಳಿ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ಭೂಸ್ವಾಧೀನ ಪ್ರಕರಣ ಸುದೀರ್ಘ ಕಾನೂನು ಸಮರದಲ್ಲಿ ಎಪಿಎಂಸಿ ಪರ ತೀರ್ಪು ಬಂದಿದೆ. ಅದರಂತೆ ಎಪಿಎಂಸಿ ತನ್ನ ಸ್ವಂತ ಆದಾಯ ಮೂಲದಿಂದ 410 ಕೋಟಿ ರು. ಪರಿಹಾರ ನೀಡಿ, 450 ಎಕರೆ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಲಾಗಿದೆ ಎಂದರು.

ಮೆಗಾ ಮಾರುಕಟ್ಟೆ ನಿರ್ಮಾಣಕ್ಕಾಗಿ 1994ರಲ್ಲಿ ಯಶವಂತಪುರ ಎಪಿಎಂಸಿಯಿಂದ ಶ್ರೀಗಂಧ ಕಾವಲು ಗ್ರಾಮದ 172.22 ಎಕರೆ ಮತ್ತು ಅದಕ್ಕೆ ಹೊಂದಿಕೊಂಡಂತೆ ಇರುವ ಹೇರೋಹಳ್ಳಿಯಲ್ಲಿ 100.11 ಎಕರೆ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಜಮನ್‌ಲಾಲ್ ಬಜಾಜ್ ಸೇವಾ ಟ್ರಸ್ಟ್ ಭೂಸ್ವಾಧೀನ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ದಾವೆ ಹೂಡಿತ್ತು. ನಂತರ ಸುಪ್ರೀಂಕೋರ್ಟ್‌ವರೆಗೂ ಪ್ರಕರಣ ಹೋಗಿತ್ತು. ಕಳೆದ ವಾರ ಸುಪ್ರೀಂಕೋರ್ಟ್‌ನಲ್ಲಿ ಎಪಿಎಂಸಿ ಪರವಾಗಿ ತೀರ್ಪು ಬಂದಿದೆ. ಅದರಂತೆ ಭೂಸ್ವಾಧೀನ ಪರಿಹಾರವಾಗಿ 186 ಕೋಟಿ ರು. ಪಾವತಿಸಿ, ಭೂಮಿ ವಶಕ್ಕ ಪಡೆಯಲಾಗಿದೆ ಎಂದು ವಿವರಿಸಿದರು.

2003ರಲ್ಲಿ ಸರ್ಜಾಪುರ ಹೋಬಳಿಯ ಗೂಳಿಮಂಗಲದಲ್ಲಿ ಹಣ್ಣು, ಹೂವು, ತರಕಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಯೋಜನೆಗಾಗಿ 42.31 ಎಕರೆ ಭೂಮಿ ಸ್ವಾಧೀನ ಮಾಡಿಕೊಳ್ಳಲಾಗಿತ್ತು. ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಲ್ಲಸಲಾಗಿದ್ದ ಅರ್ಜಿಯ ವಿಚಾರಣೆ ಯನ್ನು ಹೈಕೋರ್ಟ್ ಇತ್ಯರ್ಥಗೊಳಿಸಿ, ನಮ್ಮ ಪರವಾಗಿ ತೀರ್ಪು ನೀಡಲಾಗಿದೆ. ಇದೀಗ ಆ ಭೂಮಿಗೆ 211.37 ಕೋಟಿ ರು.ಗಳನ್ನು ನ್ಯಾಯಾಲಯಕ್ಕೆ ಪಾವತಿಸಲಾಗಿದೆ. ಅದೇ ರೀತಿ ಕೊಪ್ಪಳ ಜಿಲ್ಲೆಯ ಗಂಗಾವತಿ ಎಪಿಎಂಸಿಯು ಕಾರಟಗಿಯಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ನಿರ್ಮಾಣಕ್ಕೆ 2012ರಲ್ಲಿ 136 ಎಕರೆ ಭೂಮಿ ಸ್ವಾಧೀನ ಮಾಡಲಾಗಿತ್ತು. ಇದೀಗ ಹೈಕೋರ್ಟ್ ತೀರ್ಪು ನೀಡಿದ್ದು, ಅದರಂತೆ ಪರಿಹಾರ ರೂಪದಲ್ಲಿ 12 ಕೋಟಿ ರು. ಪಾವತಿಸಿ ಭೂಮಿಯನ್ನು ವಶಕ್ಕೆ ಪಡೆಯಲಾಗಿದೆ.

ನ್ಯಾಯಾಲಯಗಳು ಎಪಿಎಂಸಿ ಪರವಾಗಿ ತೀರ್ಪು ನೀಡಿ, ಭೂಸ್ವಾಧೀನ ಮಾಡಿಕೊಂಡಿರುವುದರಿಂದ ಉದ್ದೇಶಿತ ಯೋಜನೆಗಳ ಅನುಷ್ಠಾನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುವುದು. ಶ್ರೀಗಂಧ ಕಾವಲು ಮತ್ತು ಹೇರೋಹಳ್ಳಿಯ 272.33 ಎಕರೆ ಭೂಮಿಯಲ್ಲಿ ಮೆಗಾ ಮಾರುಕಟ್ಟೆ, ಗೂಳಿಮಂಗಲದ 42.31 ಎಕರೆ ಭೂಮಿಯಲ್ಲಿ ಹಣ್ಣು, ಹೂವು, ತರಕಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಹಾಗೂ ಕಾರಟಗಿಯ 136 ಎಕರೆಯಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ನಿರ್ಮಾಣ ಮಾಡಲಾಗುವುದು ಎಂದರು.



ದಾಸನಪುರಕ್ಕೆ ಯಶವಂತಪುರ ಮಾರುಕಟ್ಟೆ ಶಿಫ್ಟ್

ಯಶವಂತಪುರ ಮಾರುಕಟ್ಟೆಯನ್ನು 68 ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಲಾಗಿರುವ ದಾಸನಪುರ ಮಾರುಕಟ್ಟೆಗೆ ಸ್ಥಳಾಂತರಿಸಲು ನ್ಯಾಯಾಲಯವು ಒಪ್ಪಿಗೆ ನೀಡಿದೆ. ಇನ್ನೊಂದು ತಿಂಗಳಲ್ಲಿ ಮಾರುಕಟ್ಟೆ ಸ್ಥಳಾಂತರಕ್ಕೆ ಚಾಲನೆ ನೀಡಲಾಗುವುದು. ಅಂದಾಜು 800 ಮಳಿಗೆಗಳನ್ನು ಸ್ಥಳಾಂತರಿಸಲಾಗುತ್ತದೆ. ಈರುಳ್ಳಿ, ಬೆಳ್ಳುಳ್ಳಿ, ಆಲೂಗಡ್ಡೆ ಮತ್ತು ಶುಂಠಿ ವಹಿವಾಟನ್ನು ದಾಸನಪುರ ಮಾರುಕಟ್ಟೆಗೆ ಸ್ಥಳಾಂತರಿಸಲಾಗುವುದು. ಈ ಕ್ರಮದಿಂದ ನಗರದೊಳಗೆ ಬರುವ ನೂರಾರು ಲಾರಿಗಳನ್ನು ದಾಸನಪುರದ ಕಡೆ ಹೋಗುವಂತೆ ಮಾಡಲಾಗುವುದು. ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಬರಲಿದೆ ಎಂದು ಸಚಿವರು ತಿಳಿಸಿದರು. ದಾಸನಪುರ ಮಾರುಕಟ್ಟೆಯಲ್ಲಿ ವಾಹನಗಳ ನಿಲುಗಡೆಗೆ ಬಿಎಂಟಿಸಿಯ 12 ಎಕರೆ ಭೂಮಿಯನ್ನು ಗುತ್ತಿಗೆ ಆಧಾರದಲ್ಲಿ ಪಡೆಯಲು ಸಚಿವ ಸಂಪುಟ ಅನುಮೋದನೆ ನೀಡಿದೆ. ಆ ಭೂಮಿಯನ್ನು ಪಡೆದು ಭಾರೀ ವಾಹನಗಳ ನಿಲುಗಡೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಘನತ್ಯಾಜ್ಯ ಟೆಂಡರ್ ರದ್ದತಿಗೆ ಛಲವಾದಿ ಆಗ್ರಹ

ಡಿಸಿಎಂ ಡಿಕೆಶಿಗೆ ಪತ್ರ ಬರೆದು ವಿಪಕ್ಷ ನಾಯಕ ಒತ್ತಾಯ | ಅವ್ಯವಹಾರ ಬಗ್ಗೆ ಲೋಕಾಗೆ ದೂರು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದ ಘನತ್ಯಾಜ್ಯ ಸಂಗ್ರಹ ಮತ್ತು ಸಾಗಾಟ ಟೆಂಡರ್‌ನಲ್ಲಿ ಅವ್ಯವಹಾರ ಪ್ರಕರಣದ ಲೋಕಾಯುಕ್ತ ತನಿಖೆ ಪೂರ್ಣಗೊಳ್ಳುವವರೆಗೆ ಅನುಮೋದನೆ ನಿರೀಕ್ಷಿಸಿರುವ ಟೆಂಡರನ್ನು ರದ್ದುಪಡಿಸಬೇಕು ಎಂದು ವಿಧಾನಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದ್ದಾರೆ.



ಈ ಕುರಿತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ಅವರು, ಬಿಎಸ್‌ಡಬ್ಲ್ಯುಎಂಎಲ್ ವತಿಯಿಂದ ಘನತ್ಯಾಜ್ಯ ಸಂಗ್ರಹ ಮತ್ತು ಸಾಗಾಟ ಟೆಂಡರ್‌ನಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಈಗಾಗಲೇ ಲೋಕಾಯುಕ್ತ ಮತ್ತು ಉಚ್ಚ ನ್ಯಾಯಾಲಯದಲ್ಲಿ ದೂರು, ಮೊಕದ್ದಮೆ ದಾಖಲಾಗಿದೆ. ಟೆಂಡರ್‌ದಾಖಲೆಗಳ ಪ್ರಕಾರ ಕನಿಷ್ಠ ಅರ್ಹತೆ ಇರದಿದ್ದರೂ ತಾಂತ್ರಿಕ ಸಮಿತಿಯು ಕಾನೂನು ಬಾಹಿರವಾಗಿ ಅನರ್ಹ ಗುತ್ತಿಗೆದಾರರನ್ನು ಅರ್ಹಗೊಳಿಸಿದೆ. ಈ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗೆ ಗುತ್ತಿಗೆದಾರರು ಸಲ್ಲಿಸಿದ್ದ ಮೇಲ್ಮನವಿಗಳಲ್ಲಿ ಕೆಲವನ್ನು ಮಾತ್ರ ಪುರಸ್ಕರಿಸಿ ಅಪೂರ್ಣ ವಿಚಾರಣೆ ನಡೆಸಲಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಅಲ್ಲದೆ, ಆರ್ಥಿಕ ಇಲಾಖೆ ಆದೇಶ ಮತ್ತು ಲೋಕೋಪಯೋಗಿ ಇಲಾಖೆಯ ದರ ಸಂಧಾನ ನಿಯಮಾವಳಿ ಆದೇಶಗಳನ್ನು ಉಲ್ಲಂಘಿಸಿ ಅಂದಾಜು ವೆಚ್ಚಕ್ಕಿಂತ ಶೇ.14ರಷ್ಟು ಹೆಚ್ಚುವರಿ ದರಕ್ಕೆ ಟೆಂಡರ್ ನೀಡಲು ಬಿಎಸ್‌ಡಬ್ಲ್ಯೂಎಂಎಲ್ ಸಂಸ್ಥೆಯು ಸರ್ಕಾರಕ್ಕೆ ಕಾನೂನು ಬಾಹಿರವಾಗಿ ಶಿಫಾರಸು ಮಾಡಿದೆ. ಇದಕ್ಕೆ ಪ್ರಸ್ತುತ ಮಾರುಕಟ್ಟೆ ಪರಿಸ್ಥಿತಿ, ವಾಹನ ಬಿಡಿಭಾಗಗಳ ಬೆಲೆ ಏರಿಕೆಯ ಕಾರಣ ನೀಡಲಾಗಿದೆ. ಆದರೆ ಟೆಂಡರ್ ಕರೆದ ದಿನದಿಂದ ಈವರೆಗೆ ಬೆಲೆಯಲ್ಲಿ ಗಮನಾರ್ಹ ಏರಿಕೆ ಕಂಡುಬಂದಿಲ್ಲ. ಹೆಚ್ಚುವರಿ ದರದ ಶಿಫಾರಸು ಮಾಡಿರುವುದು ಜನರ ತೆರಿಗೆ ಹಣ ದುರುಪಯೋಗಪಡಿಸಿಕೊಳ್ಳುವ ಪ್ರಯತ್ನವಾಗಿ ಮೇಲ್ನೋಟಕ್ಕೆ ಕಂಡುಬರುತ್ತಿದೆ. ಈ ಅವ್ಯವಹಾರದ ಕುರಿತು ಮಾಧ್ಯಮಗಳಲ್ಲಿ ವರದಿಗಳು ಪ್ರಕಟಗೊಂಡಿದೆ. ನಗರಾಭಿವೃದ್ಧಿ ಇಲಾಖೆಯಲ್ಲಿ ಸರ್ಕಾರದ ಅನುಮೋದನೆ ನಿರೀಕ್ಷಿಸಿರುವ ಟೆಂಡರನ್ನು ತನಿಖೆ ಮುಗಿಯುವವರೆಗೆ ರದ್ದುಗೊಳಿಸಿ ಎಂದರು.

ಸಾಂತ್ವನ ಚರ್ಚ್‌ಸ್ಟ್ರೀಟ್‌ನಲ್ಲಿರುವ ಪುಸ್ತಕ ಅಂಗಡಿ ಮಾಲೀಕರಿಗೆ ಧೈರ್ಯ ತುಂಬಿದ ಬಿಜೆಪಿ ಸಂಸದ

ಮಳೆ ನೀರಿಂದ ಸಹಸ್ರಾರು ಪುಸ್ತಕ ಹಾನಿಗೀಡಾದ ಬುಕ್‌ವರ್ಮ್ ಮಳಿಗೆಗೆ ತೇಜಸ್ವಿ ಸೂರ್ಯ ಭೇಟಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಇತ್ತೀಚೆಗೆ ಸುರಿದ ಭಾರೀ ಮಳೆಯಿಂದ ನೀರು ನುಗ್ಗಿ ಸಾವಿರಾರು ಪುಸ್ತಕಗಳು ಹಾನಿಗೊಳಗಾಗಿದ್ದ ನಗರದ ಮಹಾತ್ಮಗಾಂಧಿ (ಎಂ.ಜಿ.) ರಸ್ತೆಯ ಚರ್ಚ್‌ಸ್ಟ್ರೀಟ್‌ನಲ್ಲಿರುವ ಹಳೆಯ ಬುಕ್ ವರ್ಮ್ ಮಳಿಗೆಗೆ ಸಂಸದ ತೇಜಸ್ವಿ ಸೂರ್ಯ ಅವರು ಭೇಟಿ ನೀಡಿ ಮಳಿಗೆ ಮಾಲೀಕರಿಗೆ ಧೈರ್ಯ ತುಂಬಿದ್ದಾರೆ.

ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ತಮ್ಮ ಭೇಟಿ ಕುರಿತು ಭಾವನಾತ್ಮಕವಾಗಿ ಬರೆದುಕೊಂಡಿರುವ ಅವರು, ನನ್ನನ್ನೂ ಒಳಗೊಂಡಂತೆ 90ರ ದಶಕದ ಅನೇಕ ಬೆಂಗಳೂರಿಗರು ಬುಕ್ ವರ್ಮ್ ಮಳಿಗೆಯಲ್ಲೇ ಬೆಳೆದಿದ್ದಾರೆ. ಜಾಗತಿಕ ಲೇಖಕರಾದ ಎಡಿನ್ ಬ್ಲೈಟನ್, ಜಾಫ್ರಿ ಆರ್ಚರ್, ಪಿ.ಜಿ.ವುಡ್‌ಹೌಸ್ ಮತ್ತು ಕನ್ನಡದ ಖ್ಯಾತ ಸಾಹಿತಿಗಳಾದ ಪೂರ್ಣಚಂದ್ರ ತೇಜಸ್ವಿ, ಅನುಪಮಾ ಹೊಸಕೋಟೆ, ಸುಮತೀಂದ್ರ ನಾಡಿಗ್ ಸೇರಿದಂತೆ ಅನೇಕರ ಸಾಹಿತ್ಯ ನಮಗೆ ಪರಿಚಯವಾಗಿದ್ದೇ ಬುಕ್‌ವರ್ಮ್‌ನಲ್ಲಿ ಎಂದು ನೆನಪುಗಳನ್ನು ಮೆಲಕು ಹಾಕಿದ್ದಾರೆ.

ಮಳೆಗೆ ಪುಸ್ತಕಗಳು ಹಾನಿಗೊಳಗಾದಾಗ ನೂರಾರು ಪುಸ್ತಕ ಪ್ರೇಮಿಗಳು, ಓದುಗರು, ಸ್ವಯಂಪ್ರೇರಿತರಾಗಿ ಬಂದು ಪುಸ್ತಕಗಳನ್ನು ಒಣಗಿಸಲು ಮತ್ತು ರಕ್ಷಿಸಲು ನೆರವಾಗಿದ್ದು ಶ್ಲಾಘನೀಯ. ಬುಕ್ ವರ್ಮ್‌ಮಳಿಗೆಯ ಮಾಲೀಕ ಕೃಷ್ಣ ಅವರು ತಮ್ಮ ಮಳಿಗೆಗೆ ಬರುವಂತಹ ಗ್ರಾಹಕರು, ಪುಸ್ತಕ ಪ್ರೇಮಿಗಳು, ಓದುಗರೊಂದಿಗೆ ಅತ್ಯಂತ ಸೌಜನ್ಯಯುತವಾಗಿ ನಡೆದುಕೊಳ್ಳುತ್ತಾರೆ. ವಿವಿಧ ಲೇಖಕರ ಎಲ್ಲಿಯೂ ಸಿಗದಂತಹ ಅಪರೂಪದ ಹಳೆಯ ಪುಸ್ತಕಗಳು ಇಲ್ಲಿ ಸಿಗುತ್ತವೆ. ಕೃಷ್ಣ ಅವರ ಈ ಕಾರ್ಯ ಪ್ರಶಂಸನೀಯ ಎಂದು ಶ್ಲಾಘಿಸಿದ್ದಾರೆ.



ನಗರದ ಚರ್ಚ್ ಸ್ಟ್ರೀಟ್‌ನಲ್ಲಿರುವ ಬುಕ್ ವರ್ಮ್ ಪುಸ್ತಕ ಮಳಿಗೆಗೆ ಬೆಂಗಳೂರು ದಕ್ಷಿಣ ಕ್ಷೇತ್ರದ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಭೇಟಿ ನೀಡಿ ಮಳೆಯಿಂದ ಹಾನಿಗೊಳಗಾದ ಪುಸ್ತಕಗಳನ್ನು ವೀಕ್ಷಿಸಿ ಮಳಿಗೆ ಮಾಲೀಕ ಕೃಷ್ಣ ಅವರಿಗೆ ಧೈರ್ಯ ತುಂಬಿದರು.

ಸುದ್ದಿ ಸಿಂಚನ

ಎಎಪಿ ಮುಖಂಡ ಪೃಥ್ವಿ ರೆಡ್ಡಿಗೆ ಪಿತೃವಿಯೋಗ: ನಾಳೆ ಅಂತ್ಯಸಂಸ್ಕಾರ

ಬೆಂಗಳೂರು: ಆಮ್ ಆದ್ಮಿ ಪಕ್ಷದ(ಎಎಪಿ) ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಹಾಗೂ ಮಾಜಿ ರಾಜ್ಯಾಧ್ಯಕ್ಷ ಪೃಥ್ವಿ ರೆಡ್ಡಿ ಅವರ ತಂದೆ ಸಿ. ರಘುನಾಥ ರೆಡ್ಡಿ ಅವರು ಶನಿವಾರ ಮಧ್ಯಾಹ್ನ ಮೃತಪಟ್ಟಿದ್ದಾರೆ. ಮೃತರು ಹೆಚ್ ಎಎಲ್ ಕಾರ್ಖಾನೆಯಲ್ಲಿ ಉನ್ನತ ಶ್ರೇಣಿಯ ಇಂಜಿನಿಯರ್‌ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ನಿವೃತ್ತಿಯ ನಂತರ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನಲ್ಲಿ ಆದರ್ಶ ವಿದ್ಯಾಸಂಸ್ಥೆ ಸ್ಥಾಪಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ನೀಡಿ ಸಮಾಜಕ್ಕೆ ಅಪಾರ ಸೇವೆ ಸಲ್ಲಿಸಿದ್ದರು. ಮೃತರ ಅಂತ್ಯಸಂಸ್ಕಾರವು ಸೋಮವಾರ ಮಧ್ಯಾಹ್ನ 12 ಗಂಟೆಗೆ ಹೆಬ್ಬಾಳದ ಚಿತಾಗಾರದಲ್ಲಿ ನಡೆಯಲಿದೆ ಎಂದು ಪಕ್ಷದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮರು ಚುನಾವಣೆ ನಡೆಸುವಂತೆ ಆಗ್ರಹ

ಬೆಂಗಳೂರು: ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ 2026–31ನೇ ಸಾಲಿನ ಚುನಾವಣೆಗೆ ನ್ಯಾಯಾಲಯ ತಡೆಯಾಜ್ಞೆ ನೀಡಿದ್ದರೂ, ಚುನಾವಣೆ ನಡೆಸಿ ಕೋರ್ಟ್ ಆದೇಶ ಧಿಕ್ಕರಿಸಲಾಗಿದೆ. ತಕ್ಷಣ ಈ ಚುನಾವಣೆ ರದ್ದುಗೊಳಿಸಿ ಮರು ಚುನಾವಣೆ ನಡೆಸಬೇಕು ಎಂದು ಸಂಘದ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.ಶನಿವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಸಂಘದ ಮಂಡ್ಯ ತಾಲೂಕು ಕಾರ್ಯದರ್ಶಿ ಚಂದ್ರಶೇಖರ್, ಚುನಾವಣೆಗೆ ತನ್ನ ಹೆಸರು ಸೇರಿ ಅನೇಕ ಪದಾಧಿಕಾರಿಗಳ ಹೆಸರು ಕೈಬಿಟ್ಟಿದ್ದು, ಇದನ್ನು ಪ್ರಶ್ನಿಸಿ ಬೆಂಗಳೂರು ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿತ್ತು. ವಿಚಾರಣೆ ನಡೆಸಿದ ನ್ಯಾಯಾಲಯ ಮೇ 1ರ ಚುನಾವಣಾ ಪ್ರಕ್ರಿಯೆಗೆ ಏ.30ರಂದೇ ತಡೆಯಾಜ್ಞೆ ನೀಡಿದೆ. ಇದು ಸಂಘದ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಚುನಾವಣಾಧಿಕಾರಿಗೆ ತಿಳಿದಿದ್ದರೂ ಚುನಾವಣೆ ನಡೆಸಿ ನ್ಯಾಯಾಂಗ ನಿಂದನೆ ಮಾಡಿದ್ದಾರೆ ಎಂದು ಆರೋಪಿಸಿದರು. ರಾಜ್ಯದ ಎಲ್ಲ ತಾಲೂಕುಗಳಲ್ಲಿ ಮತದಾರರ ಪಟ್ಟಿಯಿಂದ ತೆಗೆಯಲಾದ ಹೆಸರುಗಳನ್ನು ಮರಳಿ ಪಟ್ಟಿಗೆ ಸೇರಿಸಿ ಮರು ಚುನಾವಣೆ ನಡೆಸಬೇಕು. ಈ ಕುರಿತು ನ್ಯಾಯಾಲಯದ ಮೆಟ್ಟಿಲೇರಲಿದ್ದೇವೆ ಎಂದರು. ಸಂಘದ ಪದಾಧಿಕಾರಿಗಳಾದ ನಾಗನಗೌಡ ಎಂ.ಎ, ಸುರೇಶ ಚ. ಶೇಡಶ್ಯಾಳ, ಸುಮತಿ ಜಿ., ಜಯಶ್ರೀ ಬೆಣ್ಣಿ, ಶಿವಾನಂದ ಕೂಡಸೋಮಣ್ಣವರ ಮತ್ತಿತರರು ಇದ್ದರು.

ರಾಜ್ಯದ 6000 ತೆಂಗು ನಾರಿನ ಮ್ಯಾಟ್, ಇತರೆ ನಾರು ಉತ್ಪನ್ನಗಳು ರಾಜಸ್ಥಾನಕ್ಕೆ

ವಾಹನಕ್ಕೆ ಶಾಲಿನಿ ಹಸಿರು ನಿಶಾನೆ | ಗ್ರಾಮೀಣ ಆರ್ಥಿಕತೆ ಚೇತರಿಕೆ: ಸಿಎಸ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮವು ಗ್ರಾಮೀಣ ಮಹಿಳೆಯರಿಂದ ತಯಾರಿಸಲ್ಪಟ್ಟ 6000 ಮ್ಯಾಟ್‌ಗಳು ಹಾಗೂ ತೆಂಗಿನ ನಾರಿನ ಇತರೆ ಉತ್ಪನ್ನಗಳನ್ನು ಜೈಪುರಕ್ಕೆ ಸರಬರಾಜು ಮಾಡುವ ವಾಹನಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಶನಿವಾರ ವಿಧಾನಸೌಧದ ಮುಂಭಾಗ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ನಿಗಮವು ಗ್ರಾಮೀಣ ಭಾಗದ ಹೆಣ್ಣು ಮಕ್ಕಳಿಂದ ಪರಿಸರ ಸ್ನೇಹಿ ತೆಂಗಿನ ನಾರಿನ ಉತ್ಪನ್ನಗಳನ್ನು ತಯಾರಿಕೆ ಮಾಡಿಸುತ್ತಿರುವುದು. ಜೊತೆಗೆ ನಿಗಮದಿಂದಲೂ ವಿಶೇಷ ಮ್ಯಾಟ್‌ಗಳನ್ನು ಉತ್ಪಾದಿಸಿ ರಫ್ತು ಮಾಡುತ್ತಿರುವುದು ಉತ್ತಮ ಕಾರ್ಯ. ಇದು ಗ್ರಾಮೀಣ ಆರ್ಥಿಕತೆಗೆ ಶಕ್ತಿ ನೀಡುವಂತಹ ಕೆಲಸ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸರ್ಕಾರದಿಂದ ಇಂತಹ ಪರಿಸರ ಉತ್ಪನ್ನಗಳ ಉತ್ಪಾದನೆಗೆ ಹೆಚ್ಚಿನ ಸಹಕಾರ ನೀಡುವ ಭರವಸೆ ನೀಡಿದರು.

ನಿಗಮದ ಅಧ್ಯಕ್ಷ ನಟರಾಜ್ ಜಾನಕಿರಾಮ್ ಮಾತನಾಡಿ, ನಿಗಮದ ಉತ್ಪನ್ನಗಳಲ್ಲಿ ಡಚ್ ಮ್ಯಾಟ್‌ಗಳು ಅತ್ಯಂತ ಜನಪ್ರಿಯ. ಅವುಗಳಿಗೆ ಕರ್ನಾಟಕ ಮಾತ್ರವಲ್ಲದೆ ಹೊರ ರಾಜ್ಯಗಳಿಂದಲೂ ಬೇಡಿಕೆ ಇದೆ. ಹಾಗಾಗಿ ಹೆಚ್ಚಿನ ಮಟ್ಟದಲ್ಲಿ ತಯಾರಿಸಿ ಹೊರ ರಾಜ್ಯಗಳಿಗೆ ರಫ್ತು ಮಾಡಲಾಗುತ್ತಿದೆ. 18ನೇ ಶತಮಾನದಲ್ಲಿ ಭಾರತ ಮತ್ತು ಶ್ರೀಲಂಕಾದಲ್ಲಿ ತಯಾರಿಸಲ್ಪಟ್ಟ ಕಯರ್‌ಮ್ಯಾಟ್ ಗಳನ್ನು ಡಚ್ ವ್ಯಾಪಾರಿಗಳು ಯುರೋಪಿಗೆ ರಫ್ತು ಮಾಡುತ್ತಿದ್ದರು, ಆದ್ದರಿಂದ ಈ ಮ್ಯಾಟ್ ಗಳು ಡಚ್ ಮ್ಯಾಟ್ ಎಂದೇ ಜನಪ್ರಿಯವಾಗಿವೆ ಎಂದು ಹೇಳಿದರು.


ನಿಗಮದ ಡಚ್ ಮ್ಯಾಟ್ ಗಳು ಬಲಿಷ್ಠ, ದೀರ್ಘಕಾಲಿಕ, ಪರಿಸರ ಸ್ನೇಹಿ ಹಾಗೂ ಅಲಂಕಾರಿಕ ಗುಣಗಳನ್ನು ಹೊಂದಿರುವುದರಿಂದ ಇವುಗಳು ದೇಶಾದ್ಯಂತ ಜನಪ್ರಿಯವಾಗಿವೆ ಮತ್ತು ಉಪ ಹಿಮಾಲಯ ರಾಜ್ಯಗಳಲ್ಲಿ ಡಚ್ ಮ್ಯಾಟ್ ಗಳಿಗೆ ಹೆಚ್ಚಿನ ಬೇಡಿಕೆ ಇದೆ. ಅಲ್ಲದೆ, ಮುಖ್ಯಮಂತ್ರಿಗಳ ಆಶಯದಂತೆ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮ ಸಚಿವರ ಮಾರ್ಗದರ್ಶನದಲ್ಲಿ ಹಸ್ತಚಾಲಿತ ಮ್ಯಾಟ್ ಫ್ರೇಮ್ ಬಳಸಿ ಸುಮಾರು 700 ಗ್ರಾಮೀಣ ಉದ್ಯೋಗ ಸೃಷ್ಟಿಸಲು ಕ್ರಮವಹಿಸಲಾಗುತ್ತಿದೆ ಎಂದು ವಿವರಿಸಿದರು. ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ. ಎನ್.ಶಿವಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.



ತೆಂಗಿನ ನಾರಿನ ಉತ್ಪನ್ನಗಳನ್ನು ಜೈಪುರಕ್ಕೆ ಸರಬರಾಜು ಮಾಡುವ ವಾಹನಕ್ಕೆ ಶಾಲಿನಿ ರಜನೀಶ್ ಚಾಲನೆ ನೀಡಿದರು.

ನಿರ್ಭೀತಿಯಿಂದ ಕೆಲಸ ಮಾಡಿ: ಅಧಿಕಾರಿಗಳಿಗೆ ಸಿಎಂ ಸಿದ್ದು ಕರೆ

ವಿಧಾನಸೌಧದಲ್ಲಿ ಅಧಿಕಾರಿಗಳಿಗೆ ಸಿಎಂ ಪಾಠ



ವಿಧಾನಸೌಧದಲ್ಲಿ ಪ್ರಧಾನ ಕಾರ್ಯದರ್ಶಿಗಳ ಜತೆ ಸಿದ್ದರಾಮಯ್ಯ ಸಭೆ ನಡೆಸಿದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

'ನಾವು ಜನಪ್ರತಿನಿಧಿಗಳು ಕೇವಲ ಐದು ವರ್ಷ ಆಡಳಿತದಲ್ಲಿದ್ದರೆ, ಅಧಿಕಾರಿಗಳು 30ರಿಂದ 35 ವರ್ಷ ಆಡಳಿತ ವ್ಯವಸ್ಥೆಯಲ್ಲಿರುತ್ತೀರಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರಿಗಳ ಜವಾಬ್ದಾರಿಯೇ ಹೆಚ್ಚು. ಸದಾ ಕಾನೂನಿನ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಿ. ಸಂವಿಧಾನಕ್ಕೆ ವಿರುದ್ಧವಾದ ಯಾವುದೇ ಕಾರ್ಯ ಮಾಡಬೇಡಿ..' ಹೀಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ವಿಧಾನಸೌಧದಲ್ಲಿ ನಡೆಸಿ ಸರ್ಕಾರದ ಎಲ್ಲಾ ಇಲಾಖಾ ಅಪರ ಮುಖ್ಯಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳ ಸಭೆಯಲ್ಲಿ ಅಧಿಕಾರಿಗಳಿಗೆ ಸುದೀರ್ಘ ಪಾಠ ಮಾಡಿದ್ದಾರೆ.

ರಾಜ್ಯದ ಆಡಳಿತ ಸಮರ್ಪಕವಾಗಿ ನಡೆಯಲು ಇಲಾಖಾ ಕಾರ್ಯದರ್ಶಿಗಳ ಪಾತ್ರ ಅತ್ಯಂತ ಮಹತ್ವದ್ದು. ಇದನ್ನು ಸಂವಿಧಾನದಲ್ಲೇ ಉಲ್ಲೇಖಿಸಲಾಗಿದೆ. 'ಅಧಿಕಾರಿಗಳು ರಾಜಕಾರಣಿಗಳ ಓಲೈಕೆ ಮಾಡಲು ಹೋಗಬಾರದು. ಇದು ಸರ್ವಾಧಿಕಾರಕ್ಕೆ ಹಾದಿ ಮಾಡುತ್ತದೆ' ಎಂದು ಬಾಬಾ ಸಾಹೇಬ್ ಅಂಬೇಡ್ಕರ್‌ಎಚ್ಚರಿಕೆ ನೀಡಿದ್ದರು. ಹಾಗಾಗಿ ಅಧಿಕಾರಿಗಳು ಯಾವತ್ತೂ ಜನಪರವಾಗಿರಬೇಕು. ಸರ್ಕಾರಕ್ಕೆ ಒಳ್ಳೆಯ ಹೆಸರು ತರುವುದು ಕಾರ್ಯದರ್ಶಿಗಳ ಕಾರ್ಯ ಚಟುವಟಿಕೆಗಳ ಮೇಲೆ ಅವಲಂಬಿತ. ಆಡಳಿತಕ್ಕೆ ಇನ್ನಷ್ಟು ಚುರುಕು ಮೂಡಿಸಬೇಕು ಎಂದು ಸೂಚನೆ ನೀಡಿದರು.

ಸ್ಪೇಸ್ ಟೆಕ್ನಾಲಜಿ ಶ್ರೇಷ್ಠತಾ ಕೇಂದ್ರಕ್ಕೆ ಚಾಲನೆ

ಬೆಂಗ್ಳೂರಲ್ಲಿ ದೇಶದ ಮೊದಲ ಕೇಂದ್ರ | ಐಟಿ ಸಚಿವ ಪ್ರಿಯಾಂಕ್ ಖರ್ಗೆರಿಂದ ಉದ್ಘಾಟನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ದೇಶದ ಬಾಹ್ಯಾಕಾಶ ಆರ್ಥಿಕತೆಗೆ ಗಮನಾರ್ಹ ಉತ್ತೇಜನ ನೀಡಲು ರಾಜ್ಯ ಸರ್ಕಾರದ ನೇತೃತ್ವದಲ್ಲಿನ ದೇಶದ ಮೊಟ್ಟ ಮೊದಲ ಬಾಹ್ಯಾಕಾಶ ತಂತ್ರಜ್ಞಾನ ಶ್ರೇಷ್ಠತಾ ಕೇಂದ್ರವು (ಸಿಒಇ ಸ್ಪೇಸ್ ಟೆಕ್ ಫೌಂಡೇಷನ್) ಬೆಂಗಳೂರಿನಲ್ಲಿ ಕಾರ್ಯಾರಂಭ ಮಾಡಿದೆ.



ಈ ಶ್ರೇಷ್ಠತಾ ಕೇಂದ್ರದ ಕಾರ್ಯವಿಧಾನ ಬಲಪಡಿಸುವುದಕ್ಕೆ ನೆರವಾಗಲು ಅಮೆರಿಕದ ಹೆಲೋಜೆನ್ ಕಾರ್ಪೊರೇಷನ್ ಸೇರಿ 5 ಒಪ್ಪಂದಗಳಿಗೆ ಶುಕ್ರವಾರ ಸಹಿ ಹಾಕಲಾಗಿದೆ. ಕೆಐಟಿಎಸ್ ಮತ್ತು ಎಸ್‌ಐಎ–ಇಂಡಿಯಾ ನಡುವಣ ಒಪ್ಪಂದದಡಿ ಸಿಒಇ ಸ್ಪೇಸ್‌ಟೆಕ್ ಫೌಂಡೇಷನ್ ಸ್ಥಾಪಿಸಲಾಗಿದೆ.

ಕೇಂದ್ರ ಉದ್ಘಾಟಿಸಿ ಮಾತನಾಡಿದ ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಈ ಬಾಹ್ಯಾಕಾಶ ತಂತ್ರಜ್ಞಾನ ಶ್ರೇಷ್ಠತಾ ಕೇಂದ್ರ ಆರಂಭಿಸುವುದರೊಂದಿಗೆ, ರಾಜ್ಯ ನಾಯಕತ್ವವನ್ನು ಭವಿಷ್ಯದ ಅತ್ಯಂತ ಮಹತ್ವದ ಕ್ಷೇತ್ರಗಳಲ್ಲಿ ಒಂದಾಗಿರುವ ಬಾಹ್ಯಾಕಾಶ ತಂತ್ರಜ್ಞಾನಕ್ಕೆ ವಿಸ್ತರಿಸುತ್ತಿದ್ದೇವೆ. ಆರ್ಥಿಕ ಬೆಳವಣಿಗೆಗೆ ನೆರವಾಗುವ ಮತ್ತು ಉತ್ತಮ–ಗುಣಮಟ್ಟದ ಉದ್ಯೋಗಗಳಾಗಿ ಪರಿವರ್ತಿಸಬಹುದಾದ ಪೂರಕ ವ್ಯವಸ್ಥೆ ನಿರ್ಮಾಣಕ್ಕೆ ಗಮನ ಕೇಂದ್ರೀಕರಿಸಲಾಗಿದೆ ಎಂದರು. ರಾಜ್ಯದ ಐಟಿ, ಬಿಟಿ ಇಲಾಖೆಯ ಕಾರ್ಯದರ್ಶಿ ಡಾ.ಮಂಜುಳಾ ಎನ್. ಮಾತನಾಡಿ ದರು. ಎಸ್‌ಐಎ–ಇಂಡಿಯಾ ಅಧ್ಯಕ್ಷ ಸುಬ್ಬ ರಾವ್ ಪವುಲೂರಿ, ಎಸ್‌ಐಎ–ಇಂಡಿಯಾ ಮಹಾನಿರ್ದೇಶಕ ಅನಿಲ್ ಪ್ರಕಾಶ್ ಮುಂತಾದವರು ಭಾಗವಹಿಸಿದ್ದರು.

ಐದು ಒಪ್ಪಂದಗಳಿಗೆ ಸಹಿ: ಬಾಹ್ಯಾಕಾಶ ಜೈವಿಕ ವಿಜ್ಞಾನ ಸಹಯೋಗದ ಸಂಶೋಧನೆ, ವಿದ್ಯಾರ್ಥಿಗಳ ತರಬೇತಿ, ಬಾಹ್ಯಾಕಾಶ ಮತ್ತು ಜೈವಿಕ ತಂತ್ರಜ್ಞಾನದ ನವೋದ್ಯಮಗಳ ಜೊತೆ ಉದ್ಯಮ ತೊಡಗಿಸಿಕೊಳ್ಳುವಿಕೆ, ನಾವೀನ್ಯತೆ ಮತ್ತು ವಾಣಿಜ್ಯ ವಹಿವಾಟು ಹಾಗೂ ಉದ್ಯೋಗಿಗಳ ಪರಿಣತಿ ಹೆಚ್ಚಿಸಲು, ಬಾಹ್ಯಾಕಾಶ ಜೈವಿಕ ತಂತ್ರಜ್ಞಾನ ಮತ್ತು ಸೂಕ್ಷ್ಮ ಗುರುತ್ವಾಕರ್ಷಣೆ ಸಂಶೋಧನಾ ಸಹಯೋಗ, ತಂತ್ರಜ್ಞಾನದ ನವೋದ್ಯಮಗಳಿಗೆ ರಾಷ್ಟ್ರೀಯ ಮಾರುಕಟ್ಟೆ ವಿಸ್ತರಣೆ ಸೇರಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಮಣಿಪಾಲ್ ಅಕಾಡೆಮಿ ಆಫ್ ಹೈಯರ್‌ಎಜುಕೇಷನ್ (ಎಂಎಎಚ್‌ಇ), ಅಮೆರಿಕದ ಹೆಲೋಜೆನ್ ಕಾರ್ಪೊರೇಷನ್, ಜೈವಿಕ ತಂತ್ರಜ್ಞಾನ ನೇತೃತ್ವದ ಉದ್ಯಮಗಳ ಸಂಘ, ಡಸಾಲ್ಟ್ ಸಿಸ್ಟಮ್ಸ್, ಐಡಿಯಾ ಬಾಜ್ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ.

IN THE COURT OF THE HON'BLE VIth ADDITIONAL PRINCIPAL JUDGE AT FAMILY COURT, BANGALORE
MC.NO.6512/2025

BETWEEN:
Mrs.P. ROHINI KASHYAP, D/o. N.Padmanabhan, Aged about 42 years, R/at No. 2338, Sri Ganesh, 20th Cross Banashankari 2nd Stage, K.R.Road, Bengaluru-560070 **...PETITIONER**
AND:
Mr.M.D.POONACHA, S/o. M.A.Devaiah, Aged about 45 years, R/at. No.106, JalashayaBadavane, Near Sudharshan Guest House, Madikeri-571201 **...RESPONDENT**

NOTICE TO THE RESPONDENT

Mr.M.D.POONACHA, S/o. M.A.Devaiah, Aged about 45 years, R/at. No.106, JalashayaBadavane, Near Sudharshan Guest House, Madikeri - 571201

Whereasthe Petitioner herein has filed the above Petition for Seeking Decree Of Divorce and other reliefs against the respondent your are hereby summoned to appear before this Hon'ble Court in person or by a duly authorized pleader on 17.06.2026 at 11 am to answer the same failing which the above Petition will be disposed of exparte.

Given under my hand and seal of the Court on this 8th day of April 2026.

BY ORDER OF THE COURT : Senior Sheristeder
Family Court, Bengaluru

ADVOCATE FOR PETITIONER : Smt. Bhushani Kumar, Advocate, No.55/5, 1st Floor, SV Complex, K.R. Road, Basavanagudi, Bangalore-04.

ನೈಋತ್ಯ ರೈಲ್ವೆ

ಅರ್ಜಿ ಅಧಿಸೂಚನೆ ಸಂಖ್ಯೆ ಬಿ/ಸಿ.210/ಹಾಲ್ಟ್/2026–27/ಎಸ್‌ಬಿಸಿ ವಿಭಾಗ, ದಿನಾಂಕ: 27.04.2026

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎಡಿ), ಸೋಮೇಶ್ವರ (ಎಸ್‌ಎಂಡಬ್ಲ್ಯೂಎ) ಮತ್ತು ಜನ್ನಘಟ್ಟ (ಜಿಜೆಟಿ) ರೈಲು ನಿಲುಗಡೆ ನಿಲ್ದಾಣ ಮತ್ತು ಸುತ್ತಮುತ್ತ ವಾಸಿಸುವ ವಿದ್ಯಾವಂತ ನಿರುದ್ಯೋಗಿ ವ್ಯಕ್ತಿಗಳಿಂದ ಹಾಲ್ಟ್ ಏಜೆಂಟ್ ನೇಮಕಾತಿಗಾಗಿ ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಮೊಹರು ಮಾಡಿದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಐದು (05) ವರ್ಷಗಳ ಅವಧಿಗೆ ಕಮಿಷನ್ ಆಧಾರದ ಮೇಲೆ ಕಾಯ್ದಿರಿಸದ ಟಿಕೆಟ್‌ಗಳನ್ನು ನೀಡಲು ಅಥವಾ ನಿಲ್ದಾಣದ ಮೇಲ್ದರ್ಜೆಗೇರಿಸಲು ಇವುಗಳಲ್ಲಿ ಯಾವುದು ಮೊದಲೋ ಅದು.

ಕ್ರ.ಸಂ.	ಹಾಲ್ಟ್ ನಿಲ್ದಾಣ	ವಿಭಾಗ	ಕಾರ್ಯನಿರ್ವಹಣೆಯನ್ನು ಪ್ರಾರಂಭಿಸಲು
1	ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎಡಿ)	ವೈಎನ್‌ಕೆ	ಆಡಳಿತದಿಂದ ದಿನಾಂಕವನ್ನು ತಿಳಿಸಲಾಗುವುದು.
2	ಸೋಮೇಶ್ವರ (ಎಸ್‌ಎಂಡಬ್ಲ್ಯೂಎ)		
3	ಜನ್ನಗಟ್ಟ (ಜಿಜೆಟಿ)		

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 03–06–2026 ರಂದು ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 16.00 ರವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.swr.indianrailways.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು,
ಬೆಂಗಳೂರು

ಪಿಯುಬಿ/82/ಎಐಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026–27

ಸುಲಭ ಟಿಕೆಟ್ ಬುಕಿಂಗ್, ಪಿಎನ್‌ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

---

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ
04 ಎಂವೈಎಸ್ 2026 ದಿನಾಂಕ: 27.04.2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ (ರೂ.ಗಳಲ್ಲಿ)
2000 ಕೆ ಜಿ ಸಾಮರ್ಥ್ಯದ	ರೂ. 98,74,000.00

ಎಣ್ಣೆಯ ಉಗಿ ಬಾಯ್ಲರ್ ಪೂರೈಕೆ ಮತ್ತು ಸ್ಥಾಪನೆ
ಟೆಂಡರ್ ಸಂಖ್ಯೆ ಎಲ್9256075ಬಿ

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18–05–2026 ರಂದು 10.30 ಗಂಟೆಗಳವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು,
ಮೈಸೂರು

ಪಿಯುಬಿ/80/ಎಐಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026–27

ಸುಲಭ ಟಿಕೆಟ್ ಬುಕಿಂಗ್, ಪಿಎನ್‌ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

---

ಸಾರ್ವಜನಿಕ ಸೂಚನೆ

ICICI Bank **ಶಾಖಾ ಕಛೇರಿ :** ಐಸಿಐಸಿಐ ಬ್ಯಾಂಕ್ ಲಿ., 4/10, ಮೈತ್ರಿ ಟವರ್, ಬೊಮ್ಮನಹಳ್ಳಿ ಹೊಸೂರು ಮುಖ್ಯ ರಸ್ತೆ, ಬೆಂಗಳೂರು– 560068

ಬ್ಯಾಂಕ್‌ನಿಂದ ಸಾಲವನ್ನು ಪಡೆದು ಅದರ ಅಸಲು ಪಾವತಿ ಮತ್ತು ಬಡ್ಡಿ ಪಾವತಿ ಮಾಡುವುದರಲ್ಲಿ ಕೆಳಕಂಡ ಸಾಲಗಾರರು ವಿಫಲರಾಗಿರುತ್ತಾರೆ ಮತ್ತು ಸಾಲಗಳನ್ನು ನಿಷ್ಕ್ರಿಯ ಆಸ್ತಿಗಳೆಂಬುದಾಗಿ ನಾನ್ ಫರ್‌ಫಾರ್ಮಿಂಗ್ ಅಸೆಟ್ಸ್ (NPA) ವರ್ಗೀಕರಿಸಲಾಗಿರುತ್ತದೆ.

2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಪರಿಚ್ಛೇದ 13(2) ರಡಿ ಕೆಳಕಂಡಂತಹ ಸಾಲಗಾರರಿಗೆ, ಅವರುಗಳು ಬ್ಯಾಂಕ್‌ಗೆ ಒದಗಿಸಿದ್ದ ಕೊನೆಯದಾಗಿ ತಿಳಿದುಕೊಂಡ ವಿಳಾಸಗಳಿಗೆ ನೋಟೀಸೊಂದನ್ನು ನೀಡಲಾಗಿರುತ್ತದೆ ಆದರೆ ಅದು ಬಟವಾಡೆಯಾಗಿರುವುದಿಲ್ಲ ಆದಾಗ್ಯೂ, ಸದರಿ ಸಾಲಗಾರರಿಗೆ ಮಾಹಿತಿ ನೀಡುವುದಕ್ಕಾಗಿ ಈ ಸಾರ್ವಜನಿಕ ಸೂಚನೆ ಅಧಿಸೂಚಿಸಲಾಗಿದೆ.

ಕ್ರ. ಸಂ.	ಸಾಲಗಾರರ/ ಸಹ–ಸಾಲಗಾರರ ಜಾಮೀನುದಾರರ ಹೆಸರು/ (ಸಾಲದ ಖಾತೆ ಸಂಖ್ಯೆ) ಮತ್ತು ವಿಳಾಸ	ಸ್ವಾಧೀನತೆಯ ಪರಿಣಾಮಕ್ಕೊಳಗಾಗುವ/ ಭದ್ರತಾ ಆಸ್ತಿ/ ಆಸ್ತಿಗಳ ವಿಳಾಸ	ನೋಟೀಸ್ ಕಳುಹಿಸಿದ ದಿನಾಂಕ/ ನೋಟೀಸಿನ ದಿನಾಂಕದಂದು ಇದ್ದಂತೆ ಬಾಕಿ ಮೊತ್ತ	ಎನ್‌ಪಿಎ ದಿನಾಂಕ
1	ವಿಭಾಗೀಯ ಅಭಿಯಂತರರು/ದಕ್ಷಿಣ/ಬೆಂಗಳೂರು: ಚಿಕ್ಕಬಾಣಾವರ-ಹಾಸನ ವಿಭಾಗ: ನೆಲಮಂಗಲ (ಎನ್ಎಂಜಿಎ) ನಿಲ್ದಾಣದ ಪ್ಲಾಟ್‌ಫಾರ್ಮ್-1 ರಲ್ಲಿ 140 ಮೀಟರ್, ಕುಣಿಗಲ್ (ಕೆಐಜಿಎಲ್) ನಿಲ್ದಾಣದ ಪ್ಲಾಟ್‌ಫಾರ್ಮ್-1,2 ಮತ್ತು 3 ರಿಂದ 20 ಮೀಟರ್, ಸಹಾಯಕ ವಿಭಾಗೀಯ ಅಭಿಯಂತರರು/ಕುಣಿಗಲ್ ಉಪವಿಭಾಗದಲ್ಲಿ ಯಡಿಯೂರು (ವೈವೈ) ನಿಲ್ದಾಣದ ಪ್ಲಾಟ್‌ಫಾರ್ಮ್ 1,2 ಮತ್ತು 3 ರಿಂದ 40 ಮೀಟರ್‌ಗಳವರೆಗೆ ಹೈ-ಲೆವೆಲ್ ಪ್ಲಾಟ್‌ಫಾರ್ಮ್ ವಿಸ್ತರಣೆಗೆ ಬಾಕಿ ಕೆಲಸ. ಉಪಕಾರ್ಯ II: ವಿಭಾಗೀಯ ಅಭಿಯಂತರರು/ದಕ್ಷಿಣ/ಬೆಂಗಳೂರು: ಚಿಕ್ಕಬಾಣಾವರ-ಹಾಸನ ವಿಭಾಗ: ಬಿಜಿ ನಗರ (ಬಿಜಿಎನ್ಆರ್) ನಿಲ್ದಾಣದ ಪ್ಲಾಟ್‌ಫಾರ್ಮ್-1, 2 ರಿಂದ 16 ಮೀಟರ್, ಹಿರಿಸಾವೆ (ಎಚ್ಐಎಸ್ಇ) ಪ್ಲಾಟ್‌ಫಾರ್ಮ್ 1,2 ಮತ್ತು 3 ರಿಂದ 20 ಮೀಟರ್, ಶ್ರವಣಬೆಳಗೊಳ (ಎಸ್‌ಬಿಜಿಎ) ನಿಲ್ದಾಣದ ಪ್ಲಾಟ್‌ಫಾರ್ಮ್ 1,2 ಮತ್ತು 3 ರಿಂದ 138 ಮೀಟರ್, ಚನ್ನರಾಯಪಟ್ಟಣ (ಸಿಎನ್‌ಪಿಎ) ಪ್ಲಾಟ್‌ಫಾರ್ಮ್ 1,2 ಮತ್ತು 3 ರಿಂದ 140 ಮೀಟರ್ ಮತ್ತು ಅಡೆನ್/ಕುಣಿಗಲ್ ಉಪ-ವಿಭಾಗದ ಚನ್ನರಾಯಪಟ್ಟಣ ನಿಲ್ದಾಣದಲ್ಲಿ ಕಾಂಪೌಂಡ್ ಗೋಡೆಯ ವಿಸ್ತರಣೆಗೆ ಬಾಕಿ ಕೆಲಸ. ನಿರ್ವಹಣಾ ಅವಧಿ 12 ತಿಂಗಳುಗಳು	ರೂ. 2,51,99,792/-
2	ವಿಭಾಗೀಯ ಅಭಿಯಂತರರು/ದಕ್ಷಿಣ/ಬೆಂಗಳೂರು ವಿಭಾಗ: ಉಪಕಾರ್ಯ I: ಸಹಾಯಕ ವಿಭಾಗೀಯ ಅಭಿಯಂತರರು /ಕುಣಿಗಲ್ ಉಪವಿಭಾಗದ ಅಡಿಯ ಸೋಲದೇವನಹಳ್ಳಿ (ಎಸ್‌ಡಿವಿಎಲ್), ಸೋಲೂರು (ಎಸ್‌ಒಎಲ್‌ಆರ್), ತಿಪ್ಪಸಂದ್ರ (ಟಿಎಸ್ಎ), ಯಡಿಯೂರು (ವೈವೈ), ಬಿ ಜಿ ನಗರ (ಬಿಜಿಎನ್ಆರ್), ಹಿರೀಸಾವೆ (ಎಚ್ಐಎಸ್ಇ) ಮತ್ತು ಶಾಂತಿಗ್ರಾಮ (ಎಸ್ಐಜಿಎ) ನಿಲ್ದಾಣಗಳಲ್ಲಿ ವಿದ್ಯುತ್ ಭಾಗಗಳೊಂದಿಗೆ ಪ್ರಸ್ತಾವಿತ ಟ್ರ್ಯಾಕ್‌ಮೆನ್ ವಿಶ್ರಾಂತಿ ಕೊಠಡಿ. ಉಪಕಾರ್ಯ II: ಆನೇಕಲ್ ಟಿಎಂ ವಿಶ್ರಾಂತಿ ಕೊಠಡಿ ಮತ್ತು ಸೇವಾ ಕಟ್ಟಡಗಳಿಗೆ ಸುಧಾರಿತ ಪ್ರವೇಶಕ್ಕಾಗಿ ಸಿಸಿ ರಸ್ತೆಯ ಪ್ರಸ್ತಾವಿತ ನಿರ್ಮಾಣ. ನಿರ್ವಹಣಾ ಅವಧಿ 3 ವರ್ಷಗಳು (ಸಂಯೋಜಿತ ಟೆಂಡರ್)	ರೂ. 1,88,46,526
3	ಓಮಲೂರು-ಯಶವಂತಪುರ ವಿಭಾಗ: ಸಹಾಯಕ ವಿಭಾಗೀಯ ಅಭಿಯಂತರರು/ಧರ್ಮಪುರಿ ಉಪವಿಭಾಗದಲ್ಲಿ ಓಮಲೂರು-ಬೆಂಗಳೂರು ನಿಲ್ದಾಣಗಳ ನಡುವಿನ 13 ಆರ್‌ಯುಬಿ ಸಂಖ್ಯೆಗಳಿಗೆ ಪ್ರಮಾಣಿತ ಎತ್ತರ ಮಾಪಕಗಳ ಪ್ರಸ್ತಾವಿತ ನಿಬಂಧನೆ - 31/ಎ, 31/ಬಿ, 32/ಎ, 35/ಎ, 42/ಎ, 45/ಎ, 81/ಎ, 82/ಬಿ, 178/ಎ, 243/ಎ, 427/ಎ, 541 ಮತ್ತು 580/ಎ. ನಿರ್ವಹಣಾ ಅವಧಿ 6 ತಿಂಗಳುಗಳು ಅಥವಾ ಒಂದು ಮುಂಗಾರು ಅವಧಿ, ಇವುಗಳಲ್ಲಿ ಯಾವುದು ನಂತರವೋ ಅದು.	ರೂ. 2,20,78,074
4	ಚಿಕ್ಕಬಾಣಾವರ - ಹಾಸನ ವಿಭಾಗ: ಸಹಾಯಕ ವಿಭಾಗೀಯ ಅಭಿಯಂತರರು/ಕುಣಿಗಲ್ ಉಪವಿಭಾಗದಲ್ಲಿ ಹಾಸನ - ನೆಲಮಂಗಲ ನಿಲ್ದಾಣಗಳ ನಡುವಿನ 20 ಆರ್‌ಯುಬಿ ಸಂಖ್ಯೆ 14, 73, 95, 96, 106, 168, 178, 177, 196, 204, 205, 221, 236, 281, 312, 323, 351, 356, 374 ಮತ್ತು 382 ಕ್ಕೆ ಸುಧಾರಣೆಗಳ ಪ್ರಸ್ತಾವನೆ. ನಿರ್ವಹಣಾ ಅವಧಿ 6 ತಿಂಗಳು ಅಥವಾ ಒಂದು ಮುಂಗಾರು, ಇವುಗಳಲ್ಲಿ ಯಾವುದು ನಂತರವೋ ಅದು.	ರೂ. 1,48,12,351
5	ಬೆಂಗಳೂರು ಧರ್ಮಾವರಂ ವಿಭಾಗ: ಆರ್‌ಯುಬಿ ಸೇತುವೆ ಒಳಚರಂಡಿಗೆ ಪ್ರಸ್ತಾವನೆ ವ್ಯವಸ್ಥೆಗಳು. ನಂ. 162/ಎ ಕಿಮೀ 154/200-300 ನಲ್ಲಿ ಮಕಜ್ಜಿಪಲ್ಲಿ (ಎಂಕೆಜೆ) - ನಾಗಸಮುದ್ರಂ (ಎನ್‌ಜಿಎಂ) ನಿಲ್ದಾಣಗಳ ನಡುವೆ ಮತ್ತು ಆರ್‌ಯುಬಿ ಸೇತುವೆ. ಪೆನುಕೊಂಡಿ-ಸತ್ಯ ಸಾಯಿ ಪ್ರಶಾಂತಿ ನಿಲಯ ರೈಲು ನಿಲ್ದಾಣ-ಧರ್ಮಾವರಂ ವಿಭಾಗದಲ್ಲಿ ಬಸಂಪಲ್ಲೆ (ಬಿಎಸ್‌ಪಿಎಲ್) ಧರ್ಮಾವರಂ (ಡಿಎಂಎಂ) ನಿಲ್ದಾಣಗಳ ನಡುವೆ ಕಿಮೀ 47/200-300 ರಲ್ಲಿ ನಂ. ಪಿಡಿ-133/ಎ. ನಿರ್ವಹಣೆ ಅವಧಿ 6 ತಿಂಗಳುಗಳು	ರೂ. 2,35,35,240
6	ಸಹಾಯಕ ವಿಭಾಗೀಯ ಅಭಿಯಂತರರು/ಮಂಡ್ಯ ಉಪವಿಭಾಗ:ಬೆಂಗಳೂರು ಎಲಿಯೂರು ವಿಭಾಗದಲ್ಲಿ ವಿದ್ಯುತ್ ಭಾಗ ಸೇರಿದಂತೆ ನಿಗದಿತ ಸ್ಥಳಗಳಲ್ಲಿ 16 ಸಂಖ್ಯೆಯ ಗೂಮ್ಟೀಸ್ ಕಟ್ಟಡ ನಿರ್ಮಾಣಕ್ಕೆ ಪ್ರಸ್ತಾವನೆ. ನಿರ್ವಹಣೆ ಅವಧಿ 3 ವರ್ಷಗಳು. ಸಂಯೋಜಿತ ಟೆಂಡರ್.	ರೂ. 4,00,73,852
7	ಸಹಾಯಕ ವಿಭಾಗೀಯ ಅಭಿಯಂತರರು/ಮಂಡ್ಯ ಉಪವಿಭಾಗ:ನಾಯಂಡಹಳ್ಳಿ (ಎನ್‌ವೈಎಚ್), ಹೆಜ್ಜಾಲ (ಎಚ್‌ಕೆಎಲ್), ಚನ್ನಪಟ್ಟಣ (ಸಿಪಿಟಿ) ಮತ್ತು ಬಿಡದಿ (ಬಿಐಡಿ) ಕೇಂದ್ರಗಳಲ್ಲಿ ವಿದ್ಯುತ್ ಭಾಗ ಸೇರಿದಂತೆ 4 ಎಸ್ ಮತ್ತು ಟಿ ವಸತಿ ಕಟ್ಟಡಗಳ ಪ್ರಸ್ತಾವಿತ ನಿರ್ಮಾಣ. ನಿರ್ವಹಣಾ ಅವಧಿ 3 ವರ್ಷಗಳು. ಸಂಯೋಜಿತ ಟೆಂಡರ್	ರೂ. 2,72,43,579
8	ಬೆಂಗಳೂರು-ಜೋಲಾರಪೇಟೆ ವಿಭಾಗ:ಸಹಾಯಕ ವಿಭಾಗೀಯ ಅಭಿಯಂತರರು/ಬಂಗಾರಪೇಟೆ ಉಪ-ವಿಭಾಗದಲ್ಲಿ. ಕೆಎಂ 285/400-500 (ಉದಾ. ಸ್ಪ್ಯಾನ್ 1 x 7.10ಎಂ+2x9.15ಎಂ+1x10.35ಎಂ ಡಿಎನ್) ನಲ್ಲಿ ಸೇತುವೆ ಸಂಖ್ಯೆ 758 ರ ಪಿಎಸ್‌ಸಿ ಸ್ಲ್ಯಾಬ್‌ನೊಂದಿಗೆ ಸ್ಟೀಲ್ ಗಿರ್ಡರ್‌ಗಳ ಬದಲಿ. ನಿರ್ವಹಣಾ ಅವಧಿ 4 ವರ್ಷಗಳು.	ರೂ. 1,45,44,543
9	ಸಹಾಯಕ ವಿಭಾಗೀಯ ಅಭಿಯಂತರರು/ಬಂಗಾರಪೇಟೆ ಉಪ-ವಿಭಾಗ: ಬಂಗಾರಪೇಟೆ (ಬಿಡಬ್ಲ್ಯೂಟಿ) ನಿಲ್ದಾಣದಲ್ಲಿ ವಿದ್ಯುತ್ ಭಾಗಗಳನ್ನು ಒಳಗೊಂಡಂತೆ ಟೈಪ್-ಇಲ್ ಕ್ವಾರ್ಟರ್ಸ್ 12 ಯೂನಿಟ್‌ಗಳು ಮತ್ತು ಟೈಪ್-ಖಖಖ ಕ್ವಾರ್ಟರ್ಸ್ 4 ಯೂನಿಟ್‌ಗಳ ಪುನರ್ನಿರ್ಮಾಣಕ್ಕೆ ಪ್ರಸ್ತಾವಿತ. ನಿರ್ವಹಣಾ ಅವಧಿ 3 ವರ್ಷಗಳು. ಸಂಯೋಜಿತ ಟೆಂಡರ್.	ರೂ. 4,00,12,222

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18-05-2026 ರಂದು 15.00 ಗಂಟೆಗಳವರೆಗೆ

ವಿವರಗಳಿಗಾಗಿ **www.ireps.gov.in** ಲಾಗಿನ್ ಮಾಡಿ.

ಹಿರಿಯ ವಿಭಾಗೀಯ ಅಭಿಯಂತರರು/ಸಮನ್ವಯ/ ಬೆಂಗಳೂರು

ಪಿಯುಬಿ/83/ಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026-27

ಸುಲಭ ಟಿಕೆಟ್ ಬುಕಿಂಗ್, ಪಿಎನ್‌ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ಸಾರ್ವಜನಿಕ ಸೂಚನೆ

ಹಿಂದಿನ ಪ್ರಕಟಣೆಗಳನ್ನು ಹಿಂತೆಗೆದುಕೊಳ್ಳುವ ಡಿಮ್ಯಾಂಡ್ ಸೂಚನೆಯ ಪ್ರಕಟಣೆ

ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಪತ್ರಿಕೆಯಲ್ಲಿ ದಿನಾಂಕ: 06.02.2026 ರಂದು ಪ್ರಕಟಗೊಂಡಿರುವ ಸೂಚನೆ (ಪತ್ರಿಕೆಗಳು - The New Indian Express ಮತ್ತು Kannada Prabha, IE-16 & KP-10) "Demand Notice" ಎಂಬ ಶೀರ್ಷಿಕೆಯಡಿ ಪ್ರಕಟಗೊಂಡಿದ್ದು, ನಂ.69, ಹಳೆಯ ನಂ.136, ಫ್ಲಾಟ್ ನಂ.108, 3ನೇ ಮಹಡಿ, "ದಾದಾ ಹೌಸ್" ಪತ ಅಪಾರ್ಟ್‌ಮೆಂಟ್, 7ನೇ ಮೇನ್ ರಸ್ತೆ, 5ನೇ ಬ್ಲಾಕ್, ಜಯನಗರ ಎಕ್ಸ್‌ಟೆನ್ಷನ್, ಬೆಂಗಳೂರು-560041 ಗೆ ಸಂಬಂಧಪಟ್ಟಂತೆ ಇದನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಈ ಮೂಲಕ ತಿಳಿಸಲಾಗುತ್ತದೆ.

ಮೇಲ್ಕಂಡ ಸೂಚನೆಯ ವಿವರಗಳಲ್ಲಿ ಸಂಭವಿಸಿದ ಅನವಧಾನದ ದೋಷದ ಕಾರಣದಿಂದ ಪ್ರಕಟಿಸಲಾಗಿದೆ. ಈ ಪ್ರಕಟಣೆಯನ್ನು ಬ್ಯಾಂಕ್/ ಅಧಿಕೃತಾಧಿಕಾರಿಯವರ ಯಾವುದೇ ಮುಂದಿನ ಉದ್ದೇಶಕ್ಕಾಗಿ ಬಳಸಬಾರದು.

ಈ ಪ್ರಕಟಣೆಯನ್ನು ಅನ್ವಯ ಮಾಲೀಕರಿಗೆ ಅಥವಾ ಸಾರ್ವಜನಿಕರಿಗೆ ಉಂಟಾದ ಯಾವುದೇ ಅನಾನುಕೂಲಕ್ಕೆ ವಿಷಾದ ವ್ಯಕ್ತಪಡಿಸುತ್ತೇವೆ. ಸಾರ್ವಜನಿಕರು ಈ ಮೊದಲು ಪ್ರಕಟಗೊಂಡ ಸೂಚನೆಯನ್ನು ರದ್ದುಪಡಿಸಲಾಗಿದೆ ಎಂದು ಪರಿಗಣಿಸಿ, ಅದನ್ನು ಆಧರಿಸಿ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ವಿನಂತಿಸಲಾಗುತ್ತದೆ.

ಅಧಿಕೃತ ಅಧಿಕಾರಿ
ಸರ್ಫೇಸಿ ಕಾಯ್ದೆ, 2002ರ ಅಡಿಯಲ್ಲಿ
ಹೆಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್
ಸ್ಥಳ: ಬೆಂಗಳೂರು
ದಿನಾಂಕ 03.05.2026

PUBLIC NOTICE

GENERAL PUBLIC IS HEREBY NOTIFIED that my client, **Mrs. Nazima Taj**, resident of Bengaluru, intends to purchase the immovable residential property described in the **Schedule** below.

Any person(s) having any claim, right, title, or interest in, upon, or over the said property by way of sale, mortgage, charge, gift, lease, lien, inheritance, trust, possession, easement, or any other encumbrance or agreement whatsoever, are hereby called upon to make the same known in writing, supported by documentary evidence, to the undersigned at the address mentioned below within **15 (fifteen) days** from the date of this publication. Notice is also given that my client has already affixed a banner on the property calling for any such objections if any.

If no such claims or objections are received within the stipulated period of 15 days, it shall be deemed that no such claims exist, or that such claims have been waived. My client will thereafter proceed with the purchase of the property, and any claims made after the expiry of the notice period will not be entertained or binding upon my client.

SCHEDULE PROPERTY

All that piece and parcel of the immovable residential property bearing **Survey No. 177/2**, measuring **774 Sq. ft.**, situated at Site No. # 5/1, 4th Cross, Kacharkanhalli Village, Yaseen Nagar, Nehru Colony, Bangalore, and bounded as follows:

North: Road, **South:** Sadiq and Mehar Taj Property **West:** Santosh Kumar Property **East :** Sherin taj and Abrar property.

Mohammed Moin Ulla & Mohammed Saad, Lex Reign,
Advocates & Solicitors, No.49, T1, 3rd Floor, Kodichikkanahalli, Bengaluru-560068.
Mobile: 9916080716.
E-Mail: lexreign14@gmail.com.
Date: 3rd May 2026, **Place:** Bengaluru

BEFORE THE TECHNICAL ASSISTANT TO THE DEPUTY COMMISSIONER AND EX-OFFICIO DEPUTY DIRECTOR OF LAND RECORDS, BENGALURU DISTRICT AT BENGALURU

APPEAL No. 46/2026

BETWEEN : Sri. B.M. Krishnappa & Others ... **Appellants**
AND : The Tahsildar, Anekal Taluk, And others ...**Respondents**

SUMMONS U/o. 5 RULE 20 (1-A) OF CPC TO RESPONDENTS No. 4 to 11 & 16

4. Smt. Shanthamma, D/o late Allellappa, Aged about 75 years, **5. Sri. Sampangiramaiah,** S/o late Allellappa, Aged about 63 years, **6. Sri. A. Ramachandrappa,** S/o late Allellappa, Aged about 55 years, **7. Smt. Savithramma,** D/o late Allellappa, Aged about 49 years Respondents No. 4 to 7 are Residing at Karakalaghatta Village, Thammanayakanahalli Post, Kasaba Hobli, Anekal Taluk, Bengaluru: 562106.

8. Sri. Aravind, S/o late Muniyappa, Aged about 45 years, R/a Hulimangala Village, Jigani Hobli, Anekal Taluk, Bengaluru: 562106.

9. Sri. Chinnappa, S/o late Muniyappa, Aged about 62 years, R/a Hulimangala Village, Jigani Hobli, Anekal Taluk, Bengaluru: 562106

10. Smt. Parvathi, W/o late K. Gangadhara, Aged Major, **11. Sri. G. Lokesh,** S/o late K. Gangadhara, Aged Major, Respondents No. 10 to 11 are Residing at Karpur Village, Kasaba Hobli, Anekal Taluk, Bengaluru: 562106.

16. Sri. Venkatesh. M, S/o Late Muniyappa, Aged about 65 years, Residing at Besthamanahalli Village, Kasaba Hobli, Anekal Taluk, Bengaluru: 562016.

Take notice that the appellants has called in question the legality and validity of the phodi order dated: 27.09.2023 and another phodi dated: 25.03.2010 passed by the respondents No. 1 and 2 in respect of the land bearing Old Sy.No.34, new Survey No.34/1, measuring to an extent of 0.03.08 guntas, 34/2 measuring to extent of 01 Acre 05 guntas, 34/3 measuring to an extent of 0.01.12 guntas, 34/4 measuring to an extent of 0.07 guntas, and 34/5 measuring to an extent of 0.09.08 guntas including 0.02 guntas kharab, 2) Old Sy.No. 34 and New Sy.No. 34/6 measuring to an extent of 0.02.12 guntas. 3) Order dated 27.09.2023 passed in respect of Old Sy.No. 34/1 New Sy.No. 34/7 measuring to an extent of 0.02.08 guntas. All are situated at Besthamanahalli Village, Kasaba Hobli, Anekal Taluk, Bengaluru, peruse the same, hear the parties and set aside the impugned orders that is order dated 25.03.2010 passed in Hissa Phodi and durasth in respect of Old Sy.No. 34 and after phodi renumbered as new Sy.No. 34/1, 34/2, 34/3, 34/4 and 34/5 order dated 19.11.2021 passed in Hissa Phodi and durasth in respect of Old Sy.No. 34 and New Sy.No. 34/6, measuring to an extent of 0.02.12 guntas, and order dated 27.09.2023 passed in respect of Old Sy.No. 34/1, new 34/7 measuring to an extent of 0.02.08 guntas, all are situated at Besthamanahalli Village, Kasaba Hobli, Anekal Taluk, Bengaluru by the Respondents No. 1 and 2 and further Respondents No. 1 and 2 to make fresh phodi and prepare the sketch as per the possession and enjoyment and documents of the Appellants and Respondents 3 to 16 and grant such other or further reliefs.

You are hereby summoned to appear before this Hon'ble Court in person or by a pleader duly instructed and able to answer all material questions relating to the appeal **on 02.06.2026 at 3.00 PM** to answer the question, failing which, the appeal will be disposed of in your absence as ex-parte.

Given under my hand and seal of the Court on this 17th day of April 2026.

By the Order of Technical Assistant to the Deputy Commissioner and Ex-officio, Deputy Director of Land Records, Bengaluru District, Bengaluru
Advocate for Appellants

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ

ನಂ.1, "ಉತ್ತುಂಗ", ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18,
ದೂರವಾಣಿ ಸಂಖ್ಯೆ :080-26983700, 26983722, 22976600, 22976651
Email : recoverycell@karnatakaapex.bank.in

ಸ್ವಾಧೀನ ನೋಟೀಸ್ [ನಿಯಮ-8 (1)] (ಸ್ಥಿರ ಸ್ವತ್ತಿಗೆ ಸಂಬಂಧಿಸಿದಂತೆ)

ಕೆಳ ಸಹಿದಾರರು **ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ** ಇದರ ಸರ್ಫೇಸಿ ಕಾಯ್ದೆಯಡಿ ಅಧಿಕೃತ ಅಧಿಕಾರಿಯಾಗಿದ್ದು ಸರ್ಫೇಸಿ ಕಾಯ್ದೆ 2002ರ ಅನ್ವಯ ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ನಿಯಮ 3ನ್ನು ಓದಿಕೊಂಡಂತೆ ಕಲಂ 13(12) ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ರೂ.41,18,217/- (ರೂಪಾಯಿ ನಲವತ್ತೊಂದು ಲಕ್ಷದ ಹದಿನೆಂಟು ಸಾವಿರದ ಇನ್ನೂರ ಹದಿನೇಳು ಮಾತ್ರ)** ಗಳನ್ನು ದಿನಾಂಕ : **08.01.2026** ರಲ್ಲಿ ಇದ್ದಂತೆ ಮತ್ತು ಒಪ್ಪಿತ ದರದಲ್ಲಿ ಮುಂದಿನ ಬಡ್ಡಿ, ಖರ್ಚು ಹಾಗೂ ಇತರೆ ವೆಚ್ಚಗಳನ್ನು ಪಾವತಿಸಲು **ಸಾಲಗಾರರಾದ : (1) ಶ್ರೀ ವರುಣ್.ಆರ್.ಧಮ್ಮಪಾಲ್,** ಬಿನ್ ರಾಜಣ್ಣ.ಜಿ., ನಂ.99, 3ನೇ ಮೇನ್, 4ನೇ ಕ್ರಾಸ್, 2/4 ಲೇಕ್ ವ್ಯೂ, ಬಿಳಿಶಿವಾಲೆ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು-560 077, **ಮತ್ತೊಂದು ವಿಳಾಸ :** ಮಾಯಸಂದ್ರ, ಚಿಕ್ಕನಹಳ್ಳಿ ಹೋಬಳಿ, ತಾವರೆಕೆರೆ ಹೋಬಳಿ, ತಾವರೆಕೆರೆ ಹೋಬಳಿ ದಕ್ಷಿಣ ಬೆಂಗಳೂರು-562130, **ಮತ್ತೊಂದು ವಿಳಾಸ :** ಫ್ಲಾಟ್ ನಂ.510, 13ನೇ ಕ್ರಾಸ್, ಇಂದಿರಾನಗರ ರಾಯಲ್ ಓಕ್, ಬೆಂಗಳೂರು-560077, **ಮತ್ತೊಂದು ವಿಳಾಸ :** ನಂ.4126, 4ನೇ ಬ್ಲಾಕ್, 12ನೇ ಮಹಡಿ, ಕಾಸಾ ಸೆರಿನಿಟಿ, ಶೋಭಾ ಸಿಟಿ, ಹೆಗ್ಡೆ ನಗರ, ಬೆಂಗಳೂರು-560077 **ಜಾಮೀನುದಾರರು : (2) ಶ್ರೀ ವೆಂಕಟೇಶ್.ಎಸ್.,** ಬಿನ್ ಶ್ರೀನಿವಾಸ್.ಆರ್., ನಂ.89, 6ನೇ ಕ್ರಾಸ್, 3ನೇ ಬ್ಲಾಕ್, ಪಿಡಬ್ಲ್ಯೂಡಿ ಕ್ವಾರ್ಟರ್ಸ್, ವಿಲ್ಸನ್ ಗಾರ್ಡನ್, ಬೆಂಗಳೂರು ದಕ್ಷಿಣ, ಬೆಂಗಳೂರು-560027, **ಮತ್ತೊಂದು ವಿಳಾಸ :** ಬಿಸಿನೆಸ್ ಡೆವಲಪ್‌ಮೆಂಟ್ ಎಕ್ಸಿಕ್ಯೂಟಿವ್, ಸಿಟಿ ಸಿನಾಪ್ಸ್ ಇನ್ಫರ್ಮೇಷನ್ ಪ್ರೈ., ಲಿ., ನಂ.14/15, ಪಟೇಲ್ ರಾಮರೆಡ್ಡಿ ರಸ್ತೆ, ಕೃಷ್ಣಮೂರ್ತಿ ಲೇಔಟ್, ದೊಮ್ಮಲೂರು, ಬೆಂಗಳೂರು-560071., **(3) ಶ್ರೀ ಸ್ಯಾಮ್ಸನ್ ಸ್ಟ್ಯಾನಿ ಪಾಲ್,** ಬಿನ್ ಲೇಟ್ ಪಿ.ಡಿ.ತಂಗಂ, ನಂ.865, ವಿಜನಾಪುರ, ರಾಮಮೂರ್ತಿ ನಗರ, ರಾಮಸ್ವಾಮಿ ರೆಡ್ಡಿ ಲೇಔಟ್, ದೂರವಾಣಿ ನಗರ, ಬೆಂಗಳೂರು ಉತ್ತರ, ಬೆಂಗಳೂರು-560 016, **ಮತ್ತೊಂದು ವಿಳಾಸ :** ಪ್ಲಾಟ್ ಸಂಖ್ಯೆ.207-210, ಕೆಐಎಡಿಬಿ, ನರಸಾಪುರ ಕೈಗಾರಿಕಾ ಪ್ರದೇಶ, ಕೋಲಾರ ಜಿಲ್ಲೆ, ಕರ್ನಾಟಕ-563133, **(4) ಶ್ರೀ.ರವಿಶಂಕರ್.ಎಸ್.** ಬಿನ್ ಮಲ್ಲಿಕಾರ್ಜುನ ಶೆಟ್ಟಿ, ನಂ.83, ವಿಶ್ವ ಲೇಔಟ್, ಕೆನ್ನಮೆಟಲ್ ವಿಡಿಯಾ ಹಿಂಭಾಗ, ಮಂಜುನಾಥನಗರ, ಬೆಂಗಳೂರು ಉತ್ತರ, ಬೆಂಗಳೂರು-560 073, **ಮತ್ತೊಂದು ವಿಳಾಸ :** ವೆಲ್ಕಾನ್ ಸೊಲ್ಯೂಷನ್ಸ್, ಎಫ್2, ಎಲಿಗಂಟ್ ಅಪಾರ್ಟ್‌ಮೆಂಟ್, ಎಸ್‌ಬಿಎಂ ಕಾಲೋನಿ, ಬನಶಂಕರಿ, ಬೆಂಗಳೂರು-560050 ಇವರುಗಳಿಗೆ ದಿನಾಂಕ: **14.01.2026** ರಂದು ಡಿಮ್ಯಾಂಡ್ ನೋಟೀಸನ್ನು ನೀಡಿದ್ದು, ಡಿಮ್ಯಾಂಡ್ ನೋಟೀಸಿನಲ್ಲಿ ತಿಳಿಸಲಾಗಿರುವ ಮೊತ್ತವನ್ನು ಸದರಿ ನೋಟೀಸು ತಲುಪಿದ 60 ದಿನಗಳ ಒಳಗಾಗಿ ಪಾವತಿಸುವಂತೆ ಸೂಚಿಸಲಾಗಿತ್ತು.

ಈ ನೋಟೀಸುಗಳನ್ನು ಸಾಲಗಾರರು/ಜಾಮೀನುದಾರರು ಬ್ಯಾಂಕಿಗೆ ನೀಡಿರುವ ವಿಳಾಸಕ್ಕೆ ಕಳುಹಿಸಲಾಗಿದೆ. ಜಾರಿಯಾಗದೆ ವಾಪಸ್ಸು ಬಂದ ಕಾರಣ, ಬ್ಯಾಂಕು **ದಿನಾಂಕ: 14.01.2026ರ** ಡಿಮ್ಯಾಂಡ್ ನೋಟೀಸನ್ನು **ದಿನಾಂಕ: 06.02.2026ರ** ಕನ್ನಡ ದಿನಪತ್ರಿಕೆ **"ಸಂಯುಕ್ತ ಕರ್ನಾಟಕ"** ಮತ್ತು ಇಂಗ್ಲೀಷ್ ದಿನಪತ್ರಿಕೆ **"ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್"** ಗಳಲ್ಲಿ ಪ್ರಕಟಿಸಿ, ಸದರಿ ಡಿಮ್ಯಾಂಡ್ ನೋಟೀಸ್ ಪ್ರಕಟಿಸಿದ ದಿನಾಂಕದಿಂದ **60 ದಿನಗಳ ಒಳಗಾಗಿ** ನೋಟೀಸಿನಲ್ಲಿ ತಿಳಿಸಲಾಗಿರುವ ಮೊತ್ತವನ್ನು ಪಾವತಿಸುವಂತೆ ಸೂಚಿಸಲಾಗಿತ್ತು.

ಸಾಲಗಾರರು ಡಿಮ್ಯಾಂಡ್ ನೋಟೀಸಿನಲ್ಲಿ ಸೂಚಿಸಿರುವ ಮೊತ್ತವನ್ನು ಮರುಪಾವತಿಸಲು ವಿಫಲರಾದುದರಿಂದ ಸಾಲಗಾರರು ಮತ್ತು ಜಾಮೀನುದಾರರು ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೆಳಸಹಿದಾರರು ಸೆಕ್ಯೂರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ರೂಲ್ಸ್ 2002 ರ ನಿಯಮ 8 ನ್ನು ಓದಿಕೊಂಡಂತೆ ಸರ್ಫೇಸಿ ಕಾಯ್ದೆಯ ಕಲಂ 13ರ ಉಪ ಕಲಂ 4 ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನ ಷೆಡ್ಯೂಲಿನಲ್ಲಿ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು **ದಿನಾಂಕ 30ನೇ ಏಪ್ರಿಲ್ 2026 ರಂದು** ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಯಾರೂ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ಮಾಡಬಾರದು, ಮಾಡಿದ್ದೇ ಆದಲ್ಲಿ, **ರೂ.41,18,217/- (ರೂಪಾಯಿ ನಲವತ್ತೊಂದು ಲಕ್ಷದ ಹದಿನೆಂಟು ಸಾವರದ ಇನ್ನೂರ ಹದಿನೇಳು ಮಾತ್ರ)** ಹಾಗೂ ದಿನಾಂಕ **08.01.2026** ರಿಂದ ಸಾಲ ತೀರುವಳಿಯ ದಿನದವರೆಗೆ ಕರಾರಿನ ಬಡ್ಡಿ ಹಾಗೂ ಮುಂದುವರೆದ ಬಡ್ಡಿ ಹಾಗೂ ವೆಚ್ಚಗಳನ್ನು ಒಳಗೊಂಡಂತೆ **ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ, ಬನಶಂಕರಿ 1ನೇ ಹಂತ ಶಾಖೆ** ಇವರಿಗೆ ಚುಕ್ತ ಮಾಡುವುದಕ್ಕೆ ಬಾಧ್ಯವಾಗಿರುತ್ತಾರೆ.

ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವುದರ ಕಾಲಾವಕಾಶದ ಕುರಿತಂತೆ ಸರ್ಫೇಸಿ ಕಾಯ್ದೆಯ ಕಲಂ 13 ರ ಉಪ ಕಲಂ 8 ರಲ್ಲಿ ವಿಶದಪಡಿಸಲಾಗಿರುತ್ತದೆ ಎಂಬುದನ್ನು ಸಾಲಗಾರರ ಗಮನಕ್ಕೆ ಈ ಮೂಲಕ ತರಲಾಗುತ್ತಿದೆ.

Description of the Immovable Schedule Property

All that piece and parcel of the immovable property bearing Site No.99, Khatha No-61/99, Sy.No.109, Situated at Bileshivale Village, Bidarahalli Hobli, Bengaluru East Taluk, BBMP ward No.54, Bengaluru measuring East to West 40 feet & North to South 60 feet including building and bounded as follows: East by : Site No.116, West by : Road (30 feet), North by : Site No.100, South by : Site No.98.

ಸ್ಥಳ : ಬೆಂಗಳೂರು
ದಿನಾಂಕ: 30.04.2026
ಸಹಿ/ - ಅಧಿಕೃತ ಅಧಿಕಾರಿ
ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ.

PUBLIC NOTICE

This Public Notice is being caused on behalf of our clients **1) Sri. Y.H. Krishna**, aged about 62 years, S/o. Sri. Hanumappa Reddy, **2) Sri. H. Nagaraj**, aged about 60 years, S/o. Sri. Hanumappa Reddy, **3) Smt. Jayalakshmi** aged about 50 years, W/o. Sri. Lakshmana Reddy, **4) Sri. Lakshminarayana**, aged about 50 years, S/o. Sri. Hanumappa Reddy, **5) Smt. Dhanalakshmi** aged about 48 years, W/o. Sri. Guruva Reddy, **6) Sri. Janardhana Y.H.** aged about 46 years, S/o. Sri. Hanumappa Reddy, **7) Smt. Sharadamma** aged about 80 years, W/o. Sri. Narayana Reddy, **8) Smt. Shanthamma** aged about 77 years, W/o. Sri. Rajappa Reddy

1. Our clients had executed an unregistered General Power of Attorney dated 01.06.2006 in favour of Sri. Y.H. Anand, aged about 55 years, S/o Late B. Hanumappa Reddy, residing at No. 278, 25th Cross, 6th Block, Jayanagar, Bengaluru 560082, owing to his representations and assurances, thereby appointing him as their attorney to act on their behalf and to represent them in connection with the proceedings in O.S. No. 15171/2004 and O.S. No. 696/2004 on the file of the City Civil Court at Bangalore, in respect of their rights, title, interests and shares which may accrue to them over the Schedule Properties described hereunder.

2. Our clients hereby declare that the said General Power of Attorney dated; 01.06.2006 stands revoked, cancelled and terminated with immediate effect, to prevent any misuse of the said attorney and the same has been intimated to Sri. Y.H. Anand vide legal notice dated 28.04.2026. The said revocation is absolute, final and binding on the said Sri. Y.H. Anand.

3. In view of the above, the said Sri. Y.H. Anand, has no manner of right, authority or power whatsoever to represent our clients before any court, authority or person, or to in any manner deal with the Schedule Properties. Accordingly, all persons are hereby strictly cautioned not to accept any representations, enter into any transactions or have any dealings with the said Sri. Y.H. Anand in respect of the Schedule Properties. Any person dealing with the said Sri. Y.H. Anand shall do so entirely at their own risk as to costs and consequences.

4. Without prejudice to the above, if any person, entity or authority who has entered into or claims to have entered into any transaction, agreement, deed, arrangement or dealing of whatsoever nature in respect of the Schedule Properties, whether directly or indirectly, pursuant to or in reliance upon any representation, act or conduct of the said Sri. Y.H. Anand, is hereby called upon to disclose full particulars of such transactions, along with supporting documents within 10 days from the date of publication of this Public Notice. Failing such disclosure within the stipulated period, it shall be deemed that no such transaction exists or that the concerned party has abandoned and given up any such claim and any such transactions/dealings shall stand cancelled forthwith. If later any such transactions or dealings are brought to light, the same shall be treated as non- existent and/or not binding our clients.

SCHEDULE PROPERTIES

1. All that piece and parcel of the land bearing Sy. No. 60/1 measuring 1 Acre 23 Guntas situated at Kothanur Village, Uttarahalli Hobli, Bengaluru South Taluk bounded on the: **East by:** Sy. No.69, **West by:** Property belonging to Lagumappa, **North by:** Property belonging to Sonappa, **South by:** Kothanur Village

2. All that piece and parcel of the land bearing Sy. No. 21/1 measuring 6 Guntas situated at Raghavanapalya Village, Uttarahalli Hobli, Bengaluru South Taluk bounded on the: **East by:** Property belonging to Ramaswamy, **West by:** Sy.No. 21/2, **North by:** Sy. No. 21/1, **South by:** Property belonging to BDA

3. All that piece and parcel of the land bearing Sy. No. 21/2 measuring 4 Acres 27 Guntas situated at Raghavanapalya Village, Uttarahalli Hobli, Bengaluru South Taluk bounded on the: **East by:** Property belonging to Ramaswamy, **West by:** Road, **North by:** Road, **South by:** Property belonging to BDA

All that portion or portions of the above Schedule Properties which may hereafter fall to the share of our clients and over which our clients have lawful right, title and interest.

Abhinav. R, Advocate
Kumar & Kumar Advocates,
F-113, 3rd Floor, Central Chambers, 2nd main, Gandhinagar, Bengaluru-560 009.
Ph: 7411129714. Date: 02/05/2026

ವಾಸ್ತು ಹೌಸಿಂಗ್ ಫೈನಾನ್ಸ್ ಕಾರ್ಪೋರೇಷನ್ ಲಿಮಿಟೆಡ್

VASTU HOUSING FINANCE

ಯುನಿಟ್ 203 & 204, 2ನೇ ಮಹಡಿ, 'ಎ' ವಿಂಗ್, ನವಭಾರತ್ ಎಸ್ಟೇಟ್, ಜಕಾರಿಯಾ ಬಂದರ್ ರಸ್ತೆ, ಸೇವ್ರಿ (ಪಶ್ಚಿಮ), ಮುಂಬೈ-400015. ಮಹಾರಾಷ್ಟ್ರ.
CIN No.: U65922MH2005PLC272501

ಸ್ವಾಧೀನ ಸೂಚನೆ

ಆದಾಗ್ಯೂ, ಕೆಳಸಹಿದಾರರು ವಾಸ್ತು ಹೌಸಿಂಗ್ ಫೈನಾನ್ಸ್ ಕಾರ್ಪೋರೇಷನ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಹಣಕಾಸು ಆಸ್ತಿಗಳ ಪ್ರಭೂತಿಕರಣ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ 2002 ರಡಿ ಹಾಗೂ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ನಿಯಮ 3 ಜೊತೆಗೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಪರಿಚ್ಛೇಧ 13(12)ರ ಅನ್ವಯ ಪ್ರದತ್ತವಾದ ಅಧಿಕಾರಗಳಂತೆ ಸಾಲಗಾರರಿಗೆ ಡಿಮಾಂಡ್ ನೋಟೀಸ್ ಜಾರಿ ಮಾಡಿ ಡಿಮಾಂಡ್ ನೋಟೀಸನ್ನು ಜಾರಿ ಮಾಡಿ ನೋಟೀಸ್‌ನಲ್ಲಿರುವ ಈ ಕೆಳಗಿನ ಮೊತ್ತವನ್ನು ಸದರಿ ನೋಟೀಸ್ ಸ್ವೀಕರಿಸಿದ ದಿನಾಂಕದಿಂದ 60 ದಿನಗಳೊಳಗಾಗಿ ಮರುಪಾವತಿ ಮಾಡಲು ಸೂಚಿಸಿದ್ದರು.

ಸಾಲಗಾರರು ಬಾಕಿ ಮೊತ್ತವನ್ನು ಮರುಪಾವತಿ ಮಾಡುವಲ್ಲಿ ವಿಫಲರಾಗಿರುತ್ತಾರೆ, ಕೆಳಸಹಿದಾರರು ಅವರಿಗೆ ಸದರಿ ನಿಯಮಗಳ ನಿಯಮ 8 ರ ಜೊತೆಗೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ (ಜಾರಿ) ಪರಿಚ್ಛೇಧ 13(4)ರಡಿ ಅವರಿಗೆ ಪ್ರದತ್ತವಾದ ಅಧಿಕಾರಗಳಂತೆ ಕೆಳಕಂಡಂತೆ ವಿವರಿಸಲಾದ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ ಎಂಬುದಾಗಿ ತಿಳಿಯಪಡಿಸುತ್ತಾರೆ.

ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ನೀಡುವ ಎಚ್ಚರಿಕೆಯೇನೆಂದರೇ ಸದರಿ ಆಸ್ತಿಗಳ ಬಗ್ಗೆ ಯಾರೂ ಯಾವುದೇ ರೀತಿಯಲ್ಲಿ ವ್ಯವಹರಿಸಬಾರದು ಹಾಗೂ ವ್ಯವಹರಿಸಿದ್ದೇ ಆದಲ್ಲಿ ವಾಸ್ತು ಹೌಸಿಂಗ್ ಫೈನಾನ್ಸ್ ಕಾರ್ಪೋರೇಷನ್ ಲಿಮಿಟೆಡ್ ಶಾಖೆಗೆ ಬಾಕಿಯಾಗಿರುವ ವಸೂಲಾಗಬೇಕಾದ ಸಾಲದ ಬಾಬ್ತು ಜೊತೆಗೆ ತದನಂತರದ ಬಡ್ಡಿ, ಕಾಸ್ಟ್, ಇತರೆ ಖರ್ಚುಗಳು ಮತ್ತು ವೆಚ್ಚಗಳು ಸೇರಿದ ಮೊತ್ತಕ್ಕೆ ಭಾಧ್ಯರಾಗಬೇಕಾಗುತ್ತದೆ.

ಕ್ರ. ಸಂ	ಸಾಲಗಾರ, ಸಹ-ಸಾಲಗಾರರ ಹೆಸರು ಮತ್ತು ಸಾಲದ ಸಂ.	ಡಿಮಾಂಡ್ ನೋಟೀಸಿನ ದಿನಾಂಕ ಮತ್ತು ಮೊತ್ತ	ಆಸ್ತಿಯ ವಿವರ	ಸ್ವಾಧೀನತೆಯ ದಿನಾಂಕ ಮತ್ತು ವಿಧ
	ರಾಜಣ್ಣ ಜೆ (ಸಾಲಗಾರರು) ಲತಮ್ಮ ಎಸ್ (ಸಹ ಸಾಲಗಾರರು) LP0000000111351	13-ಆಗಸ್ಟ್-25 ರೂ. 448282/- 11-ಆಗಸ್ಟ್-25 ರಂದು ಇದ್ದಂತೆ	ಸಕಲ ಸಮಸ್ತವೂ ಸೇರಿದಂತೆ ಸ್ಥಿರಾಸ್ತಿಯ ಸಂ.197/60/54(ಸಿಎಂಸಿ ದಾಖಲೆಗಳಲ್ಲಿ ಇದ್ದಂತೆ) ಪಿಐಡಿ ಸಂ. 152500702800300207, ಶಿಡ್ಲಕೋನ ಗ್ರಾಮ, ಗೋಪಾಲದೇವರಹಳ್ಳಿ ಗ್ರಾಮ ಪಂಚಾಯಿತಿ, ಸಿರಾ ತಾಲ್ಲೂಕು, ತುಮಕೂರು ಜಿಲ್ಲೆ, ಅಳತೆ: ಪೂರ್ವದಿಂದ ಪಶ್ಚಿಮಕ್ಕೆ- 12.192 ಮೀಟರ್,. ಮತ್ತು ಉತ್ತರದಿಂದ ದಕ್ಷಿಣಕ್ಕೆ: 9.144 ಮೀಟರ್ ಒಟ್ಟಾರೆ ಅಳತೆ III. 48 ಚದರ ಮೀಟರ್ ಜೊತೆಗೆ 72.19 ದರ ಮೀಟರ್ ಕಟ್ಟಡ ನಿರ್ಮಿತವಾಗಿದ್ದು, ಚಕ್ಕುಬಂದಿ: ಉತ್ತರಕ್ಕೆ- ರಂಗಮ್ಮ ರವರಿಗೆ ಸೇರಿದ ಆಸ್ತಿ, ದಕ್ಷಿಣಕ್ಕೆ- ತಿಮ್ಮಕ್ಕ ರವರಿಗೆ ಸೇರಿದ ಮನೆ, ಪೂರ್ವಕ್ಕೆ: ಬೊಮ್ಮಲಿಂಗಪ್ಪ ರವರಿಗೆ ಆಸ್ತಿ, ಪಶ್ಚಿಮಕ್ಕೆ: ರಸ್ತೆ.	ಭೌತಿಕ ಸ್ವಾಧೀನತೆ 29-ಏಪ್ರಿಲ್-26
2.	ರಂಗನಾಥ ಎ ಕೆ (ಸಾಲಗಾರ), ಶ್ರೀಮತಿ/ಶ್ರೀ ಪವಿತ್ರ ಆರ್ (ಸಹ-ಸಾಲಗಾರ), ಶ್ರೀಮತಿ/ಶ್ರೀ ವೆಂಕಟೇಶಪ್ಪ ಎ (ಸಹ-ಸಾಲಗಾರ) MLP0000000240628	19-ಜನವರಿ-26 ರೂ. 817089/- 16-ಜನವರಿ-26 ರಂದು ಇದ್ದಂತೆ ಜೊತೆಗೆ ತದನಂತರದ ಬಡ್ಡಿ ಮತ್ತು ಚಾರ್ಜುಗಳು ಸೇರಿದಂತೆ	ಸಕಲ ಸಮಸ್ತವೂ ಸೇರಿದಂತೆ ಆಸ್ತಿ ಸಂ. 155/1 (ಗ್ರಾಮ ಪಂಚಾಯತ್ ದಾಖಲೆಗಳ ಪ್ರಕಾರ), ಪಿಐಡಿ ಸಂಖ್ಯೆ 152400100800200004, ಅದ್ರಿಹಳ್ಳಿ ಗ್ರಾಮದಲ್ಲಿದೆ, ಸಾಯದರಕಲ್ಲಹಳ್ಳಿ ಗ್ರಾಮಪಂಚಾಯತ್, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, 577243 ಆಸ್ತಿಯ ವಿಸ್ತೀರ್ಣ: 149 ಚದರ ಮೀಟರ್, ಉತ್ತರಕ್ಕೆ: ರಸ್ತೆ; ದಕ್ಷಿಣಕ್ಕೆ: ರಸ್ತೆ, ಪೂರ್ವಕ್ಕೆ: ನಿವೇಶನ ಭರ್ಮಪ್ಪ ಅವರಿಗೆ ಸೇರಿದ್ದು, ಪಶ್ಚಿಮಕ್ಕೆ: ಆಸ್ತಿ ನಾಗಮ್ಮ ಅವರಿಗೆ ಸೇರಿದೆ	ಭೌತಿಕ ಸ್ವಾಧೀನತೆ 29-ಏಪ್ರಿಲ್-26

ದಿನಾಂಕ : 03.05.2026
ಸ್ಥಳ : ತುಮಕೂರು, ಶಿವಮೊಗ್ಗ
ಅಧಿಕೃತ ಅಧಿಕಾರಿ
ವಾಸ್ತು ಹೌಸಿಂಗ್ ಫೈನಾನ್ಸ್ ಕಾರ್ಪೋರೇಷನ್ ಲಿಮಿಟೆಡ್

ಸಾಲ ವಸೂಲಾತಿ ನ್ಯಾಯಮಂಡಳಿ-1

ಬಿ.ಎಸ್.ಎನ್.ಎಲ್. ಕಟ್ಟಡ, 4ನೇ ಮಹಡಿ, ಟೆಲಿಫೋನ್ ಹೌಸ್, ರಾಜಭವನ, ಬೆಂಗಳೂರು-560001.

ಓ.ಎ. ನಂ. 1044/2024
A/c No. 922030013551797

ನಡುವೆ :
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್., ನೋಂದಾಯಿತ ಕಛೇರಿ ವಿಳಾಸ : "ತ್ರಿಶೂಲ್", ಸಮರ್ಥೇಶ್ವರ ದೇವಸ್ಥಾನದ ಎದುರು, ನ್ಯೂ ಲಾ ಗಾರ್ಡನ್, ಎಲ್ಲಿಸ್ ಬ್ರಿಡ್ಜ್, ಅಹಮದಾಬಾದ್ -380006 ಜೊತೆಗೆ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ವೃತ್ತ, ಬೆಂಗಳೂರು -560 009, ಇದನ್ನು ಪ್ರತಿನಿಧಿಸುವ ಅಧಿಕೃತ ಅಧಿಕಾರಿ ಆನ್ಲೈನ್ ಸ್ ಚೆಟ್ಟಿ
ಇ-ಮೇಲ್: Kftlegalsupport.collections@axisbank.com ... ಅರ್ಜಿದಾರರು

ಮತ್ತು
(1) M/s Nature Home Care Product, ಇವರು ಪ್ರತಿನಿಧಿಸುವ ಮಾಲೀಕರು ಶ್ರೀಮತಿ ನವ್ಯ.ಜಿ., ಕಛೇರಿ ವಿಳಾಸ : ನಂ.43, ವಿನಾಯಕ ಲೇಔಟ್, ನಾಗದೇವನಹಳ್ಳಿ, ... ಬೆಂಗಳೂರು-560056. ಮೊ: 9902362991

(2) ಶ್ರೀಮತಿ ನವ್ಯಾ.ಜಿ., ವಯಸ್ಸು ಸುಮಾರು 40 ವರ್ಷ (ಹುಟ್ಟಿದ ದಿನಾಂಕ: 29/3/1984) ಕೋಂ ಶ್ರೀ ಆನಂದ್.ಎ.ಸಿ., ನಂ.15, 1ನೇ ಮುಖ್ಯ ರಸ್ತೆ, ... ಬೆಂಗಳೂರು-560060. ...ಪ್ರತಿವಾದಿಗಳು

ಸಾಲ ವಸೂಲಾತಿ ನ್ಯಾಯಮಂಡಳಿ (ಕಾರ್ಯವಿಧಾನ) ನಿಯಮಗಳು 1993 ರ ನಿಯಮ 23 (VIII) ರ ಅಡಿಯಲ್ಲಿ ನೀಡಿರುವ ಸಮನ್ಸ್

ಅದಾಗಿ ಅರ್ಜಿದಾರರು ಬ್ಯಾಂಕುಗಳಿಗೆ ಮತ್ತು ಹಣಕಾಸು ಸಂಸ್ಥೆ ಬಾಕಿ ಸಾಲ ವಸೂಲಾತಿ ಕಾಯ್ದೆ 1993 ರಲ್ಲಿ ಪರಿಚ್ಛೇದ 19ರ ಅಡಿಯಲ್ಲಿ ಅನ್ವಯಿಸಿ ... ರೂ. 42,35,255.86/- (ರೂಪಾಯಿ ನಲವತ್ತೆರಡು ಲಕ್ಷದ ಮೂವತ್ತೈದು ಸಾವಿರದ ಇನ್ನೂರ ಐವತ್ತೈದು ಮತ್ತು ಎಂಬತ್ತಾರು ಪೈಸೆ ಮಾತ್ರ) ... ದಿನಾಂಕ 23.7.2026 ರಂದು ಬೆಳಿಗ್ಗೆ 10.30 ಗಂಟೆಗೆ ನಿಗದಿಪಡಿಸಲಾಗಿದೆ.

ಅದಕಾರಣ ತಾವು ಮುದ್ದಾಗಿ ಅಥವಾ ತಮ್ಮ ವಕೀಲರ ಮುಖಾಂತರ ಮೇಲೆ ತಿಳಿಸಿರುವ ವೇಳೆಯಲ್ಲಿ ನ್ಯಾಯಮಂಡಳಿಯ ಮುಂದೆ ಹಾಜರಿರಬೇಕಾಗಿ ಈ ಮೂಲಕ ತಿಳಿಸಲಾಗಿದೆ.

ಒಂದು ವೇಳೆ ನೀವು ಗೈರು ಹಾಜರಾದಲ್ಲಿಯೂ ಸಹ ಈ ಅರ್ಜಿಯನ್ನು ವಿಚಾರಣೆಗೆ ಕರೆದು ತೀರ್ಮಾನಿಸಲಾಗುವುದೆಂದು ಸೂಚನೆ ನೀಡಲಾಗಿದೆ.

ದಿನಾಂಕ: 16.04.2026 ರಂದು ನನ್ನ ಸಹಿ ಮತ್ತು ನ್ಯಾಯಮಂಡಳಿಯ ಮೊಹರಿನೊಂದಿಗೆ ನೀಡಲಾಗಿದೆ.

ರಿಜಿಸ್ಟ್ರಾರ್
ಸಾಲ ವಸೂಲಾತಿ ನ್ಯಾಯಮಂಡಳಿ-1
ಬೆಂಗಳೂರು.

ಎಕ್ಸಿಸ್ ಬ್ಯಾಂಕ್

ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು -560009

ಸ್ವಾಧೀನ ಸೂಚನೆ ನಿಯಮ 8(1) (ಸ್ಥಿರಾಸ್ತಿಗಳಿಗಾಗಿ)

ಕೆಳಸಹಿದಾರರು **ಎಕ್ಸಿಸ್ ಬ್ಯಾಂಕ್ ಲಿ.,** ಇದರ ಅಧಿಕೃತ ಅಧಿಕಾರಿಯವರು ಸೆಕ್ಯೂರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಅನ್ವಯ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ ನಿಯಮ 3ನ್ನು ಓದಿಕೊಂಡಂತೆ ಪ್ರಕರಣ 13(12) ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ **60 ದಿನಗಳ** ಒಳಗೆ ಸೂಚನೆಯಲ್ಲಿ ಮೊಬಲಗು ಮತ್ತು ಬಡ್ಡಿಯನ್ನು ಮರು ಪಾವತಿಮಾಡಲು ಕೆಳಗೆ ಸೂಚಿಸಿರುವ ಸಾಲಗಾರರಿಗೆ/ ಜಾಮೀನುದಾರರಿಗೆ / ಅಡಮಾನದಾರರಿಗೆ ಕೆಳಗೆ ತಿಳಿಸಿದ ದಿನಾಂಕ ದಂದು ನೀಡಿದ ಡಿಮ್ಯಾಂಡ್ ನೋಟೀಸಿನಲ್ಲಿ ಸೂಚಿಸಲಾಗಿತ್ತು.

ಸಾಲಗಾರರು/ಜಾಮೀನುದಾರರು/ಅಡಮಾನುದಾರರು ಸದರಿ ಮೊಬಲಗನ್ನು ಮರು ಪಾವತಿಸದೇ ಇರುವುದರಿಂದ ಈ ಕೆಳಗೆಸಹಿ ಮಾಡಿರುವವರು ಕೆಳಗೆ ವಿವರಿಸಲಾದ ಆಸ್ತಿಗಳನ್ನು ಈ ಮೇಲೆ ತಿಳಿಸಿದ ಕಾಯಿದೆಯ ಕಲಂ 13(4) ರೊಂದಿಗೆ 2002ರ ನಿಯಮ 6 & 8 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೆಳಸಹಿದಾರರು ಬ್ಯಾಂಕಿಗೆ ಅಡಮಾನ ಮಾಡಿರುವ ಆಸ್ತಿಯನ್ನು ಕೆಳಕಂಡ ದಿನಾಂಕದಂದು ಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದು ಸಾಲಗಾರರಿಗೆ/ ಜಾಮೀನುದಾರರಿಗೆ/ ಅಡಮಾನದಾರರಿಗೆ ಈ ಮೂಲಕ ತಿಳಿಯಪಡಿಸಿದೆ.

ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಸರ್ಫೇಸಿ ಕಾಯಿದೆ 2002, ಸೆಕ್ಷನ್ 13(8)ರ ಅನ್ವಯ ಇರುತ್ತದೆ.

ಸಾರ್ವಜನಿಕರು ಹಾಗೂ ನಿರ್ದಿಷ್ಟವಾಗಿ ಸಾಲಗಾರರು/ಜಾಮೀನುದಾರರಿಗೆ/ ಅಡಮಾನದಾರರಿಗೆ ಈ ಕೆಳಗೆ ವಿವರಿಸಿದ ಆಸ್ತಿಗಳೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಸದರಿ ಸ್ವತ್ತಿನ ಬಗ್ಗೆ ವ್ಯವಹಾರ ನಡೆಸಿದ್ದೇ ಆದರೆ **ಎಕ್ಸಿಸ್ ಬ್ಯಾಂಕ್ ಲಿ.,** ಇವರಿಗೆ ಸಂದಾಯವಾಗತಕ್ಕ ಮೊಬಲಗು ಹಾಗೂ ಅದರ ಮೇಲಿನ ಬಡ್ಡಿ ಮತ್ತು ವೆಚ್ಚ ಇವುಗಳಿಗೆ ಋಣಬಾಧ್ಯವಾಗಿರುತ್ತದೆ.

1. ಸಾಲಗಾರರ/ಸಹ-ಸಾಲಗಾರರ/ಜಾಮೀನುದಾರರ/ಅಡಮಾನುದಾರರ ಹೆಸರು ಮತ್ತು ವಿಳಾಸ : (1) ಶ್ರೀ ಶ್ರೀಕಾಂತ್ ಅಶೋಕ್ ಕುಮಾರ್ ಲಾಡ್, 1432, ಗ್ಯಾಲರಿ ಪ್ಲೇಸ್, # 7, ಜಾಕ್ಸನ್ ಮಿ 4149201, ಯು ಎಸ್ ಎ. **ಮತ್ತೊಂದು ವಿಳಾಸ :** ಮನೆ ನಂ.7428, 14ನೇ ಅವೆನ್ಯೂ, ಯೂನಿಟ್ 16, ಕ್ಯಾಲಿಫೋರ್ನಿಯಾ 5630, ಯು ಎಸ್ ಎ. **ಮತ್ತೊಂದು ವಿಳಾಸ : ಟೆಕ್ ನೆಟಿನ್ಸ್, 101 ಪಾರ್ಕ್‌ಶೋರ್ ಫಾಲ್ಸಮ್, ಕ್ಯಾಲಿಫೋರ್ನಿಯಾ 5630, ಯು ಎಸ್ ಎ (ಸಾಲಗಾರರು/ಅಡಮಾನದಾರರು). (2) ಶ್ರೀಮತಿ ಶ್ರೀಲತಾ, ಶ್ರೀಕಾಂತ್ ಲಾಡ್,** 1432, ಗ್ಯಾಲರಿ ಪ್ಲೇಸ್, # 7, ಜಾಕ್ಸನ್ ಮಿ 4149201, ಯು ಎಸ್ ಎ. **ಮತ್ತೊಂದು ವಿಳಾಸ :** ಮನೆ ನಂ.1-63-11-1/2, ದಿನಕೋಯಿಲ್ ನಗರ ಪಶ್ಚಿಮ ವೆಂಕಟಪುರಂ, ಹಳೆ ಅಲ್ವಾಲ್ ಸಿಕೆಂಡರಾಬಾದ್-500010.

ಸಾಲದ ಖಾತೆ ನಂ.: PHR051401275891

ನೋಟಿಸ್‌ನಲ್ಲಿ ತಿಳಿಸಿದಂತೆ ಬಾಕಿಯಿರುವ ಒಟ್ಟು ಮೊತ್ತ : ರೂ. 21,55,305/- (ರೂಪಾಯಿ ಇಪ್ಪತ್ತೊಂದು ಲಕ್ಷದ ಐವತ್ತೈದು ಸಾವಿರದ ಮುನ್ನೂರ ಐದು ಮಾತ್ರ) ದಿನಾಂಕ: 15.07.2025 ರಂತೆ ಜೊತೆಗೆ ಒಪ್ಪಂದದ ಬಡ್ಡಿದರದಲ್ಲಿ ಮತ್ತಷ್ಟು ಅನ್ವಯಿಸದ ಬಡ್ಡಿಯೊಂದಿಗೆ ಪಾವತಿಸಬೇಕಾಗುತ್ತದೆ.

ಡಿಮ್ಯಾಂಡ್ ನೋಟೀಸ್ ದಿನಾಂಕ: 15.07.2025 **ಸ್ವಾಧೀನ ನೋಟೀಸ್ ದಿನಾಂಕ: 30.04.2026**

ಅಡಮಾನ ಆಸ್ತಿಯ ವಿವರ : ಷೆಡ್ಯೂಲ್

ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಫ್ಲಾಟ್ ನಂ.107, 1ನೇ ಮಹಡಿ, ಬಿಎಂ ಹಾರ್ವೆಸ್ಟ್, ಸರ್ವೆ ನಂ.50/2 ಸೋಮ್‌ಪುರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು-562125ರಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಶ್ರೀ ಎಂ ಮುನಿರೆಡ್ಡಿರವರ ಆಸ್ತಿ, ಪಶ್ಚಿಮಕ್ಕೆ: ಶ್ರೀ ಚೌಡರೆಡ್ಡಿರವರ ಆಸ್ತಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಶ್ರೀ ಎಂ ಮುನಿರೆಡ್ಡಿರವರ ಆಸ್ತಿ.

ಯಾವುದೇ ಮಾಹಿತಿಗಾಗಿ ಶ್ರೀ ರಘುನಾಥ್, ನಂ.9886960484ರವರನ್ನು ಸಂಪರ್ಕಿಸಿ.

2. ಸಾಲಗಾರರ/ಸಹ-ಸಾಲಗಾರರ/ಜಾಮೀನುದಾರರ/ಅಡಮಾನುದಾರರ ಹೆಸರು ಮತ್ತು ವಿಳಾಸ : (1) ಶ್ರೀಮತಿ ಜಯಲಕ್ಷ್ಮಿ ಬಿ ವಿ D/o. ವಾಸುದೇವ್ ರಾವ್ ಬಿ (ಸಾಲಗಾರರು/ಅರ್ಜಿದಾರರು), (2) ಶ್ರೀ ಪ್ರೀತಮ್ ಬಿ ಪಿ ಬಿನ್ ಶ್ರೀ ಪ್ರಭಾಕರ (ಸಹ-ಅರ್ಜಿದಾರರು/ಜಾಮೀನುದಾರರು), ಇವರಿಬ್ಬರ ವಿಳಾಸ: ಫ್ಲಾಟ್-ಬಿ-104, ಆರ್‌ಎನ್‌ಎಸ್ ಶಾಂತಿ ನಿವಾಸ ತುಮಕೂರು ರಸ್ತೆ, ಯಶವಂತಪುರ, ಬೆಂಗಳೂರು ಕರ್ನಾಟಕ, ಭಾರತ - 560022. **ಮತ್ತೊಂದು ವಿಳಾಸ:** ಫ್ಲಾಟ್ ಇಎಲ್ 1204, 11ನೇ ಮಹಡಿ, ಹಂತ 1, ಬ್ಲಾಕ್ ಒ ಪ್ಲಾಟಿಯಮ್ ಸಿಟಿ ಯೋಜನೆ, ಆಸ್ತಿ ನಂ.2, ಎಚ್‌ಎಂಟಿ ಮುಖ್ಯ ರಸ್ತೆ, ಪೀಣ್ಯ ಗ್ರಾಮ ಯಶವಂತಪುರ ಬೆಂಗಳೂರು-560013.

ಸಾಲದ ಖಾತೆ ನಂ.: LPR000903058991

ನೋಟಿಸ್‌ನಲ್ಲಿ ತಿಳಿಸಿದಂತೆ ಬಾಕಿಯಿರುವ ಒಟ್ಟು ಮೊತ್ತ : ರೂ. 36,64,436/- (ರೂಪಾಯಿ ಮೂವತ್ತಾರು ಲಕ್ಷದ ಅರವತ್ತನಾಲ್ಕು ಸಾವಿರದ ನಾಲ್ಕುನೂರ ಮೂವತ್ತಾರು ಮಾತ್ರ) ದಿನಾಂಕ: 12.03.2025 ರಂತೆ ಜೊತೆಗೆ ಒಪ್ಪಂದದ ಬಡ್ಡಿದರದಲ್ಲಿ ಮತ್ತಷ್ಟು ಅನ್ವಯಿಸದ ಬಡ್ಡಿಯೊಂದಿಗೆ ಪಾವತಿಸಬೇಕಾಗುತ್ತದೆ.

ಡಿಮ್ಯಾಂಡ್ ನೋಟೀಸ್ ದಿನಾಂಕ: 13.03.2025 **ಸ್ವಾಧೀನ ನೋಟೀಸ್ ದಿನಾಂಕ: 30.04.2026**

ಅಡಮಾನ ಆಸ್ತಿಯ ವಿವರ : ಷೆಡ್ಯೂಲ್

ಶ್ರೀಮತಿ ಜಯಲಕ್ಷ್ಮಿ ಬಿ ವಿ ಅವರಿಗೆ ಸೇರಿದ ಆಸ್ತಿಯ ವಿವರ

ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ.ಇಎಲ್-1204 11ನೇ ಮಹಡಿಯ ಫೇಸ್ I in 'O' ಬ್ಲಾಕ್‌ನಲ್ಲಿರುವ 'ಪ್ಲಾಟಿನಂ ಸಿಟಿ ಪ್ರಾಜೆಕ್ಟ್' ಎಂದು ಕರೆಯಲ್ಪಡುವ ಬಹುಮಹಡಿಯಲ್ಲಿ ಕಟ್ಟಡವನ್ನು ನಿರ್ಮಿಸಲಾಗಿದೆ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು, ಯಶವಂತಪುರ ಹೋಬಳಿಯ H.M.T. ಮುಖ್ಯ ರಸ್ತೆಯಲ್ಲಿರುವ ಆಸ್ತಿ ಸಂಖ್ಯೆ 2 ರ ದೊಡ್ಡ ಪ್ರಮಾಣದ ಆಸ್ತಿಯ ಒಂದು ಭಾಗವಾಗಿದೆ, ಇದು 117.86 ಚದರ ಅಡಿ ಅವಿಭಾಜಿತ ಪಾಲನ್ನು ಹೊಂದಿದೆ, 710 ಚದರ ಅಡಿ ಸೂಪರ್ ಬಿಲ್ಟ್-ಅಪ್ ಪ್ರದೇಶವನ್ನು ಹೊಂದಿದೆ. ಒಟ್ಟು ಆಸ್ತಿಯ ಚಕ್ಕುಬಂದಿ ಈ ಕೆಳಗಿನಂತಿದೆ, ಪೂರ್ವಕ್ಕೆ: ಪ್ಲಾಟಿನಂ ಸಿಟಿ ಪ್ರಾಜೆಕ್ಟ್‌ನ 'ಬಿ' ಬ್ಲಾಕ್, ಪಶ್ಚಿಮಕ್ಕೆ: ಭಾರತ್ ಫ್ರಿಟ್ಜ್ ವರ್ನರ್ ಫ್ಯಾಕ್ಟರಿ, ಉತ್ತರಕ್ಕೆ: ಪ್ಲಾಟಿನಂ ಸಿಟಿ ಪ್ರಾಜೆಕ್ಟ್‌ನ ಮುಕ್ತ ಸ್ಥಳ, ದಕ್ಷಿಣಕ್ಕೆ: ಪ್ಲಾಟಿನಂ ಸಿಟಿ ಪ್ರಾಜೆಕ್ಟ್‌ನ ಮುಕ್ತ ಸ್ಥಳ.

ಯಾವುದೇ ಮಾಹಿತಿಗಾಗಿ ಶ್ರೀ ರಘುನಾಥ, ಮೊಬೈಲ್ ನಂ. 9886960484 ರವರನ್ನು ಸಂಪರ್ಕಿಸಿ.

ದಿನಾಂಕ : 30.04.2026
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್

ರಾಜ್ಯದಲ್ಲಿ ತಾಪಮಾನ
ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

	ಬೀದರ್	ಕಲಬುರಗಿ	ರಾಯಚೂರು	ವಿಜಯಪುರ	ಕೊಪ್ಪಳ
ಗರಿಷ್ಠ	43.8	41.5	40.4	39.0	38.1
ಕನಿಷ್ಠ	26.2	26.6	25.0	21.4	24.0

ಕನ್ನಡಪ್ರಭ
ಭಾನುವಾರ 3.05.2026

ಸಾಲ ತೀರಿಸಲು ಮಗಳ ಮನೆಯಲ್ಲೇ 110 ಗ್ರಾಂ ಚಿನ್ನ ಕದ್ದು ಸಿಕ್ಕಿಬಿದ್ದ ತಾಯಿ

ಬೆಳಗಾವಿ: ಸಾಲಬಾಧೆಯಿಂದ ಕಂಗೆಟ್ಟಿದ್ದ ತಾಯಿಯೊಬ್ಬಳು ತಾನು ಹೆತ್ತು, ಮದುವೆ ಮಾಡಿ ಕೊಟ್ಟಿದ್ದ ಮಗಳ ಮನೆಯಲ್ಲಿಯೇ ಸುಮಾರು ₹16.57 ಲಕ್ಷ ಮೌಲ್ಯದ 110 ಗ್ರಾಂ ಚಿನ್ನಾಭರಣ ಕಳವು ಮಾಡಿ ಪೊಲೀಸರ ಕೈಗೆ ಸಿಕ್ಕಿಬಿದ್ದ ಘಟನೆ ಬೆಳಗಾವಿ ತಾಲೂಕಿನ ಪೀರನವಾಡಿ ಗ್ರಾಮದಲ್ಲಿ ನಡೆದಿದೆ. ಉಜ್ವಲಾ ಕಮ್ಮಾರ ಆರೋಪಿ. ಕೆಲ ದಿನಗಳಿಂದ ಉಜ್ವಲಾ ಸಾಲದ ಒತ್ತಡಕ್ಕೆ ಒಳಗಾಗಿದ್ದಳು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ತನ್ನ ಮಗಳ ಮನೆಗೆ ಭೇಟಿ ನೀಡಿದ್ದ ಆಕೆ, ಮಗಳು-ಅಳಿಯ ಸ್ನೇಹಿತರ ಮದುವೆಗೆಂದು ಹೋಗಿದ್ದ ವೇಳೆ ಬೀರು ಹಾಗೂ ಅಲ್ಮೇರಾಗಳನ್ನು ಶೋಧಿಸಿ ಚಿನ್ನದ ಬಳೆ, ಉಂಗುರ, ನೆಕ್ಲೇಸ್ ಸೇರಿದಂತೆ ಒಟ್ಟು 110 ಗ್ರಾಂ ಚಿನ್ನಾಭರಣವನ್ನು ಕಳವು ಮಾಡಿದ್ದು, ಇದರ ಅಂದಾಜು ಮೌಲ್ಯ ಸುಮಾರು ₹16.57 ಲಕ್ಷ ಎಂದು ತಿಳಿದು ಬಂದಿದೆ. ಈ ಕೃತ್ಯಕ್ಕೆ ಶಿವಾ ಅಪ್ಪಯ್ಯ ಎಂಬಾತ ಸಹಕಾರ ನೀಡಿರುವುದು ತನಿಖೆಯಲ್ಲಿ ಬಹಿರಂಗವಾಗಿದೆ. ಹೀಗಾಗಿ ಉಜ್ವಲಾಳನ್ನು ಬಂಧಿಸಲಾಗಿದೆ.

ಕೆಆರ್‌ಎಸ್ ಹಿನ್ನೀರಿನಲ್ಲಿ ಬಿರುಗಾಳಿ ಮಳೆಗೆ ಬೋಟ್ ಮಗುಚಿ 2 ಸಾವು

ಪಾಂಡವಪುರ/ಶ್ರೀರಂಗಪಟ್ಟಣ: ಬಿರುಗಾಳಿಗೆ ಬೋಟ್ ಮಗುಚಿದ್ದರಿಂದ ನೀರಿನಲ್ಲಿ ಮುಳುಗಿ ಇಬ್ಬರು ಮೃತಪಟ್ಟಿರುವ ಘಟನೆ ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನ ಗಿರಿಯಾರಹಳ್ಳಿ ಬಳಿಯ ಕೆಆರ್‌ಎಸ್ ಹಿನ್ನೀರಿನಲ್ಲಿ ನಡೆದಿದೆ. ಕೇರಳದ ಕೊಚ್ಚಿನ್ ಮೂಲದ ಬೆಂಗಳೂರು ನಿವಾಸಿಗಳಾದ ಮಂಜುನಾಥ್ (72), ಪತ್ನಿ ಸಜ್ವಿ ಮಂಜುನಾಥ್(70) ಮೃತರು. ಮೃತರ ಮಗಳು ಶ್ವೇತಾ, ಅಳಿಯ ಜಸ್ವಿನ್ ಹಾಗೂ ಪುತ್ರ ಅಯ್ಯನ್ ಪಾರಾಗಿದ್ದಾರೆ. ಬೇಸಿಗೆ ರಜೆಗಾಗಿ ಆರ್‌ಎಂಎಸ್‌ಸಿ ರೆಸಾರ್ಟ್ ಹಾಗೂ ಬೋಟಿಂಗ್ ಟ್ರೈನಿಂಗ್‌ಗೆ ಆಗಮಿಸಿ ಶುಕ್ರವಾರ ಸಂಜೆ ಕೆಆರ್‌ಎಸ್ ಹಿನ್ನೀರಿನಲ್ಲಿ ಕುಟುಂಬ ಸಮೇತರಾಗಿ ಬೋಟಿಂಗ್ ಮಾಡುತ್ತಿದ್ದರು. ಐವರೂ ಸಹ ಸೇಫ್ಟಿ ಜಾಕೆಟ್ ಹಾಕಿದ್ದರು. ಆಕಸ್ಮಿಕವಾಗಿ ಬಿರುಗಾಳಿ ಸಹಿತ ಭಾರೀ ಮಳೆಗೆ ಬೋಟ್ ಮಗಚಿ ಐವರು ನೀರಲ್ಲಿ ಮುಳುಗಿದರು. ತಕ್ಷಣ ಅಲ್ಲಿದ್ದ ಸಿಬ್ಬಂದಿ ಮತ್ತೊಂದು ಬೋಟ್ ಬಳಸಿ ಐವರನ್ನೂ ರಕ್ಷಣೆ ಮಾಡಿದರು. ಆದರೆ ಇಬ್ಬರು ಮೃತಪಟ್ಟಿದ್ದಾರೆ.

ಮೃಗಾಲಯಗಳು, ಪಕ್ಷಿಧಾಮಗಳಲ್ಲಿ ಹಕ್ಕಿಜ್ವರದ ಬಗ್ಗೆ ಕಟ್ಟೆಚ್ಚರ: ಖಂಡ್ರೆ

ಬೆಂಗಳೂರು: ತುಮಕೂರು ಜಿಲ್ಲೆಯ ವಿವಿಧೆಡೆ ಹಕ್ಕಿ ಜ್ವರ (ಎಚ್5ಎನ್1) ಸೋಂಕಿನಿಂದ ನವಿಲುಗಳು ಮೃತಪಟ್ಟಿರುವುದು ದೃಢಪಟ್ಟಿರುವ ಹಿನ್ನೆಲೆಯಲ್ಲಿ



ರಾಜ್ಯದ ಎಲ್ಲ ಮೃಗಾಲಯ, ಪಕ್ಷಿಧಾಮಗಳಲ್ಲಿ ಈ ಕುರಿತು ಕಟ್ಟೆಚ್ಚರ ವಹಿಸುವಂತೆ ಅಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೂಚಿಸಿದ್ದಾರೆ. ಕಳೆದ 15 ದಿನಗಳ ಅವಧಿಯಲ್ಲಿ ತುಮಕೂರು ಜಿಲ್ಲೆಯ 44 ನವಿಲುಗಳು ಮೃತಪಟ್ಟಿದ್ದವು. ನವಿಲುಗಳು ಹಕ್ಕಿ ಜ್ವರ ಸೋಂಕಿನಿಂದ ಮೃತಪಟ್ಟಿವೆ ಎಂಬುದು ದೃಢಪಟ್ಟಿದೆ. ಹೀಗಾಗಿ ರಾಜ್ಯದ ಎಲ್ಲ ಮೃಗಾಲಯಗಳಲ್ಲಿ, ಪಕ್ಷಿಧಾಮ ಸೇರಿ ಅರಣ್ಯ ಪ್ರದೇಶಗಳಲ್ಲಿ ಕೇಂದ್ರ ಸರ್ಕಾರದ ಪರಿಷ್ಕೃತ ಎಚ್5ಎನ್1 ಕ್ರಿಯಾಯೋಜನೆ ರೀತಿಯಲ್ಲಿ ಕಟ್ಟೆಚ್ಚರ ವಹಿಸಬೇಕು ಎಂದು ಅವರು ನಿರ್ದೇಶನ ನೀಡಿದ್ದಾರೆ.

ಅಪರೂಪದ 3 ಅಣಬೆ ಪತ್ತೆ ಮಾಡಿದ ದಾವಣಗೆರೆಯ ಯುವ ಸಂಶೋಧಕ

ದಾವಣಗೆರೆ: ಶಿವಮೊಗ್ಗ ಮತ್ತು ಚಿಕ್ಕಮಗಳೂರು ಆರಣ್ಯದಲ್ಲಿ ನಡೆಸಿದ ಸಂಶೋಧನೆ ಫಲವಾಗಿ ಸೇಂಟ್ ಜೋಸೆಫ್ ವಿವಿಯ ಪಿಎಚ್.ಡಿ ಸಂಶೋಧಕ



ಎಸ್.ಭರತ್ ಕುಮಾರ 3 ಹೊಸ ಶಿಲೀಂಧ್ರ (ಮಶ್ರೂಮ್) ಜಾತಿಗಳನ್ನು ಪತ್ತೆ ಹಚ್ಚಿದ್ದಾರೆ. ಶನಿವಾರ ಸುದ್ದಿಗೋಷ್ಠಿಯಲ್ಲಿ ಸಂಶೋಧಕ ಮಾಹಿತಿ ನೀಡಿ, ಮರಕುಲುಷಣ ಶಿಲೀಂಧ್ರಗಳ ವೈವಿಧ್ಯತೆ, ದಾಖಲೆಗೊಳಿಸುವಿಕೆ ಹಾಗೂ ಜೈವ ನಿಯಂತ್ರಣ ಸಾಮರ್ಥ್ಯದ ಅಧ್ಯಯನದ ಅಂಗವಾಗಿ ಈ ಸಂಶೋಧನೆ ಕೈಗೊಳ್ಳಲಾಗಿತ್ತು. ಈ ಅಧ್ಯಯನವನ್ನು ವೈಜ್ಞಾನಿಕ ವಿಧಾನದಲ್ಲಿ ನಡೆಸಲಾಗಿದ್ದು, ಕ್ಷೇತ್ರ ಸಂಗ್ರಹಣೆಯ ವೇಳೆ ತಾಜಾ ಹಾಗೂ ಪರಿಪಕ್ವ ಫಲಧಾರಕ ದೇಹಗಳನ್ನು ಅವುಗಳ ಸ್ವಾಭಾವಿಕ ವಾಸಸ್ಥಳಗಳಿಂದ ಸಂಗ್ರಹಿಸಿ, ಸ್ಥಳದ ವಿವರ, ದಿನಾಂಕ ಮತ್ತು ಪರಿಸರ ಮಾಹಿತಿ ದಾಖಲಿಸಲಾಗಿದೆ ಎಂದರು.

ಸುದ್ದಿ ಸಿಂಚನ

ಸತ್ಯವತಿ ನೂತನ ಮುಖ್ಯ ಮಾಹಿತಿ ಆಯುಕ್ತೆ

ಬೆಂಗಳೂರು: ನಿವೃತ್ತ ಐಎಎಸ್ ಅಧಿಕಾರಿ ಜಿ.ಸತ್ಯವತಿ ಅವರನ್ನು ರಾಜ್ಯ ಮಾಹಿತಿ ಆಯೋಗದ ಮುಖ್ಯ



ಮಾಹಿತಿ ಆಯುಕ್ತರನ್ನಾಗಿ ನೇಮಿಸಿ ರಾಜ್ಯಪಾಲರು ಶನಿವಾರ ಆದೇಶಿಸಿದ್ದಾರೆ. ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಗಳಾದ ಜಿ.ಸತ್ಯವತಿ ಮತ್ತು ಎನ್.ಜಯರಾಮ್ ಅವರ ಹೆಸರು ಚರ್ಚೆಗೆ ಬಂದಿತ್ತು. ಕೊನೆಗೆ ಸತ್ಯವತಿ ಅವರ ಹೆಸರನ್ನು ಅಂತಿಮಗೊಳಿಸಿ ರಾಜ್ಯಪಾಲರಿಗೆ ಶಿಫಾರಸು ಮಾಡಿದ್ದರು. ಇದೀಗ ರಾಜ್ಯಪಾಲರು ಸತ್ಯವತಿ ಅವರನ್ನು ರಾಜ್ಯ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರನ್ನಾಗಿ ನೇಮಿಸಿ ಆದೇಶಿಸಿದ್ದಾರೆ.

ನಾಲ್ವರು ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ನಾಲ್ವರು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ರಾಜ್ಯ ಸರ್ಕಾರ ಶನಿವಾರ ಆದೇಶಿಸಿದೆ. ಬಿ.ಫೌಜಿಯಾ ತರನಂ ಅವರನ್ನು ಗ್ರಾಮೀಣ ಕುಡಿಯುವ ಮತ್ತು ನೈರ್ಮಲ್ಯ ಇಲಾಖೆ ಆಯುಕ್ತೆ, ಮೊಹಮ್ಮದ್ ಇಕ್ರಾಂಮುಲ್ಲಾ ಶರೀಫ್ ಅವರನ್ನು ಕಲಬುರಗಿ ಜಿಲ್ಲಾಧಿಕಾರಿ, ಡಾ। ಬಿ.ಗೋಪಾಲಕೃಷ್ಣ ಅವರನ್ನು ಹಣಕಾಸು ಇಲಾಖೆ (ಬಜೆಟ್ ಮತ್ತು ಸಂಪನ್ಮೂಲಗಳು) ಉಪ ಕಾರ್ಯದರ್ಶಿ ಮತ್ತು ರುಚಿ ಬಿಂದಾಲ್ ಅವರನ್ನು ಹಣಕಾಸು ಇಲಾಖೆ ಉಪ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆಗೊಳಿಸಲಾಗಿದೆ.

ಕಳವಾಗಿದ್ದ ಚಿನ್ನ ಪವಾಡ ರೀತಿ 3 ದಿನದಲ್ಲಿ ವಾಪಸ್

ಕೋಟ (ಉಡುಪಿ): ಮನೆಯೊಂದರಲ್ಲಿ ಕಳವಾಗಿದ್ದ ₹3.50 ಲಕ್ಷ ಮೌಲ್ಯದ ಚಿನ್ನಾಭರಣ ಕೊರಗಜ್ಜನಿಗೆ ಪ್ರಾರ್ಥನೆ ಸಲ್ಲಿಸಿದ ಮೂರೇ ದಿನಗಳಲ್ಲಿ ಮರಳಿ ಸಿಕ್ಕಿದ್ದು, ಕಳಿಬೈಲು ಕೊರಗಜ್ಜನ ಪವಾಡ ಎಂದು ಈಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಸಾಸ್ತಾನ ಕೋಡಿ ಕುಟುಂಬವೊಂದು ಏ.29ರಂದು ಮನೆಗೆ ಬೀಗ ಹಾಕಿ ಮದುವೆಗೆ ತೆರಳಿತ್ತು. ಆಗ ಬೆಂಡೋಲೆ, ಕರಿಮಣಿ ಹಾಗೂ ಸರ ಸೇರಿದಂತೆ ಒಟ್ಟು ₹3.50 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ನಗದು ಕಳವಾಗಿತ್ತು. ಕುಟುಂಬವು ಕಳಿಬೈಲು ಕೊರಗಜ್ಜನ ಸನ್ನಿಧಾನಕ್ಕೆ ಹೋಗಿ ಪ್ರಾರ್ಥನೆ ಸಲ್ಲಿಸಿತು. ನಂತರ ಪೊಲೀಸರಿಗೂ ದೂರು ನೀಡಿತ್ತು. ಮೂರೇ ದಿನದಲ್ಲಿ (ಮೇ 1) ಪಕ್ಕದ ಮನೆಯ ಜಗುಲಿ ಮೇಲೆ ಕಳವಾದ ಚಿನ್ನಾಭರಣಗಳು ಪತ್ತೆಯಾಗಿವೆ. ಇದಕ್ಕೆ ಕೊರಗಜ್ಜನಿಗೆ ದೂರು ನೀಡಿದ್ದರಿಂದ ಕಳ್ಳರು ಆಭರಣಗಳನ್ನು ತಂದು ಅಲ್ಲಿಟ್ಟಿರಬಹುದು ಎನ್ನಲಾಗಿದೆ.

ಸಾವಿನ ಸುದ್ದಿ ಸ್ನೇಹಿತರಿಗೆ ತಿಳಿಸಲು ಡೆತ್‌ನೋಟ್ ಬರೆದಿಟ್ಟು ಬಾಲಕಿ ನೇಣು

ದಾಬಸ್‌ಪೇಟೆ: ಬಾಲಕಿಯೊಬ್ಬಳು 'ಸಾರಿ ಅಪ್ಪ' ಎಂದು ಡೆತ್‌ನೋಟ್ ಬರೆದಿಟ್ಟು ನೇಣಿಗೆ ಶರಣಾದ ಘಟನೆ ನೆಲಮಂಗಲ ತಾಲೂಕಿನ ಭೈರೇಗೌಡನಹಳ್ಳಿಯಲ್ಲಿ ನಡೆದಿದೆ. ರಾಘವೇಂದ್ರ ಅವರ ಮಗಳು ಸಂಧ್ಯಾ (17) ಮೃತಳು. ಮೇ 1ರಂದು ಮಧ್ಯಾಹ್ನ ಅಜ್ಜಿಗೆ ಹುಷಾರಿಲ್ಲದ ಕಾರಣ ಮನೆಯ ವರೆಲ್ಲಾ ಊರಿಗೆ ತೆರಳಿದ್ದರು. ಆ ವೇಳೆ ಬಾಲಕಿ ನೇಣಿಗೆ ಶರಣಾಗಿದ್ದಾಳೆ. ಪೋಷಕರು ಮನೆಗೆ ಬಂದಾಗ ಘಟನೆ ಬೆಳಕಿಗೆ ಬಂದಿದ್ದು, ಮೃತದೇಹದ ಬಳಿ ಡೆತ್ ನೋಟ್‌ನಲ್ಲಿ 'ಸಾರಿ ಅಪ್ಪ' ಎಂಬ ಪದದ ಜೊತೆಗೆ ಸ್ನೇಹಿತರ ಮೂರು ಮೊಬೈಲ್ ನಂಬರ್‌ನಮೂದಿಸಿ, ಈ ನಂಬರ್‌ಗಳಿಗೆ ಕರೆ ಮಾಡಿ ನನ್ನ ಸಾವಿನ ಸುದ್ದಿ ಮುಟ್ಟಿಸಿ ಅಂತ ಬರೆದಿದ್ದಾಳೆ.

ತುಂಗಭದ್ರಾ ಜಲಾಶಯ ಈಗ ಸುಭದ್ರ: ತಂಗಡಗಿ

33 ಕ್ರಸ್ಟ್‌ಗೇಟ್ ಬದಲಾವಣೆ ಪೂರ್ಣ | ಜೂನಲ್ಲೇ ಮಳೆ ಬಂದ್ರೂ ನೀರು ಸಂಗ್ರಹಕ್ಕೆ ಸಮಸ್ಯೆ ಇಲ್ಲ | ಕನ್ನಡಪ್ರಭಕ್ಕೆ ಸಚಿವ ಸಂದರ್ಶನ

• **ಸೋಮರಡ್ಡಿ ಅಳವಂಡಿ**
ಕನ್ನಡಪ್ರಭ ವಾರ್ತೆ ಕೊಪ್ಪಳ

ಮೂರು ರಾಜ್ಯಗಳ ರೈತರ ಜೀವನಾಡಿಯಾಗಿರುವ ತುಂಗಭದ್ರಾ ಜಲಾಶಯದ ಶಿಥಿಲಗೊಂಡಿದ್ದ 33 ಕ್ರಸ್ಟ್ ಗೇಟ್ ಬದಲಾಯಿಸಿ, ನೂತನ ಗೇಟ್ ಅಳವಡಿಸುವ ಕಾರ್ಯ ಪೂರ್ಣಗೊಂಡಿದೆ. ಜೂನ್‌ನಲ್ಲಿಯೇ ಮಳೆ ಬಂದರೂ ನೀರು ಸಂಗ್ರಹಿಸುವುದಕ್ಕೆ ಯಾವುದೇ ತೊಂದರೆ ಇಲ್ಲ. ಹೀಗಾಗಿ, ತುಂಗಭದ್ರಾ ಜಲಾಶಯ ಈಗ ಸುಭದ್ರ ಎಂದು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದ್ದಾರೆ.

ತುಂಗಭದ್ರಾ ಜಲಾಶಯ ಕ್ರಸ್ಟ್ ಗೇಟ್ ನಿರ್ಮಾಣ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ 'ಕನ್ನಡಪ್ರಭ'ಕ್ಕೆ ನೀಡಿದ ವಿಶೇಷ ಸಂದರ್ಶನದಲ್ಲಿ ಕ್ರಸ್ಟ್ ಗೇಟ್ ಮುರಿದು ಎದುರಾದ ಸಮಸ್ಯೆ, ಎದುರಿಸಿದ ಸಮಸ್ಯೆ, ಗೇಟ್ ಬದಲಾವಣೆಯನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ.

2024ರ ಆ.10ರಂದು ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್ ಗೇಟ್ ಮಧ್ಯ ರಾತ್ರಿ ಕಿತ್ತು ಹೋದ ಸುದ್ದಿ ಕೇಳಿ ಬರಸಿಡಿಲು ಬಡಿದಂತೆ ಆಗಿತ್ತು. ಅಂದು ರಾತ್ರೋರಾತ್ರಿ ಜಲಾಶಯಕ್ಕೆ ಬಂದು ಡ್ಯಾಮ್ ಮೇಲೆ ನಿಂತಾಗ ನನ್ನ ಕೈಕಾಲುಗಳು ನಡುಗುತ್ತಿದ್ದವು. ಮಧ್ಯ ರಾತ್ರಿ 1 ಗಂಟೆಗೆ ಸಿಎಂ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರೊಂದಿಗೆ ಮಾತನಾಡಿ ವಿಷಯ ತಿಳಿಸಿದ್ದೆವು. ಬೆಳಗಿನ ಜಾವ 4 ಗಂಟೆಯ ವೇಳೆಗೆ ಜಲಾಶಯಗಳ ತಜ್ಞ ಕನ್ನಯ್ಯ ನಾಯ್ಡು ಅವರನ್ನು ಸಂಪರ್ಕಿಸಿ, ಇದ್ದ ವಿಷಯ ವಿವರಿಸಿದ್ದೆವು. ಮಾರನೇ ದಿನ ಬೆಳಗ್ಗೆಯೇ ಅವರು ಸಹ ಆಗಮಿಸಿ, ಏನು ಮಾಡಬೇಕು ಎಂದು ಹತ್ತಾರು ಎಂಜನಿಯರ್‌ಜತೆ ಚರ್ಚೆ ಮಾಡಿ, ನೀರು ನಿಲ್ಲಿಸುವ ಪ್ರಯತ್ನ ಮಾಡಿದೆವು. ರೈತರ ಬೆಳೆ ಕಾಪಾಡಿಕೊಳ್ಳುವುದು ಮತ್ತು ಜಲಾಶಯ ಸುರಕ್ಷಿತವಾಗಿ ಕಾಪಾಡುವುದು ನಮಗೆ ದೊಡ್ಡ ಸವಾಲಾಗಿತ್ತು. ಅದೃಷ್ಟವಶಾತ್ ಜಲಾಶಯದ ಮುರಿದು ನದಿಯಲ್ಲಿ ಕೊಚ್ಚಿ ಹೋಗಿದ್ದ 19ನೇ ಕ್ರಸ್ಟ್ ಗೇಟ್‌ಗೆ ಸ್ಟಾಪ್ ಲಾಗ್ ಅಳವಡಿಸುವಲ್ಲಿ



ಡ್ಯಾಂ ಗೇಟ್ ಕೊಚ್ಚಿಹೋಗಿದ್ದಾಗ ರಾತ್ರೋರಾತ್ರಿ ಸ್ಥಳಕ್ಕೆ ಭೇಟಿ ನೀಡಿದ್ದ ಸಚಿವ ತಂಗಡಗಿ

ಯಶಸ್ವಿಯಾದೆವು. ನೀರನ್ನೂ ಉಳಿಸಲು, ಸಂಗ್ರಹಿಸಲು ಸಾಧ್ಯವಾಯಿತು. ರೈತರ ಬೆಳೆಯೂ ಬಂದಿತು.

ಇದಾದ ಮೇಲೆ 19ನೇ ಕ್ರಸ್ಟ್ ಗೇಟ್ ಶಾಶ್ವತವಾಗಿ ದುರಸ್ತಿ ಮಾಡುವ ದಿಸೆಯಲ್ಲಿ ಚಿಂತನೆ ಮಾಡುತ್ತಿದ್ದೆವು. ಆದರೆ, ಕೇಂದ್ರ ಜಲ ಆಯೋಗದ ತಜ್ಞರು ಬಂದು ತುಂಗಭದ್ರಾ ಜಲಾಶಯದ ಅಷ್ಟೂ ಕ್ರಸ್ಟ್ ಗೇಟ್ ಶಿಥಿಲಗೊಂಡಿವೆ. ಶೇ. 50 ಕ್ಕೂ ಹೆಚ್ಚು ಕ್ರಸ್ಟ್ ಗೇಟ್ ಪೂರ್ತಿ ಹಾಳಾಗಿವೆ ಎಂದು ವರದಿ ನೀಡಿದ್ದು ದೊಡ್ಡ ಆತಂಕಕ್ಕೆ ಕಾರಣವಾಯಿತು. ತಕ್ಷಣ ರಾಜ್ಯ ಸರ್ಕಾರ ಮೂರು ರಾಜ್ಯಗಳೊಂದಿಗೆ ಚರ್ಚೆ ಮಾಡಿ, ತುಂಗಭದ್ರಾ ಬೋರ್ಡ್ ಜತೆಗೆ ನಿರಂತರವಾಗಿ ಚರ್ಚೆ ಮಾಡಿ, ಕೇಂದ್ರ ಜಲ ಆಯೋಗದ ಶಿಫಾರಸ್ಸಿನಂತೆ ಕ್ರಸ್ಟ್ ಗೇಟ್ ಗಳನ್ನು ಬದಲಾಯಿಸಲು ಟೆಂಡರ್ ಕರೆಯಲಾಯಿತು. ಜೂನ್‌ನಲ್ಲಿ ಮಳೆಗಾಲ ಪ್ರಾರಂಭವಾಗುವ ವೇಳೆಗೆ ಅಷ್ಟೂ ಕ್ರಸ್ಟ್ ಗೇಟ್ ಬದಲಾಯಿಸಲು ತೀರ್ಮಾನಿಸಲಾಯಿತು. ಟೆಂಡರ್ ಪ್ರಕ್ರಿಯೇ ಪೂರ್ಣಗೊಂಡು ಕಾರ್ಯ ಪ್ರಾರಂಭವಾಯಿತು. ಆದರೆ, ಅದೃಷ್ಟವಶಾತ್ ನಾವು ಅಂದುಕೊಂಡಿದ್ದಕ್ಕಿಂತ ಬೇಗನೇ 33 ಕ್ರಸ್ಟ್ ಗೇಟ್ ಬದಲಾಯಿಸುವ ಕಾರ್ಯ ಪೂರ್ಣಗೊಳಿಸಿದ್ದಾರೆ. ಜೂನ್ ವೇಳೆಗೆ ಅಂದಿದ್ದು, ಏಪ್ರಿಲ್ ಅಂತ್ಯಕ್ಕೆ ಶೇ.90 ರಷ್ಟು ಕಾಮಗಾರಿ ಮುಗಿದಿದೆ. ಈಗ ಜೂನ್ ತಿಂಗಳಲ್ಲಿಯೇ ಮಳೆ ಬಂದರೂ ನೀರು ಸಂಗ್ರಹಿಸುವುಕ್ಕೆ ಯಾವುದೇ ಸಮಸ್ಯೆ ಇಲ್ಲ.

ಕೆಲಸವೇ ಉತ್ತರ: ವಿರೋಧ ಪಕ್ಷದವರಿಗೆ ಕೆಲಸವೇ ಉತ್ತರ ಎನ್ನುವಂತೆ ನೀಡಿದ್ದೇವೆ. ಕ್ರಸ್ಟ್ ಗೇಟ್ ಮುರಿದು ಕೊಚ್ಚಿ ಹೋದಾಗಲೂ ಬಾಯಿಗೆ ಬಂದಂತೆ ಮಾತನಾಡಿದ್ದರು. ಅದನ್ನು ಸರಿ ಮಾಡಿಸಿ, ಎರಡು ಬೆಳೆಗೆ ನೀರು ನೀಡಿದ್ದೇವೆ. ಈಗ 33 ಕ್ರಸ್ಟ್ ಗೇಟ್ ಕೇವಲ ನಾಲ್ಕೇ ತಿಂಗಳಲ್ಲಿ ಪೂರ್ಣಗೊಳಿಸಿ, ಜೂನ್ ವೇಳೆಗೆ ನೀರು ಸಂಗ್ರಹಿಸುವಂತೆ ಮಾಡಿದ್ದೇವೆ. ವಿರೋಧ ಪಕ್ಷದವರಿಗೆ ನಾವು ಮತ್ತು ನಮ್ಮ ಸರ್ಕಾರ ಕೆಲಸ ಮಾಡುವ ಮೂಲಕ ಉತ್ತರ ನೀಡಿದ್ದೇವೆ ಎಂದಿದ್ದಾರೆ.

20ರಿಂದ ಸಾರಿಗೆ ನೌಕರರ ಅನಿರ್ದಿಷ್ಟಾವಧಿ ಮುಷ್ಕರ

ಬೇಡಿಕೆ ಈಡೇರಿಕೆಗೆ ಮೇ 19ರವರೆಗೂ ಗಡುವು

• **ಕನ್ನಡಪ್ರಭ ವಾರ್ತೆ** ಬೆಂಗಳೂರು



ವೇತನ ಪರಿಷ್ಕರಣೆ ಸೇರಿ ಇನ್ನಿತರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಾರಿಗೆ ನೌಕರರು ಕರ್ತವ್ಯ ಬಹಿಷ್ಕರಿಸಿ ಮೇ 20ರಂದು ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಿದ್ದಾರೆ ಎಂದು ಕೆಎಸ್ಸಾರ್ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಘೋಷಿಸಿದೆ. ಶ್ರೇಷಾದ್ರಿಪುರದಲ್ಲಿನ ಎಐಟಿಯುಸಿ ಕಚೇರಿಯಲ್ಲಿ ಶನಿವಾರ ಸಭೆ ನಡೆಸಿದ ಕೆಎಸ್ಸಾರ್ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಪ್ರಮುಖರು, ವೇತನ ಹೆಚ್ಚಳ ಸೇರಿ ಇನ್ನಿತರ ಬೇಡಿಕೆಗಳ ಕುರಿತು ಸರ್ಕಾರದ ಪ್ರತಿಕ್ರಿಯೆ ಕುರಿತಂತೆ ಚರ್ಚಿಸಿದರು. ಸಾರಿಗೆ ನೌಕರರ ವೇತನ ಹೆಚ್ಚಳಕ್ಕೆ ಸಂಬಂಧಿಸಿ ಸರ್ಕಾರ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳುತ್ತಿಲ್ಲ ಹಾಗೂ ತಮ್ಮ ಬೇಡಿಕೆಯಷ್ಟು ವೇತನ ಹೆಚ್ಚಳಕ್ಕೆ ಸರ್ಕಾರ ಒಪ್ಪುತ್ತಿಲ್ಲ. ಹೀಗಾಗಿ ಮುಷ್ಕರ ನಡೆಸಿ ಸರ್ಕಾರವನ್ನು ಎಚ್ಚರಿಸುವುದು ಒಳಿತು ಎಂದು ನಿರ್ಧರಿಸಿದರು. ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಜಂಟಿ ಕ್ರಿಯಾ ಸಮಿತಿ ಸಂಚಾಲಕ ಜಯದೇವರಾಜ ಅರಸ್, ನಾಲ್ಕೂ ಸಾರಿಗೆ ನಿಗಮಗಳ 1.25 ಲಕ್ಷ ನೌಕರರು ವೇತನ ಹೆಚ್ಚಳಕ್ಕೆ ಆಗ್ರಹಿಸುತ್ತಲೇ ಇದ್ದಾರೆ. 38 ತಿಂಗಳ ವೇತನ ಹೆಚ್ಚಳ ಹಿಂಬಾಕಿ ಮತ್ತು ಶೇ.25ರಷ್ಟು ವೇತನ ಹೆಚ್ಚಳದ ಬೇಡಿಕೆಗೆ ಸರ್ಕಾರ ಪ್ರತಿಕ್ರಿಯೆ ನೀಡುತ್ತಿಲ್ಲ. ಹೀಗಾಗಿ ಮೇ 20ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ನಿರ್ಧರಿಸಲಾಗಿದೆ. ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ. ಸರ್ಕಾರ ಬೇಡಿಕೆ ಈಡೇರಿಸುವವರೆಗೆ ಮುಷ್ಕರ ನಡೆಸಲಾಗುವುದು ಎಂದರು. ಮೇ 19ರೊಳಗೆ ಸರ್ಕಾರ ಬೇಡಿಕೆ ಈಡೇರಿಸದಿದ್ದರೆ ಮೇ 20ರಿಂದ ಮುಷ್ಕರ ನಡೆಸುತ್ತೇವೆ ಎಂದರು.

ಕನ್ನಡಿಗ ಬಾಲಸುಬ್ರಹ್ಮಣ್ಯಂ ನೀತಿ ಆಯೋಗಕ್ಕೆ ಸದಸ್ಯ

ಹಾರ್ವರ್ಡ್ ಪದವೀಧರ ಆಗಿರುವ ಮೈಸೂರಿಗ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯಸ್ಥರಾಗಿರುವ ನೀತಿ ಆಯೋಗದ ಪೂರ್ಣಾವಧಿ ಸದಸ್ಯರಾಗಿ ಮೈಸೂರು ಮೂಲದ ಲೇಖಕ, ಸಂಶೋಧಕ, ಅಭಿವೃದ್ಧಿ ಕಾರ್ಯಕರ್ತ ಆರ್. ಬಾಲಸುಬ್ರಹ್ಮಣಿಯಂ ಅವರನ್ನು ನೇಮಿಸಲಾಗಿದೆ. ಈ ಬಗ್ಗೆ ಕೇಂದ್ರ ಸಚಿವ ಸಂಪುಟ ಹೊರಡಿಸಿದ ಅಧಿಸೂಚನೆಯಲ್ಲಿ ಮಾಹಿತಿ ನೀಡಲಾಗಿದೆ.

ವೈದ್ಯರೂ ಆಗಿರುವ ಬಾಲಸುಬ್ರಹ್ಮಣಿಯಂ ಸಾರ್ವಜನಿಕ ನೀತಿ ತಜ್ಞರಾಗಿದ್ದು, ಸ್ವಾಮಿ ವಿವೇಕಾನಂದ ಯುವ ಚಳವಳಿ (ಎಸ್‌ವಿಐಎಂ) ಮತ್ತು ಜನಸಾಮಾನ್ಯರ ಸಂಶೋಧನೆ ಮತ್ತು ಆಂದೋಲನ (ಗ್ರಾಂ)ನ ಸ್ಥಾಪಕರಾಗಿದ್ದಾರೆ. ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಇವರು ಸಾರ್ವಜನಿಕ ಆಡಳಿತದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ಸಂತೋಷವಾಗಿದೆ

ಈ ನೇಮಕ ಸಂತೋಷ ಉಂಟು ಮಾಡಿದೆ. ಕೆಳಸ್ತರದಿಂದ ಕೆಲಸ



ಮಾಡಿರುವ ಅನುಭವದ ಆಧಾರದ ಮೇರೆಗೆ ಏನಾದರೂ ಸಾಮಾಜಿಕ ಪರಿವರ್ತನೆ ಮಾಡಬಹುದು ಎಂಬ ನಂಬಿಕೆ ಇದೆ. ಈಗಾಗಲೇ ಕೇಂದ್ರದ ಸಾಮರ್ಥ್ಯ ಅಭಿವೃದ್ಧಿ ಆಯೋಗದ ಸದಸ್ಯ, ಮಾನವ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದು, ಸಾಕಷ್ಟು ಯೋಜನೆ ಪರಿಚಯ ಇದೆ.

• **ಡಾ। ಆರ್.ಬಾಲಸುಬ್ರಹ್ಮಣ್ಯಂ**
ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥಾಪಕರು, ಮೈಸೂರು.


ಅಕ್ಕನ ಮಗನ ಜತೆ ಪತ್ನಿ ಪರಾರಿ: ಮಕ್ಕಳ ಕೊಂದು ಗಂಡ ಆತ್ಮಹತ್ಯೆ

ತಾನೇ ಸಾಕಿದ್ದ ಅಕ್ಕನ ಮಗನಿಂದ ಮಹಾಮೋಸ

• **ಕನ್ನಡಪ್ರಭ ವಾರ್ತೆ** ಕುಣಿಗಲ್

ಪ್ರೀತಿಸಿ ಮದುವೆ ಆಗಿದ್ದ ಹೆಂಡತಿ ತನ್ನ ಸೋದರಳಿಯನ ಜೊತೆಗೆ ಅಕ್ರಮ ಸಂಬಂಧ ಬೆಳೆಸಿ ಓಡಿ ಹೋಗಿದ್ದಕ್ಕೆ ಮನನೊಂದ ಪತಿ ತನ್ನ ಇಬ್ಬರು ಮಕ್ಕಳನ್ನು ಉಸಿರುಗಟ್ಟಿಸಿ ಕೊಂದು ತಾನು ನೇಣಿಗೆ ಶರಣಾದ ಘಟನೆ ತುಮಕೂರು ಜಿಲ್ಲೆ ಕುಣಿಗಲ್ ತಾಲೂಕಿನ ಆಲ್ಕೆರೆ ಗ್ರಾಮದಲ್ಲಿ ನಡೆದಿದೆ.

ಆಲ್ಕೆರೆ ನಿವಾಸಿ ಶಿವಣ್ಣ (40) ಶುಕ್ರವಾರ ರಾತ್ರಿ ಮನೆಯಲ್ಲಿ ಮಲಗಿದ್ದ ಮಕ್ಕಳಾದ ಜೀವನ್ (10), ಪ್ರಾಣೇಶ್ (6)ರನ್ನು ತಲೆದಿಂಬಿನಿಂದ ಉಸಿರುಗಟ್ಟಿಸಿ ಕೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶಿವಣ್ಣ ಖಾಸಗಿ ಕಂಪನಿಯ ಉದ್ಯೋಗಿಯಾಗಿದ್ದು, ಕಾವ್ಯಾಳನ್ನು ಮದುವೆಯಾಗಿದ್ದರು. ಸುಮಾರು ವರ್ಷಗಳ ಹಿಂದೆ ಶಿವಣ್ಣ ಅವರ ಅಕ್ಕ ಮೃತಪಟ್ಟಿದ್ದರು. ತನ್ನ ಅಕ್ಕನ ಮಗನಾದ ಹೇಮಂತನನ್ನು ಹಲವಾರು ವರ್ಷದಿಂದ ತನ್ನ ಮನೆಯಲ್ಲೇ ಸಾಕುತ್ತಿದ್ದರು. ಮಾವನ ಪತ್ನಿ ಜೊತೆಗೆ ಅಕ್ರಮ ಸಂಬಂಧ ಹೊಂದಿದ್ದ



ಇಬ್ಬರು ಮಕ್ಕಳೊಂದಿಗೆ ಶಿವಣ್ಣ

ಹಲವಾರು ಬಾರಿ ಹಿರಿಯರು ನ್ಯಾಯ ಪಂಚಾಯಿತಿ ಮಾಡಿದ್ದರು. ಆದರೂ 4 ದಿನದ ಹಿಂದೆ ಕೌಟುಂಬಿಕ ಕಲಹವಾಗಿ ಕುಣಿಗಲ್ ಪೊಲೀಸ್ ಠಾಣೆಯಲ್ಲಿ ಶಿವಣ್ಣನನ್ನು ಬಿಟ್ಟು ಹೇಮಂತನ ಜೊತೆ ಹೋಗುತ್ತೇನೆಂದು ತಿಳಿಸಿ ಕಾವ್ಯಾ ಹೋಗಿದ್ದಳು. ಇದರಿಂದ ಮನನೊಂದು ಶಿವಣ್ಣ ಮಕ್ಕಳನ್ನು ಕೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕುಣಿಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೋವುಗಳ ಮೂಗು ನೋಡಿ ವಿಮಾ ಸೌಲಭ್ಯ!

ಹಾಲು ಶೇಖರಣೆಗೆ ಎಐ ಬಳಸಿದ ಬಮೂಲ್‌ನಿಂದ ಈಗ ಮೂಗಿನ ಬಯೋಮೆಟ್ರಿಕ್

• **ಕನ್ನಡಪ್ರಭ ವಾರ್ತೆ** ರಾಮನಗರ

ಹಾಲು ಶೇಖರಣಾ ವ್ಯವಸ್ಥೆಯಲ್ಲಿ ಎಐ (ಕೃತಕ ಬುದ್ಧಿಮತ್ತೆ) ತಂತ್ರಜ್ಞಾನ ಅಳವಡಿಸಿಕೊಂಡು ಗಮನ ಸೆಳೆದಿರುವ ಬೆಂಗಳೂರು ಹಾಲು ಒಕ್ಕೂಟ (ಬಮೂಲ್) ಇದೀಗ ರಾಸುಗಳು ವಿಮೆ ಮಾಡಿಸುವಾಗ ರಾಸುಗಳ ಮೂಗಿನ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಜಾರಿಗೊಳಿಸಲು ಮುಂದಾಗಿದೆ.



ರಾಸುಗಳ ವಿಮೆ ಪರಿಹಾರ ಹಣ ತಡವಾಗಿ ಪಾವತಿಯಾಗುತ್ತಿದೆ ಎಂಬ ದೂರುಗಳು ಒಂದೆಡೆಯಾದರೆ, ಮತ್ತೊಂದೆಡೆ ವಿಮೆ ಪಾವತಿಯಲ್ಲಿ ಅಕ್ರಮಗಳೇ ಹೆಚ್ಚಾಗಿದೆ. ಇದಕ್ಕೆಲ್ಲ ಕಡಿವಾಣ ಹಾಕುವ ಉದ್ದೇಶದಿಂದ ವಿಮೆ ಮಾಡಿಸಿದ ರಾಸುಗಳ ಮೂಗಿನ ಮೇಲಿರುವ ಗೆರೆಗಳ ಸಂಗ್ರಹಣೆಯ ವಿನೂತನ ಕಾರ್ಯಕ್ಕೆ ಬಮೂಲ್ ಚಾಲನೆ ನೀಡುತ್ತಿದೆ.

ರಾಜ್ಯದಲ್ಲಿಯೇ ಮೊದಲ ಬಾರಿಗೆ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಎಐ ತಂತ್ರಜ್ಞಾನ ಒಳಗೊಂಡ ಆಟೋಮ್ಯಾಟಿಕ್ ಮಿಲ್ಕ್ ಕಲೆಕ್ಷನ್ ಸಿಸ್ಟಮ್ (ಎಎಂಸಿಎಸ್) ಅಳವಡಿಸಿಕೊಂಡ ಮೊದಲ ಒಕ್ಕೂಟ ಎಂಬ ಖ್ಯಾತಿಗೆ ಪಾತ್ರವಾಗಿರುವ ಬೆಂಗಳೂರು ಹಾಲು ಒಕ್ಕೂಟ, ಈಗ ರಾಸುಗಳ ಮೂಗಿನ ಬಯೋಮೆಟ್ರಿಕ್ ವ್ಯವಸ್ಥೆ ಅಳವಡಿಸಿಕೊಂಡು ಹೈನುಗಾರಿಕೆ ಕ್ಷೇತ್ರದಲ್ಲಿ ಹೊಸ ಕ್ರಾಂತಿಗೆ ಮುನ್ನುಡಿ ಬರೆಯಲಿದೆ.

ಮೂಗಿನ ಗೆರೆ ಸಂಗ್ರಹ: ಮೊದಲು ಹಸುವಿನ ಮೂಗನ್ನು ಸ್ವಚ್ಛಗೊಳಿಸಿ ಒಣಗಿಸಲಾಗುತ್ತದೆ. ಸ್ಮಾರ್ಟ್ ಫೋನ್ ಬಳಸಿ ಕ್ಲೋಸ್‌ಅಪ್ ಫೋಟೋ ತೆಗೆಯುತ್ತಾರೆ. ಅದರಲ್ಲಿರುವ ವಿಶೇಷ ಸಾಫ್ಟ್‌ವೇರ್ ಮೂಗಿನ ಮೇಲಿನ ಗೆರೆಗಳನ್ನು ಸಂಗ್ರಹಿಸಿ ಡಿಜಿಟಲ್ ಕೋಡ್ ಆಗಿ ಪರಿವರ್ತಿಸುತ್ತದೆ. ಈ ಕೋಡನ್ನು ಡೇಟಾ ಬೇಸ್‌ನಲ್ಲಿ ಸಂಗ್ರಹಿಸಲಾಗುತ್ತದೆ.

ಬಯೋಮೆಟ್ರಿಕ್ ಪ್ರಯೋಜನ

1. ವಿಮೆ ಮಾಡಿಸಿದ ರಾಸು ಮರಣ ಹೊಂದಿದಾಗ ಮಾಲೀಕರಿಗೆ ತ್ವರಿತಗತಿ ಪರಿಹಾರಕ್ಕೆ ಅನುಕೂಲ
2. ಕಳ್ಳತನವಾದ ರಾಸುಗಳನ್ನು ತಕ್ಷಣವೇ ಗುರುತಿಸುವುದಕ್ಕೆ ಭಾರಿ ಸಹಾಯವಾಗುತ್ತದೆ
3. ಪಶು ವೈದ್ಯರು ಸರಳ ಸ್ಕ್ಯಾನ್ ಮಾಡುವ ಮೂಲಕ ರಾಸುವಿನ ಸಂಪೂರ್ಣ ವೈದ್ಯಕೀಯ ಇತಿಹಾಸವನ್ನು ತಿಳಿದುಕೊಳ್ಳಬಹುದು
4. ಸರ್ಕಾರದ ಸಬ್ಸಿಡಿಗಳು, ವಿಮೆ ಮತ್ತು ಇತರ ಪ್ರಯೋಜನಗಳು ಹೈನುಗಾರರಿಗೆ ತಲುಪುತ್ತವೆ
5. ನಿಖರ ದತ್ತಾಂಶದ ಆಧಾರದ ಮೇಲೆ ರೈತರು ಹಾಲಿನ ಉತ್ಪಾದನೆಯನ್ನು ಗಮನಿಸಿ ಉತ್ತಮ ತಳಿ ಯಾವುದೆಂದು ನಿರ್ಧರಿಸಬಹುದು

ಗೋಕರ್ಣ ದೇಗುಲಕ್ಕೆ ಆದಾಯ ತೆರಿಗೆ ಹೋರಾಟದಲ್ಲಿ ಗೆಲುವು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಗೋಕರ್ಣದ ಸಂಸ್ಥಾನ ಮಹಾಬಲೇಶ್ವರ ದೇವಾಲಯಕ್ಕೆ ಆದಾಯ ತೆರಿಗೆ ಇಲಾಖೆ ವಿಧಿಸಿದ್ದ ತೆರಿಗೆ ಬಾಕಿ ಪ್ರಕರಣಗಳಲ್ಲಿ ದೇವಾಲಯದ ಆಡಳಿತಕ್ಕೆ ಜಯ ಲಭಿಸಿದೆ.



2016-17ರಲ್ಲಿ ₹13 ಲಕ್ಷ ಮತ್ತು 2019- 20ರಲ್ಲಿ ₹90 ಲಕ್ಷ ತೆರಿಗೆ ಬಾಕಿ ಪಾವತಿಸುವಂತೆ ಆದಾಯ ಇಲಾಖೆ ಆದೇಶಿಸಿತ್ತು. ಇದರ ವಿರುದ್ಧ ಮೇಲ್ಮನವಿ ಮಾಡಲಾಗಿದ್ದು, ತೆರಿಗೆ ಬಾಕಿ ಶೂನ್ಯ ಎಂಬುದಾಗಿ ಆದಾಯ ತೆರಿಗೆ ಇಲಾಖೆಯ ಮೇಲ್ಮನವಿ ಆಯುಕ್ತರು ಇದೀಗ ಆದೇಶ ಹೊರಡಿಸಿದ್ದಾರೆ.

ಇದಕ್ಕೂ ಮೊದಲು, 2015-16ನೇ ಸಾಲಿನಲ್ಲಿ ₹1.42 ಕೋಟಿ ತೆರಿಗೆ ಬಾಕಿ ಪ್ರಕರಣದಲ್ಲೂ ದೇವಸ್ಥಾನದ ಆಡಳಿತಕ್ಕೆ ಜಯ ಲಭಿಸಿತ್ತು. ಇದರೊಂದಿಗೆ ದೇವಾಲಯ ಆಡಳಿತದ ವಿರುದ್ಧದ ಎಲ್ಲ ಆದಾಯ ತೆರಿಗೆ ಪ್ರಕರಣ ಮುಕ್ತಾಯಗೊಂಡಂತಾಗಿದೆ. ರಾಜ್ಯ ಸರ್ಕಾರದ ಆದೇಶದಂತೆ 2008ರಿಂದ ರಾಮಚಂದ್ರಾಪುರ ಮಠವು ಮಹಾಬಲೇಶ್ವರ ದೇವಾಲಯದ ಆಡಳಿತ ವಹಿಸಿಕೊಂಡಿತ್ತು. ಸುಪ್ರೀಂ ಕೋರ್ಟ್‌ನ ಮಧ್ಯಂತರ ತೀರ್ಪಿನಂತೆ 2021ರ ಮೇ 8ರಂದು ಮೇಲುಸ್ತುವಾರಿ ಸಮಿತಿಗೆ ಆಡಳಿತ ಹಸ್ತಾಂತರವಾಗಿದೆ. ಇದೀಗ, ದೇಗುಲದ ಪ್ರಸ್ತುತ ಆಡಳಿತ ಮಂಡಳಿಯ ಸ್ಪಷ್ಟೀಕರಣವನ್ನು ತೆರಿಗೆ ಇಲಾಖೆ ಮಾನ್ಯ ಮಾಡಿರುವುದು ಅಂದಿನ ರಾಮಚಂದ್ರಾಪುರ ಮಠದ ಮಾದರಿ ಆಡಳಿತ ವ್ಯವಸ್ಥೆಗೆ ಸಂದ ಜಯ ಎಂದು ಮಠ ಹೇಳಿದೆ.

ಗುರಿ ತಲುಪಿ | ಈ ವರ್ಷ 2.5 ಲಕ್ಷ ವಿದ್ಯಾರ್ಥಿಗಳ ದಾಖಲಿಗೆ ಪಿಯು ಶಿಕ್ಷಣ ಇಲಾಖೆಯಿಂದ ಗುರಿ | ಇದು ಕಳೆದ ಸಾಲಿನ ಪ್ರವೇಶಕ್ಕಿಂತ 1.3 ಲಕ್ಷ ಅಧಿಕ


ಸರ್ಕಾರಿ ಪಿಯು ಕಾಲೇಜುಗಳಿಗೆ ಪ್ರವೇಶಾತಿ ಟಾರ್ಗೆಟ್

• **ವಿಶ್ವನಾಥ ಮಲೇಬೆನ್ನೂರು**
ಕನ್ನಡಪ್ರಭ ವಾರ್ತೆ ಚಿಕ್ಕಮಗಳೂರು

ರಾಜ್ಯಾದ್ಯಂತದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 2026-27ನೇ ಶೈಕ್ಷಣಿಕ ವರ್ಷದಲ್ಲಿ ಬರೋಬ್ಬರಿ 2.50 ಲಕ್ಷ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳುವ ಗುರಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಕಿಕೊಂಡಿದೆ.

ರಾಜ್ಯದಲ್ಲಿರುವ ಒಟ್ಟು ಆರು ಸಾವಿರಕ್ಕೂ ಅಧಿಕ ಪದವಿಪೂರ್ವ ಕಾಲೇಜುಗಳ ಪೈಕಿ 1,358 ಕಾಲೇಜುಗಳು ಸರ್ಕಾರಿ ಪದವಿ ಪೂರ್ವ ಕಾಲೇಜುಗಳು. ಇವುಗಳಲ್ಲಿ 1,37,849 ವಿದ್ಯಾರ್ಥಿಗಳು ಕಳೆದ 2025-26ನೇ ಸಾಲಿನಲ್ಲಿ ದಾಖಲಾತಿ ಪಡೆದುಕೊಂಡಿದ್ದರು. ಈ ಬಾರಿ ಆ ಸಂಖ್ಯೆಯನ್ನು ಬರೋಬ್ಬರಿ 2.50 ಲಕ್ಷಕ್ಕೆ ಏರಿಕೆ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ.

2026ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 2,87,888 ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಈ ಪೈಕಿ 2.50 ಲಕ್ಷ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಬೇಕು. ಸರ್ಕಾರಿ ಪ್ರೌಢಶಾಲೆ ಮಾತ್ರವಲ್ಲದೇ



ಸರ್ಕಾರಿ ಪದವಿ ಪೂರ್ವ ಕಾಲೇಜು ವ್ಯಾಪ್ತಿಯ ಖಾಸಗಿ ಶಾಲಾ ವಿದ್ಯಾರ್ಥಿಗಳನ್ನೂ ದಾಖಲು ಮಾಡಿಕೊಳ್ಳಲು ಪ್ರಯತ್ನಿಸುವಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ ಎಂದು ಉನ್ನತ ಮೂಲಗಳು 'ಕನ್ನಡಪ್ರಭ'ಕ್ಕೆ ತಿಳಿಸಿವೆ.

ಜಿಲ್ಲಾವಾರು ಗುರಿ ಹಂಚಿಕೆ: ರಾಜ್ಯದ ಒಟ್ಟಾರೆ 2.50 ಲಕ್ಷ ವಿದ್ಯಾರ್ಥಿಗಳನ್ನು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ದಾಖಲು ಮಾಡಿಕೊಳ್ಳುವ ಗುರಿಯನ್ನು ಜಿಲ್ಲಾವಾರು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ, ಕಳೆದ ವರ್ಷದ ದಾಖಲಾತಿ ಸಂಖ್ಯೆ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಉತ್ತೀರ್ಣರಾದ ಅಂಕಿ-ಸಂಖ್ಯೆ ಆಧರಿಸಿ ಗುರಿ ಹಂಚಿಕೆ ಮಾಡಲಾಗಿದೆ.

ಜಿಲ್ಲಾಮಟ್ಟದಲ್ಲಿ ಗುರಿ ಸಾಧನೆ ಮಾಡುವುದಕ್ಕೆ ಶಾಲಾ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರು ಮತ್ತು ಪಿಯು ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಇಬ್ಬರಿಗೂ ಜವಾಬ್ದಾರಿ ನೀಡಲಾಗಿದೆ. ಡಿಡಿಪಿಐಗಳು ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಿಗೆ ಎಸ್‌ಎಸ್‌ಎಲ್‌ಸಿ ಪಾಸ್ ಆದ ವಿದ್ಯಾರ್ಥಿಗಳನ್ನು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ದಾಖಲಾತಿ ಮಾಡಿಕೊಳ್ಳಲು ಉತ್ತೇಜಿಸುವ ಕ್ರಮ ಕೈಗೊಳ್ಳಬೇಕು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಮತ್ತು ಉಪನ್ಯಾಸಕರು, ಸರ್ಕಾರಿ ಪ್ರೌಢಶಾಲೆಗಳಿಗೆ ಭೇಟಿ ನೀಡಿ ಎಸ್‌ಎಸ್‌ಎಲ್‌ಸಿ ಪಾಸ್ ಆಗಿರುವ ವಿದ್ಯಾರ್ಥಿಗಳನ್ನು ತಮ್ಮ ಕಾಲೇಜಿಗೆ ದಾಖಲಾತಿ ಆಗುವಂತೆ ಪ್ರಚಾರ ನಡೆಸಬೇಕೆಂದು ಸೂಚಿಸಲಾಗಿದೆ.

ಹೊಸ ಕೋರ್ಸ್ ಅನುಮತಿಗೂ ಸಿದ್ಧ

ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಬೇಡಿಕೆಯಂತೆ ಹೊಸ ಕೋರ್ಸ್‌ಗಳನ್ನು ಆರಂಭಿಸಲು ಬೇಕಾದ ಅನುಮತಿ ಸಹ ನೀಡಲಾಗುವುದು. ಯಾವ ಕೋರ್ಸ್‌ಗೆ ಹೆಚ್ಚಿನ ಬೇಡಿಕೆ ಇದೆ ಎಂಬುದನ್ನು ತಿಳಿದು ಡಿಡಿಪಿಯು ಮೂಲಕ ಪ್ರಸ್ತಾವನೆ ಸಹ ಕಳುಹಿಸುವಂತೆ ನಿರ್ದೇಶಿಸಲಾಗಿದೆ.

ಬ್ಯಾನರ್ ಅಳವಡಿಕೆ, ಕರಪತ್ರ ಹಂಚಿಕೆ

ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಮುಂದೆ 2026ರ ಫಲಿತಾಂಶದ ಕುರಿತು ಬ್ಯಾನರ್ ಅಳವಡಿಕೆ ಮಾಡಿ, ಕಾಲೇಜಿನಲ್ಲಿರುವ ಸರ್ಕಾರಿ ಸೌಲಭ್ಯಗಳ ಬಗ್ಗೆ ಕರಪತ್ರ ಮುದ್ರಿಸಿ ಹಂಚಿ, ಪ್ರಚಾರ ನಡೆಸುವಂತೆ ಸೂಚಿಸಲಾಗಿದೆ.

ಸಾರಾ ಗೋವಿಂದು ವಿರುದ್ಧ ಜೀವ ಬೆದರಿಕೆ ದೂರು ಕೊಟ್ಟ ಚೇತನ್

ಮನೆಗೆ ನುಗ್ಗಿ ಅವಾಚ್ಯವಾಗಿ ನಿಂದನೆ ಆರೋಪ



• **ಕನ್ನಡಪ್ರಭ ವಾರ್ತೆ** ಬೆಂಗಳೂರು

ತಮ್ಮ ಮನೆಗೆ ನುಗ್ಗಿ ಅವಾಚ್ಯ ಪದಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ಡಾ। ರಾಜ್ ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ.ಗೋವಿಂದು ವಿರುದ್ಧ ಬೆಂಗಳೂರಿನ ಶೇಷಾದ್ರಿಪುರ ಪೊಲೀಸ್ ಠಾಣೆಗೆ ಶನಿವಾರ ನಟ ಚೇತನ್ ದೂರು ನೀಡಿದ್ದಾರೆ. ಶೇಷಾದ್ರಿಪುರ ಪೊಲೀಸ್ ಠಾಣೆಗೆ ಜನಪರ ಹಾಗೂ ದಲಿತ ಸಂಘಟನೆಗಳ ಪದಾಧಿಕಾರಿಗಳ ಜತೆ ತೆರಳಿ ಚೇತನ್ ದೂರು ನೀಡಿದ್ದಾರೆ. ಈ ದೂರು ಪರಿಶೀಲಿಸಿ ಕಾನೂನು ಕ್ರಮ ಜರುಗಿಸುವುದಾಗಿ ಅವರಿಗೆ ಪೊಲೀಸರು ಭರವಸೆ ನೀಡಿದ್ದಾರೆ. ದೂರು ಸಲ್ಲಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಚೇತನ್, ಈ ಹಿಂದೆ ಲಂಕೇಶ್ ಪತ್ರಿಕೆ ಪತ್ರಕರ್ತರ ಮೇಲೆ ಗೋವಿಂದು ಹಲ್ಲೆ ಮಾಡಿದ್ದರು. ಫಿಲ್ಮ್ ಚೇಂಬರ್‌ನಲ್ಲಿ ಹಣ ಕಳ್ಳತನ ಮಾಡಿರುವ ಆರೋಪ ಸಹ ಅವರ ಮೇಲಿದೆ. ರಾಜ್ ಕುಮಾರ್ ಅವರ ಹೆಸರಿಗೆ ಮಸಿ ಬಳಿಯುವ ಕೆಲಸವನ್ನು ಗೋವಿಂದು ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು. ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ನಗರದ ಕಂಠೀರ ಸ್ಟುಡಿಯೋದಲ್ಲಿ ಡಾ.ರಾಜ್ ಕುಮಾರ್ ಅವರ ಸಮಾಧಿಗೆ 2.5 ಎಕರೆ ಭೂಮಿ ಮಂಜೂರು ಮಾಡಿರುವ ರಾಜ್ಯ ಸರ್ಕಾರದ ನಿರ್ಧಾರ ಬಗ್ಗೆ ಚೇತನ್ ಆಕ್ಷೇಪಿಸಿದ್ದರು. ಈ ವಿಚಾರ ಭಾರೀ ವಿವಾದ ಪಡೆದು ಪರ-ವಿರೋಧ ಚರ್ಚೆಗೆ ಕಾರಣವಾಗಿದೆ. ಇದೇ ವಿಷಯವಾಗಿ ಕಳೆದ ಶನಿವಾರ ಚೇತನ್ ಅವರ ಮನೆಗೆ ನುಗ್ಗಿ ರಾಜ್ ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ.ಗೋವಿಂದು ನೇತೃತ್ವದಲ್ಲಿ ಕೆಲವರು ಗಲಾಟೆ ಮಾಡಿದ್ದರು.

ರಾಜ್ಯದಲ್ಲಿ ತಾಪಮಾನ (ಡಿಗ್ರಿ ಸೆಲ್ಸಿಯಸ್‌ಗಳಲ್ಲಿ)

	ಗದಗ	ಬಾಗಲಕೋಟೆ	ದಾವಣಗೆರೆ	ಮೈಸೂರು	ಶಿವಮೊಗ್ಗ
ಗರಿಷ್ಠ	37.6	37.2	36.5	35.8	35.8
ಕನಿಷ್ಠ	21.0	20.1	21.0	19.4	21.0

ಕಾಗದರಹಿತ ನೋಂದಣಿ ವ್ಯವಸ್ಥೆ ಸ್ಥಗಿತಕ್ಕೆ ಪತ್ರ ಬರಹಗಾರರ ಆಗ್ರಹ

ಬೆಂಗಳೂರು: ಕಾವೇರಿ ತಂತ್ರಾಂಶದ ಮೂಲಕ ಕಾಗದ ರಹಿತ ಡಿಜಿಟಲ್ ನೋಂದಣಿ ವ್ಯವಸ್ಥೆಯಲ್ಲಿ ಸಾರ್ವಜನಿಕರ ಆಸ್ತಿ, ದಾಖಲಾತಿಗೆ ಭದ್ರತೆ ಇಲ್ಲ, ತಕ್ಷಣ ಈ ವ್ಯವಸ್ಥೆ ಸ್ಥಗಿತಗೊಳಿಸಿ. ಅದರಲ್ಲಿರುವ ಲೋಪದೋಷ ಸರಿಪಡಿಸಬೇಕೆಂದು ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಪರವಾನಗಿ ಪಡೆದ ಪತ್ರ ಬರಹಗಾರರ ಒಕ್ಕೂಟ ಒತ್ತಾಯಿಸಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಧರ್ಮರಾಜ್ ವಿ.ಏಕಬೋಟೆ, ಕಾಗದ ರಹಿತ ಡಿಜಿಟಲ್ ನೋಂದಣಿ ವ್ಯವಸ್ಥೆ ಪ್ರಸ್ತುತ ಚಾಮರಾಜನಗರದಲ್ಲಿ ಪ್ರಾಯೋಗಿಕವಾಗಿ ಜಾರಿಗೆ ಬಂದಿದ್ದು, ಉಳಿದ ಜಿಲ್ಲೆಗಳಿಗೂ ವಿಸ್ತರಿಸಲಾಗುತ್ತದೆ. ಇದರಲ್ಲಿ ಆಸ್ತಿ ನೋಂದಣಿ ಆಗಿರುವ ಬಗ್ಗೆ ಭೌತಿಕ ಪತ್ರಗಳನ್ನು ಖರೀದಿದಾರರಿಗೆ ನೀಡುತ್ತಿಲ್ಲ. ಆಸ್ತಿ ಖರೀದಿದಾರರಿಗೆ ನಿಖರ ದಾಖಲೆ ಸಿಗುವುದಿಲ್ಲ. ಆಸ್ತಿ ನೋಂದಣಿ ಸಮಯದಲ್ಲಿ ಖರೀದಿದಾರರು, ಮಾರಾಟಗಾರರು ಭೌತಿಕ ಸಹಿ ಮಾಡದೆ ಇ-ಸಹಿ ಮಾಡುವುದರಿಂದ ಅನಕ್ಷರಸ್ಥರನ್ನು ವಂಚಿಸಿ ಆಸ್ತಿ ನೋಂದಣಿ ಮಾಡಿಸಿಕೊಳ್ಳುವ ಅಪಾಯವಿದೆ ಎಂದರು.

30 ನಾನ್ ಐಪಿಎಸ್‌ಗಳಿಗೆ ಎಸ್ಪಿ ಹುದ್ದೆ ಬಡ್ತಿ ಕೊಡಿ: ಕೋರ್ಟ್

ಬಡ್ತಿಗೆ ಪರಿಗಣಿಸಲು ಸೂಚನೆ | ನೇರ ಬಡ್ತಿ ನೀಡದ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿದ್ದ ಅರ್ಜಿ

ಬೆಂಗಳೂರು: ರಾಜ್ಯ ಪೊಲೀಸ್ ಸೇವೆಯ 30 ಐಪಿಎಸ್‌ಯೇತರ (ನಾನ್ ಐಪಿಎಸ್) ಅಧಿಕಾರಿಗಳಿಗೆ ಪೊಲೀಸ್ ವರಿಷ್ಠಾಧಿಕಾರಿ(ಎಸ್‌ಪಿ) ವೃಂದಕ್ಕೆ ಬಡ್ತಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ.



ಕೆಎಸ್‌ಎಟಿ ಮೊರೆ ಹೋಗಿದ್ದ ಅಧಿಕಾರಿಗಳು
ಕೆಎಸ್‌ಎಟಿ ಆದೇಶ ಎತ್ತಿ ಹಿಡಿದ ಕೋರ್ಟ್

ಎಸ್‌ಪಿ ಹುದ್ದೆಗೆ ಬಡ್ತಿ ನೀಡುವ ಸಂಬಂಧ ಕಳೆದ ವರ್ಷ ಆ.20ರಂದು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ (ಕೆಎಸ್‌ಎಟಿ) ನೀಡಿದ್ದ ಆದೇಶವನ್ನು ಮಾರ್ಪಾಟು ಮಾಡಿರುವ ಹೈಕೋರ್ಟ್‌ನ ವಿಭಾಗೀಯ ಪೀಠ, ಕರ್ನಾಟಕ ನಾಗರಿಕ ಸೇವಾ ನಿಯಮದಂತೆ ಬಡ್ತಿಗೆ ಪರಿಗಣಿಸಬೇಕು ಎಂದು ಹೇಳಿದೆ. ಕೆಎಎಸ್‌ಟಿ ಆದೇಶ ಪ್ರಶ್ನಿಸಿ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಆಲಿಸಿದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಮತ್ತು ನ್ಯಾ.ಕೆ.ವಿ.ಅರವಿಂದ್ ಅವರಿದ್ದ ವಿಭಾಗೀಯಪೀಠ ಈ ಆದೇಶ ನೀಡಿದೆ. ಎಸ್‌ಪಿ ಹುದ್ದೆಗಳ ಲಭ್ಯತೆ ಆಧರಿಸಿ ಇಲಾಖಾ ಬಡ್ತಿ ಸಮಿತಿ(ಡಿಪಿಸಿ) ಗೃಹ ಸಚಿವರ ಅನುಮೋದನೆ ಪಡೆದು ಎರಡು ತಿಂಗಳಲ್ಲಿ ಪ್ರತಿವಾದಿಗಳಿಗೆ ಎಸ್‌ಪಿ ಹುದ್ದೆಗೆ ಬಡ್ತಿ ನೀಡಲು ತೀರ್ಮಾನಿಸಬೇಕು ಎಂದು ಕೋರ್ಟ್ ಆದೇಶದಲ್ಲಿ ತಿಳಿಸಿದೆ.

ಪ್ರಕರಣದ ಹಿನ್ನೆಲೆ: 2023ರ ನ.15ರಂದು ನಡೆದ ಡಿಪಿಸಿ ಸಭೆಯಲ್ಲಿ ಡಿಎಸ್‌ಪಿಗಳಾಗಿದ್ದ 30 ಮಂದಿ ನಾನ್ ಐಪಿಎಸ್ ಅಧಿಕಾರಿಗಳನ್ನು ಎಸ್‌ಪಿ ವೃಂದಕ್ಕೆ(ಸಿವಿಲ್) ನೇರವಾಗಿ ಬಡ್ತಿ ನೀಡಲು ತೀರ್ಮಾನಿಸಿತ್ತು.

ಡಿಪಿಸಿ ನಿರ್ಧಾರದ ಹೊರತಾಗಿಯೂ ಸರ್ಕಾರ ನೇರ ಬಡ್ತಿ ನೀಡಿರಲಿಲ್ಲ. ಹಾಗಾಗಿ ಅವರು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ (ಕೆಎಸ್‌ಎಟಿ) ಮೊರೆ ಹೋಗಿದ್ದರು. ನ್ಯಾಯಮಂಡಳಿಯು 30 ಮಂದಿಗೂ ಎಸ್‌ಪಿ ವೃಂದಕ್ಕೆ ಬಡ್ತಿ ನೀಡುವಂತೆ ಸರಕಾರಕ್ಕೆ ಆದೇಶಿಸಿತ್ತು. ಈ ಆದೇಶ ಪ್ರಶ್ನಿಸಿ ಸರ್ಕಾರ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ನೀರಾವರಿ ಮಂತ್ರಿ ಇದ್ದಾಗ 2 ಬಾರಿ ಅಧ್ಯಕ್ಷಗಿರಿ ಆಫರ್ ಇತ್ತು: ಎಂಬಿಪಾ

ವಿಜಯಪುರ: ನಾನು ನೀರಾವರಿ ಮಂತ್ರಿ ಆಗಿದ್ದಾಗ ನನಗೆ ಎರಡು ಬಾರಿ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಅವಕಾಶ ಬಂದಿತ್ತು. ಎರಡು ಬಾರಿ ಅವಕಾಶ ಕೊಟ್ಟಿದ್ದರೂ ನಾನು ನೀರಾವರಿ ಖಾತೆಯಲ್ಲೇ ಇರಬೇಕು ಎಂದುಕೊಂಡಿದ್ದೆ. ಕಾಂಗ್ರೆಸ್ ಪಕ್ಷ ನನಗೆ ಎಲ್ಲ ಅವಕಾಶಗಳನ್ನು ಕೊಟ್ಟಿದೆ ಎಂದು ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ. ಜಿಲ್ಲೆಯ ದೇವರಹಿಪ್ಪರಗಿಯಲ್ಲಿ ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿ, ಕೆಪಿಸಿಸಿ ಅಧ್ಯಕ್ಷ ಸ್ಥಾನ ಬೇಕು ಅಂದರೆ ಮಾಧ್ಯಮದ ಮುಂದೆ ಹೇಳುವುದಕ್ಕಿಂತ, ನಮ್ಮ ಹೈಕಮಾಂಡ್ ಮುಂದೆ ಹೇಳಬೇಕು. ಕಾಂಗ್ರೆಸ್ ಪಕ್ಷದ ಹಿರಿಯರು ಚರ್ಚೆ ಮಾಡುವಾಗ ನಮ್ಮ ಭಾವನೆ ವ್ಯಕ್ತಪಡಿಸುವೆ ಎಂದರು. ಸಿಎಂ ಬದಲಾವಣೆ ಬಗ್ಗೆ ಸಿದ್ದರಾಮಯ್ಯ ಮೌನ ವಹಿಸಿದ್ದ ಪ್ರತಿಕ್ರಿಯಿಸಿ, ಹೈಕಮಾಂಡ್ ನಿರ್ಣಯಕ್ಕೆ ಬದ್ಧ ಎಂದು ಸಿಎಂ, ಡಿಸಿಎಂ ಹೇಳಿದ್ದು, ನಾನು ಕೂಡ ಹೇಳಿರುವೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ. ಅಂತಿಮವಾಗಿ ಹೈಕಮಾಂಡ್ ನಿರ್ಣಯಕ್ಕೆ ಎಲ್ಲರೂ ಬದ್ಧವಾಗಿರುತ್ತೇವೆ ಎಂದು ತಿಳಿಸಿದರು.


ಸುದ್ದಿ ಸಿಂಚನ

ಸಚಿವನಾಗಿ ಉಳಿಯಲು ಪ್ರಯತ್ನಿಸಲ್ಲ: ಶಿವಾನಂದ

ಬೆಂಗಳೂರು: ಸಚಿವ ಸಂಪುಟ ಪುನಾರಚನೆಯಾದರೆ ಹೈಕಮಾಂಡ್ ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೂ ನಾನು ಬದ್ಧನಾಗಿರುತ್ತೇನೆ ಎಂದು ಜವಳಿ ಸಚಿವ ಶಿವಾನಂದ ಪಾಟೀಲ್ ತಿಳಿಸಿದ್ದಾರೆ. ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಸಚಿವ ಸಂಪುಟ ಪುನಾರಚನೆ ಆಗಬೇಕು ಎಂಬ ಚರ್ಚೆ ನಡೆಯುತ್ತಿದೆ. ಹಾಗೇನಾದರೂ ಆದರೆ ಕೆಲವರು ಸಚಿವ ಸ್ಥಾನ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಹೊಸಬರು ಸಚಿವರಾಗಲು ನೋಡುತ್ತಾರೆ. ನಾನು ಯಾವುದೇ ಪ್ರಯತ್ನವನ್ನೂ ಮಾಡುವುದಿಲ್ಲ ಎಂದರು.

ಕೆಪಿಎಸ್ಸಿ ಅಕ್ರಮ ತಡೆಗೆ ದೇಶಪಾಂಡೆ ನೇತೃತ್ವದಲ್ಲಿ ಮೂರೂ ಪಕ್ಷದ ಸಮಿತಿ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ ನಡೆಯುತ್ತಿರುವ ಅಕ್ರಮಗಳ ತಡೆ ಹಾಗೂ ಆಯೋಗದಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಸೂಕ್ತ ಶಿಫಾರಸುಗಳೊಂದಿಗೆ ವರದಿ ನೀಡಲು ಕಾಂಗ್ರೆಸ್ ಶಾಸಕ ಆರ್.ವಿ.ದೇಶಪಾಂಡೆ ನೇತೃತ್ವದಲ್ಲಿ ಮೂರು ಪ್ರಮುಖ ಪಕ್ಷಗಳ ಸದಸ್ಯರನ್ನು ಒಳಗೊಂಡ ಸದನ ಸಮಿತಿ ರಚಿಸಲಾಗಿದೆ.



ಈ ಸದನ ಸಮಿತಿಗೆ ಆರ್.ವಿ.ದೇಶಪಾಂಡೆ ಅಧ್ಯಕ್ಷರಾಗಿದ್ದು, ಶಾಸಕರಾದ ಹಂಪನಗೌಡ ಬಾದರ್ಲಿ, ಎಚ್.ಸಿ.ಬಾಲಕೃಷ್ಣ, ಎ.ಎಸ್.ಪೊನ್ನಣ್ಣ, ಕೆ.ಎಂ.ಶಿವಲಿಂಗೇಗೌಡ, ರಾಘವೇಂದ್ರ ಬಸರಾಜ ಹಿಟ್ನಾಳ್, ಎಂ.ರೂಪಕಲಾ, ಆರಗ ಜ್ಞಾನೇಂದ್ರ, ಎಸ್.ಸುರೇಶ್ ಕುಮಾರ್, ಮಹೇಶ್ ಟೆಂಗಿನಕಾಯಿ, ಎಂ.ಟಿ.ಕೃಷ್ಣ ಸದಸ್ಯರಾಗಿದ್ದಾರೆ. ವರದಿ ನೀಡಲು ಮೂರು ತಿಂಗಳ ಕಾಲಾವಕಾಶ ನೀಡಲಾಗಿದೆ.

ಸಂಪುಟ ವಿಸ್ತರಣೆ ವರಿಷ್ಠರ ನಿರ್ಧಾರ: ಸಚಿವ ಬೈರತಿ

ಶಿವಮೊಗ್ಗ: ಸಂಪುಟ ವಿಸ್ತರಣೆ ಅಥವಾ ಪುನಾರಚನೆಯ ಬಗ್ಗೆ ಹೈಕಮಾಂಡ್ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ. ಪಕ್ಷ ನೀಡುವ ಜವಾಬ್ದಾರಿಯನ್ನು ನಿರ್ವಹಿಸಲು ನಾವೆಲ್ಲರೂ ಬದ್ಧ ಎಂದು ಸಚಿವ ಬೈರತಿ ಸುರೇಶ್ ತಿಳಿಸಿದರು.

ಯುವಕರು ರೇಷ್ಮೆ ಕೃಷಿಯಲ್ಲಿ ತೊಡಗಿಕೊಳ್ಳಿ: ಸಿಎಂ

ಬೆಂಗಳೂರಿನಲ್ಲಿ ರೇಷ್ಮೆ, ಖನಿಜ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ | ಇ-ರೇಷ್ಮೆ ಪೋರ್ಟಲ್‌ಗೂ ಸಿದ್ದರಾಮಯ್ಯ ಚಾಲನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಇದೀಗ ರೇಷ್ಮೆಗೆ ಒಳ್ಳೆಯ ಬೇಡಿಕೆ ಇದ್ದು ಯುವಜನರು ಈ ಕೃಷಿಯಲ್ಲಿ ತೊಡಗಿಕೊಳ್ಳಬೇಕು ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಬೆಂಗಳೂರಿನ ಓಕಳಿಪುರಂನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ರೇಷ್ಮೆ ಮತ್ತು ಖನಿಜ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ, ಇ-ರೇಷ್ಮೆ ಪೋರ್ಟಲ್ ಬಿಡುಗಡೆ ಮಾಡಿ ಮಾತನಾಡಿದರು.

ಕರ್ನಾಟಕವು ಕಚ್ಚಾ ರೇಷ್ಮೆ ಉತ್ಪಾದನೆ, ಕಾಫಿ ಬೆಳೆಯಲ್ಲಿ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ. ಹಾಲು ಉತ್ಪಾದನೆಯಲ್ಲಿ ದೇಶದಲ್ಲಿ ಎರಡನೇ ಸ್ಥಾನದಲ್ಲಿ ದ್ದೇವೆ. ರಾಜ್ಯದ 1.22 ಲಕ್ಷ ಹೆಕ್ಟೇರ್‌ನಲ್ಲಿ ರೇಷ್ಮೆ ಉತ್ಪಾದಿಸುತ್ತಿದ್ದು 1.51 ಲಕ್ಷ ಕುಟುಂಬಗಳು ಜೀವನಕ್ಕೆ ರೇಷ್ಮೆಯನ್ನು ಅವಲಂಬಿಸಿವೆ. ಇದು ಲಾಭದಾಯಕ ಕಸುಬಾಗಿದ್ದು ವ್ಯವಸಾಯದ ಜೊತೆಗೆ ರೇಷ್ಮೆ ಕೃಷಿ ಯನ್ನೂ ಕೈಗೊಳ್ಳಿ. ರೇಷ್ಮೆ ಕೃಷಿ ಜೊತೆಗೆ ತೋಟಗಾರಿಕೆ, ಪಶುಸಂಗೋಪನೆಯಲ್ಲೂ ತೊಡಗಿದರೆ ಹೆಚ್ಚು ಆದಾಯ ಗಳಿಸಬಹುದು ಎಂದರು.

ಅನುಪಯುಕ್ತ ಜಾಗ ಬಳಸಿಕೊಳ್ಳಿ: ರೇಷ್ಮೆ ಇಲಾಖೆಗೆ ಸೇರಿದ ಬಹಳಷ್ಟು ಅನುಪಯುಕ್ತ ಜಾಗಗಳಿದ್ದು ಅವುಗಳನ್ನು ಆದಾಯದ ಮೂಲವಾಗಿ ಬಳಸಿಕೊಳ್ಳಬೇಕು. ಇಲ್ಲಿನ ರೇಷ್ಮೆ ಇಲಾಖೆಯ 4.25 ಎಕರೆ ಜಮೀನಿನಲ್ಲಿ ₹665 ಕೋಟಿ ವೆಚ್ಚದಲ್ಲಿ 17 ಮಹಡಿಯ ಸುಸಜ್ಜಿತ ಕಟ್ಟಡ ಮೂರು ವರ್ಷದಲ್ಲಿ ನಿರ್ಮಾಣವಾಗಲಿದೆ. ಖನಿಜ ನಿಗಮ ಹಣಕಾಸು ಒದಗಿಸಲಿದ್ದು, 40 ಸಾವಿರ ಚದರ ಅಡಿ ಕಟ್ಟಡವನ್ನು ಜಿಬಿಎಗೆ, 16,505 ಚದರ ಅಡಿಯನ್ನು ಕೇಂದ್ರ ರೇಷ್ಮೆ ಮಂಡಳಿಗೆ ನೀಡಲಿದ್ದು ಉಳಿದಿದ್ದನ್ನು 50:50 ಅನುಪಾತದಲ್ಲಿ ರೇಷ್ಮೆ ಇಲಾಖೆ ಮತ್ತು ಖನಿಜ ನಿಗಮ ಇಟ್ಟುಕೊಳ್ಳಲಿವೆ ಎಂದು ವಿವರಿಸಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಖನಿಜ ನಿಗಮದ ಉಪಾಧ್ಯಕ್ಷ ಎಚ್.ಲಕ್ಷ್ಮಣ, ವಾಣಿಜ್ಯ ಇಲಾಖೆ ಕಾರ್ಯದರ್ಶಿ ರೋಹಿಣಿ ಸಿಂಧೂರಿ ಇದ್ದರು.

ಸಿಬ್ಬಂದಿ ನೇಮಕಕ್ಕೆ ಮನವಿ: ರೇಷ್ಮೆ ಇಲಾಖೆ ಹಾಗೂ ಖನಿಜ ನಿಗಮದಲ್ಲಿ ಸಿಬ್ಬಂದಿ ಕೊರತೆ ಇದ್ದು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರೇಷ್ಮೆ ಸಚಿವ ಕೆ.ವೆಂಕಟೇಶ್ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು ಇಲಾಖೆಯಲ್ಲಿ ನೌಕರರು ಇಲ್ಲದಂತಾಗಿದೆ. 56 ಸಾವಿರ ಹುದ್ದೆ ನೇಮಕಾತಿ ಸಂದರ್ಭದಲ್ಲಿ ರೇಷ್ಮೆ ಇಲಾಖೆಗೆ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು. ಖನಿಜ ನಿಗಮದ ಅಧ್ಯಕ್ಷ ಜಿ.ಎಸ್.ಪಾಟೀಲ್ ಮಾತನಾಡಿ, ನಿಗಮದಲ್ಲಿ 1800 ಸಿಬ್ಬಂದಿ ಇದ್ದರು. ಈಗ 350 ಸಿಬ್ಬಂದಿ ಮಾತ್ರ ಇದ್ದಾರೆ. ಸಿಬ್ಬಂದಿ ನೇಮಕಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ವಿನಂತಿಸಿದರು.



ಬೆಂಗಳೂರಿನ ಓಕಳಿಪುರಂನಲ್ಲಿ ರೇಷ್ಮೆ ಮತ್ತು ಖನಿಜ ಭವನ ನಿರ್ಮಾಣ ಕಾಮಗಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಶಂಕುಸ್ಥಾಪನೆ ನೆರವೇರಿಸಿದರು. ಸಚಿವರಾದ ಕೆ. ವೆಂಕಟೇಶ್, ದಿನೇಶ್ ಗುಂಡೂರಾವ್ ಹಾಜರಿದ್ದರು.

ರಾಜಕೀಯ ಮಾತಾಡಲು ವೇದಿಕೆ ತಯಾರಿಸಿ: ಸಿಎಂ

ಈ ಕಾರ್ಯಕ್ರಮದಲ್ಲಿ ರಾಜಕೀಯ ಮಾತನಾಡುವುದು ಬೇಡ ಎಂದು ಕೊಂಡಿದ್ದೇನೆ. ರಾಜಕೀಯ ಮಾತನಾಡಲು ಸಚಿವ ದಿನೇಶ್ ಗುಂಡೂರಾವ್ ಅವರಿಗೆ ವೇದಿಕೆ ತಯಾರು ಮಾಡಲು ಹೇಳುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಮಿಕವಾಗಿ ನುಡಿದರು. ಇಲ್ಲಿ ರಾಜಕೀಯ ಮಾತನಾಡುವುದು ಬೇಡ. ದಿನೇಶ್ ಗುಂಡೂರಾವ್ ವೇದಿಕೆ ತಯಾರು ಮಾಡಲಿ. ಅಲ್ಲಿ ರಾಜಕೀಯದ ಬಗ್ಗೆ ಮಾತನಾಡುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದ್ದು ವಿಶೇಷವಾಗಿತ್ತು.

ಅಮಿತ್ ಶಾ-ರಿಷಬ್ ಭೇಟಿ

ಕಾಂತಾರ ಸಿನಿಮಾಗಳ ಬಗ್ಗೆ ಸಚಿವ ಮೆಚ್ಚುಗೆ

• **ಕನ್ನಡಪ್ರಭ** ಸಿನಿವಾರ್ತೆ

'ಕಾಂತಾರ' ಖ್ಯಾತಿಯ ನಟ ರಿಷಬ್ ಶೆಟ್ಟಿ ಅವರು ಶನಿವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ದೆಹಲಿಯಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿರುವ ರಿಷಬ್ ಶೆಟ್ಟಿ, 'ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿರುವುದು ಸೌಭಾಗ್ಯ. ಇದು ನನ್ನ ಬದುಕಿನ ಸ್ಮರಣೀಯ ಕ್ಷಣಗಳಲ್ಲೊಂದು. ಈ ವೇಳೆ ಅವರು ಕಾಂತಾರ ಮತ್ತು ಕಾಂತಾರ ಚಾಪ್ಟರ್ 1 ಸಿನಿಮಾಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನನ್ನ ಮುಂಬರುವ ಸಿನಿಮಾಗಳ ಕುರಿತೂ ಮಾಹಿತಿ ಪಡೆದರು. ನಮ್ಮ ಇತಿಹಾಸ, ಸಂಸ್ಕೃತಿ, ಕಲೆ ಮತ್ತು ಸಿನಿಮಾ ನಿರ್ಮಾಣದ ಬಗ್ಗೆ ಅವರಿಗೆ ಆಳವಾದ ಜ್ಞಾನವಿದೆ' ಎಂದಿದ್ದಾರೆ.



ದಾವಣಗೆರೆ, ಬಾಗಲಕೋಟೆ ಉಪಸಮರದ ರಿಸಲ್ಟ್ ನಾಳೆ

ಬೆಳಗ್ಗೆ 8ರಿಂದ ಎಣಿಕೆ, 12ಕ್ಕೆ ಫಲಿತಾಂಶ?

• **ಕನ್ನಡಪ್ರಭ ವಾರ್ತೆ** ದಾವಣಗೆರೆ/ಬಾಗಲಕೋಟೆ



ಉಪಚುನಾವಣೆ ನಡೆದ ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಮತಗಳ ಎಣಿಕೆ ಸೋಮವಾರ ನಡೆಯಲಿದ್ದು, ಇದಕ್ಕಾಗಿ ಆಯಾ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರದ ಮತಗಳ ಎಣಿಕೆ ನಗರದ ಡಿ.ಆರ್.ಆರ್. ವಿದ್ಯಾಸಂಸ್ಥೆಯಲ್ಲಿ, ಬಾಗಲಕೋಟೆ ಕ್ಷೇತ್ರದ ಮತಗಳ ಎಣಿಕೆ ನಗರದ ತೋಟಗಾರಿಕೆ ವಿವಿಯಲ್ಲಿ ನಡೆಯಲಿದೆ. ಬೆಳಗ್ಗೆ 8 ಗಂಟೆಗೆ ಪೋಸ್ಟಲ್ ಬ್ಯಾಲೆಟ್ ಎಣಿಕೆ ಆರಂಭವಾಗಲಿದ್ದು, 8.30ಕ್ಕೆ ಇವಿಎಂ ಯಂತ್ರಗಳ ಎಣಿಕೆ ಕಾರ್ಯ ಶುರುವಾಗಲಿದೆ. ಮಧ್ಯಾಹ್ನ 12 ಗಂಟೆಯ ವೇಳೆಗೆ ಅಂತಿಮ ಫಲಿತಾಂಶ ಲಭ್ಯವಾಗುವ ನಿರೀಕ್ಷೆಯಿದೆ. ಮತ ಎಣಿಕೆ ಕೇಂದ್ರದ ಗೇಟಿನಿಂದ ಸುತ್ತಮುತ್ತಲಿನ 100 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದ್ದು, ಮತ ಎಣಿಕೆ ಕೇಂದ್ರದ ಸುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

ಬಿಎಸ್‌ವೈ ಅಭಿಮಾನೋತ್ಸವ ವೇದಿಕೆ ಪರಿಶೀಲಿಸಿದ ಜೋಶಿ



ಚಿತ್ರದುರ್ಗದ ಹೊರವಲಯದಲ್ಲಿರುವ ಮೈದಾನದಲ್ಲಿ ಮೇ 9ರಂದು ನಡೆಸಲು ಉದ್ದೇಶಿಸಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವದ ಪೆಂಡಾಲ್ ನಿರ್ಮಾಣ ಕಾಮಗಾರಿಯನ್ನು ಕೇಂದ್ರ ಸಚಿವ ಪ್ರಹ್ಲಾದ್ ವೀಕ್ಷಿಸಿದರು.

X ಫೈಲ್ಸ್

ಚಾ ಕುಡೀರಿ ಕೂಲ್ ಆಗಿ

ಬ್ರೇಕಿಂಗ್ ನ್ಯೂಸ್: ಬ್ರಿಟನ್‌ನಲ್ಲಿ 22 ಡಿಗ್ರಿ ತಾಪಮಾನ. ಬಿಸಿಗಾಳಿಯ ಎಚ್ಚರಿಕೆ
-ಇದಕ್ಕೆ 42 ಡಿಗ್ರಿ ತಾಪಮಾನ ಇರುವ ಕಲಬುರಗಿ ವ್ಯಕ್ತಿಯಿಂದ ಬ್ರಿಟಿಷರಿಗೆ ಫೋನ್ ಕರೆ: ಹೆದರಬ್ಯಾಡ್ರಿ. 2 ಕಪ್ ಗರಂ ಚಹಾ ಕುಡೀರಿ, ಮಿರ್ಚಿ ತಿನ್ರಿ. ಎಲ್ಲಾ ಶಾಂತ ಆಗ್ತೈತಿ.
• ಡಿಡಿ

ಹೆಂಡ್ತಿ ಮಾಡಿದ ಅಡುಗೆ ತಿನ್ನಿ

ವಾಣಿಜ್ಯ ಸಿಲಿಂಡರ್ ದರ ಏರಿಕೆ ಸುದ್ದಿ ಕೇಳಿದ ಗೃಹಿಣಿಯೊಬ್ಬಳು ಹೇಳಿದ್ದು: 'ಗಂಡ ಮನೆಯಲ್ಲೇ ಊಟ ಮಾಡ್ಲಿ.. ಹೆಂಡ್ತಿ ತಯಾರಿಸಿದ ಅಡುಗೆ ತಿನ್ಲಿ.. ಹೊರಗಿನದು ತಿನ್ನೋದು ಬ್ಯಾಡ ಅಂತ ಹಿಂಗ ಮಾಡ್ಯಾರ ನೋಡ್ರಿ'. :-)))
• ನಾಗ್

ಶೃಂಗೇರಿ ಕ್ಷೇತ್ರದಲ್ಲಿ ಯಾರು ಗೆದ್ದರೆಂದು ಕುತೂಹಲ

ಮೊದಲ ಪುಟದಿಂದ



ಮತ ಎಣಿಕೆ ವೇಳೆ ಕೆಲವು ನಾಟಕೀಯ ವಿದ್ಯಮಾನ ನಡೆದವು. ಸಂಜೆ ವೇಳೆಗೆ ತಾವೇ ವಿಜೇತರು ಎಂದು ಘೋಷಿಸಿಕೊಂಡು ವಿಜಯೋತ್ಸವ ಆಚರಿಸಿಕೊಂಡಿದ್ದ ಕಾಂಗ್ರೆಸ್ ಶಾಸಕ ಟಿ.ಡಿ.ರಾಜೇಗೌಡ, ರಾತ್ರಿ ವೇಳೆ ಮತ ಎಣಿಕೆ ಕೇಂದ್ರಕ್ಕೆ ಆಗಮಿಸಿ ಮತಪತ್ರಗಳ ಟ್ಯಾಂಪರಿಂಗ್ ನಡೆದಿದೆ ಎಂದು ಆರೋಪಿಸಿದರು. ಈ ನಡುವೆ ಬಿಜೆಪಿಗರು ಜೀವರಾಜ್ ಗೆದ್ದರು ಎಂದು ಹೇಳಿಕೊಂಡರು. ಹೀಗಾಗಿ ಗೊಂದಲ ಉಂಟಾಯಿತು. ಆದರೆ ಫಲಿತಾಂಶವನ್ನು ಹೈಕೋರ್ಟ್‌ಗೆ ಚುನಾವಣಾ ಆಯೋಗ ಸಲ್ಲಿಸಬೇಕಿದೆ. ಹೀಗಾಗಿ ಅಧಿಕೃತ ಘೋಷಣೆ ವಿಳಂಬ ಆಗುವ ಸಾಧ್ಯತೆ ಇದೆ.

ಆರಂಭದಿಂದಲೇ ಗೊಂದಲ: 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಅವರು ಕೇವಲ 201 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಒಟ್ಟು 1,822 ಪೋಸ್ಟಲ್ ಮತಗಳಲ್ಲಿ 279 ಮತಗಳು ಅಮಾನ್ಯಗೊಂಡಿದ್ದವು. ಈ ಫಲಿತಾಂಶಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಬಿಜೆಪಿಯ ಪರಾಜಿತ ಅಭ್ಯರ್ಥಿ ಡಿ.ಎನ್. ಜೀವರಾಜ್ ಮರುಎಣಿಕೆಗೆ ಮನವಿ ಸಲ್ಲಿಸಿದ್ದರು. ಆದರೆ, ಜಿಲ್ಲಾ ಚುನಾವಣಾಧಿಕಾರಿಗಳು ಫಲಿತಾಂಶ ಘೋಷಿಸಿದ್ದರು.

ಇದನ್ನು ಪ್ರಶ್ನಿಸಿ ಜೀವರಾಜ್ ಹೈಕೋರ್ಟ್ ಮೊರೆ ಹೋಗಿದ್ದರು. ಆ ಪ್ರಕಾರ, ಹೈಕೋರ್ಟ್ ಆದೇಶದಂತೆ ಶನಿವಾರ ಬೆಳಗ್ಗೆ ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜಿನಲ್ಲಿ 1,822 ಅಂಚೆ ಮತ ಎಣಿಕೆ ಕಾರ್ಯ ಆರಂಭವಾಯಿತು. ಆದರೆ, 'ಎಣಿಕೆಗೂ ಮೊದಲೇ ಬಾಕ್ಸ್ ಓಪನ್ ಆಗಿದೆ, ಮತಪತ್ರಗಳ ಟ್ಯಾಂಪರಿಂಗ್ ಆಗಿದೆ' ಎಂಬ ಆರೋಪ ಕಾಂಗ್ರೆಸ್‌ನಿಂದ ಕೇಳಿ ಬಂತು. ಬಳಿಕ, ಅಧಿಕಾರಿಗಳು ಸ್ಪಷ್ಟನೆ ನೀಡಿ, 'ಓಪನ್ ಆಗಿದ್ದು ಮತಪತ್ರಗಳ ಬಾಕ್ಸ್ ಅಲ್ಲ. ಚುನಾವಣೆ ಕುರಿತ ಕೆಲವು ಕಡತಗಳ ಪೆಟ್ಟಿಗೆ' ಎಂದು ಹೇಳಿದ ಬಳಿಕ ಎಣಿಕೆ ಕಾರ್ಯ ಮುಂದುವರಿಯಿತು.

ನಂತರ, ಕಳೆದ ಚುನಾವಣೆಯ ಮತ ಎಣಿಕೆ ವೇಳೆ ತಿರಸ್ಕೃತಗೊಂಡಿದ್ದ ಮತಪತ್ರಗಳಲ್ಲಿ ಕೆಲವು ಬೇಗನೆ ಸಿಗಲಿಲ್ಲ. ಮತ ಎಣಿಕೆ ಸಿಬ್ಬಂದಿ ಅವುಗಳಿಗಾಗಿ ಹುಡುಕಾಟ ಆರಂಭಿಸಿದ್ದರಿಂದ ಎಣಿಕೆ ಇನ್ನಷ್ಟು ವಿಳಂಬವಾಯಿತು. ತಿರಸ್ಕೃತಗೊಂಡಿದ್ದ 279 ಮತಗಳನ್ನು ಇರಿಸಿದ್ದ ಪೆಟ್ಟಿಗೆಯಲ್ಲಿ 267 ಮತಪತ್ರಗಳು ಮಾತ್ರ ಲಭ್ಯವಾಗಿದ್ದು, ಉಳಿದ 12 ಮತಪತ್ರಗಳ ಬಗ್ಗೆ ಮಾಹಿತಿ ಸಿಗಲಿಲ್ಲ. ಜೊತೆಗೆ, ಒಟ್ಟು ತಿರಸ್ಕರಿಸಿದ ಅಂಚೆ ಮತಗಳ ಪೈಕಿ 8 ಮತಗಳನ್ನು ಮಾನ್ಯ ಎಂದು ಮರುಎಣಿಕೆ ವೇಳೆ ಪರಿಗಣಿಸಲಾಯಿತು. ಹೀಗಾಗಿ ಅವುಗಳನ್ನು 2023ರ ಫಲಿತಾಂಶದ ವೇಳೆಯೇ ಮಾನ್ಯವಾಗಿದ್ದ 1,540 ಮತಗಳ ಜೊತೆಗೆ ಸೇರಿಸಿ ಎಣಿಕೆ ಮುಂದುವರಿಸಲಾಯಿತು. ಈ ಗೊಂದಲದಿಂದ ಸುಮಾರು 2 ಗಂಟೆ ಎಣಿಕೆ ಕಾರ್ಯ ಸ್ಥಗಿತವಾಗಿತ್ತು.

ಈ ಮಧ್ಯೆ, ಸಂಜೆ ವೇಳೆಗೆ ರಾಜೇಗೌಡರು ತಾವೇ ಗೆದ್ದಿದ್ದು, ಕಳೆದ ಬಾರಿಗಿಂತ 2 ಮತ ಹೆಚ್ಚು ಪಡೆದಿರುವುದಾಗಿ ಘೋಷಿಸಿಕೊಂಡರು. ಆದ್ದರಿಂದ ಶೃಂಗೇರಿ ಕ್ಷೇತ್ರದಾದ್ಯಂತ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಿಸಿದರು. 'ಸೋಲಿನ ಭಯದಲ್ಲಿ ಮರು ಎಣಿಕೆಯನ್ನು ಸ್ಥಗಿತಗೊಳಿಸುವ ಅನುಮಾನವಿದೆ' ಎಂದು ಆಕ್ಷೇಪಿಸಿ ಬಿಜೆಪಿ ಜಿಲ್ಲಾಧ್ಯಕ್ಷ ಎಂ.ಆರ್.ದೇವರಾಜ ಶೆಟ್ಟಿ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಎಣಿಕೆ ಕೇಂದ್ರಕ್ಕೆ ನುಗ್ಗಲು ಯತ್ನಿಸಿದರು. ಪೊಲೀಸರು ತಡೆದಾಗ ಪ್ರತಿಭಟನೆ ನಡೆಸಿದರು.

ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಕಾರ್ಯಕರ್ತರು 'ಗೆದ್ದರು, ಗೆದ್ದರು ರಾಜೇಗೌಡ' ಎನ್ನುತ್ತಾ ಪ್ರತಿಭಟನೆಗೆ ಇಳಿದಿದ್ದರಿಂದ, ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ವಾಗ್ವಾದ ನಡೆದು ಬಿಗುವಿನ ವಾತಾವರಣ ಏರ್ಪಟ್ಟಿತು. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು. ಫಲಿತಾಂಶದ ಬಗ್ಗೆ ಕೋರ್ಟ್ ನಿರ್ಧರಿಸಬೇಕಿರುವ ಕಾರಣ ಅಧಿಕೃತ ಘೋಷಣೆ ವಿಳಂಬ ಆಗುವ ಸಾಧ್ಯತೆ ಇದೆ.

ಬಿಎಸ್‌ವೈ ಮನೆಗೆ ಸಂತೋಷ್: ಮಾಜಿ ಸಿಎಂಗೆ ಶುಭ ಹಾರೈಕೆ

ಸೌಹಾರ್ದ ಮಾತು, ಉಪಹಾರ ಸೇವನೆ: ಬಿಎಸ್‌ವೈ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಿಜೆಪಿ ರಾಷ್ಟ್ರೀಯ ಸ್ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪರನ್ನು ಭೇಟಿ ಮಾಡಿ 50 ವರ್ಷಗಳ ರಾಜಕೀಯ ಪಯಣಕ್ಕೆ ಶುಭ ಕೋರಿದರು.

ಶನಿವಾರ ಬೆಳಗ್ಗೆ ಯಡಿಯೂರಪ್ಪ ನಿವಾಸಕ್ಕೆ ಭೇಟಿ ನೀಡಿದ ಸಂತೋಷ್ ಅವರು ಉಪಹಾರ ಸೇವಿಸಿ ಇದೇ ತಿಂಗಳ 9ರಂದು ಚಿತ್ರದುರ್ಗದಲ್ಲಿ ನಡೆಯುತ್ತಿರುವ ಯಡಿಯೂರಪ್ಪ ಅಭಿಮಾನೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಶುಭ ಕೋರಿ ಪ್ರಸಕ್ತ ರಾಜಕಾರಣದ ಕುರಿತು ಚರ್ಚಿಸಿದರು. ಈ ಬಗ್ಗೆ ಯಡಿಯೂರಪ್ಪ ಅವರು ಜಾಲತಾಣದಲ್ಲಿ ಪ್ರಸ್ತಾಪಿಸಿದ್ದು, ಆತ್ಮೀಯರಾದ ಬಿ.ಎಲ್.ಸಂತೋಷ್ ಅವರು ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾಗಿ ಇಡೀ ದೇಶಾದ್ಯಂತ ಪಕ್ಷದ ಸಂಘಟನೆಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ನಮ್ಮ ಮನೆಗೆ ಸೌಹಾರ್ದಯುತ ಭೇಟಿ ನೀಡಿ ನನ್ನೊಂದಿಗೆ ಉಪಹಾರ ಸೇವಿಸಿದರು. 50 ವರ್ಷಗಳ ನನ್ನ ಯಶಸ್ವಿ ರಾಜಕೀಯ ಪಯಣದ ಕುರಿತು ಆತ್ಮೀಯವಾಗಿ ಶುಭಾಶಯ ಸಲ್ಲಿಸಿದರು. ಸಂತೋಷ್ ಜೀ ಅವರ ಸಂಘಟನಾ ಸಾಮರ್ಥ್ಯ ಸ್ಫೂರ್ತಿ ಎಂದಿದ್ದಾರೆ.



ಆಹ್ವಾನ | ಮೇ 8ಕ್ಕೆ ಚಿತ್ರದುರ್ಗದಲ್ಲಿ ಮಾಜಿ ಸಿಎಂಗೆ ಅದ್ದೂರಿ ಸ್ವಾಗತ | ಬಿಎಸ್‌ವೈ ಅಭಿಮಾನೋತ್ಸವಕ್ಕೆ ಸುತ್ತೂರು ಶ್ರೀಗಳನ್ನು ಆಹ್ವಾನಿಸಿದ ಬಿಜೆಪಿ ರಾಜ್ಯಾಧ್ಯಕ್ಷ

ಮಿನಿ ದಸರಾ ಮಾದರಿಯಲ್ಲಿ ಬಿಎಸ್‌ವೈಗೆ ಸ್ವಾಗತ: ಬಿವೈವಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಮಾಜಿ ಮುಖ್ಯಮಂತ್ರಿ, ರೈತ ನಾಯಕರಾದ ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷಗಳ ಸುದೀರ್ಘ ರಾಜಕೀಯ ಜೀವನದ ಸಂಭ್ರಮಾಚರಣೆಯನ್ನು ಅಭಿಮಾನೋತ್ಸವ ಹೆಸರಿನಲ್ಲಿ ಮೇ 9ರಂದು ಚಿತ್ರದುರ್ಗ ದಲ್ಲಿ ಆಯೋಜಿಸಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.




ಶನಿವಾರ ನಗರದ ಸುತ್ತೂರು ಮಠದ ಶಿವರಾತ್ರೀಶ್ವರ ಸ್ವಾಮೀಜಿಯನ್ನು ಭೇಟಿಯಾಗಿ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ಮೇ 9ರಂದು ಬೆಳಗ್ಗೆ 11ಕ್ಕೆ ವೇದಿಕೆ ಕಾರ್ಯಕ್ರಮ ಆರಂಭವಾಗಲಿದ್ದು, ಮಧ್ಯಾಹ್ನ 12 ಗಂಟೆ ಸುಮಾರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ರಾಜ್ಯದ ವಿವಿಧ ಮಠಗಳ ಸಾವಿರಾರು ಮಠಾಧೀಶರು ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಲಿದ್ದಾರೆ ಎಂದು ಅವರು ಹೇಳಿದರು. ಕಾರ್ಯಕ್ರಮದಕ್ಕೂ ಮುನ್ನಾ ದಿನ ಅಂದರೆ ಮೇ 8ರಂದು ಸಂಜೆ 5 ಗಂಟೆಗೆ ಯಡಿಯೂರಪ್ಪ ಅವರು ಚಿತ್ರದುರ್ಗಕ್ಕೆ ಆಗಮಿಸಲಿದ್ದು, ಅವರಿಗೆ ಅದ್ದೂರಿ ಸ್ವಾಗತ ಕೋರಲಾಗುವುದು. ಸುಮಾರು 20 -25 ಕಲಾತಂಡಗಳೊಂದಿಗೆ 'ಮಿನಿ ದಸರಾ' ಮಾದರಿಯಲ್ಲಿ ಮೆರವಣಿಗೆ ನಡೆಯಲಿದೆ. ಸಾವಿರಾರು ರೈತರು ಮತ್ತು ಮಹಿಳೆಯರೂ ಕೂಡ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾರೆ ಎಂದು ತಿಳಿಸಿದರು.

ರಾಜಕೀಯ ಬಣ್ಣ ಬೇಡ: ಇದು ವಿಜಯೇಂದ್ರ ಅವರಿಗಾಗಲಿ ಅಥವಾ ಪಕ್ಷಕ್ಕಾಗಲಿ ಬೂಸ್ಟ್ ನೀಡಲು ಮಾಡುತ್ತಿರುವ ಕಾರ್ಯಕ್ರಮ ಅಲ್ಲ. ಯಡಿಯೂರಪ್ಪ ಅವರು 45 ವರ್ಷಗಳ ಕಾಲ ವಿರೋಧ ಪಕ್ಷದಲ್ಲಿದ್ದು ಹೋರಾಟ ಮಾಡಿದ ಧೀಮಂತ ನಾಯಕ. ಅವರ ಹೋರಾಟದ ಬದುಕನ್ನು ಗೌರವಿಸಲು ಹಿರಿಯರು ಮತ್ತು ಅಭಿಮಾನಿಗಳು ಸೇರಿ ಈ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಇದಕ್ಕೆ ಯಾವುದೇ ರಾಜಕೀಯ ಬಣ್ಣ ಹಚ್ಚುವ ಅಗತ್ಯವಿಲ್ಲ ಎಂದು ವಿಜಯೇಂದ್ರ ಸ್ಪಷ್ಟಪಡಿಸಿದರು.

ಭೌಗೋಳಿಕ ಅನುಕೂಲ: ಸಂಸದ ಗೋವಿಂದ ಕಾರಜೋಳ ಅವರ ಆಶಯದಂತೆ ಹಾಗೂ ಭೌಗೋಳಿಕವಾಗಿ ಎಲ್ಲರಿಗೂ ಅನುಕೂಲವಾಗಲಿ ಎಂಬ ಕಾರಣಕ್ಕೆ ಚಿತ್ರದುರ್ಗವನ್ನು ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಬಿವೈವಿ ಮಾಹಿತಿ ನೀಡಿದರು.

ಈ ವೇಳೆ ನಗರ ಬಿಜೆಪಿ ಅಧ್ಯಕ್ಷ ಎಲ್. ನಾಗೇಂದ್ರ, ಜಿಲ್ಲಾ ಬಿಜೆಪಿ ಅಧ್ಯಕ್ಷ ಸುಬ್ಬಣ್ಣ, ಮಾಜಿ ಅಧ್ಯಕ್ಷರಾದ ಎಲ್.ಆರ್.ಮಹದೇವಸ್ವಾಮಿ, ಎಸ್.ಡಿ.ಮಹೇಂದ್ರ, ಜಿಪಂ ಮಾಜಿ ಉಪಾಧ್ಯಕ್ಷ ಡಾ। ಶಿವರಾಮ್ ಇದ್ದರು.



ಮೈಸೂರಿನ ಸುತ್ತೂರು ಮಠಕ್ಕೆ ಶನಿವಾರ ಭೇಟಿ ನೀಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಗೆ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಆಹ್ವಾನ ನೀಡಿ ಆಶೀರ್ವಾದ ಪಡೆದರು. ಈ ವೇಳೆ ಎಲ್.ನಾಗೇಂದ್ರ, ಎಲ್.ಆರ್. ಮಹದೇವಸ್ವಾಮಿ, ಎಸ್.ಡಿ.ಮಹೇಂದ್ರ, ಸುಬ್ಬಣ್ಣ, ಶಿವರಾಮ್ ಇದ್ದರು.

ಕಾಲೇಜುಗಳ ಸಭೆ, ಸಮಾರಂಭಕ್ಕೆ ಚರ್ಚಿಸಿ ಜನಪ್ರತಿನಿಧಿಗಳ ಆಹ್ವಾನಿಸಿ

ಪ್ರಾಂಶುಪಾಲರಿಂದ ಸ್ವತಂತ್ರ ತೀರ್ಮಾನ ಬೇಡ ಕಾಲೇಜು, ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶನ



• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಭೆ ಸಮಾರಂಭಗಳಿಗೆ ಜನಪ್ರತಿನಿಧಿಗಳನ್ನು ಆಹ್ವಾನಿಸುವಾಗ ಸ್ಥಳೀಯ ಶಾಸಕರು ಹಾಗೂ ಕಾಲೇಜು ಅಭಿವೃದ್ಧಿ ಸಮಿತಿಯಲ್ಲಿ ಚರ್ಚಿಸಿ ತೀರ್ಮಾನಿಸಬೇಕೇ ಹೊರತು ಪ್ರಾಂಶುಪಾಲರು ಸ್ವತಂತ್ರ ತೀರ್ಮಾನ ಕೈಗೊಳ್ಳಬಾರದು ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಿಸಿದೆ.

ಕೆಲ ಕಾಲೇಜುಗಳಲ್ಲಿ ಪ್ರಾಂಶುಪಾಲರು, ಶಾಸಕರು, ಕಾಲೇಜು ಅಭಿವೃದ್ಧಿ ಸಮಿತಿಯ ಜೊತೆ ಚರ್ಚೆ ನಡೆಸದೆ, ಆಹ್ವಾನಿತರ ಆಗಮನದ ಖಾತರಿ ಪಡೆದುಕೊಳ್ಳದೆ ಸ್ವತಂತ್ರವಾಗಿ ನಿರ್ಧಾರಗಳನ್ನು ಕೈಗೊಂಡು ಕಾರ್ಯಕ್ರಮ ನಡೆಸುತ್ತಿದ್ದಾರೆ. ಇದರಿಂದ ಶಿಷ್ಟಾಚಾರದ ಉಲ್ಲಂಘನೆಯಾಗುತ್ತಿದೆ ಎಂದು ಕೆಲ ಶಾಸಕರು ಹಕ್ಕು ಬಾಧ್ಯತಾ ಸಮಿತಿಯ ಸಭೆಯಲ್ಲಿ ತಮ್ಮ ಅಸಮಾಧಾನ ವ್ಯಕ್ತಗೊಳಿಸಿರುವ ಹಿನ್ನೆಲೆಯಲ್ಲಿ ಇಲಾಖೆ ಆಯುಕ್ತರು ಈ ನಿರ್ದೇಶನ ನೀಡಿದ್ದಾರೆ.

ಮುಂದಿನ ದಿನಗಳಲ್ಲಿ ಶಿಷ್ಟಾಚಾರ ಉಲ್ಲಂಘನೆಯಾದರೆ ಅಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸುವುದಲ್ಲದೆ ಸಂಬಂಧ ಪಟ್ಟ ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿಸಿ, ಶಿಸ್ತು ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ವಾರಫಲ

03.05.26
09.05.26

• ವೀಣಾ ಚಿಂತಾಮಣಿ

ಮೇಷ

ನಿಮ್ಮ ರಾಶಿಯ ಅಧಿಪತಿ ಹನ್ನೆರಡನೇ ಮನೆಯಲ್ಲಿ ಶನಿಯ ಜೊತೆ ಇದ್ದಾನೆ. ಇಬ್ಬರೂ 12 ನೇ ಮನೆಯಲ್ಲಿ ಇರುವುದು ಅಷ್ಟೇನೂ ಶುಭವಲ್ಲ. ಖರ್ಚುಗಳು ಹೆಚ್ಚು. ನಿಮ್ಮ ರಾಶಿಯಲ್ಲಿ ಬುಧ ಸೂರ್ಯ ಇದ್ದಾರೆ. ಇದು ನಿಮಗೆ ಶಕ್ತಿ ಧೈರ್ಯ ಕೊಡುತ್ತದೆ. ಎರಡನೇ ಮನೆಯಲ್ಲಿ ಶುಕ್ರ ಧನಲಾಭ ಕೊಡುತ್ತಾನೆ. ಹಣ ಬರುವುದಕ್ಕೂ ಖರ್ಚಾಗುವುದಕ್ಕೂ ಸರಿ ಹೋಗುತ್ತದೆ. ಉಳಿಯುವುದೇನೂ ಇಲ್ಲ.

ವೃಷಭ

ಹನ್ನೊಂದನೇ ಮನೆಯಲ್ಲಿ ಶನಿ-ಕುಜ, ನಿಮ್ಮ ರಾಶಿಯಲ್ಲೇ ಶುಕ್ರ,ಎರಡನೇ ಮನೆಯಲ್ಲಿ ಗುರು ಸಮಯ ಈಗ ಬಹಳ ಚೆನ್ನಾಗಿದೆ. ಹಣ ಬರುವ ಮೂಲವೂ ಚೆನ್ನಾಗಿದೆ. ಹಣ ಉಳಿಯುತ್ತದೆ. ಮನಸ್ಸಿಗೆ ನೆಮ್ಮದಿ ಇದೆ. ನೀವು ಮಾಡಬೇಕು ಎಂದುಕೊಂಡ ಕೆಲಸಗಳನ್ನು ಮಾಡುವಿರಿ. ನೀವು ಖರ್ಚು ಮಾಡಬೇಕು ಎಂದುಕೊಂಡದ್ದಕ್ಕೇ ಹಣ ಖರ್ಚು ಮಾಡುವಿರಿ. ಎಲ್ಲವೂ ವ್ಯವಸ್ಥಿತವಾಗಿ ನಡೆಯುತ್ತದೆ.

ಮಿಥುನ

ನಿಮ್ಮ ರಾಶಿಯ ಅಧಿಪತಿ ಬುಧ ತನ್ನ ನೀಚತ್ವವನ್ನು ಕಳೆದುಕೊಂಡು ಲಾಭಸ್ಥಾನಕ್ಕೆ ಬಂದಿದ್ದಾನೆ. ಸೂರ್ಯ ಬುಧ ಇಬ್ಬರೂ ಲಾಭಸ್ಥಾನದಲ್ಲಿ ಇರುವುದು ನಿಮಗೆ ಶುಭ ತರುತ್ತದೆ. ಮೂರನೇ ಮನೆಯಲ್ಲಿ ಕೇತು ಧೈರ್ಯ ಸಾಹಸ ಕೊಡುತ್ತಾನೆ. ಶನಿ ಕುಜ ಇಬ್ಬರೂ ಕರ್ಮ/ವೃತ್ತಿ ಸ್ಥಾನದಲ್ಲಿ ಇರುವುದರಿಂದ ವೃತ್ತಿಯಲ್ಲಿ ತೊಡಕುಗಳು ಎದುರಾಗಬಹುದು. ಕಾಲು ನೋವು ಮಂಡಿನೋವು ಇಂಥವು ನಿಮ್ಮನ್ನು ಕಾಡುತ್ತದೆ.

ಕಟಕ

ನಿಮಗೆ ಇನ್ನೂ ಒಳ್ಳೆಯ ದಿನಗಳು ಬಂದಿಲ್ಲ. ಅಡೆತಡೆಗಳ ನಡುವೆ ಜೀವನ. ಲಾಭ ಸ್ಥಾನದಲ್ಲಿ ಇರುವ ಶುಕ್ರ ಮಾತ್ರ ನಿಮಗೆ ಧನಲಾಭ, ವಾಹನ ಲಾಭ ಕೊಡುತ್ತಾನೆ. ಚಿನ್ನ ಬೆಳ್ಳಿ ವ್ಯಾಪಾರಿಗಳಿಗೆ ಈ ವಾರ ಚೆನ್ನಾಗಿದೆ. ವ್ಯಯಸ್ಥಾನದಲ್ಲಿ ಇರುವ ಗುರು ನಿಮಗೆ ಖರ್ಚುಗಳನ್ನು ಕೊಡುತ್ತಾನೆ. ನೆಮ್ಮದಿಗೆ ಭಂಗ ಇದೆ. ನೀವೇನೋ ಯೋಜನೆ ತಯಾರಿಸಿದರೆ ಭಗವಂತನ ಯೋಜನೆ ಬೇರೇನೋ ಇರುತ್ತದೆ.

ಸಿಂಹ

ಇನ್ನೂ ಗುರುಬಲ ಇರುವುದರಿಂದ ಈಗ ಜೀವನ ಹಗುರವಾಗಿ ಸಾಗುತ್ತದೆ. ಆದರೆ ಮುಂದಿನ ದಿನಗಳು ನಿಮ್ಮ ಪಾಲಿಗೆ ಕಠಿಣವಾಗಲಿದೆ. ಈಗಿನಿಂದ ಮಾನಸಿಕ ತಯಾರಿ ಇರಲಿ. ನಿಮ್ಮ ರಾಶಿಯ ಅಧಿಪತಿ ಸೂರ್ಯ ಹಾಗೂ ಧನಾಧಿಪತಿ ಬುಧ ಒಟ್ಟಾಗಿ ಭಾಗ್ಯಸ್ಥಾನದಲ್ಲಿ ಇದ್ದಾರೆ. ಇದು ನಿಮಗೆ ಸಾಕಷ್ಟು ಬಲವನ್ನು ಕೊಡುತ್ತದೆ. ವೃತ್ತಿಯಲ್ಲಿ ಹೆಸರು ಗಳಿಸುತ್ತೀರಿ. ಯಶಸ್ಸು ಸಿಗುತ್ತದೆ. ಹನ್ನೊಂದನೇ ಮನೆಯಲ್ಲಿ ಗುರು ಇರುವುದು ನಿಮ್ಮ ಸಾಕಷ್ಟು ಯೋಜನೆಗಳಿಗೆ ಶುಭಫಲ ಸಿಗುತ್ತದೆ.

ಕನ್ಯಾ

ಮುಂಬರುವ ದಿನಗಳು ನಿಮಗೆ ಒಳಿತನ್ನು ತರುತ್ತದೆ. ಅದರ ಸೂಚನೆಗಳು ಈಗಿನಿಂದಲೇ ನಿಮ್ಮ ಅನುಭವಕ್ಕೆ ಬರುತ್ತದೆ. ಒಂಬತ್ತರಲ್ಲಿ ಶುಕ್ರ ಆರರಲ್ಲಿ ರಾಹು ಈಗ ನಿಮಗೆ ಬೆಂಬಲ. ಇನ್ನೂ ಸ್ವಲ್ಪ ದಿನ ಏರಿಳಿತಗಳಲ್ಲಿ ಜೀವನ ನಡೆಸಬೇಕಾಗುತ್ತದೆ. ಹಣಕಾಸಿಗೆ ತೊಂದರೆ ಇದೆ. ಆರೋಗ್ಯದಲ್ಲೂ ಏರುಪೇರು ಇರುತ್ತದೆ. ಆದರೆ ಭಯ ಬೇಡ. ಇದೆಲ್ಲ ಕೆಲವು ದಿನಗಳು ಮಾತ್ರ. ಮುಂದಿನ ದಿನಗಳಲ್ಲಿ ಉನ್ನತ ಸ್ಥಾನಮಾನ ಪಡೆಯುವಿರಿ.

ತುಲಾ

ಐದನೇ ಮನೆಯಲ್ಲಿ ರಾಹು ವಿದ್ಯಾರ್ಥಿಗಳಿಗೆ ಹಿನ್ನಡೆ. ಆರರಲ್ಲಿ ಶನಿ ಕುಜ ಶತ್ರುಗಳನ್ನು ದೂರ ಮಾಡುತ್ತಾರೆ. ಧನಲಾಭ ಕೊಡುತ್ತಾರೆ. ಏಳರಲ್ಲಿ ಸೂರ್ಯ-ಬುಧ ಇದ್ದಾರೆ. ಇದು ಸಂಗಾತಿಗೆ ಲಾಭ. ಎರಡರಲ್ಲಿ ಶುಕ್ರ ಸ್ವಂತ ಮನೆಯಲ್ಲಿ ಇದ್ದಾನೆ. ಇದೂ ಸಹ ನಿಮಗೆ ಒಳ್ಳೆಯ ಫಲ ನೀಡುತ್ತದೆ. ಒಂಬತ್ತರಲ್ಲಿ ಗುರು ನಿಮ್ಮ ರಾಶಿಯನ್ನು ನೋಡುತ್ತಾನೆ. ಯಾವುದೇ ತೊಂದರೆ ಅಪಾಯಗಳು ನಿಮಗೆ ಬರದಂತೆ ಕಾಪಾಡುತ್ತಾನೆ.

ವೃಶ್ಚಿಕ

ಈಗ ನಿಮಗೆ ಏನೇ ಹಿನ್ನಡೆಗಳು ಇದ್ದರೂ ಅವೆಲ್ಲ ತಾತ್ಕಾಲಿಕ. ಕೆಲವು ದಿನಗಳು ಸಹಿಸಿಕೊಳ್ಳಿ, ಮುಂಬರುವ ದಿನಗಳು ನಿಮಗೆ ಶುಭಫಲಗಳನ್ನು ನೀಡುತ್ತವೆ. ಈಗ ಯಾವ ಗ್ರಹಗಳು ನಿಮ್ಮ ಪರವಾಗಿ ಇಲ್ಲ. ಪಂಚಮ ಶನಿಯ ಪ್ರಭಾವ ಇದೆ. ಪಂಚಮ ಶನಿ ಸುಲಭವಾಗಿ ಆಗುವ ಕೆಲಸಗಳನ್ನು ನಿಧಾನ ಮಾಡುತ್ತಾನೆ. ಹೆಜ್ಜೆಹೆಜ್ಜೆಗೂ ಅಡ್ಡಿ ಆತಂಕಗಳು ಎದುರಾಗುವಂತೆ ಮಾಡುತ್ತಾನೆ. ಸಂಬಳಿಧಗಳನ್ನು ಕೆಡಿಸುತ್ತಾನೆ.

ಧನುಸ್ಸು

ಈಗ ನಿಮಗೆ ಸಮಯ ಬಹಳ ಚೆನ್ನಾಗಿದೆ. ನಿಮ್ಮ ರಶಿಯಲ್ಲೇ ಚಂದ್ರ ಬಂದಾಗ ಗುರುವಿನ ದೃಷ್ಟಿ ಬಿದ್ದು ಗಜಕೇಸರಿ ಯೋಗವಾಗುತ್ತದೆ. ಇದು ನಿಮಗೆ ಧನಲಾಭ ಕೊಡುತ್ತದೆ. ನೀವು ಮಾಡುವ ಕೆಲಸ ನಿಮ್ಮ ಮೇಲಧಿಕಾರಿಗಳಿಗೆ ಇಷ್ಟವಾಗಿ ಪ್ರಶಂಸೆ ಸಿಗುತ್ತದೆ. ಗ್ರಹಗಳ ಸಹಕಾರದಿಂದ ನಿಮ್ಮ ವ್ಯಾಪಾರ ವ್ಯವಹಾರ ಅಭಿವೃದ್ಧಿಯಾಗುತ್ತದೆ. ಮೂರನೇ ಮನೆಯಲ್ಲಿ ರಾಹು ಹೂಡಿಕೆಗಳಲ್ಲಿ ಹಣ ಕೊಡಿಸುತ್ತಾನೆ.

ಮಕರ

ಮಕರರಾಶಿ: ಇನ್ನು ಕೆಲವೇ ದಿನಗಳಲ್ಲಿ ಗುರುಬಲ ಸಿಗಲಿದ್ದು ಮುಂದೆ ಅದರ ಮುನ್ಸೂಚನೆಗಳನ್ನು ಕಾಣುವಿರಿ. ನಿಮ್ಮ ಅಭಿವೃದ್ಧಿಗೆ ಇರುವ ಅಡೆತಡೆಗಳು ದೂರವಾಗಿ ನಿಮಗೆ ದಾರಿ ಸರಾಗವಾಗುತ್ತದೆ. ಐದನೇ ಮನೆಯಲ್ಲಿ ಶುಕ್ರ ಇದ್ದು ಮಕ್ಕಳಿಗೆ ಅದರಲ್ಲೂ ಹೆಣ್ಣುಮಕ್ಕಳಿದ್ದರೆ ಅವರಿಗೆ ಒಳ್ಳೆಯದಾಗುತ್ತದೆ. ವಾಹನದಿಂದ ಲಾಭ ಇದೆ. ಕಲಾವಿದರಿಗೆ ಲಾಭ ಇದೆ. ಉನ್ನತ ವ್ಯಾಸಂಗ ಮಾಡಬಯಸುವವರಿಗೆ ಒಳ್ಳೆಯ ದಾರಿ ಕಾಣುತ್ತದೆ.

ಕುಂಭ

ಆರೋಗ್ಯದಲ್ಲಿ ಏರುಪೇರುಗಳು ಕಾಣಿಸಬಹುದು. ಇದುವರೆಗೂ ಇದ್ದ ನಿಮ್ಮ ಪ್ರಾಮುಖ್ಯತೆ ಈಗ ಮಂಕಾಗಬಹುದು. ನಿಮ್ಮ ಮಾತಿಗೆ ಬೆಲೆ ಸಿಗದೆ ನಿಮ್ಮ ಮನಸ್ಸಿಗೆ ನೋವಾಗಬಹುದು. ನಿಮಗೆ ಸಿಕ್ಕಿರುವ ಅಧಿಕಾರಕ್ಕೂ ಈಗ ಕಂಟಕಗಳು ಎದುರಾಗುತ್ತದೆ. ಮನಸ್ಸಿಗೆ ಕಿರಿಕಿರಿ ಆಗುತ್ತದೆ. ಸಾಡೆಸಾತಿಯ ಕೊನೆಯ ಹಂತದಲ್ಲಿ ಇವೆಲ್ಲ ಸಾಮಾನ್ಯ. ಈಗ ನಿಮಗೆ ಜನರ ಸ್ವಭಾವ ಅರಿವಾಗುತ್ತದೆ.

ಮೀನ

ಮೀನರಾಶಿ: ಸಾಡೆಸಾತಿಯ ಎರಡನೇ ಹಂತ ಮುಗಿಯುವುದರಲ್ಲಿದೆ. ನಿಮ್ಮ ಪರಿಸ್ಥಿತಿಯೂ ಅತ್ತ ದರಿ ಇತ್ತ ಪುಲಿ ಎಂಬಲಿತೆ ಇದೆ. ಯಾವುದನ್ನು ಮಾಡಲೂ ನಿರಾಳತೆ ಇಲ್ಲ. ಯಾವುದು ಏನಾಗುವುದೋ ಎಂಬ ಭಯ ನಿಮ್ಮ ಕಟ್ಟಿಹಾಕುತ್ತದೆ. ಸ್ವತಂತ್ರವಾಗಿ ನಿರ್ಧಾರಗಳನ್ನು ಮಾಡಲಾರಿರಿ. ಸಹನೆ ಇರಲಿ. ಈಗ ಸದ್ಯಕ್ಕೆ ಎರಡನೇ ಮನೆಯಲ್ಲಿ ಸೂರ್ಯ-ಬುಧ ಇದ್ದು ಕೆಲವು ಉತ್ತಮ ಅವಕಾಶಗಳು ಸಿಗಲಿದೆ. ಮೂರನೇ ಮನೆಯಲ್ಲಿ ಶುಕ್ರ ಸಹ ನಿಮಗೆ ಧನಬಲ ಕೊಡುತ್ತಾನೆ.

ಆಂತರಿಕವಾಗಿ ತೈಲದ ಮೇಲಿನ ಅವಲಂಬನೆ ಇಳಿಕೆ | ಭವಿಷ್ಯತ್ತಿಗೆ ಭಾರತದ ಸಿದ್ಧತೆ

ವಿದೇಶಿ ಹಿಡಿತ ತಪ್ಪಿಸುತ್ತಿದೆ ಭಾರತದ ಇಂಧನ ಭದ್ರತೆ



ಅಜಿತ್ ಶೆಟ್ಟಿ ಹೆರಂಜೆ
ರಾಜ್ಯ ಸಹ ಸಂಚಾಲಕರು- ಪ್ರಕಾಶನ ಪ್ರಕೋಷ್ಠ, ಬಿಜೆಪಿ ಕರ್ನಾಟಕ

> ರೈಲ್ವೆ ವಿದ್ಯುದ್ದೀಕರಣದಿಂದ ವಾರ್ಷಿಕ 180 ಕೋಟಿ ಲೀಟರ್ ಡೀಸೆಲ್ ಉಳಿತಾಯವಾಗಿದ್ದು, ಇದು ಮಾರುಕಟ್ಟೆ ಮೌಲ್ಯದಲ್ಲಿ ಸುಮಾರು ₹16,000 ಕೋಟಿಗೂ ಹೆಚ್ಚು. ಈ ರೈಲುಗಳ ಓಡಾಟಕ್ಕೆ ಈಗ ಬರುವ ವಿದ್ಯುತ್, ಜಲ, ಪರಮಾಣು, ಸೌರ ಮತ್ತು ಪವನ ಶಕ್ತಿಯಿಂದ ಬರುತ್ತದೆಯೇ ಹೊರತು ತೈಲದಿಂದ ಅಲ್ಲ. ರೈಲ್ವೆ ವಲಯದಲ್ಲಿ ಡೀಸೆಲ್ ಅವಲಂಬನೆ ವ್ಯಾವಹಾರಿಕವಾಗಿ ನಗಣ್ಯವಾಗಿದೆ.

ಜಗತ್ತು ಬಿಕ್ಕಟ್ಟಿಗೆ ಪ್ರತಿಕ್ರಿಯಿಸುತ್ತಿರುವ ಸಮಯದಲ್ಲಿ, ಭಾರತ ಅದಕ್ಕೆ ಸಿದ್ಧವಾಗಿತ್ತು. 2026ರ ಪಶ್ಚಿಮ ಏಷ್ಯಾ ಉದ್ವಿಗ್ನತೆ ಅದನ್ನು ಸ್ಪಷ್ಟವಾಗಿ ತೋರಿಸಿತು. ಅಂತಾರಾಷ್ಟ್ರೀಯ ಇಂಧನ ಸಂಸ್ಥೆ (ಐಇಎ) ಇದನ್ನು 'ಜಾಗತಿಕ ತೈಲ ಮಾರುಕಟ್ಟೆ ಇತಿಹಾಸದ ಅತಿ ದೊಡ್ಡ ಪೂರೈಕೆ ಅಡಚಣೆ' ಎಂದು ಘೋಷಿಸಿತು. ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 130 ಡಾಲರ್‌ದಾಟಿತು. ಭಾರತದ ತೈಲ ಕಂಪನಿಗಳ ಮೇಲೆ ಇದು ಬಲವಾದ ಹೊರೆಯಾಯಿತು. ಸರ್ಕಾರ ಗ್ರಾಹಕರ ಮೇಲೆ ಈ ಒತ್ತಡ ಬೀಳಬಾರದು ಎನ್ನುವ ದೃಷ್ಟಿಯಿಂದ ಪೆಟ್ರೋಲ್ ಮೇಲಿದ್ದ ಸುಂಕವನ್ನು ಲೀಟರಿಗೆ ₹10 ಇಳಿಸಿದರೆ, ಡೀಸೆಲ್ ಮೇಲಿನ ಸುಂಕವನ್ನು ಸಂಪೂರ್ಣವಾಗಿ ಕಡಿತಗೊಳಿಸಿತು. ವಾರ್ಷಿಕ ಸುಮಾರು 1.55 ಲಕ್ಷ ಕೋಟಿಯಷ್ಟು ನಷ್ಟವನ್ನು ತನ್ನ ಮೇಲೆ ಎಳೆದುಕೊಂಡಿತು. ಇದರ ಜೊತೆ ಎಲ್‌ಪಿಜಿಯ ಕೊರತೆ ದೇಶದ ಹೋಟೆಲ್ ಉದ್ಯಮದ ಮೇಲೂ ಪರಿಣಾಮ ಬೀರಿತು. ಈ ಬೆಳವಣಿಗೆಗಳನ್ನು ನೋಡಿ ಭಾರತ ಸರ್ಕಾರದ ತೈಲ ನಿರ್ವಹಣಾ ನೀತಿ ಸಂಪೂರ್ಣವಾಗಿ ಸೋತಿದೆ ಅಂದುಕೊಂಡರೆ ಅದು ಅವರ ಕಲ್ಪನೆಯಷ್ಟೆ. ಆದರೆ ವಾಸ್ತವದಲ್ಲಿ ಭಾರತ ಇಂತಹ ಪರಿಸ್ಥಿತಿಯನ್ನು ಎದುರಿಸಲು 2014ರಿಂದಲೇ ತಯಾರಿ ನಡೆಸಿತ್ತು.

ಪ್ರಾರಂಭವಾದದ್ದು ರೈಲ್ವೆಯಿಂದ

2014ರಲ್ಲಿ ಕೇವಲ ಶೇಕಡ 20 ವಿದ್ಯುದ್ದೀಕರಣಗೊಂಡಿದ್ದ ಭಾರತೀಯ ರೈಲ್ವೆ 2026ರ ಮಾರ್ಚ್‌ನಲ್ಲಿ ಶೇ.99.6 ತಲುಪಿದೆ. ಇದು 21,801 ಮಾರ್ಗ ಕಿಲೋಮೀಟರ್‌ಗಳಿಂದ 69,873 ಮಾರ್ಗ ಕಿಲೋಮೀಟರ್‌ಗಳಿಗೆ ಏರಿಕೆಯಾಯಿತು. ಈ ಪ್ರಮಾಣದಲ್ಲಿ ವಿದ್ಯುದ್ದೀಕರಣ ಮಾಡಿದ ಜಗತ್ತಿನ ಏಕೈಕ ದೇಶ ನಮ್ಮದು. 2024-25ರಲ್ಲಿ ರೈಲ್ವೆ ವಿದ್ಯುದ್ದೀಕರಣದಿಂದ ವಾರ್ಷಿಕ 180 ಕೋಟಿ ಲೀಟರ್‌ಡೀಸೆಲ್ ಉಳಿತಾಯವಾಗಿದ್ದು, ಇದು ಮಾರುಕಟ್ಟೆ ಮೌಲ್ಯದಲ್ಲಿ ಸುಮಾರು ₹16,000 ಕೋಟಿಗೂ ಹೆಚ್ಚು. ಈ ರೈಲುಗಳ ಓಡಾಟಕ್ಕೆ ಈಗ ಬರುವ ವಿದ್ಯುತ್, ಜಲ, ಪರಮಾಣು, ಸೌರ ಮತ್ತು ಪವನ ಶಕ್ತಿಯಿಂದ ಬರುತ್ತದೆಯೇ ಹೊರತು ತೈಲದಿಂದ ಅಲ್ಲ. ರೈಲ್ವೆ ವಲಯದಲ್ಲಿ ಡೀಸೆಲ್ ಅವಲಂಬನೆ ವ್ಯಾವಹಾರಿಕವಾಗಿ ನಗಣ್ಯವಾಗಿದೆ. ಪ್ರತಿದಿನ ಸುಮಾರು 2 ಕೋಟಿ ಪ್ರಯಾಣಿಕರನ್ನು ಹಾಗೂ 1,670 ಮಿಲಿಯನ್ ಟನ್‌ನಷ್ಟು ಸರಕು ಸಾಗಣೆ ಮಾಡುವ ಭಾರತೀಯ ರೈಲ್ವೆಯಲ್ಲಿ ಆದ ಈ ಪ್ರಮಾಣದ ಮಾರ್ಪಾಡು ದೇಶದ ಇಂಧನ ಭದ್ರತೆಯ ಮೇಲೆ ದೊಡ್ಡ ಪರಿಣಾಮ ಬೀರಿದೆ. ರೈಲ್ವೆ ಈಗಲೂ ಡೀಸೆಲ್ ಮೇಲೆ ಅವಲಂಬಿತವಾಗಿದ್ದರೆ ಸರ್ಕಾರಕ್ಕೆ ಆಗುತ್ತಿದ್ದ ಹೆಚ್ಚುವರಿ ನಷ್ಟದ ಪ್ರಮಾಣವನ್ನು ಯೋಚಿಸಿ. ಇದು ಕೇವಲ ರೈಲ್ವೆಯ ಬದಲಾವಣೆಯಲ್ಲ- ದೇಶದ ಇಂಧನ ಅವಲಂಬನೆಯ ಸ್ವರೂಪವೇ ಬದಲಾಗುತ್ತಿರುವುದರ ಸೂಚನೆ.

ದೇಶದಲ್ಲಿ ಹಸಿರು ವಿದ್ಯುತ್ ಕ್ರಾಂತಿ

ಇಂಗಾಲ ಮುಕ್ತ ಇಂಧನದತ್ತ ಸಾಗುತ್ತಿರುವ ಭಾರತ, ಕಳೆದ 12 ವರ್ಷಗಳಲ್ಲಿ ಇಂಧನ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತಂದಿದೆ. ಈ ನಿಟ್ಟಿನಲ್ಲಿ ತನ್ನ ಉತ್ಪಾದನಾ ಸಾಮರ್ಥ್ಯವನ್ನು 76 ಗಿಗಾ ವ್ಯಾಟ್‌ನಿಂದ 283.46 ಗಿಗಾ ವ್ಯಾಟ್‌ಗೆ ಏರಿಸುವ ಮೂಲಕ 3.7 ಪಟ್ಟು ಪ್ರಗತಿ ಸಾಧಿಸಿದೆ. ವಿಶೇಷವಾಗಿ ಸೌರಶಕ್ತಿಯಲ್ಲಿ 50 ಪಟ್ಟು ಜಿಗಿತ ಕಂಡಿರುವ ಭಾರತ, 2030ರ ಗುರಿಯಾದ 500 ಗಿಗಾ ವ್ಯಾಟ್‌ನ ಅರ್ಧದಷ್ಟು ಭಾಗವನ್ನು (51.5%) ಐದು ವರ್ಷ ಮುಂಚಿತವಾಗಿಯೇ ತಲುಪಿ ಜಾಗತಿಕವಾಗಿ 3ನೇ ಸ್ಥಾನಕ್ಕೇರಿದೆ. ಇದರೊಂದಿಗೆ, ಕಲ್ಪಾಕ್ಕಂನಲ್ಲಿ ಸ್ವದೇಶಿ 'ಫಾಸ್ಟ್ ಬ್ರೀಡರ್‌ರಿಯಾಕ್ಟರ್' ಆರಂಭಿಸಿ ರಷ್ಯಾದ ನಂತರ ಈ ಸಾಧನೆ ಮಾಡಿದ ವಿಶ್ವದ 2ನೇ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ; ಇದು ಮುಂದೆ ಥೋರಿಯಂ ಬಳಸಿ ಶತಮಾನಗಳ ಕಾಲ ವಿದ್ಯುತ್ ಪಡೆಯುವ 3ನೇ ಹಂತಕ್ಕೆ ದಾರಿ ಮಾಡಿಕೊಡುವುದಲ್ಲದೆ, 2047ರ ವೇಳೆಗೆ ಪರಮಾಣು ವಿದ್ಯುತ್ ಸಾಮರ್ಥ್ಯವನ್ನು 1000 ಗಿಗಾ ವ್ಯಾಟ್‌ಗೆ ಕೊಂಡೊಯ್ಯುವ ಗುರಿ ಹೊಂದಿದೆ.



ಶಕ್ತಿಶಾಲಿ ತೈಲ ಸಂಸ್ಕರಣಾ ಘಟಕ

ರಿಲಯನ್ಸ್ ಒಡೆತನದ ಜಾಮ್‌ನಗರ ಘಟಕವು ದಿನಕ್ಕೆ 14 ಲಕ್ಷ ಬ್ಯಾರೆಲ್ ತೈಲ ಸಂಸ್ಕರಿಸುವ ಸಾಮರ್ಥ್ಯ ಹೊಂದಿರುವ ವಿಶ್ವದ ಅತಿದೊಡ್ಡ 'ಸಿಂಗಲ್ ಸೈಟ್' ರಿಫೈನರಿ ಮಾತ್ರವಲ್ಲದೆ, 21.1ರಷ್ಟು ನೆಲ್ಸನ್ ಕಾಂಪ್ಲೆಕ್ಸಿಟಿ ಇಂಡೆಕ್ಸ್ (ಎನ್‌ಸಿಐ) ಹೊಂದಿರುವ ಜಗತ್ತಿನ ಏಕೈಕ ಅತ್ಯಾಧುನಿಕ ಸಂಸ್ಕರಣಾ ಕೇಂದ್ರವಾಗಿದೆ. ಇದು ಅತ್ಯಂತ ಹಗುರವಾದ 'ಸ್ವೀಟ್ ಕ್ರೂಡ್'ನಿಂದ ಹಿಡಿದು ಅತಿ ಭಾರವಾದ 'ಹೆವಿ ಸೋರ್‌ಕ್ರೂಡ್'ವರೆಗೆ ಒಟ್ಟು 216 ವಿವಿಧ ಮಾದರಿಯ ಕಚ್ಚಾ ತೈಲಗಳನ್ನು ಸಂಸ್ಕರಿಸಬಲ್ಲ ಜಾಗತಿಕ ಶ್ರೇಷ್ಠತೆಯನ್ನು ಹೊಂದಿದೆ. ಭಾರತವನ್ನು ಕೇವಲ ತೈಲ ಆಮದುದಾರನಾಗಿ ಮಾತ್ರವಲ್ಲದೆ ಶುದ್ಧೀಕರಿಸಿದ ತೈಲ ಉತ್ಪನ್ನಗಳ ಪ್ರಮುಖ ರಫ್ತುದಾರನನ್ನಾಗಿ ಈ ಘಟಕ ಬದಲಾಯಿಸಿದೆ.

ಭಾರತವೂ ರಷ್ಯಾಕ್ಕೆ ಅನಿವಾರ್ಯ

ಮಾರ್ಚ್ 2026ರಲ್ಲಿ ಭಾರತವು ರಷ್ಯಾದಿಂದ ದಿನಕ್ಕೆ 26 ಲಕ್ಷ ಬ್ಯಾರೆಲ್ ತೈಲವನ್ನು ಆಮದು ಮಾಡಿಕೊಳ್ಳುವ ಮೂಲಕ ಐತಿಹಾಸಿಕ ದಾಖಲೆ ನಿರ್ಮಿಸಿದೆ. ಉಭಯ ರಾಷ್ಟ್ರಗಳ ನಡುವಿನ ಶೇ.96 ವ್ಯಾಪಾರ ವ್ಯವಹಾರವು ಡಾಲರ್‌ಬಳಸದೆ ರಾಷ್ಟ್ರೀಯ ಕರೆನ್ಸಿಗಳಲ್ಲೇ ನಡೆಯುತ್ತಿದ್ದು, ಇದು ಭಾರತದ ವಿದೇಶಿ ವಿನಿಮಯದ ಮೇಲಿನ ಒತ್ತಡವನ್ನು ಗಣನೀಯವಾಗಿ ತಗ್ಗಿಸಿದೆ. ರಷ್ಯಾದ 'ಉರಲ್ಸ್ ಕ್ರೂಡ್' ಬೆಲೆಯಲ್ಲಿ ಅಗ್ಗವಾಗಿರುವುದಲ್ಲದೆ ಭಾರತೀಯ ರಿಫೈನರಿಗಳ ತಾಂತ್ರಿಕ ಅಗತ್ಯಗಳಿಗೆ ಹೆಚ್ಚು ಹೊಂದಿಕೆಯಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಅಮೆರಿಕದ ತೈಲ ಸಾಗಾಟ ವೆಚ್ಚವು ಸೌದಿ ಅರೇಬಿಯಾಕ್ಕಿಂತ 4 ಪಟ್ಟು ಅಧಿಕ ಮಾತ್ರವಲ್ಲ, ರಾಜಕೀಯ ನಿರ್ಬಂಧಗಳ ಅಪಾಯವೂ ಇದ್ದೇ ಇರುತ್ತದೆ. ಅಂತಾರಾಷ್ಟ್ರೀಯ ಒತ್ತಡಗಳ ನಡುವೆಯೂ ರಷ್ಯಾದೊಂದಿಗಿನ ವ್ಯಾಪಾರ ಸಂಬಂಧವನ್ನು ಮುಂದುವರಿಸಿರುವ ಭಾರತದ ನಿರ್ಧಾರ, ಇಂಧನ ಕ್ಷೇತ್ರದಲ್ಲಿ ದೇಶದ ಕಾರ್ಯತಂತ್ರದ ಸ್ವಾಯತ್ತತೆಯನ್ನು ಸ್ಪಷ್ಟವಾಗಿ ಸಾಬೀತುಪಡಿಸಿದೆ.

ಹೋರ್ಮುಜ್ ತೆರೆದರೂ ಬಿಕ್ಕಟ್ಟು ಮುಗಿಯದು

ಹೋರ್ಮುಜ್ ಜಲಸಂಧಿ ತಕ್ಷಣಕ್ಕೆ ತೆರೆದರೂ ಜಾಗತಿಕ ಇಂಧನ ಬಿಕ್ಕಟ್ಟು ಸುಲಭವಾಗಿ ನೀಗದು, ಏಕೆಂದರೆ ಮಧ್ಯಪ್ರಾಚ್ಯದ ಇಂಧನ ಮೂಲಸೌಕರ್ಯಗಳಿಗೆ ಉಂಟಾಗಿರುವ ಹಾನಿ ಅತ್ಯಂತ ಭೀಕರವಾಗಿದೆ. ಜಗತ್ತಿನ ಅತಿದೊಡ್ಡ ಎಲ್‌ಎನ್‌ಜಿ ಕೇಂದ್ರವಾದ ಕತಾರ್‌ನ ರಾಸ್ ಲಫಾನ್ ಮಾರ್ಚ್ 2ರ ದಾಳಿಯಿಂದ ಧ್ವಂಸವಾಗಿದ್ದು, ಅದನ್ನು ಮರುಸ್ಥಾಪಿಸಲು ಕನಿಷ್ಠ 3 ರಿಂದ 5 ವರ್ಷಗಳು ಬೇಕಾಗುತ್ತವೆ. ಸುಮಾರು 40ಕ್ಕೂ ಹೆಚ್ಚು ತೈಲ ಮತ್ತು ಅನಿಲ ಸ್ಥಾವರಗಳು ಹಾನಿಗೆ ಒಳಗಾಗಿ ಜಗತ್ತಿನ ಶೇ.20 ತೈಲ ಪೂರೈಕೆ ಸ್ಥಗಿತಗೊಂಡಿದೆ. ಕೇವಲ ಜಲಸಂಧಿ ತೆರೆಯುವುದರಿಂದ ತೈಲ ಪೂರೈಕೆ ಆರಂಭವಾಗದು; ಸಮುದ್ರದಲ್ಲಿನ ಜಲಬಾಂಬ್‌ಗಳ ತೆರವು, ಹಡಗು ವಿಮೆ ಸುಧಾರಣೆ ಮತ್ತು ಸರಕು ಸಾಗಣೆ ಕಂಪನಿಗಳ ಪುನರಾರಂಭಕ್ಕೆ ತಿಂಗಳುಗಳ ಬದಲಿಗೆ ವರ್ಷಗಳೇ ಹಿಡಿಯುವುದರಿಂದ ಮಧ್ಯಪ್ರಾಚ್ಯವು ತನ್ನ ಹಳೆಯ ಇಂಧನ ಪ್ರಾಬಲ್ಯವನ್ನು ಮರಳಿ ಪಡೆಯುವುದು ಸದ್ಯಕ್ಕೆ ಕಠಿಣ.

ಭಾರತದ ಭರವಸೆಯ ಬಂಗಾಳ ಕೊಲ್ಲಿ

ಭಾರತದ ಪಾಲಿಗೆ ಬಂಗಾಳ ಕೊಲ್ಲಿಯು ಹೊಸ ಇಂಧನ ನಿಧಿಯಾಗಿ ಮಾರ್ಪಡುತ್ತಿದ್ದು, ಅಂಡಮಾನ್ ಮತ್ತು ಕೃಷ್ಣಾ-ಗೋದಾವರಿ (ಕೆ.ಜಿ.) ಜಲಾನಯನ ಪ್ರದೇಶಗಳಲ್ಲಿ ನೈಸರ್ಗಿಕ ಅನಿಲ ಮತ್ತು ತೈಲ ಉತ್ಪಾದನೆ ಆರಂಭವಾಗಿದೆ. ಎಸ್ ಆ್ಯಂಡ್ ಪಿ ಗ್ಲೋಬಲ್ ವರದಿಯಂತೆ ಮಹಾನದಿ, ಅಂಡಮಾನ್, ಬೆಂಗಾಲ್ ಮತ್ತು ಕೇರಳ-ಕೊಂಕಣದಂತಹ ಕೇವಲ 4 ಬೇಸಿನ್‌ಗಳಲ್ಲೇ ಅಂದಾಜು 22 ಬಿಲಿಯನ್ ಬ್ಯಾರೆಲ್ ಭೂವೈಜ್ಞಾನಿಕ ಸಾಮರ್ಥ್ಯವಿದೆ. ಭಾರತದ ಒಟ್ಟು 26 ಸೆಡಿಮೆಂಟರಿ ಬೇಸಿನ್‌ಗಳಲ್ಲಿ ಸುಮಾರು 305 ಬಿಲಿಯನ್ ಬ್ಯಾರೆಲ್ ತೈಲಕ್ಕೆ ಸಮಾನವಾದ (41.87 ಬಿಲಿಯನ್ ಟನ್) ಹೈಡ್ರೋಕಾರ್ಬನ್ ಸಾಮರ್ಥ್ಯವಿದ್ದು, ಇದು ಅಂಕಿಅಂಶಗಳಲ್ಲಿ ಜಗತ್ತಿನ ಅತಿ ದೊಡ್ಡ ನಿಕ್ಷೇಪ ಹೊಂದಿರುವ ವೆನೆಜುವೆಲಾಗೆ ಸರಿಸಮನಾಗಿದೆ.

ಆದರೆ 303 ಬಿಲಿಯನ್ ಬ್ಯಾರೆಲ್ ಪ್ರಮಾಣೀಕರಿಸಿದ ನಿಕ್ಷೇಪಗಳನ್ನು ಹೊಂದಿರುವ ವೆನೆಜುವೆಲಾ, ರಾಜಕೀಯ ಅಸ್ಥಿರತೆ ಮತ್ತು ನಿರ್ಬಂಧಗಳಿಂದಾಗಿ ತನ್ನ ಸಾಮರ್ಥ್ಯದ ಕಾಲು ಭಾಗದಷ್ಟು (ದಿನಕ್ಕೆ 9.60 ಲಕ್ಷ ಬ್ಯಾರೆಲ್) ಮಾತ್ರ ಉತ್ಪಾದಿಸುತ್ತಿದೆ. ಸಿದ್ಧ ನಿಕ್ಷೇಪವಿದ್ದೂ ಅದನ್ನು ಬಳಸಿಕೊಳ್ಳಲಾಗದ ವೆನೆಜುವೆಲಾ ಒಂದೆಡೆಯಾದರೆ, ಇನ್ನೂ ಅನ್ವೇಷಣೆಯಾಗದ 305 ಬಿಲಿಯನ್ ಬ್ಯಾರೆಲ್ ಭೂವೈಜ್ಞಾನಿಕ ಸಾಮರ್ಥ್ಯ ಹೊಂದಿರುವ ಭಾರತ ಮತ್ತೊಂದೆಡೆ - ವ್ಯತ್ಯಾಸ ಕೇವಲ ಸಂಪತ್ತಿನದಲ್ಲ, ಆಡಳಿತ ಮತ್ತು ತಾಂತ್ರಿಕ ಸಾಮರ್ಥ್ಯದ್ದು. ದಕ್ಷ ನಿರ್ವಹಣೆ ಮತ್ತು ಜಾಮ್‌ನಗರದಂತಹ ವಿಶ್ವದರ್ಜೆಯ ರಿಫೈನಿಂಗ್ ಸೌಲಭ್ಯದ ಬಲದಿಂದ ಈ ಸಂಪತ್ತನ್ನು ಹೊರತೆಗೆದರೆ, ಭಾರತವು ತೈಲ ಆಮದುದಾರ ದೇಶದಿಂದ ರಫ್ತುದಾರ ದೇಶವಾಗಿ ಬದಲಾಗುವ ಆಶಾವಾದ ಇಂದು ಹೆಚ್ಚು ವಾಸ್ತವಕ್ಕೆ ಹತ್ತಿರವಾಗುತ್ತದೆ.

ಸಮೀಕ್ಷೆ ಸುಳ್ಳು, ಅಸ್ಸಾಂನಲ್ಲಿ ಕಾಂಗ್ರೆಸ್‌ಗೆ ಗೆಲುವು: ಡಿಕೆಶಿ

ಚುನಾವಣೆ ಅತ್ಯುತ್ತಮವಾಗಿ ಎದುರಿಸಿದ್ದೇವೆ

ಗುವಾಹಟಿ: 'ನಾವು ಅಸ್ಸಾಂ ಚುನಾವಣೆಯನ್ನು ಅತ್ಯುತ್ತಮವಾಗಿ ಎದುರಿಸಿದ್ದೇವೆ. ಚುನಾವಣೋತ್ತರ ಸಮೀಕ್ಷೆ ಬಗ್ಗೆ ಮಾಧ್ಯಮಗಳು ಏನೇ ಹೇಳಲಿ, ವೈಯಕ್ತಿಕವಾಗಿ ನಾನದನ್ನು ನಂಬುವುದಿಲ್ಲ. ಅಸ್ಸಾಂ ಜನರಲ್ಲಿ ಅಪಾರ ಭಯ ಮನೆಮಾಡಿದೆ. ಹೀಗಿದ್ದಾಗ ಯಾರು ತಾನೇ ತಾವು ಯಾರ ಪರಮತ ಚಲಾಯಿಸಿದ್ದೇವೆ ಎಂದು ಧೈರ್ಯವಾಗಿ ಹೇಳುತ್ತಾರೆ?' ಎಂದು ಅಸ್ಸಾಂ ಚುನಾವಣೆಯಲ್ಲಿ ಕಾಂಗ್ರೆಸ್ ವೀಕ್ಷಕರೂ ಆಗಿರುವ ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶನಿವಾರ ಪ್ರಶ್ನಿಸಿದ್ದಾರೆ.





ಇಲ್ಲಿ ಮಿತ್ರಪಕ್ಷಗಳ ನಾಯಕರ ಜತೆ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಮಗೆ ನಮ್ಮ ಆಂತರಿಕ ಸಮೀಕ್ಷೆಯಲ್ಲಿ ವಿಶ್ವಾಸವಿದೆ. ನಾವು ಸಾಕಷ್ಟು ಮಾಹಿತಿ ಸಂಗ್ರಹಿಸಿದ್ದೇವೆ. ಬಿಜೆಪಿ ಶಾಸಕರು, ಮಂತ್ರಿಗಳು ಸೇರಿದಂತೆ ಹಲವು ಅಭ್ಯರ್ಥಿಗಳನ್ನು ಭೇಟಿಯಾಗಿದ್ದೇವೆ. ಅವರು ತಾವು ಚುನಾವಣೆ ಗೆಲ್ಲುತ್ತೇವೆ ಎಂಬ ಆತ್ಮವಿಶ್ವಾಸವನ್ನೇ ಕಳೆದುಕೊಂಡಿದ್ದಾರೆ. ಅವರಲ್ಲಿ ಕೆಲವರು ನಮ್ಮ ನಾಯಕರನ್ನು ಮತ್ತು ಅಭ್ಯರ್ಥಿಗಳನ್ನು ಸಂಪರ್ಕಿಸಲು ಯತ್ನಿಸುತ್ತಿದ್ದಾರೆ' ಎಂದು ತಿಳಿಸಿದರು.

ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ಕೃಷ್ಣ ಸೇರಿ 6 ಮಂದಿ ಆರೋಪ ಮುಕ್ತ

ಪ್ರೊಬೆಷನರಿ ಅಧಿಕಾರಿಗಳ ಹುದ್ದೆ ಆಯ್ಕೆ ಕೇಸ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಡಾ। ಎಚ್.ಎನ್.ಕೃಷ್ಣ ಸೇರಿ ಇತರ ಆರು ಮಂದಿ ವಿರುದ್ಧ ರಾಜ್ಯ ಅಪರಾಧ ತನಿಖಾ ದಳ (ಸಿಐಡಿ) ಮಾಡಿದ್ದ ಪ್ರೊಬೆಷನರಿ ಅಧಿಕಾರಿಗಳ ಹುದ್ದೆಗಳ ಆಯ್ಕೆಯಲ್ಲಿ ಅಧಿಕಾರ ದುರುಪಯೋಗ ಆರೋಪಗಳಿಂದ ನ್ಯಾಯಾಲಯ ಅವರನ್ನು ಮುಕ್ತಗೊಳಿಸಿದೆ. ಬೆಂಗಳೂರಿನ 1ನೇ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಏ.30 ರಂದು ಈ ಬಗ್ಗೆ ತೀರ್ಪು ನೀಡಿದ್ದು ಆರೋಪಿಗಳ ವಿರುದ್ಧ ಮಾಡಿದ್ದ ಆರೋಪಗಳನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ನ್ಯಾಯಾಧೀಶರು ತಮ್ಮ 54 ಪುಟಗಳ ತೀರ್ಪಿನಲ್ಲಿ ತಿಳಿಸಿದ್ದಾರೆ.

(ಸಿಐಡಿ) 2012ರಲ್ಲಿ ನ್ಯಾಯಾಲಯದ ಮುಂದೆ ಆರೋಪ ಪಟ್ಟಿ ಸಲ್ಲಿಸಿ ಡಾ.ಎಚ್.ಎನ್. ಕೃಷ್ಣ ಅವರು 1998-99ನೇ ಸಾಲಿನಲ್ಲಿ ನಡೆದ ಪ್ರೊಬೆಷನರಿ ಅಧಿಕಾರಿಗಳ ಹುದ್ದೆಗಳ ಆಯ್ಕೆಯಲ್ಲಿ ಅಧಿಕಾರ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಆರೋಪಿಸಿತ್ತು. ಈ ಬಗ್ಗೆ 2012 ರಿಂದ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿತ್ತು.

ಈ ಪ್ರಕರಣದಲ್ಲಿ ಖುಲಾಸೆಗೊಂಡಿರುವ 2 ಮತ್ತು 3ನೇ ಆರೋಪಿಗಳಾದ ಆಶಾ ಪರ್ವೀನ್ ಮತ್ತು ಸಲ್ಮಾ ಫಿರ್ದೋಸ್ ಅವರು ಖೊಟ್ಟಿ ದಾಖಲೆಗಳನ್ನು ಸಲ್ಲಿಸಿದ್ದಾರೆಂದು ಆರೋಪಿಸಲಾಗಿತ್ತು. ಇತರೆ ಆರೋಪಿಗಳಾದ ಕೆ.ನರಸಿಂಹ, ಪಿ. ಗೋಪಿಕೃಷ್ಣ ಮತ್ತು ಎಂ. ಬಿ. ಬಣಕಾರ್‌ಅವರು ಲೋಕಸೇವಾ ಆಯೋಗದ ಸಿಬ್ಬಂದಿಯಾಗಿದ್ದು, ಪ್ರಕರಣದಲ್ಲಿ ಅಧ್ಯಕ್ಷರಿಗೆ ಅಪರಾಧಿಕ ಕೃತ್ಯಗಳನ್ನು ಎಸಗಲು ಸಹಕರಿಸಿದ್ದಾರೆ ಎಂದು ಆರೋಪಿಸಲಾಗಿತ್ತು. ಈ ಎಲ್ಲ ಆರೋಪಗಳನ್ನು ಸಾಬೀತುಪಡಿಸುವಲ್ಲಿ ಸಿಐಡಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ತೀರ್ಪಿನಲ್ಲಿ ತಿಳಿಸಿರುವ ನ್ಯಾಯಾಧೀಶರು ಎಲ್ಲ ಆರೋಪಿಗಳನ್ನು ಆರೋಪಗಳಿಂದ ಖುಲಾಸೆಗೊಳಿಸಿದ್ದಾರೆ.

ಕಲಬುರಗಿಯಲ್ಲಿ ಈ ಬೇಸಿಗೆಯ ದಾಖಲೆ 45 ಡಿಗ್ರಿ ತಾಪಮಾನ

↙ ಮೊದಲ ಪುಟದಿಂದ

ಜಿಲ್ಲೆಯಲ್ಲಿ ಶನಿವಾರ ಬಹುತೇಕ ತಾಲೂಕುಗಳಲ್ಲಿ ತಾಪಮಾನ 44 ಡಿಗ್ರಿಗಿಂತ ಅಧಿಕ ಪ್ರಮಾಣದಲ್ಲಿಯೇ ದಾಖಲಾಗಿತ್ತು. ಜಿಲ್ಲೆಯಾದ್ಯಂತ ಬಿಸಿಗಾಳಿ ಮುಂದುವರಿದಿದ್ದು, ಜನರು ಬೆಳಗ್ಗೆ 10 ಗಂಟೆಯ ನಂತರ ಸಂಜೆ 5 ಗಂಟೆವರೆಗೂ ಮನೆಯಿಂದ ಹೊರ ಬರಲು ಹೆದರುತ್ತಿದ್ದಾರೆ.

ಇದಕ್ಕೂ ಮೊದಲು, ಏ.22ರಿಂದ 3 ದಿನ ಕಲಬುರಗಿಯಲ್ಲಿ ಬಿಸಿಗಾಳಿಯ ಅಲೆ ಎದುರಾಗಿತ್ತು. ಆಗಲೂ ತಾಪಮಾನ 45.4 ಡಿಗ್ರಿ ದಾಖಲಾಗಿ ಅದು ಏಪ್ರಿಲ್ ತಿಂಗಳ 53 ವರ್ಷಗಳ ದಾಖಲೆಯನ್ನೇ ಮುರಿದಿತ್ತು. ಶನಿವಾರ ಕೂಡ 45.4 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗುವ ಮೂಲಕ ಮತ್ತೊಮ್ಮೆ ರಾಜ್ಯದಲ್ಲೇ ಈ ಬೇಸಿಗೆಯ ಅತ್ಯಧಿಕ ತಾಪಮಾನವಾಗಿ ಗಮನ ಸೆಳೆದಿದೆ.

ಸುರಪುರದಲ್ಲಿ ಬಿಸಿಲ ತಾಪಕ್ಕೆ ಕಾರ್ಮಿಕ ಸಾವು

• **ಕನ್ನಡಪ್ರಭ ವಾರ್ತೆ** ಸುರಪುರ

ಯಾದಗಿರಿ ಜಿಲ್ಲೆ ಸುರಪುರ ಸಮೀಪದ ಸತ್ಯಂಪೇಟೆ ಗ್ರಾಮದಲ್ಲಿ ಬಿಸಿಲ ತಾಪದಿಂದ ಕಾರ್ಮಿಕನೊಬ್ಬ ಮೃತಪಟ್ಟಿದ್ದಾನೆ.

ಸಿದ್ದಪ್ಪ ಶರಣಪ್ಪ ಕೊಂಡಗೂಳಿ (30) ಮೃತರು. ಸುರಪುರದ ಹಸನಾಪುರ ಪೆಟ್ರೋಲ್ ಬಂಕ್ ಸಮೀಪ ಕೂಲಿ ಕೆಲಸಕ್ಕೆ ತೆರಳಿದ್ದ ಸಿದ್ದಪ್ಪ, ಬಿಸಿಲಿನ ತಾಪದಿಂದ ಆಯಾಸಗೊಂಡು ಮನೆಗೆ ಮರಳಿದ ಕೆಲವೇ ಕ್ಷಣಗಳಲ್ಲಿ ಬಳಲಿ ಕುಸಿದು ಬಿದ್ದರು. ತಕ್ಷಣವೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಆ ವೇಳೆಗಾಗಲೇ ಕೊನೆಯುಸಿರೆಳೆದಿದ್ದರು. ಸುರಪುರದಲ್ಲಿ ಶನಿವಾರ 42 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು.

ವಿನಯ ಕುಲಕರ್ಣಿ ಶಾಸಕತ್ವ ರದ್ದು

↙ ಮೊದಲ ಪುಟದಿಂದ

ಶಿಕ್ಷೆ ಪ್ರಕಟವಾದ ದಿನದಿಂದಲೇ ವಿನಯ್ ಕುಲಕರ್ಣಿ ಅವರು ವಿಧಾನಸಭೆಯ ಸದಸ್ಯತ್ವದಿಂದ ಅನರ್ಹರಾಗಿದ್ದಾರೆ. ಈ ಶಿಕ್ಷೆಗೆ ನ್ಯಾಯಾಲಯ ತಡೆಯಾಜ್ಞೆ ನೀಡದಿದ್ದಲ್ಲಿ 1951ರ ಜನತಾ ಪ್ರಾತಿನಿಧ್ಯ ಕಾಯ್ದೆ ಸೆಕ್ಷನ್ 8 ಮತ್ತು ಸಂವಿಧಾನದ ಸೆಕ್ಷನ್ 191(1) (ಇ) ಪ್ರಕಾರ ಈ ಅನರ್ಹತೆ ವಿನಯ್ ಕುಲಕರ್ಣಿ ಶಿಕ್ಷೆ ಅನುಭವಿಸಿ ಬಿಡುಗಡೆಯಾದ ಆರು ವರ್ಷಗಳ ಅವಧಿಗೆ ಮುಂದುವರೆಯಲಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

ಬಜೆಟ್: ಮೇ ಅಂತ್ಯದೊಳಗೇ ಜಾರಿ

↙ ಮೊದಲ ಪುಟದಿಂದ

ಬಜೆಟ್ ಘೋಷಣೆಗಳ ಅನುಷ್ಠಾನ ಆಯಾ ವರ್ಷವೇ ಆಗಬೇಕು. ಈ ಬಾರಿಯ ಬಜೆಟ್‌ನಲ್ಲಿ 218 ಹೊಸ ಕಾರ್ಯಕ್ರಮಗಳು ಸೇರಿದಂತೆ ಒಟ್ಟು 565 ಘೋಷಣೆಗಳು ಮಾಡಿದ್ದೇವೆ. ಈ ಪೈಕಿ ಈಗಾಗಲೇ ಹಣಕಾಸು ಇಲಾಖೆಯಿಂದ 13 ಘೋಷಣೆಗಳಿಗೆ ಅನುಮೋದನೆ ದೊರೆತಿದೆ. ಮೇ ತಿಂಗಳ ಒಳಗಾಗಿ ಎಲ್ಲಾ ಘೋಷಣೆಗಳ ಬಗ್ಗೆ ಹಣಕಾಸು ಇಲಾಖೆಯ ಅನುಮೋದನೆ ಪಡೆದು ಸರ್ಕಾರಿ ಆದೇಶಗಳನ್ನು ಮಾಡಿ, ಅನುಷ್ಠಾನ ಕಾರ್ಯ ಆರಂಭಿಸಬೇಕು. ಇಲ್ಲವಾದಲ್ಲಿ 2026-27ರಲ್ಲಿ ಎಲ್ಲ ಘೋಷಣೆಗಳ ಅನುಷ್ಠಾನ ಸಾಧ್ಯವಿಲ್ಲ. ಯಾವುದೇ ತೊಂದರೆಗಳು ಇದ್ದಲ್ಲಿ, ಮುಖ್ಯ ಕಾರ್ಯದರ್ಶಿ ಅವರು ಹಾಗೂ ನನ್ನ ಗಮನಕ್ಕೆ ತನ್ನಿ. ಇಲ್ಲದಿದ್ದರೆ ಆಯಾ ಕಾರ್ಯದರ್ಶಿಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.



ಬಾಕಿ ಕಡಿತಗಳ ಶೀಘ್ರ ವಿಲೇವಾರಿ ಮಾಡಿ: ಇಲಾಖೆಗಳಲ್ಲಿ 60 ದಿನಗಳ ಮೇಲೆ ಬಾಕಿ ಇರುವ ಕಡತಗಳು ಸುಮಾರು 10000 ಕ್ಕಿಂತ ಹೆಚ್ಚಿವೆ. ಅವುಗಳನ್ನು ಶೀಘ್ರ ವಿಲೇವಾರಿ ಮಾಡಲು ಕ್ರಮ ವಹಿಸಿ. ಯಾವುದೇ ಹೊಸ ಕಡತಗಳನ್ನೂ ಬಾಕಿ ಉಳಿಸಿಕೊಳ್ಳದಂತೆ ಕಾನೂನು ರೀತ್ಯ ಪರಿಶೀಲಿಸಿ ವಿಲೇವಾರಿ ಮಾಡಬೇಕು. ಕಂದಾಯ ಇಲಾಖೆಯಲ್ಲೇ ಹೆಚ್ಚು ಕಡತಗಳಿದ್ದು ಅವುಗಳನ್ನು ವಿಲೇವಾರಿಗೆ ಕ್ರಮ ವಹಿಸಬೇಕು ಎಂದು ಮುಖ್ಯಮಂತ್ರಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

24,300 ಹುದ್ದೆಗಳ ಭರ್ತಿ ತಕ್ಷಣ ಕ್ರಮ ವಹಿಸಿ

ಆರ್ಥಿಕ ಇಲಾಖೆಯಿಂದ 24,300 ಹುದ್ದೆಗಳ ಭರ್ತಿಗೆ ಮಂಜೂರಾತಿ ನೀಡಲಾಗಿದೆ. ಈ ಹುದ್ದೆಗಳ ಭರ್ತಿಗೆ ತಕ್ಷಣ ಕ್ರಮ ವಹಿಸುವಂತೆ ಇದೇ ವೇಳೆ ಮುಖ್ಯಮಂತ್ರಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ ವೃಂದದಲ್ಲಿ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗದೆ ಬಾಕಿಯಿರುವ 32132 ಹುದ್ದೆಗಳಿವೆ. ಕೆಲವು ಇಲಾಖೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿ ಪರಿಷ್ಕರಣೆ ಬಾಕಿಯಿದ್ದು, ಇದನ್ನು ಆದಷ್ಟು ಬೇಗನೆ ಮುಗಿಸಬೇಕು. ಗ್ರೂಪ್ ಎ, ಬಿ, ಸಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಶೀಘ್ರವಾಗಿ ಆಗಬೇಕು ಎಂದು ತಿಳಿಸಿದರು.

ಕುಡಿಯುವ ನೀರಿಗೆ ತೊಂದರೆ ಆಗಕೂಡದು

ಇದೇ ವೇಳೆ, ಮುಖ್ಯಮಂತ್ರಿ ಅವರು ಈ ವರ್ಷ ಮಳೆ ಶೇ.5ರಷ್ಟು ಮಳೆ ಕಡಿಮೆಯಾಗುವ ಸಾಧ್ಯತೆಯಿದ್ದು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಮ್ಮ ವ್ಯಾಪ್ತಿಯ ಜಿಲ್ಲೆಯಲ್ಲಿನ ಕುಡಿಯುವ ನೀರಿನ ಪರಿಸ್ಥಿತಿ ಬಗ್ಗೆ ನಿರಂತರ ನಿಗಾ ವಹಿಸಬೇಕು. ಈ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜೊತೆ ಸಭೆ ನಡೆಸಬೇಕು. ತಮ್ಮ ಉಸ್ತುವಾರಿಯಲ್ಲಿನ ಜಿಲ್ಲೆಯ ಸಮಸ್ಯೆಗಳನ್ನು ಬಗೆಹರಿಸುವುದು ಆಯಾ ಕಾರ್ಯದರ್ಶಿಗಳ ಜವಾಬ್ದಾರಿಯಾಗಿದೆ. ಯಾವ ಕಾರಣಕ್ಕೂ ಕುಡಿವ ನೀರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಎಚ್ಚರಿಕೆ ನೀಡಿದ್ದಾರೆ.


ಕುಂದುಕೊರತೆ ಅರ್ಜಿ ವಿಲೇ ಮಾಡಿ: ರಾಜ್ಯಮಟ್ಟದ ಎರಡು ಜನಸ್ಪಂದನಾ ಸಭೆಯಲ್ಲಿ ಸ್ವೀಕರಿಸಲಾಗಿದ್ದ 15334 ಸ್ವೀಕೃತಿಗಳ ಪೈಕಿ 15295 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. 45 ಅರ್ಜಿಗಳು ಬಾಕಿ ಇವೆ. ಅವುಗಳನ್ನು ತುರ್ತಾಗಿ ವಿಲೇವಾರಿ ಮಾಡಿ. ವಿಲೇವಾರಿ ಸಾಧ್ಯವಾಗದಿದ್ದರೆ ಹಿಂಬರಹ ನೀಡಿ ಎಂದು ಸೂಚಿಸಿದರು. ಇನ್ನು, ಸಾರ್ವಜನಿಕ ಕುಂದುಕೊರತೆಯಡಿ 3,27,052 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, 3,17,576 ವಿಲೇವಾರಿ ಮಾಡಲಾಗಿದೆ. ಆದರೆ, 1828 ಅರ್ಜಿಗಳ ವಿಲೇವಾರಿ ಮಾತ್ರ ನಿಗದಿತ ಕಾಲಾವಧಿಯಲ್ಲಿ ಮುಗಿದಿದೆ. ಸಾರ್ವಜನಿಕರ ಕುಂದುಕೊರತೆಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡದಿದ್ದರೆ ಜನರಿಗೆ ಸರ್ಕಾರದ ಮೇಲಿನ ನಂಬಿಕೆಯೇ ಹೊರಟು ಹೋಗುತ್ತದೆ. ಇದಕ್ಕೆ ಅವಕಾಶ ಮಾಡಬಾರದು. ಇದೇ ರೀತಿ ಸಕಾಲ ಅಡಿ ಸ್ವೀಕರಿಸಲಾಗುವ ಅರ್ಜಿಗಳನ್ನು ಸಹ ಸಕಾಲದಲ್ಲಿಯೇ ವಿಲೇವಾರಿ ಮಾಡಬೇಕು ಎಂದು ಹೇಳಿದರು.

ಸಭೆಯಲ್ಲಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

ತುಮಕೂರಿನಲ್ಲಿ 20ರಂದು ಸಿದ್ದು ಸರ್ಕಾರದ 3ನೇ ವರ್ಷದ ಸಂಭ್ರಮ

↙ ಮೊದಲ ಪುಟದಿಂದ

ಈ ನಿಟ್ಟಿನಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆಗೆ ಸಂಬಂಧಿಸಿದ ಪ್ರಗತಿಯ ಪಟ್ಟಿ, ಶಂಕುಸ್ಥಾಪನೆ ಅಥವಾ ಉದ್ಘಾಟನೆ ಆಗಬೇಕಿರುವ ಮಾಹಿತಿ ಹಾಗೂ ಶಿಲಾನ್ಯಾಸ ಫಲಕಗಳ ಮಾಹಿತಿಯನ್ನು ಜಿಲ್ಲಾಡಳಿತಕ್ಕೆ ತಕ್ಷಣ ಒದಗಿಸಬೇಕು ಎಂದು ಸೂಚಿಸಿದರು.



ಜವಾಬ್ದಾರಿ ಹಂಚಿಕೊಳ್ಳಿ: ಬೃಹತ್ ಸಮಾವೇಶಕ್ಕೆ ರಾಜ್ಯಾದ್ಯಂತ ಫಲಾನುಭವಿಗಳು ಆಗಮಿಸುವುದರಿಂದ ಅವರಿಗೆ ಆಸನ ವ್ಯವಸ್ಥೆ, ಊಟ, ಸಾರಿಗೆ, ಇತ್ಯಾದಿ ವ್ಯವಸ್ಥೆಗಳನ್ನು ಯಾವುದೇ ಲೋಪವಿಲ್ಲದಂತೆ ನಿಭಾಯಿಸಬೇಕಿದೆ. ಇದಕ್ಕಾಗಿ ಜಿಲ್ಲಾಡಳಿತ ಉಪಸಮಿತಿಗಳನ್ನು ರಚಿಸಿ, ಜವಾಬ್ದಾರಿಗಳನ್ನು ಹಂಚುವಂತೆ ಸಚಿವರು ಸೂಚಿಸಿದರು.

ಜೂನಿಯರ್‌ಕಾಲೇಜು ಮೈದಾನದಲ್ಲಿ ಕಾರ್ಯಕ್ರಮ?: ಸಮಾವೇಶಕ್ಕೆ ಬಹುತೇಕ ಎಲ್ಲಾ ಸಚಿವರು, ಶಾಸಕರು, ಸಂಸದರೂ ಆಗಮಿಸಲಿದ್ದು, ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಕಾರ್ಯಕ್ರಮ ಆಯೋಜಿಸಲು ತಾತ್ಕಾಲಿಕವಾಗಿ ಚಿಂತನೆ ನಡೆಸಲಾಗಿದೆ. ಈ ಹಿನ್ನೆಲೆಯಲ್ಲಿ ಸಮಾರಂಭದ ವೇದಿಕೆ, ಫಲಾನುಭವಿಗಳಿಗೆ ಊಟದ ವ್ಯವಸ್ಥೆ, ವಸ್ತುಪ್ರದರ್ಶನ ಹಾಗೂ ಹೆಲಿಪ್ಯಾಡ್ ನಿರ್ಮಾಣ ಕುರಿತು ಜಿಲ್ಲಾಡಳಿತ ತುರ್ತಾಗಿ ಯೋಜನೆ ರೂಪಿಸಬೇಕಿದೆ. ಅಲ್ಲದೆ, ಶಂಕುಸ್ಥಾಪನೆ ಹಾಗೂ ಉದ್ಘಾಟನೆಗೊಳ್ಳಲಿರುವ ಇಲಾಖೆ ಕಟ್ಟಡಗಳ ಮಾಹಿತಿಯನ್ನು ಲೋಕೋಪಯೋಗಿ ಇಲಾಖೆಗೆ ನೀಡಬೇಕು. ಅವರು ಶಿಲಾನ್ಯಾಸ ಫಲಕಗಳ ಜಾಗ ಮತ್ತಿತರ ವ್ಯವಸ್ಥೆಯನ್ನು ಮಾಡಿಕೊಳ್ಳಲಿದ್ದಾರೆ ಎಂದು ಪರಮೇಶ್ವರ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್, ಅಪರ ಜಿಲ್ಲಾಧಿಕಾರಿ ಡಾ. ಎನ್.ತಿಪ್ಪೇಸ್ವಾಮಿ, ಅಧಿಕಾರಿಗಳು ಉಪಸ್ಥಿತರಿದ್ದರು.

ಕನ್ನಡಪ್ರಭ KANNADAPRABHA
ಪ್ರಧಾನ ಸಂಪಾದಕ: ರವಿ ಹೆಗಡೆ EDITOR IN CHIEF: RAVI HEGDE
ನಮ್ಮ ವಿಳಾಸ:
ಸಂಪಾದಕರು, ಕನ್ನಡಪ್ರಭ, ನಂ.36, ಕ್ರೆಸೆಂಟ್ ರಸ್ತೆ,
ಮಲ್ಲಿಗೆ ಆಸ್ಪತ್ರೆ ಎದುರು, ಶಿವಾನಂದ ವೃತ್ತ, ಬೆಂಗಳೂರು-560 001
PHONE: 080-68416300 FAX:080-68416354 email: editor@kannadaprabha.in epaper.nri@kannadaprabha.in facebook: SuvarnaNews twitter: @suvarnanewstv
Editor: RAVI HEGDE, Printed and Published by B.V. MALLIKARJUNAIAH on behalf of Kannada Prabha Publications Ltd., No.36, Crescent Road, Bangalore-560 001. Printed at Jagati Publications Ltd., Sy.No.172, Vagata Village, Jadigenahalli Hobli Hoskote Taluk, Bangalore Rural Dist., Pin-562 114 and also at Manipal Media Networks Ltd., at 23/4, Kempalinganahalli Nelamangala Taluk, Bangalore Rural Dist., Pin-562 123.

Bangalore
Vol.60, No. 122
RNI Reg.
No.RN.17012/67

ಸುದ್ದಿ ಸಿಂಚನ

ತಿರುಪತಿಗೆ 70 ಲಕ್ಷ ಕೆಜಿ ಕಲಬೆರಕೆ ತುಪ್ಪ ಪೂರೈಕೆ: ಏಕಸದಸ್ಯ ಸಮಿತಿ ವರದಿ

ಹೈದರಾಬಾದ್: ಹಿಂದಿನ ಸಿಎಂ ಜಗನ್ ಅವಧಿಯಲ್ಲಿ ತಿರುಪತಿ ದೇವಾಲಯದ ಲಡ್ಡು ಪ್ರಸಾದ ತಯಾರಿಕೆಗೆ ಕಲಬೆರಕೆ ತುಪ್ಪ ಪೂರೈಸಲಾಗಿತ್ತು ಎಂಬ ಆರೋಪದ ತನಿಖೆಗೆ ಆಂಧ್ರ ಸರ್ಕಾರ ರಚಿಸಿದ್ದ ನಿವೃತ್ತ ಐಎಎಸ್ ಅಧಿಕಾರಿ ಡಿ. ದಿನೇಶ್ ಕುಮಾರ್‌ಅಧ್ಯಕ್ಷತೆಯ ಏಕ ಸದಸ್ಯ ಸಮಿತಿಯು ಆಡಳಿತ ವೈಫಲ್ಯ ಪರಿಶೀಲಿಸಿ ವರದಿ ಸಲ್ಲಿಸಿದೆ. ಈ ವರದಿಯಲ್ಲಿ, 2019ರಿಂದ 2024ರವರೆಗೆ ದೇಗುಲದ ತುಪ್ಪ ಸಂಗ್ರಹಣೆಯಲ್ಲಿ ಗಣನೀಯ ಆಡಳಿತ ವೈಫಲ್ಯ, ನಿಯಮ ಉಲ್ಲಂಘನೆ ಮತ್ತು ಸಂಭಾವ್ಯ ಪಿತೂರಿ ನಡೆದಿದೆ. 70 ಲಕ್ಷ ಕೆ.ಜಿ.ಗಿಂತಲೂ ಹೆಚ್ಚು ತುಪ್ಪವನ್ನು ಕಡ್ಡಾಯ ಪರೀಕ್ಷೆಗಳಿಲ್ಲದೆ ಸ್ವೀಕರಿಸಿ ಲಡ್ಡು ತಯಾರಿಕೆಗೆ ಬಳಸಲಾಗಿದೆ ಎಂದು ಉಲ್ಲೇಖಿಸಲಾಗಿದೆ.

ವಡೋದರಾ ವಿವಿ ಪಠ್ಯದಲ್ಲಿ ಮೋದಿ ನಾಯಕತ್ವದ ಪಾಠ

ವಡೋದರಾ: ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವ ಹಾಗೂ ಅದರಿಂದ ಸಮಾಜದ ಮೇಲಾದ



ಪರಿಣಾಮಗಳ ಬಗೆಗಿನ 'ಮೋದಿ ತತ್ವ' ಎಂಬ ಪಾಠವನ್ನು ಇಲ್ಲಿನ ಮಹಾರಾಜ ಆಯಾಜಿರಾವ್ ವಿವಿಯು ಸಮಾಜಶಾಸ್ತ್ರದ ಪಠ್ಯಪುಸ್ತಕದಲ್ಲಿ ಸೇರಿಸಿದೆ. 'ದೇಶಭಕ್ತಿಯ ಸಮಾಜಶಾಸ್ತ್ರ' ಎಂಬ ಶೀರ್ಷಿಕೆಯಡಿ, ಮೋದಿ, ಛತ್ರಪತಿ ಶಿವಾಜಿ ಮಹಾರಾಜ್, ಸಯಾಜಿರಾವ್ ಗಾಯಕ್ವಾಡ್ ಸೇರಿದಂತೆ ಕೆಲ ಸಮಾಜ ಸುಧಾರಕರ ಬಗ್ಗೆ ಮಾಹಿತಿ ನೀಡಲಾಗಿದೆ.

ಪ್ರಸಾರ ಭಾರತಿ ಮುಖ್ಯಸ್ಥ ಹುದ್ದೆಗೆ ಪ್ರಸೂನ್ ಜೋಶಿ

ನವದೆಹಲಿ: ಖ್ಯಾತ ಗೀತರಚನಕಾರ, ಲೇಖಕ, ಸಂವಹನ ತಜ್ಞ, ಪದ್ಮಶ್ರೀ ಪುರಸ್ಕೃತ ಪ್ರಸೂನ್ ಜೋಶಿ ಅವರನ್ನು



ಭಾರತದ ಸಾರ್ವಜನಿಕ ಸೇವಾ ಪ್ರಸಾರಕ 'ಪ್ರಸಾರ ಭಾರತಿ'ಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. 2017ರಲ್ಲಿ ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಯ (ಸಿಬಿಎಫ್‌ಸಿ) ಅಧ್ಯಕ್ಷರ ಹುದ್ದೆಗೇರಿದ್ದ ಜೋಶಿ, ಅದಕ್ಕೂ ಮೊದಲು ಜಾಹೀರಾತು ಮತ್ತು ಮಾರ್ಕೆಟಿಂಗ್ ಏಜೆನ್ಸಿಯಾಗಿರುವ ಮೆಕ್‌ಕ್ಯಾನ್ ವರ್ಲ್ಡ್ ಗ್ರೂಪ್ ಇಂಡಿಯಾ ಸಿಇಒ ಆಗಿದ್ದರು. ತಮ್ಮ ಪ್ರಭಾವಶಾಲಿ ಬರವಣಿಗೆಗೆ ಹೆಸರಾಗಿರುವ ಇವರು, ಸಿನಿಮಾ ಮತ್ತು ಸಾರ್ವಜನಿಕ ಸಂವಹನ ಕ್ಷೇತ್ರಗಳಲ್ಲೂ ಕೆಲಸ ಮಾಡಿದ ಅನುಭವಿ.

ಆನ್ಲೈನ್ ಜಿಹಾದ್: ಐಸಿಸ್ ನಂಟಿನ ಉಗ್ರನ ಬಂಧನ

ಕಛ್: ಐಸಿಸ್ ಉಗ್ರ ಸಂಘಟನೆಯಿಂದ ಪ್ರಭಾವಿತನಾಗಿ, ಆನ್‌ಲೈನ್‌ನಲ್ಲಿ ಜಿಹಾದ್ ನಡೆಸುತ್ತಿದ್ದ ಉಗ್ರನನ್ನು ವಿಶೇಷ ಕಾರ್ಯಾಚರಣೆ ಪಡೆಯ ಪೊಲೀಸರು ಗುಜರಾತ್‌ನ ಕಛ್‌ನಲ್ಲಿ ಬಂಧಿಸಿದ್ದಾರೆ. ಭುಜ್ ತಾಲೂಕಿನ ಲೊಡಾಯಿ ಗ್ರಾಮದ ಫಕೀರಮ್ಮದ್ ಗಡ್ಡಾ ಬಂಧಿತ. ಆತ ಐಸಿಸ್ ಸಂಬಂಧಿತ ಪ್ರಚಾರ ಮತ್ತು ಇತರ ರಾಷ್ಟ್ರವಿರೋಧಿ ಚಟುವಟಿಕೆಗಳನ್ನು ಆನ್‌ಲೈನ್‌ನಲ್ಲಿ ಪ್ರಚಾರ ಮಾಡುತ್ತಿದ್ದ. ಪ್ರಚೋದನಕಾರಿ ಪೋಸ್ಟ್ ಪ್ರಕಟಿಸಲು ಇನ್‌ಸ್ಟಾಗ್ರಾಂ ಮತ್ತು ಫೇಸ್‌ಬುಕ್‌ನಲ್ಲಿ ಹಲವು ಖಾತೆಗಳನ್ನು ಹೊಂದಿದ್ದ. ರಾಷ್ಟ್ರದ ಸಾರ್ವಭೌಮತ್ವಕ್ಕೆ ಅಪಾಯವನ್ನು ಉಂಟುಮಾಡುವ ಚಟುವಟಿಕೆಗಳಾದ 'ಖಲೀಫೇಟ್' ಮತ್ತು 'ಜಿಹಾದ್' ಪರಿಕಲ್ಪನೆಯ ಕಡೆಗೆ ಜನರನ್ನು ಪ್ರಚೋದಿಸುತ್ತಿದ್ದ ಎಂದು ಆರೋಪಿಸಲಾಗಿದೆ.

ಇ.ಡಿ.ಯಿಂದ ಕಳೆದ ವರ್ಷ ₹81000 ಕೋಟಿ ಆಸ್ತಿ ಜಪ್ತಿ

ನವದೆಹಲಿ: 2025-26ನೇ ಹಣಕಾಸು ವರ್ಷದಲ್ಲಿ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯವು (ಇ.ಡಿ.) ದೇಶಾದ್ಯಂತ ದಾಖಲೆಯ ₹81000 ಕೋಟಿಗೂ ಹೆಚ್ಚಿನ ಮೌಲ್ಯದ ಆಸ್ತಿ ಜಪ್ತಿ ಮಾಡಿದೆ. ಆದರೆ ಇದೇ ಅವಧಿಯಲ್ಲಿ ಆರೋಪಿಗಳ ಬಂಧನ ಪ್ರಮಾಣ ಶೇ.27ರಷ್ಟು ಇಳಿಮುಖವಾಗಿದೆ! ಇ.ಡಿ. ವರದಿ ಅನ್ವಯ, ಮಾ.31ಕ್ಕೆ ಅಂತ್ಯಗೊಂಡ 2026ನೇ ಹಣಕಾಸು ವರ್ಷದಲ್ಲಿ ದೇಶಾದ್ಯಂತ 2982 ಕಡೆ ದಾಳಿ ನಡೆಸಿ 1080 ಕೇಸು ದಾಖಲಿಸಿ 712 ತಾತ್ಕಾಲಿಕ ಜಪ್ತಿ ಆದೇಶ ಹೊರಡಿಸಿದೆ. ಇದರ ಮೊತ್ತ 81422 ಕೋಟಿ ರು. ಆಗಿದೆ. ಹಿಂದಿನ ವರ್ಷ 461 ತಾತ್ಕಾಲಿಕ ಜಪ್ತಿ ಆದೇಶ ಹೊರಡಿಸಿತ್ತು. ಇದರ ಮೊತ್ತ 30036 ಕೋಟಿ ರು.ನಷ್ಟಿತ್ತು.

₹32000 ಕೋಟಿ ಆಸ್ತಿ ವಾಪಸ್: 2026ನೇ ವಿತ್ತ ವರ್ಷದಲ್ಲಿ ವಂಚನೆಗೊಳಗಾದವರಿಗೆ ಒಟ್ಟು ₹32000 ಕೋಟಿ ಗೂ ಹೆಚ್ಚು ಮೌಲ್ಯದ ಆಸ್ತಿಯನ್ನು ಇ.ಡಿ. ಹಿಂತಿರುಗಿಸಿದೆ. ಇನ್ನು 2025ರಲ್ಲಿ ಇ.ಡಿ. ಅಕ್ರಮ ಹಣ ವರ್ಗಾವಣೆ ಪ್ರಕರಣದಡಿ 214 ಮಂದಿ ಬಂಧಿಸಿತ್ತು. 2026ರಲ್ಲಿ ಈ ಪ್ರಮಾಣ 156ಕ್ಕೆ ಇಳಿದಿದೆ.

ಒಂದೂವರೆ ತಿಂಗಳ ಕುತೂಹಲಕ್ಕೆ ನಾಳೆ ತೆರೆ

ಬಂಗಾಳ, ತಮಿಳ್ನಾಡು, ಕೇರಳ, ಅಸ್ಸಾಂ, ಪುದುಚೇರಿ ವಿಧಾನಸಭಾ ಚುನಾವಣೆ ಫಲಿತಾಂಶ ಪ್ರಕಟ | ಸಮೀಕ್ಷೆ ಭವಿಷ್ಯ ಏನಾಗುತ್ತೆ?

ನವದೆಹಲಿ: ಕಳೆದ ಒಂದೂವರೆ ತಿಂಗಳಿನಿಂದ ದೇಶವ್ಯಾಪಿ ಚರ್ಚೆಯ ವಿಷಯವಾಗಿದ್ದ, ರಾಜಕೀಯ ವಾಕ್ಸಮರಕ್ಕೆ ವೇದಿಕೆಯಾಗಿದ್ದ, ಭಾರೀ ಕುತೂಹಲ ಕೆರಳಿಸಿರುವ ಪಂಚ ರಾಜ್ಯಗಳ ಚುನಾವಣೆಯ ಫಲಿತಾಂಶಕ್ಕೆ ಕ್ಷಣಗಣನೆ ಆರಂಭವಾಗಿದೆ. ಮೇ.4ರ ಸೋಮವಾರ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟಗೊಳ್ಳಲಿದೆ.

ಈಗಾಗಲೇ ಪ್ರಕಟಗೊಂಡಿರುವ ಚುನಾವಣಾ ಪೂರ್ವ ಮತ್ತು ಚುನಾಣೋತ್ತರ ಸಮೀಕ್ಷೆಗಳು ವಿವಿಧ ರೀತಿಯ ಭವಿಷ್ಯ ನುಡಿದಿರುವ ಕಾರಣ ಫಲಿತಾಂಶದ ಮೇಲಿನ ಕುತೂಹಲ ಹೆಚ್ಚಾಗಿದೆ. ಜೊತೆಗೆ ಈ ಫಲಿತಾಂಶ ಭವಿಷ್ಯದ ರಾಜಕೀಯ ಹೊಂದಾಣಿಕೆ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇರುವ ಕಾರಣ ಎಲ್ಲರ ಗಮನ ಮತ ಎಣಿಕೆ ಮೇಲೆ ನೆಟ್ಟಿದೆ.

ಬಂಗಾಳ: 294 ಸದಸ್ಯ ಬಲದ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಮೊದಲ ಬಾರಿಗೆ ಗೆದ್ದು ಅಧಿಕಾರಕ್ಕೆ ಬರಲಿದೆ ಎಂದು 6 ಸಮೀಕ್ಷೆಗಳು ಹೇಳಿದ್ದರೆ, 2 ಟಿಎಂಸಿ ಪರವಾಗಿ ಭವಿಷ್ಯ ನುಡಿದಿವೆ. ಕಳೆದ ಚುನಾವಣೆಯಲ್ಲೂ ಇಂಥದ್ದೇ ಭವಿಷ್ಯ ಬಂದಿದ್ದು, ಅದು ಉಲ್ಟಾ ಆಗಿತ್ತು. ಹೀಗಾಗಿ ಪ್ರಧಾನಿ ಮೋದಿ ಮತ್ತು ಬಂಗಾಳ ಸಿಎಂ ನಡುವಿನ ನೇರ ಹಣಾಹಣಿ ಎಂದೇ ಬಿಂಬಿತವಾಗಿರುವ ಪಶ್ಚಿಮ ಬಂಗಾಳ ಎಲ್ಲರ ಗಮನ ಸೆಳೆದಿದೆ.


ತಮಿಳನಾಡು: ಡಿಎಂಕೆ, ಅಣ್ಣಾಡಿಎಂಕೆ ಮತ್ತು ವಿಜಯ್‌ರ ಟಿವಿಕೆ ಪಕ್ಷದ ತ್ರಿಕೋನ ಹಣಾಹಣಿಗೆ ಸಾಕ್ಷಿಯಾದ 234 ಸ್ಥಾನ ಬಲದ ತಮಿಳ್ನಾಡಲ್ಲಿ ಕೆಲ ಸಮೀಕ್ಷೆಗಳು ಡಿಎಂಕೆ ಪರ, 2 ಸಮೀಕ್ಷೆ ವಿಜಯ್ ಪರ, 1 ಅಣ್ಣಾಡಿಎಂಕೆ ಪರ ಭವಿಷ್ಯ ನುಡಿದಿವೆ. ಚೊಚ್ಚಲ ಬಾರಿ ಗೆದ್ದು ವಿಜಯ್ ಕಿಂಗ್‌ಮೇಕರ್ ಆಗುವ ಸಾಧ್ಯತೆಯೂ ಇಲ್ಲದಿಲ್ಲ. ಹೀಗಾಗಿ ಸಾಕಷ್ಟು ಕುತೂಹಲ ಇದೆ.

ಕೇರಳ: 140 ಸ್ಥಾನ ಬಲದ ಕೇರಳದಲ್ಲಿ ಎಡಪಕ್ಷಗಳ ನೇತೃತ್ವದ ಎಲ್‌ಡಿಎಫ್ ಮೈತ್ರಿಕೂಟ ಅಧಿಕಾರ ಕಳೆದುಕೊಂಡು, ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರಕ್ಕೆ ಬರಬಹುದೆಂದು ಬಹುತೇಕ ಸಮೀಕ್ಷೆಗಳು ಹೇಳಿವೆ. ರಾಜ್ಯದಲ್ಲಿ ಬಿಜೆಪಿಯ ಶಕ್ತಿ ಹೆಚ್ಚಳ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ.

ಅಸ್ಸಾಂ, ಪುದುಚೇರಿ: 126 ಸ್ಥಾನಬಲದ ಅಸ್ಸಾಂನಲ್ಲಿ ಬಿಜೆಪಿ ಅಧಿಕಾರಕ್ಕೆ ಮರಳಲಿದೆ ಮತ್ತು 30 ಸ್ಥಾನ ಬಲದ ಪುದುಚೇರಿಯಲ್ಲಿ ಎನ್‌ಡಿಎ ಕೂಟದ ಭಾಗವಾದ ಎನ್‌ಆರ್ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಸಾಧ್ಯತೆ ಹೆಚ್ಚಿದೆ ಎಂದು ಬಹುತೇಕ ಸಮೀಕ್ಷೆಗಳು ಹೇಳಿವೆ.

ಬಿಜೆಪಿ ಅಭ್ಯರ್ಥಿ ಹೆಸರಿಗೆ ಟೇಪ್ ಹಚ್ಚಿ ಭಾರೀ ಗದ್ದಲ ಎಬ್ಬಿಸಿದ್ದ ಫಾಲ್ಟಾದಲ್ಲಿ ಮೇ 21ಕ್ಕೆ ಮರುಮತ

ಕೋಲ್ಕತಾ: ಬಿಜೆಪಿ ಅಭ್ಯರ್ಥಿಯ ಹೆಸರಿನ ಮೇಲೆ ಟೇಪ್ ಅಂಟಿಸಲಾಗಿದೆ ಎಂಬ ಗಂಭೀರ ಆರೋಪ ಕೇಳಿಬಂದ ಪಶ್ಚಿಮ ಬಂಗಾಳದ



ಫಾಲ್ಟಾ ಕ್ಷೇತ್ರದ ಎಲ್ಲಾ 285 ಬೂತ್‌ಗಳಲ್ಲಿ ಮೇ 21ಕ್ಕೆ ಮರು ಮತದಾನಕ್ಕೆ ಚುನಾವಣಾ ಆಯೋಗ ಆದೇಶಿಸಿದೆ. ಏ.28ರಂದು ಇಲ್ಲಿ ಮತದಾನದ ವೇಳೆ ಗಂಭೀರ ಚುನಾವಣಾ ಅಪರಾಧಗಳು ಮತ್ತು ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಅಸ್ತವ್ಯಸ್ತಗೊಳಿಸಿದ ಕಾರಣ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇಲ್ಲಿ ಮೇ 24ರಂದು ಮತ ಎಣಿಕೆ ನಡೆಯಲಿದೆ.

ಪಶ್ಚಿಮ ಬಂಗಾಳದಲ್ಲಿ 15 ಕಡೆ ಮರು ಮತದಾನ, ಮತ್ತೆ ಹಿಂಸೆ

ಕೋಲ್ಕತಾ: ಏ.29ರಂದು ನಡೆದ ಚುನಾವಣೆ ವೇಳೆ ಅಕ್ರಮದ ಆರೋಪ ಕೇಳಿಬಂದ ಕಾರಣ ದಕ್ಷಿಣ 24 ಪರಗಣ ಜಿಲ್ಲೆಯ 15 ಮತಗಟ್ಟೆಗಳಲ್ಲಿ ಶನಿವಾರ ಮರುಮತದಾನ ನಡೆದಿದ್ದು, ಶೇ.90ರಷ್ಟು ಮತದಾನವಾಗಿದೆ. ಕೆಲ ಕಡೆ ಟಿಎಂಸಿ ಮತ್ತು ಬಿಜೆಪಿ ಕಾರ್ಯಕರ್ತರ ಹೊಡೆದಾಟಕ್ಕೂ ಮತದಾನ ಸಾಕ್ಷಿಯಾಯಿತು.

ಸಿಎಂ ಮಮತಾಗೆ ಸುಪ್ರೀಂನಲ್ಲಿ ಹಿನ್ನಡೆ

ಮತ ಎಣಿಕೆಗೆ ಕೇಂದ್ರ ನೌಕರರ ನೇಮಕ ತಪ್ಪಲ್ಲ: ಸುಪ್ರೀಂ ಸ್ಪಷ್ಟನೆ
ಆಯೋಗದ ನಿರ್ಧಾರದಲ್ಲಿ ಮಧ್ಯಪ್ರವೇಶಿಸಲ್ಲ: ನ್ಯಾಯಾಲಯ

ನವದೆಹಲಿ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣಾ ಮತಎಣಿಕೆ ಕಾರ್ಯಕ್ಕೆ ಕೇಂದ್ರ ಸರ್ಕಾರಿ ನೌಕರರನ್ನು ನೇಮಿಸುವ ಚುನಾವಣಾ ಆಯೋಗದ ಆದೇಶದಲ್ಲಿ ಯಾವುದೇ ತಪ್ಪಿಲ್ಲ ಎಂದು ಸುಪ್ರೀಂಕೋರ್ಟ್ ಸ್ಪಷ್ಟಪಡಿಸಿದೆ. ಅಲ್ಲದೆ ಈ ಕುರಿತು ಆಯೋಗದ ಸುತ್ತೋಲೆ ವಿಚಾರದಲ್ಲಿ ತಾನು ಮಧ್ಯಪ್ರವೇಶಿಸಲ್ಲ. ಈ ವಿಚಾರವಾಗಿ ಹೆಚ್ಚಿನ ಆದೇಶದ ಅಗತ್ಯವಿಲ್ಲ ಎಂದು ಹೇಳಿದೆ. ಹೀಗಾಗಿ ಕೇಂದ್ರದ ನೌಕರರ ನೇಮಕ ಪ್ರಶ್ನಿಸಿದ್ದ ಪಶ್ಚಿಮ ಬಂಗಾಳದ ಟಿಎಂಸಿ ಸರ್ಕಾರಕ್ಕೆ ಭಾರೀ ಹಿನ್ನಡೆಯಾಗಿದೆ.

ಟಿಎಂಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಪಿ.ಎಸ್.ನರಸಿಂಹ ಮತ್ತು ನ್ಯಾ.ಜೋಯ್‌ಮಲ್ಯ ಬಾಗ್ಚಿ ಅವರಿದ್ದ ವಿಶೇಷ ಪೀಠ, 'ಏ.4ರಂದು ಮತಎಣಿಕೆಗೆ ಯಾರನ್ನು ನಿಯೋಜಿಸಬೇಕೆಂಬುದನ್ನು ನಿರ್ಧರಿಸುವ ಅಧಿಕಾರ ಚುನಾವಣಾ ಆಯೋಗಕ್ಕಿದೆ. ಏ.13ರ ಆಯೋಗದ ಆದೇಶದಲ್ಲಿ ರಾಜ್ಯ ಸರ್ಕಾರಿ ನೌಕರರನ್ನೂ ನಿಯೋಜಿಸುವುದಾಗಿ ಆಯೋಗ ತಿಳಿಸಿದೆ. ಹೀಗಾಗಿ ಆಯೋಗದ ನಿರ್ಧಾರದಲ್ಲಿ ತಪ್ಪಿಲ್ಲ' ಎಂದು ತಿಳಿಸಿತು.

ಜೊತೆಗೆ, 'ಮತಎಣಿಕೆ ವೇಳೆ ಅಕ್ರಮದ ಸಾಧ್ಯತೆ ಕುರಿತ ಟಿಎಂಸಿ ಆತಂಕಕ್ಕೆ ಯಾವುದೇ ಅರ್ಥ ಇಲ್ಲ. ಚುನಾವಣಾ ಆಯೋಗ ಬಿಡುಗಡೆ ಮಾಡಿದ ಪ್ರಕಟಣೆಯಲ್ಲೇ ಕೇಂದ್ರ ಮತ್ತು ರಾಜ್ಯ ಎರಡೂ ಸರ್ಕಾರಗಳ ಸಿಬ್ಬಂದಿ ನಿಯೋಜಿಸುವುದಾಗಿ ಸ್ಪಷ್ಟವಾಗಿ ಹೇಳಲಾಗಿದೆ. ಜತೆಗೆ ಪಕ್ಷದ



ಬಂಗಾಳದಲ್ಲಿ ಚುನಾವಣೆ ವೇಳೆ ಯೋಧರ ಪಹರೆ.

ಪ್ರತಿನಿಧಿಯೂ ಮತಎಣಿಕೆ ವೇಳೆ ಹಾಜರಿರಲಿದ್ದಾರೆ' ಎಂದು ಪೀಠ ಹೇಳಿತು.

ಸುಪ್ರೀಂ ಕೋರ್ಟ್ ನಿರ್ಧಾರ ಸ್ವಾಗತಿಸಿದ ಬಿಜೆಪಿ ಮುಖಂಡ ಅಮಿತ್ ಮಾಳವೀಯ, 'ಇದು ಟಿಎಂಸಿಗಾದ ಮತ್ತೊಂದು ಕಾನೂನು ಹಿನ್ನಡೆ' ಎಂದಿದ್ದಾರೆ. ಮತ್ತೊಂದೆಡೆ ಟಿಎಂಸಿ ಕೂಡಾ ಸುಪ್ರೀಂಕೋರ್ಟ್ ನಿಲುವನ್ನು ಸ್ವಾಗತಿಸಿದ್ದು, ಏ.13ರ ಸುತ್ತೋಲೆಯನ್ನು ಅಕ್ಷರಶಃ ಮತ್ತು ನೈಜ ಆಶಯದೊಂದಿಗೆ ಪಾಲಿಸುವುದಾಗಿ ಚು.ಆಯೋಗವು ನ್ಯಾಯಾಲಯದ ಮುಂದೆ ತಿಳಿಸಿದೆ. ಇದು ನಮ್ಮ ನಿಲುವಿಗೆ ಪೂರಕವಾಗಿದೆ ಎಂದಿದೆ.

ಮತ್ತೆ ವಿಮಾನ ಸೇವೆ ಅಡಚಣೆ ಆತಂಕ

ತೈಲ ದರ ಏರಿಕೆಗೆ ಏರ್ ಇಂಡಿಯಾ, ಡಿಜಿಸಿಎ ಆದೇಶಕ್ಕೆ ಇಂಡಿಗೋ 200 ವಿಮಾನ ಸಂಚಾರ ಕಡಿತ

ನವದೆಹಲಿ: ಮಧ್ಯಪ್ರಾಚ್ಯ ಸಂಘರ್ಷ ಹಿನ್ನೆಲೆಯಲ್ಲಿ ವೈಮಾನಿಕ ಇಂಧನ ದರ ಗಗನಕ್ಕೇರಿರುವುದು ಹಾಗೂ ವಾಯು ಪ್ರದೇಶ ನಿರ್ಬಂಧ ಹೇರಿಕೆಗಳಿಂದಾಗಿ ಏರ್ ಇಂಡಿಯಾ ವಿಮಾನವು ನಿತ್ಯ 100 ಅಂತಾರಾಷ್ಟ್ರೀಯ ವಿಮಾನಗಳ ಸಂಚಾರ ಕಡಿತ ಮಾಡಲು ನಿರ್ಧರಿಸಿದೆ. ಜೂನ್ ಮತ್ತು ಜುಲೈ ನಡುವೆ ವಿಮಾನ ಸೇವೆ ಕಡಿತಕ್ಕೆ ತೀರ್ಮಾನಿಸಿದ್ದಾಗಿ ಸಂಸ್ಥೆಯ ಸಿಇಒ ಕಾಂಪ್‌ಬೆಲ್ ವಿಲ್ಸನ್ ಅವರು ಸಿಬ್ಬಂದಿಗೆ ತಿಳಿಸಿದ್ದಾರೆ ಎನ್ನಲಾಗಿದೆ. ತೈಲ ದರ ಏರಿಕೆ ಹಾಗೂ ವಾಯು ನಿರ್ಬಂಧಗಳಿಂದಾಗಿ ಹಲವು ಮಾರ್ಗಗಳಲ್ಲಿ ವಿಮಾನ ಸಂಚಾರ ಲಾಭದಾಯಕವಾಗಿ



ಉಳಿದಿಲ್ಲ ಎನ್ನುವ ಕಾರಣಕ್ಕೆ ಈ ನಿರ್ಧಾರಕ್ಕೆ ಬಂದಿದ್ದಾಗಿ ತಿಳಿದುಬಂದಿದೆ.

ವಿಮಾನ ಇಂಧನದ ದರ ಗಗಕ್ಕೇರುತ್ತಿರುವ ಹಿನ್ನೆಲೆಯಲ್ಲಿ ಇತ್ತೀಚೆಗಷ್ಟೇ ಭಾರತೀಯ ಏರ್‌ಲೈನ್ ಉದ್ಯಮ (ಫೆಡರೇಷನ್ ಆಫ್ ಇಂಡಿಯನ್ ಏರ್‌ಲೈನ್ಸ್) ಕೇಂದ್ರ ಸರ್ಕಾರ ಮಧ್ಯಪ್ರವೇಶಿಸುವಂತೆ ಆಗ್ರಹಿಸಿತ್ತು. ನಾಗರಿಕ ವಿಮಾನಯಾನ ಸಚಿವಾಲಯಕ್ಕೆ ಪತ್ರವನ್ನೂ ಬರೆದಿತ್ತು. ಇದರ ಬೆನ್ನಲ್ಲೇ ಏರ್ ಇಂಡಿಯಾ ಈ ನಿರ್ಧಾರಕ್ಕೆ ಮುಂದಾಗಿದೆ.

ಸಾಮಾನ್ಯವಾಗಿ ವಿಮಾನಯಾನ ವೆಚ್ಚದ ಶೇ.30-40ರಷ್ಟು ಇಂಧನಕ್ಕೇ ಹೋಗುತ್ತದೆ. ಇಂಧನ ದರ ಈಗ ಶೇ.55ರಿಂದ ಶೇ.60ರಷ್ಟು ಏರಿಕೆಯಾಗಿದ್ದು, ಇದರ ಜತೆಗೆ ಸಂಘರ್ಷದಿಂದಾಗಿ ಹಲವು ದೇಶಗಳಲ್ಲಿ ವಾಯುಸೀಮೆ ನಿರ್ಬಂಧ ಹಿನ್ನೆಲೆಯಲ್ಲಿ ವಿಮಾನಗಳು ಸುತ್ತಿ ಬಳಸಿ ಪ್ರಯಾಣಿಸುವ ಅನಿವಾರ್ಯತೆ ಸೃಷ್ಟಿಯಾಗಿದೆ.

ಇಂಡಿಗೋ: ಕಳೆದ ಬಾರಿ ಇಂಡಿಗೋ ವಿಮಾನ ಸಂಸ್ಥೆಯ 2000 ವಿಮಾನ ಹಾರಾಟ ರದ್ದತಿ ಗದ್ದಲದಿಂದ ಎಚ್ಚೆತ್ತುಕೊಂಡಿರುವ ಕೇಂದ್ರ ಸರ್ಕಾರ ಇದೀಗ ಇಂಡಿಗೋ ವಿಮಾನಗಳ ಕಾರ್ಯಾಚರಣೆಯನ್ನು ಶೇ.10ರಷ್ಟು ಕಡಿತಗೊಳಿಸುವಂತೆ ನಿರ್ದೇಶನ ನೀಡಿದೆ. ಸದ್ಯ ಇಂಡಿಗೋ ಸಂಸ್ಥೆ ನಿತ್ಯ 2,200 ವಿಮಾನ ಸಂಚಾರ ನಡೆಸುತ್ತಿದೆ. ಇದರ ಶೇ.10 ಅಂದರೂ ನಿತ್ಯ ಸುಮಾರು 200 ಸಂಚಾರ ಕಡಿತದ ಅನಿವಾರ್ಯತೆಗೆ ಇಂಡಿಗೋ ಸಿಲುಕಲಿದೆ. ಈ ಮೂಲಕ ವಿಮಾನ ಕಾರ್ಯಾಚರಣೆ ಸ್ಥಿರಗೊಳಿಸುವುದು ಹಾಗೂ ವಿಮಾನಗಳ ಹಾರಾಟ ರದ್ದತಿ ಕಡಿಮೆ ಮಾಡುವ ಉದ್ದೇಶ ಸರ್ಕಾರಕ್ಕಿದೆ.

ಮೊಬೈಲ್ ಸಂದೇಶದ ಗಲಿಬಿಲಿ

ದೇಶಾದ್ಯಂತ ಫೋನ್‌ಗಳಿಗೆ ಸರ್ಕಾರ ಅಲರ್ಟ್ ಮೆಸೇಜ್
ಪ್ರಾಕೃತಿಕ ವಿಪತ್ತಿನ ಬಗ್ಗೆ ಜನರಿಗೆ ಪ್ರಾಯೋಗಿಕ ಎಚ್ಚರಿಕೆ

ನವದೆಹಲಿ: ಶನಿವಾರ ದೇಶವ್ಯಾಪಿ ಕೋಟ್ಯಂತರ ಮೊಬೈಲ್‌ಗೆ ಏಕಕಾಲದಲ್ಲಿ 'ಗಂಭೀರ ಎಚ್ಚರಿಕೆ..' ಎಂಬ ಸಂದೇಶ ರವಾನೆಯಾಗಿ ಕೆಲ ಕಾಲ ಗೊಂದಲ ಸೃಷ್ಟಿಯಾಗಿತ್ತು. ಹಾಗೆಂದು ಇದು ಹ್ಯಾಕರ್‌ಗಳ ಕೃತ್ಯವಾಗಿರಲಿಲ್ಲ. ಬದಲಾಗಿ ವಿಪತ್ತಿನ ಸಂದರ್ಭದಲ್ಲಿ ದೇಶದ ಜನತೆಗೆ ಮುನ್ನೆಚ್ಚರಿಕೆ ನೀಡಲು ತುರ್ತಾಗಿ ಮಾಹಿತಿ ನೀಡಲು ರೂಪಿಸಲಾಗಿರುವ 'ಸಚೇತ್' ವ್ಯವಸ್ಥೆಯ ಪರೀಕ್ಷೆಯ ಭಾಗವಾಗಿತ್ತು. ಇಂಥದ್ದೊಂದು ಸಂದೇಶವನ್ನು ಸರ್ಕಾರ ರವಾನಿಸಿತ್ತು.

ದೇಶದ ಯಾವುದೇ ಪ್ರದೇಶದಲ್ಲಿ ಪ್ರಾಕೃತಿಕ ವಿಪತ್ತು ಅಥವಾ ತುರ್ತು ಪರಿಸ್ಥಿತಿ ಎದುರಾದರೆ ಆ ಕುರಿತು ತ್ವರಿತವಾಗಿ ಮಾಹಿತಿ ನೀಡಲು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಇಂಟರ್ನೆಟ್ ವ್ಯವಸ್ಥೆ ಇಲ್ಲದೇ ಇದ್ದರೂ ಸಂದೇಶ ರವಾನಿಸಲು ಅವಕಾಶ ಕಲ್ಪಿಸುವ 'ಸೆಲ್ ಬ್ರಾಡ್‌ಕಾಸ್ಟ್ ಅಲರ್ಟ್' ಎಂಬ ವ್ಯವಸ್ಥೆ ರೂಪಿಸಿದೆ. ಇದಕ್ಕೆ ಟೆಲಿಕಾಂ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಚಾಲನೆ ನೀಡಿದ ವೇಳೆ ದೇಶದ ಕೋಟ್ಯಂತರ ಜನರಿಗೆ ಒಟ್ಟು 19 ಭಾಷೆಗಳಲ್ಲಿ ಸಂದೇಶ ರವಾನೆಯಾಯಿತು.

ವೈಬ್ರೇಟ್ ಸದ್ದಿಂದ ಗಲಿಬಿಲಿ: ಇಂಥದ್ದೊಂದು ಸಂದೇಶ ರವಾನಿಸುವ ಬಗ್ಗೆ ಗುರುವಾರ ಕೂಡಾ ಟೆಲಿಕಾಂ ವಿಪತ್ತು ಪ್ರಾಧಿಕಾರ ಮಾಹಿತಿ ರವಾನಿಸಿತ್ತು. ಆ ಮಾಹಿತಿ ಇದ್ದವರು ಆತಂಕ ಇಲ್ಲದೇ ಸಂದೇಶ ಸ್ವೀಕರಿಸಿದರೆ, ಕೆಲವರು ಮೊಬೈಲ್ ವೈಬ್ರೇಟ್ ಆಗುತ್ತಾ, ಶಬ್ದ ಮಾಡುತ್ತಿದ್ದಂತೆ ಕಳವಳಕ್ಕೆ ತುತ್ತಾದರು.



ಸಂದೇಶದಲ್ಲಿ ಏನಿತ್ತು?

ಭಾರತವು ತನ್ನ ನಾಗರಿಕರಿಗೆ ತ್ವರಿತ ವಿಪತ್ತು ಎಚ್ಚರಿಕೆ ನೀಡುವ ಸಲುವಾಗಿ ಸ್ಥಳೀಯ ತಂತ್ರಜ್ಞಾನವನ್ನು ಬಳಸಿಕೊಂಡು ಸೆಲ್ ಪ್ರಸಾರ ಪ್ರಾರಂಭಿಸಿದೆ. ನಾಗರಿಕರು ಜಾಗೃತರಾಗಿದ್ದರೆ ರಾಷ್ಟ್ರ ಸುರಕ್ಷಿತವಾಗಿರುತ್ತದೆ. ಈ ಸಂದೇಶ ಸ್ವೀಕರಿಸಿದವರು ಗಾಬರಿಯಾಗುವ ಅಗತ್ಯವಿಲ್ಲ. ಇದು ಪರೀಕ್ಷಾ ಸಂದೇಶ-ಭಾರತ ಸರ್ಕಾರ' ಎಂಬ ಮಾಹಿತಿ ಇತ್ತು.

ಏನಿದು ಸಚೇತ್ ವ್ಯವಸ್ಥೆ?

ಸಚೇತ್ ಎಂಬುದು ತುರ್ತುಸ್ಥಿತಿ, ನೈಸರ್ಗಿಕ ವಿಕೋಪದಂತಹ ಸಂದರ್ಭಗಳಲ್ಲಿ ಜನರ ಮೊಬೈಲ್‌ಗಳಿಗೆ ರವಾನಿಸಲಾಗುವ ಎಚ್ಚರಿಕೆ ಸಂದೇಶ. ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಹಯೋಗದಲ್ಲಿ ಸಾಮಾನ್ಯ ಎಚ್ಚರಿಕೆ ಪ್ರೋಟೋಕಾಲ್ (ಸಿಎಪಿ) ಆಧರಿಸಿ ಅಭಿವೃದ್ಧಿಪಡಿಸಲಾಗಿರುವ ವ್ಯವಸ್ಥೆ. ಇದು, ಮೊಬೈಲ್‌ಗಳಿಗೆ ನಿರಂತರ ಸಿಗ್ನಲ್‌ಗಳನ್ನು ರವಾನಿಸುವ ಸೆಲ್‌ಫೋನ್ ನೆಟ್‌ವರ್ಕ್ ಟವರ್ ಬಳಸಿ ಕೆಲಸ ಮಾಡುತ್ತದೆ. ಇಂಟರ್ನೆಟ್ ಸಂಪರ್ಕದ ಅಗತ್ಯವಿರುವುದಿಲ್ಲ. ಇದರಿಂದ ಒಮ್ಮೆಲೆ ಕೋಟಿಗಟ್ಟಲೆ ಜನಕ್ಕೆ ಸಂದೇಶ ರವಾನಿಸಬಹುದು.

4ರ ಬಾಲೆ ಮೇಲೆ 65ರ ವೃದ್ಧ ರೇಪ್: ಕಲ್ಲಿನಿಂದ ಜಜ್ಜಿ ಕೊಲೆ

ಪುಣೆ: 65 ವರ್ಷದ ವೃದ್ಧನೊಬ್ಬ, 4 ವರ್ಷದ ಪುಟ್ಟ ಬಾಲೆಗೆ ತಿಂಡಿ ಕೊಡುವುದಾಗಿ ನಂಬಿಸಿ, ದನದ ಕೊಟ್ಟಿಗೆಗೆ ಕರೆದೊಯ್ದು ಅತ್ಯಾಚಾರ ನಡೆಸಿದ್ದಲ್ಲದೆ, ಕಲ್ಲಿನಿಂದ ಜಜ್ಜಿ ಕೊಲೆಗೈದ ಪೈಶಾಚಿಕ ಕೃತ್ಯ ಪುಣೆಯ ಭೋರ್ ಜಿಲ್ಲೆಯ ನಸ್ರಾಪುರದಲ್ಲಿ ಶುಕ್ರವಾರ ನಡೆದಿದೆ. ಈ ಸಂಬಂಧ ಆರೋಪಿಯನ್ನು ಬಂಧಿಸಲಾಗಿದೆ.

ಮಹಾರಾಷ್ಟ್ರದ ನಸ್ರಾಪುರದಲ್ಲಿ ಪೈಶಾಚಿಕ ಘಟನೆ

ಬೇಸಿಗೆ ರಜೆಗಾಗಿ ಬಾಲಕಿ ನಸ್ರಾಪುರಕ್ಕೆ ಬಂದಿದ್ದಳು. ಶುಕ್ರವಾರ ಆರೋಪಿ ತಿಂಡಿ ಕೊಡುವುದಾಗಿ ನಂಬಿಸಿ, ಆಕೆಯನ್ನು ದನದ ಕೊಟ್ಟಿಗೆಗೆ ಕರೆದೊಯ್ದು ಕೃತ್ಯ ಎಸಗಿದ್ದಾನೆ. ಸಂಜೆ ಮಗುವಿನ ಕುಟುಂಬಸ್ಥರು ಹುಡುಕಾಟ ನಡೆಸಿದಾಗ ರಕ್ತಸಿಕ್ತವಾದ ಮಗುವಿನ ಶವ ಸಿಕ್ಕಿದೆ. ಸಿಸಿಟೀವಿ ದೃಶ್ಯಾವಳಿಯ ಆಧಾರದಲ್ಲಿ ಆರೋಪಿಯನ್ನು ತಕ್ಷಣವೇ ಬಂಧಿಸಲಾಗಿದೆ. ಈತ 1998ರಿಂದ 2015ರವರೆಗೆ ಇಂಥ ಹಲವು ಕುಕೃತ್ಯಗಳಲ್ಲಿ ಭಾಗಿಯಾಗಿದ್ದ ಎಂದು ತಿಳಿದುಬಂದಿದೆ.

ನಮ್ಮ ಆಂತರಿಕ ವಿಷಯದಲ್ಲಿ ಭಾರತದ ಹಸ್ತಕ್ಷೇಪ: ಕೆನಡಾ

ಒಟ್ಟಾವಾ: 'ಖಲಿಸ್ತಾನಿಗಳಿಂದ ಕೆನಡಾಗೆ ಅಪಾಯವಿದೆ' ಮತ್ತು ಕೆನಡಾ ವಿಷಯದಲ್ಲಿ ಭಾರತ ಹಸ್ತಕ್ಷೇಪ ಮಾಡುತ್ತಿದೆ ಎಂದು ಕೆನಡಾದ ಗುಪ್ತಚರ ವರದಿ ಎಚ್ಚರಿಸಿದೆ. ಸಂಸತ್ತಲ್ಲಿ ಮಂಡಿಸಲಾದ ವರದಿಯಲ್ಲಿ, 'ಖಲಿಸ್ತಾನಿ ಪ್ರತ್ಯೇಕತಾವಾದ ಪ್ರಚಾರ ಕಾನೂನುಬದ್ಧ. ಆದರೆ ಹಿಂಸೆಗಳಲ್ಲಿ ಅವರ ತೊಡಗುವಿಕೆಯು ಕೆನಡಾ ಮತ್ತು ಅದರ ಸಂಸ್ಕೃತಿಗೆ ಬೆದರಿಕೆಯಾಗಿ ಮುಂದುವರಿದಿದೆ' ಎನ್ನಲಾಗಿದೆ.

ಕೆನಡಾದ ಖಲಿಸ್ತಾನಿಗಳ ಮಟ್ಟ ಹಾಕಲು ಭಾರತ ಯತ್ನ


ಜತೆಗೆ, 'ಭಾರತ ಸೇರಿ ಹಲವು ದೇಶಗಳು ನಮ್ಮ ದೇಶದ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿವೆ. ಜೊತೆಗೆ ಭಾರತ ತನ್ನ ಆಂತರಿಕ ಭದ್ರತೆಗೆ ಬೆದರಿಕೆಯಾಗಿರುವ ಖಲಿಸ್ತಾನಿಗಳನ್ನು ನಮ್ಮ ನೆಲದಲ್ಲಿ ದಮನಿಸಲು ಕೆನಡಾದವರನ್ನು ಬಳಸಿಕೊಳ್ಳುತ್ತಿದೆ' ಎಂದು ವರದಿಯಲ್ಲಿ ಗಂಭೀರ ಆರೋಪ ಮಾಡಲಾಗಿದೆ.

ಸಮುದ್ರದಲ್ಲಿ ವಿಶ್ವದಾಖಲೆಯ ತ್ರಿವರ್ಣ ಧ್ವಜ

200 ಜನರಿಂದ 60X40 ಮೀ. ಅಳತೆ ಧ್ವಜ ಅನಾವರಣ | ಆಳದಲ್ಲೂ ಸ್ಪಷ್ಟ ಗೋಚರ

ನವದೆಹಲಿ: ಬೃಹತ್ ತ್ರಿವರ್ಣ ಧ್ವಜವನ್ನು ಸಮುದ್ರದ ನೀರಿನಲ್ಲಿ ಅನಾವರಣ ಮಾಡುವ ಮೂಲಕ ಅಂಡಮಾನ್ ನಿಕೋಬಾರ್ ಆಡಳಿತವು ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸಿದೆ. ರಾಧಾನಗರ ಕಡಲಕಿನಾರೆಯ ಸ್ವರಾಜ್ ದ್ವೀಪದಲ್ಲಿ, ಲೆಫ್ಟಿನೆಂಟ್ ಗವರ್ನರ್ ಡಿ.ಕೆ. ಜೋಶಿ ಹಾಗೂ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ 200 ಡೈವರ್‌ಗಳು (ಈಜುಗಾರರು) 60X40 ಮೀ. ಗಾತ್ರದ ಬಾವುಟನ್ನು ಅನಾವರಣ ಮಾಡಿದರು. ಅಷ್ಟು ಆಳದಲ್ಲೂ ತ್ರಿವರ್ಣವು ಸುಂದರವಾಗಿ ಗೋಚರಿಸಿದ್ದು, ಅಲ್ಲಿನ ನೀರಿನ ಶುದ್ಧತೆಯನ್ನು ತೋರಿಸುವಂತಿತ್ತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಜೋಶಿ, 'ಈ ಸಾಧನೆಯು ನಮ್ಮ ದ್ವೀಪದ ವಿಶಿಷ್ಟ ಸಾಧನೆಗಳ ಪಟ್ಟಿಗೆ ಆದ ಗಮನಾರ್ಹ



ಸೇರ್ಪಡೆ, ಸಂಕೀರ್ಣ ಕಾರ್ಯಕ್ರಮಗಳನ್ನು ಆಯೋಜಿಸುವ ನಮ್ಮ ಸಾಮರ್ಥ್ಯವನ್ನು ತೋರಿಸುತ್ತದೆ' ಎಂದು ಬಣ್ಣಿಸಿದ್ದಾರೆ.

ಅಂಡಮಾನ್ ಇತ್ತೀಚೆಗೆ ತನ್ನ ಸಾಗರ ಪ್ರವಾಸೋದ್ಯಮವನ್ನು ಉತ್ತೇಜಿಸುತ್ತಿದ್ದು, ಈ ಸಾಧನೆಯು ಅದಕ್ಕೆ ಪೂರಕವಾಗಿದೆ.

ಇಂದು ದೇಶಾದ್ಯಂತ ನೀಟ್ ಯುಜಿ ಪರೀಕ್ಷೆ

ನವದೆಹಲಿ: ವೈದ್ಯಕೀಯ ಕೋರ್ಸ್ ಪ್ರವೇಶಕ್ಕಾಗಿ ನಡೆಸುವ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯು (ನೀಟ್ ಯುಜಿ) ದೇಶಾದ್ಯಂತ ಭಾನುವಾರ ನಡೆಯಲಿದೆ. ಪರೀಕ್ಷೆಗೆ ಯಾವ ರೀತಿಯ ಉಡುಪು ಧರಿಸಬೇಕು, ಏನೆಲ್ಲ ನಿಯಮಗಳನ್ನು ಪಾಲಿಸಬೇಕು ಎನ್ನುವ ಬಗ್ಗೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಶನಿವಾರ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ಈ ಬಾರಿ ಒಟ್ಟು 22.79 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದು, ಇದರಲ್ಲಿ ಶೇ.58ರಷ್ಟು ವಿದ್ಯಾರ್ಥಿನಿಯರು ಎಂಬುದು ವಿಶೇಷ. ದೇಶಾದ್ಯಂತ ಅಂದಾಜು 1.37 ಲಕ್ಷ ಎಂಬಿಬಿಎಸ್ ಸೀಟು ಲಭ್ಯವಿದ್ದು, ಅದರ ಪ್ರವೇಶಕ್ಕಾಗಿ ಈ ಪರೀಕ್ಷೆ ಆಯೋಜನೆಗೊಂಡಿದೆ. ಈ ಪೈಕಿ ಅತಿ ಹೆಚ್ಚು 13000 ಸೀಟುಗಳು ಕರ್ನಾಟಕವೊಂದರಲ್ಲೇ ಇವೆ.

ಪಾರದರ್ಶಕ ನೀರಿನ ಬಾಟಲಿಗಳನ್ನು ಇಟ್ಟುಕೊಳ್ಳಬೇಕು. ಧಾರ್ಮಿಕ ಗುರುತುಗಳಿಗೆ ಅನುಮತಿ ಇದೆ, ಆದರೆ ಪರಿಶೀಲನೆಗಾಗಿ ಕಡ್ಡಾಯ 2 ಗಂಟೆ ಮುಂಚೆ ಆಗಮಿಸಬೇಕು.

ದಿಲ್ಲಿ: ಯುವ ಜಡ್ಜ್ ಶವ ಪತ್ತೆ, ಆತ್ಮಹತ್ಯೆ?

ನವದೆಹಲಿ: 30 ವರ್ಷದ ನ್ಯಾಯಾಧೀಶರೊಬ್ಬರು ದಕ್ಷಿಣ ದೆಹಲಿಯ ಗ್ರೀನ್ ಪಾರ್ಕ್‌ನ



ಲ್ಲಿನ ತಮ್ಮ ಮನೆಯ ಸ್ನಾನಗೃಹದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಶಂಕಿಸಿದ್ದಾರೆ. ನ್ಯಾ. ಅಮನ್ ಕುಮಾರ್‌ಶರ್ಮಾ ಮೃತ ನ್ಯಾಯಾಧೀಶ. ಅವರು 2021ರ ಜೂ.19ರಂದು ದೆಹಲಿ ನ್ಯಾಯಾಂಗ ಸೇವೆಗೆ ಸೇರಿದ್ದರು.

ತಮ್ಮ ಸೇವಾ ಅವಧಿಯಲ್ಲಿ, ಹಲವಾರು ಕ್ರಿಮಿನಲ್ ಮತ್ತು ಸಿವಿಲ್ ಪ್ರಕರಣಗಳನ್ನು ನ್ಯಾ. ಶರ್ಮಾ ಇತ್ಯರ್ಥಪಡಿಸಿದ್ದರು.

ಆಗ್ರಹ | ದಾಳಿ ಆರಂಭಿಸಿದ ಅಮೆರಿಕ, ಇಸ್ರೇಲ್ ಯುದ್ಧ ನಿಲ್ಲಿಸಲಿ | ನಾವೆಂದೂ ಅಮೆರಿಕಕ್ಕೆ ತಲೆಬಾಗುವುದಿಲ್ಲ: ಅಬ್ದುಲ್ ಮಜೀದ್ ಹಕೀಂ

ಯುದ್ಧ ನಿಲ್ಲಿಸಲು ಹೇಳಿ: ಬೆಂಗ್ಳೂರಲ್ಲಿ ಖಮೇನಿ ಪ್ರತಿನಿಧಿ ಆಗ್ರಹ

ಬೆಂಗಳೂರು: ಇರಾನ್ ಸರ್ವೋಚ್ಚನಾಯಕ ಖಮೇನಿಯ ಪ್ರತಿನಿಧಿಯಾಗಿ ಭಾರತದಲ್ಲಿರುವ ಅಬ್ದುಲ್ ಮಜೀದ್ ಹಕೀಂ ಇಲಾಹಿ, 'ಯುದ್ಧವನ್ನು ನಿಲ್ಲಿಸುವಂತೆ ಅಮೆರಿಕ ಮತ್ತು ಇಸ್ರೇಲ್‌ಗೆ ಹೇಳಿ' ಎಂದು ಬಹಿರಂಗವಾಗಿ ಆಗ್ರಹಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಯುದ್ಧದಿಂದ ನಾವೆಲ್ಲ ತೊಂದರೆ ಅನುಭವಿಸುತ್ತಿದ್ದೇವೆ. ಒಂದು ರಾಷ್ಟ್ರದ ಜತೆ ವ್ಯವಹಾರ ಮಾಡಬೇಡಿ ಎಂದು ಉಳಿದೆಲ್ಲಾ ದೇಶಗಳಿಗೆ (ಅಮೆರಿಕ) ಹೇಳುವುದು ಸರಿಯೇ? ಕದನದ ಬಗ್ಗೆ ಇರಾನ್ ಅನ್ನು ಪ್ರಶ್ನಿಸುವ ಬದಲು, ಅದನ್ನು ಶುರು ಮಾಡಿದವರ ಬಳಿಯೇ ನಿಲ್ಲಿಸುವಂತೆ ಹೇಳಿ. ಹಾಗಾದರೆ ಮಾತ್ರ ಎಲ್ಲವೂ ಸಹಜಸ್ಥಿತಿಗೆ ಮರಳುತ್ತದೆ. ಇರಾನ್ ಯುದ್ಧವನ್ನು ಬಯಸಿರಲಿಲ್ಲ' ಎಂದು ಹೇಳಿದರು.

'ಅಮೆರಿಕ ಮತ್ತು ಇಸ್ರೇಲ್ 3 ದಿನದಲ್ಲಿ ಮುಗಿಸಬಹುದು ಎಂದುಕೊಂಡಿದ್ದ ಈ ಯುದ್ಧಕ್ಕಾಗಿ 4 ವರ್ಷಗಳ ತಯಾರಿ ನಡೆಸಿದ್ದವು. ನಾವು ಬೇಷರತ್ ಶರಣಾಗಬೇಕೆಂದು ಅವರು ಬಯಸಿದ್ದರು. ಆದರೆ ಇರಾನ್ ಬಾಗದು. ಸಂಧಾನಕಾರನಾಗಿರುವ ಪಾಕ್ ಮೇಲೆ ನಮಗೆ ನಂಬಿಕೆ ಇಲ್ಲ. ಅವರು ಬರೀ ನಮ್ಮ ಸಂದೇಶವನ್ನು ಅಮೆರಿಕಕ್ಕೆ ತಲುಪಿಸುವ ಕೆಲಸ ಮಾಡುತ್ತಿದ್ದಾರೆ' ಎಂದರು.

ಮತ್ತೆ ಕದನ ಶುರು: ಇರಾನ್

ಟೆಹ್ರಾನ್: ಇರಾನ್ ಸಲ್ಲಿಸಿದ ಕದನವಿರಾಮದ ಪ್ರಸ್ತಾವನೆಯು ತೃಪ್ತಿದಾಯಕವಾಗಿಲ್ಲ ಅಮೆರಿಕ ಅಧ್ಯಕ್ಷ ಟ್ರಂಪ್ ತಿರಸ್ಕರಿಸಿದ ಬೆನ್ನಲ್ಲೇ, ಕದನವು ಮತ್ತೆ ಆರಂಭವಾಗುವುದು ಎಂಬ ವಿಶ್ಲೇಷಣೆ ಆರಂಭವಾಗಿದೆ. ಇರಾನ್ ಸೇನೆಯ ಉನ್ನತ ಅಧಿಕಾರಿ ಮೊಹೊಮ್ಮದ್ ಜಾಫರ್ ಅಸಾದಿ ಇಂತಹ ಎಚ್ಚರಿಕೆ ನೀಡಿದ್ದಾರೆ. 'ಅಮೆರಿಕ ಯಾವುದೇ ಭರವಸೆ, ಒಪ್ಪಂದಕ್ಕೆ ಬದ್ಧವಾಗಿಲ್ಲ. ಅಲ್ಲಿನ ಅಧಿಕಾರಿಗಳ ಕ್ರಮ, ಹೇಳಿಕೆಗಳು ಮಾಧ್ಯಮ ನಿಯಂತ್ರಿತವಾಗಿವೆ. ಅವರ ಮೊದಲ ಗುರಿ ತೈಲ ಬೆಲೆ ಕುಸಿತ ತಡೆಯುವುದಾಗಿದ್ದು, ತಾವೇ ಸೃಷ್ಟಿಸಿದ ಅವ್ಯವಸ್ಥೆಯಿಂದ ಈಗ ಹೊರಬರಲು ಯತ್ನಿಸುತ್ತಿದ್ದಾರೆ' ಎಂದು ಅಸಾದಿ ಹೇಳಿದರು.

ಹುಚ್ಚರಿಗೆ ಅಣ್ವಸ್ತ್ರ ಸಿಗದಿರಲೆಂದು ಇರಾನ್ ವಿರುದ್ಧ ಯುದ್ಧ: ಟ್ರಂಪ್

ವಾಷಿಂಗ್ಟನ್: ಕದನವಿರಾಮದೊಂದಿಗೆ ಇರಾನ್ ವಿರುದ್ಧದ ಯುದ್ಧ ನಿಂತಿದೆ ಎಂದು ಸರ್ಕಾರ ಅಲ್ಲಿನ ಸಂಸತ್ತಿನಲ್ಲಿ ಘೋಷಿಸಿದ ಬೆನ್ನಲ್ಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 'ಹುಚ್ಚರ ಕೈಗೆ ಅಣ್ವಸ್ತ್ರ ಸಿಗದೇ ಇರಲಿ ಎಂದು ನಾವು ಅವರ ಮೇಲೆ ಆಕ್ರಮಣ ಮಾಡಿದೆವು' ಎಂದು ಹೇಳಿದ್ದಾರೆ. 'ನಮ್ಮ ಆಕ್ರಮಣವು, ಅಣುಶಕ್ತ ಆಗಹೊರಟಿದ್ದ ಇರಾನ್‌ನಿಂದ ಮಧ್ಯಪ್ರಾಚ್ಯವನ್ನು ರಕ್ಷಿಸಿದೆ. ನಾವು ಹಾಗೆ ಮಾಡದಿದ್ದರೆ ಅವರ ಕೈಗೆ ಅಣ್ವಸ್ತ್ರ ಸಿಕ್ಕಿ ಇಸ್ರೇಲ್, ಮಧ್ಯಪ್ರಾಚ್ಯ, ಯುರೋಪ್ ಧೂಳೀಪಟವಾಗುತ್ತಿದ್ದವು. ಆದರೆ ಈಗ ಇರಾನ್ ಬಳಿ ನೌಕಾಪಡೆ, ವಾಯುಪಡೆ, ವಾಯುದಾಳಿ ತಡೆವ ಸಾಧನ, ರಾಡಾರ್, ಉನ್ನತ ನಾಯಕತ್ವ ಉಳಿದೇ ಇಲ್ಲ. ಇನ್ನು ಮೂರು ವರ್ಷ ಯಾವುದೇ ಸಮಸ್ಯೆಯಾಗದು' ಎಂದು ಟ್ರಂಪ್ ಹೇಳಿದ್ದಾರೆ.

ಎಲ್‌ಪಿಜಿ ಸಾಗಣೆ

ಈಗ ಮತ್ತೊಂದು ಹಡಗು ಹೋರ್ಮುಜ್ ದಾಟಿ ಭಾರತದತ್ತ

ನವದೆಹಲಿ: ಹೋರ್ಮುಜ್ ಮೇಲಿನ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಇರಾನ್ ಮತ್ತು ಅಮೆರಿಕದ ನಡುವೆ ಹಗ್ಗಜಗ್ಗಾಟ ಮುಂದುವರಿದಿರುವ ನಡುವೆ ಯುಎಇಯಿಂದ ಭಾರತದತ್ತ ಹೊರಟಿರುವ ಎಲ್‌ಪಿಜಿ ತುಂಬಿದ ಹಡಗು ಶನಿವಾರ ಆ ಜಲಸಂಧಿಯನ್ನು ದಾಟಿರುವುದು ಸಾಗರ ಸಂಚಾರ ಡೇಟಾದಿಂದ ತಿಳಿದುಬಂದಿದೆ.

ಮಾರ್ಶಲ್ ದ್ವೀಪದ ಧ್ವಜ ಹೊಂದಿರುವ 'ಸರ್ವಶಕ್ತ' ನೌಕೆಯಲ್ಲಿ 45,000 ಟನ್ ಎಲ್‌ಪಿಜಿ ತುಂಬಿದ್ದು, ಇದರಲ್ಲಿರುವ ಸಿಬ್ಬಂದಿಯಲ್ಲಿ 18 ಜನ ಭಾರತೀಯರಿದ್ದಾರೆ ಎನ್ನಲಾಗಿದೆ. ಮೇ 13ರಂದು ವಿಶಾಖಪಟ್ಟಣಂಗೆ ಹಡಗು ಬಂದು ತಲುಪಲಿದೆ.

ರಾಜಕೀಯ ದ್ವೇಷ?

ಬಿಜೆಪಿ ಸೇರಿದ ಆಪ್ ಸಂಸದ ಪಾಠಕ್ ವಿರುದ್ಧ ಆಪ್ ಕೇಸ್

ಚಂಡೀಗಢ/ನವದೆಹಲಿ: ಇತ್ತೀಚೆಗೆ ರಾಘವ್ ಚಡ್ಡಾ ಅವರ ಜತೆಗೂಡಿ ಆಪ್ ತೊರೆದು ಬಿಜೆಪಿ ಸೇರಿದ್ದ ರಾಜ್ಯಸಭಾ ಸಂಸದ ಸಂದೀಪ್ ಪಾಠಕ್ ವಿರುದ್ಧ ಪಂಜಾಬ್‌ನಲ್ಲಿ ಜಾಮೀನುರಹಿತ ಸೆಕ್ಷನ್‌ಗಳ ಅಡಿಯಲ್ಲಿ 2 ಪ್ರಕರಣಗಳು ದಾಖಲಾಗಿವೆ. ಇದಕ್ಕೆ ಪ್ರತಿಕ್ರಿಯಿಸಿರುವ ಬಿಜೆಪಿ, ಆಪ್ ಮುಖ್ಯಸ್ಥ ಕೇಜ್ರಿವಾಲ್ ಪಂಜಾಬ್ ಪೊಲೀಸರನ್ನು ದುರುಪಯೋಗಪಡಿಸಿಕೊಂಡು ದ್ವೇಷ ರಾಜಕಾರಣ ಮಾಡುತ್ತಿದ್ದಾರೆ ಎಂದು ಆರೋಪಿಸಿದೆ. ಅತ್ತ ಬಂಧನದ ಭೀತಿಯಿಂದ ಶನಿವಾರ ಮನೆಯಿಂದ ಹೊರಬಿದ್ದ ಪಾಠಕ್ ಯಾರ ಸಂಪರ್ಕಕ್ಕೂ ಸಿಕ್ಕಿಲ್ಲ.

ಕನ್ನಡಪ್ರಭ
ಭಾನುವಾರ 3.05.2026

ನಿಗದಿತ ವೇಳೆ ಜಿಬಿಎ ಚುನಾವಣೆ ನಡೆಸಲು ಸುಪ್ರೀಂ ಸಿಜೆಐಗೆ ಪತ್ರ

ಜೆಡಿಎಸ್ ಕಾನೂನು ಘಟಕದ ಅಧ್ಯಕ್ಷ ಎ.ಪಿ.ರಂಗನಾಥ್ ಮನವಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಚುನಾವಣೆ ಸಂಬಂಧ ಕೂಡಲೇ ಅಧಿಸೂಚನೆ ಹೊರಡಿಸಿ ನಿಗದಿ ಅವಧಿಯಲ್ಲಿ ಚುನಾವಣೆ ನಡೆಸಲು ರಾಜ್ಯ ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡುವಂತೆ ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷರೂ ಆಗಿರುವ ಜೆಡಿಎಸ್ ಕಾನೂನು ಘಟಕದ ಅಧ್ಯಕ್ಷ ಎ.ಪಿ.ರಂಗನಾಥ್ ಅವರು ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಮೂರ್ತಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಬೆಂಗಳೂರಿನ ನಾಗರಿಕರು ಕಳೆದ 18 ವರ್ಷಗಳಲ್ಲಿ ಕೇವಲ 2 ಬಾರಿ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಅವಕಾಶವನ್ನು ಪಡೆದಿದ್ದಾರೆ. ಚುನಾವಣಾ ಪ್ರಕ್ರಿಯೆ ವಿಳಂಬ ಕೇವಲ ಆಡಳಿತಾತ್ಮಕ ಲೋಪವಲ್ಲ. ಬದಲಾಗಿ ಸಂವಿಧಾನಕ್ಕೆ ಮಾಡಿದ ಅವಮಾನವಾಗಿದೆ. ಬಿಬಿಎಂಪಿಗೆ ಕೊನೆಯದಾಗಿ 2015ರ ಆ.22ರಂದು ಚುನಾವಣೆ ನಡೆದಿದೆ. ಅಂದರೆ ಚುನಾವಣೆ ನಡೆದ ಒಂದು ದಶಕಕ್ಕೂ ಹೆಚ್ಚು ಸಮಯವಾಗಿದೆ. ರಾಜ್ಯ ಸರ್ಕಾರಗಳು ಚುನಾವಣೆ ನಡೆಸುವುದನ್ನು ತಪ್ಪಿಸಲು ಒಂದರ ನಂತರ ಒಂದು ಅಡೆತಡೆ ಸೃಷ್ಟಿಸಿವೆ ಎಂದು ಆರೋಪಿಸಿದ್ದಾರೆ.



ಈ ಹಿಂದೆ ಕರ್ನಾಟಕ ಹೈಕೋರ್ಟ್ ಬಿಬಿಎಂಪಿ 198 ವಾರ್ಡ್‌ಗಳಿಗೆ ಚುನಾವಣೆ ನಡೆಸಲು ಆದೇಶಿಸಿತ್ತು. ಆಗ ರಾಜ್ಯ ಸರ್ಕಾರವು ವಾರ್ಡ್ ವಿಂಗಡಣೆ ನೆಪವೊಡ್ಡಿ ಸುಪ್ರೀಂ ಕೋರ್ಟ್ ಮೊರೆ ಹೋಗಿ ಚುನಾವಣೆ ವಿಳಂಬ ಮಾಡಿತ್ತು. ಬಳಿಕ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ರಚಿಸಿ, ಬಿಬಿಎಂಪಿಯನ್ನು ಐದು ನಗರ ಪಾಲಿಕೆಗಳಾಗಿ ವಿಂಗಡಿಸಿದೆ.

ಈ ನಡುವೆ ಸುಪ್ರೀಂ ಕೋರ್ಟ್ 2026ರ ಜೂ.30ರೊಳಗೆ ಚುನಾವಣೆ ನಡೆಸಲು ಆದೇಶಿಸಿದೆ. ಇದರ ಅನ್ವಯ ಮೇ 16ರೊಳಗೆ ಅಧಿಸೂಚನೆ ಹೊರಡಿಸಬೇಕು. ಆದರೆ, ರಾಜ್ಯ ಸರ್ಕಾರ ಮತ್ತು ರಾಜ್ಯ ಚುನಾವಣಾ ಆಯೋಗದ ನಡವಳಿಕೆ ನೋಡಿದಾಗ ಉದ್ದೇಶ ಪೂರ್ವಕವಾಗಿ ಸುಪ್ರೀಂಕೋರ್ಟ್ ಆದೇಶ ಪಾಲಿಸದೆ ಚುನಾವಣೆ ವಿಳಂಬ ಮಾಡುತ್ತಿರುವುದು ಕಂಡು ಬರುತ್ತಿದೆ ಎಂದು ತಿಳಿಸಿದ್ದಾರೆ.

ಬಿಬಿಎಂಪಿ ಚುನಾವಣೆ ನಡೆಸುವ ಸಂಬಂಧ ಸುಪ್ರೀಂಕೋರ್ಟಿನ 2022ರ ಡಿಸೆಂಬರ್, 2023ರ ಮಾರ್ಚ್ ಮತ್ತು 2025ರ ನವೆಂಬರ್ ಗಡುವು ಉಲ್ಲಂಘಿಸಲಾಗಿದೆ. ಇದೀಗ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ರಾಜ್ಯ ಚುನಾವಣಾ ಆಯೋಗಕ್ಕೆ ಪತ್ರ ಬರೆದು 2026ರ ಸೆ.30ರ ವರೆಗೆ ಜಿಬಿಎ ಚುನಾವಣೆ ಸಮಯ ವಿಸ್ತರಿಸುವಂತೆ ಮನವಿ ಮಾಡಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ರಾಜ್ಯದ ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಚಾರದಲ್ಲಿ ಸುಪ್ರೀಂ ಕೋರ್ಟ್ ನೀಡಿದ ನಿರ್ದೇಶನಗಳನ್ನು ಉಲ್ಲಂಘಿಸಲಾಗುತ್ತಿದೆ. ಈ ಸಂಬಂಧ ಸ್ವಯಂ ಪ್ರೇರಿತವಾಗಿ ಗಮನಹರಿಸಬೇಕು. ಸುಪ್ರೀಂ ಕೋರ್ಟ್ ಆದೇಶದ ಹೊರತಾಗಿಯೂ ಜಿಬಿಎ ಚುನಾವಣೆ ಸಮಯ ವಿಸ್ತರಿಸುವಂತೆ ಕೋರಿರುವುದು, ನಿಗದಿ ಸಮಯದಲ್ಲಿ ಚುನಾವಣೆ ನಡೆಸದಿರುವ ಸಂಬಂಧಿತ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಕ್ರಮಗಳನ್ನು ಪ್ರಾರಂಭಿಸಬೇಕು. ನಿಗದಿತ ಸಮಯದಲ್ಲಿ ಜಿಬಿಎ ಚುನಾವಣೆ ನಡೆಸಲು ಸೂಕ್ತ ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಬೌರಿಂಗ್ ಆಸ್ಪತ್ರೆ ಗೋಡೆ ದುರಂತ: ತನಿಖೆ ಆರಂಭ

ಬೆಂಗಳೂರು: ಬೌರಿಂಗ್ ಆಸ್ಪತ್ರೆಯ ಗೋಡೆ ಕುಸಿದು 7 ಮಂದಿ ಸಾವನ್ನಪ್ಪಿದ ಘಟನೆಗೆ ಸಂಬಂಧಿಸಿದಂತೆ ದುರಂತಕ್ಕೆ ಕಾರಣವಾದ ಅಂಶ ಪತ್ತೆ ಮಾಡಲು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ನೇತೃತ್ವದ ತಂಡ ತನಿಖೆ ಆರಂಭಿಸಿದೆ. ಲೋಕೋಪಯೋಗಿ ಇಲಾಖೆಯ ನಿವೃತ್ತ ಮುಖ್ಯ ಎಂಜಿನಿಯರ್‌ಒಳಗೊಂಡಿರುವ ಈ ತಂಡ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳಿಂದಲೂ ಹೇಳಿಕೆ ದಾಖಲಿಸಿಕೊಂಡಿದೆ. ಘಟನೆ ಸಂಭವಿಸಿದ ಸಮಯ, ಪರಿಸ್ಥಿತಿ ಮತ್ತು ಗೋಡೆ ಕುಸಿಯಲು ಕಾರಣವಾಗಬಹುದಾದ ಅಂಶಗಳ ಬಗ್ಗೆ ಮಾಹಿತಿ ಕಲೆಹಾಕಿದೆ. ಗೋಡೆಯ ನಿರ್ಮಾಣದಲ್ಲಿನ ಲೋಪಗಳು ಕಾರಣವಾಯಿತೇ? ಬಾಹ್ಯ ಒತ್ತಡದಿಂದ ಕುಸಿದು ಬಿದ್ದಿದೆಯೇ ಎಂಬ ತಾಂತ್ರಿಕ ಕಾರಣಗಳನ್ನು ಪತ್ತೆ ಮಾಡಲಾಗುತ್ತದೆ. ಈ ದುರಂತಕ್ಕೆ ಕಾರಣರಾದವರು ಯಾರು? ನಿರ್ವಹಣೆಯಲ್ಲಿ ಆಗಿರುವ ನಿರ್ಲಕ್ಷ್ಯದ ಎಂಬ ಬಗ್ಗೆ ಸರ್ಕಾರಕ್ಕೆ ಒಂದು ವಾರದಲ್ಲಿ ಡಿಸಿ ತಂಡ ವರದಿ ಸಲ್ಲಿಸಲಿದೆ.

ಘನತ್ಯಾಜ್ಯ ನಿರ್ವಹಣೆ ಎಇಇ ಆಗಿ ನಟರಾಜ್ ನೇಮಕ ಅಕ್ರಮ: ದೂರು

ತಾಂತ್ರಿಕ ನೈಪುಣ್ಯತೆ ಇಲ್ಲದವರ ನೇಮಕ ಸಮಂಜಸ ಅಲ್ಲ: ರಮೇಶ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಗಣಿ–1) ವ್ಯವಸ್ಥಾಪಕ(ಯಾಂತ್ರಿಕ) ಬಿ.ಆರ್.ನಟರಾಜು ಅವರನ್ನು ಕಾನೂನು ಬಾಹಿರವಾಗಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ(ಬಿಎಸ್‌ಡಬ್ಲ್ಯುಎಂಎಲ್) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ(ಎಇಇ) ಹುದ್ದೆಗೆ ನಿಯೋಜಿಸಿರುವುದು ಬೆಳಕಿಗೆ ಬಂದಿದೆ.

ಈ ಸಂಬಂಧ ಬಿಬಿಎಂಪಿ ಆಡಳಿತ ಪಕ್ಷದ ಮಾಜಿ ನಾಯಕ ಎನ್.ಆರ್.ರಮೇಶ್ ಅವರು ನಗರಾಭಿವೃದ್ಧಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ಕೂಡಲೇ ಆ ಅಧಿಕಾರಿಯ ನಿಯೋಜನೆ ಆದೇಶ ಹಿಂಪಡೆಯಬೇಕು. ಇಲ್ಲವಾದರೆ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಿಸುವುದಾಗಿ ಎಚ್ಚರಿಸಿದ್ದಾರೆ.

ಲೆಕ್ಕ ಪುಸ್ತಕಗಳ ನಿರ್ವಹಣೆ ಕಾರ್ಯ ಮಾಡಬೇಕಿರುವ ಗುಮಾಸ್ತ ಹುದ್ದೆಯ ಮುಂಬಡ್ತಿಯ ಭಾಗವಾದ ವ್ಯವಸ್ಥಾಪಕ ಹುದ್ದೆಯಲ್ಲಿ ಬಿ.ಆರ್.ನಟರಾಜ್ ಕಾರ್ಯ ನಿರ್ವಹಿಸುತ್ತಿದ್ದರು. ಇವರನ್ನು ಬಿಎಸ್‌ಡಬ್ಲ್ಯುಎಂಎಲ್ ಸಂಸ್ಥೆಯ ಎಇಇ ಹುದ್ದೆಗೆ ನಿಯೋಜಿಸಲಾಗಿದೆ. ತಾಂತ್ರಿಕ ನೈಪುಣ್ಯತೆ ಪಡೆದಿರಬೇಕಾದ ಈ ಹುದ್ದೆಗೆ ಬಿ.ಆರ್.ನಟರಾಜು ಅವರನ್ನು ನಿಯೋಜಿಸಿರುವುದು ಎಷ್ಟು ಸಮಂಜಸ ಎಂಬ ಸಾರ್ವಜನಿಕರ ಪ್ರಶ್ನೆಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮತ್ತು ನಗರಾಭಿವೃದ್ಧಿ ಇಲಾಖೆ ಹಿರಿಯ ಅಧಿಕಾರಿಗಳು ಉತ್ತರಿಸಬೇಕು ಎಂದು ಆಗ್ರಹಿಸಿದ್ದಾರೆ.



ಭ್ರಷ್ಟ ಐಎಎಸ್ ಅಧಿಕಾರಿ ಕರೀಗೌಡ ಈ ಬಿಎಸ್‌ಡಬ್ಲ್ಯುಎಂಎಲ್ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ತಮ್ಮ ಸುತ್ತಮುತ್ತಲ ಬಹುತೇಕ ಆಯಕಟ್ಟಿನ ಸ್ಥಳಗಳಲ್ಲಿ ಕೇವಲ ತಮ್ಮ ಸಮುದಾಯಕ್ಕೆ ಸೇರಿದ ಅಧಿಕಾರಿ–ನೌಕರರನ್ನು ನಿಯೋಜಿಸಿಕೊಂಡು ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಹಲವು ದೂರುಗಳು ದಾಖಲಾಗಿವೆ. ಇದೀಗ ತಾಂತ್ರಿಕ ಪರಿಣತಿಯ ಕವಡೆ ಕಾಸಿನಷ್ಟೂ ಜ್ಞಾನವಿಲ್ಲದ ವ್ಯವಸ್ಥಾಪಕ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಯನ್ನು ಎಇಇ ಹುದ್ದೆಗೆ ನಿಯೋಜಿಸಿರುವುದರ ಹಿಂದೆ ಭ್ರಷ್ಟಾಚಾರ ನಡೆದಿರುವ ಬಗ್ಗೆ ಮೂರ್ಖರೂ ಊಹಿಸಬಹುದಾಗಿದೆ ಎಂದು ಹೇಳಿದ್ದಾರೆ.

ಬಿಎಸ್‌ಡಬ್ಲ್ಯುಎಂಎಲ್ ಸಂಸ್ಥೆಯನ್ನು ಅದರ ಸಿಇಒ ಕರೀಗೌಡ ಮತ್ತು ಸಿಜಿಎಂ ಎಸ್.ವಿ.ರಾಜೇಶ್ ಸ್ವಂತ ಉದ್ದಿಮೆಯಂತೆ ಮಾಡಿಕೊಂಡಿದ್ದಾರೆ. ಈ ಸಂಸ್ಥೆಯಲ್ಲಿ ಮಿತಿ ಇಲ್ಲದ ಭ್ರಷ್ಟಾಚಾರ ಪ್ರಕರಣಗಳು ಮತ್ತು ಕಾನೂನು ಬಾಹಿರ ಕಾರ್ಯಗಳು ರಾಜಾರೋಷವಾಗಿ ನಡೆಯುತ್ತಿವೆ. ಆದರೂ ಜಿಬಿಎ ಹಾಗೂ ನಗರಾಭಿವೃದ್ಧಿ ಇಲಾಖೆ ಹಿರಿಯ ಅಧಿಕಾರಿಗಳು ಜಾಣಮೌನ ವಹಿಸಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ತಿಳಿಸಿದ್ದಾರೆ. ಕಾನೂನಿನ ನಿಯಮಗಳನ್ನು ಗಾಳಿಗೆ ತೂರಿ ಬಿ.ಆರ್.ನಟರಾಜು ಅವರನ್ನು ಬಿಎಸ್‌ಡಬ್ಲ್ಯುಎಂಎಲ್ ಸಂಸ್ಥೆಯ ಎಇಇ ಹುದ್ದೆಗೆ ನಿಯೋಜಿಸಿರುವ ಆದೇಶವನ್ನು ಕೂಡಲೇ ಹಿಂಪಡೆದು ಮಾತೃ ಇಲಾಖೆಗೆ ಕಳುಹಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ರಮೇಶ್ ಆಗ್ರಹಿಸಿದ್ದಾರೆ.

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

(ಭಾರತ ಸರ್ಕಾರದ ಮತ್ತು ಕರ್ನಾಟಕ ಸರ್ಕಾರದ ಸಹಭಾಗಿತ್ವದ ಸಂಸ್ಥೆ)
3ನೇ ಮಹಡಿ, ಬಿಎಂಟಿಸಿ ಕಾಂಪ್ಲೆಕ್ಸ್, ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರು–560 027. ದೂ:080–22969274
ಇ–ಮೇಲ್:pdretail@bmrc.co.in
ಕೆಪಿಪಿ ಉಲ್ಲೇಖ ಸಂ.: BMRCL/2025-26/SE0042 ದಿನಾಂಕ.: 31.03.2026

ಟೆಂಡರ್ ಅವಧಿ ವಿಸ್ತರಣೆ ಅಧಿಸೂಚನೆ

ವಿಷಯ: ಎಂ.ಜಿ.ರಸ್ತೆ ಮೆಟ್ರೋ ನಿಲ್ದಾಣದ ಸಿ.ಬಿ.ಡಿ.ಯಲ್ಲಿ ದೊಡ್ಡ ಪ್ರಮಾಣದ ವಾಣಿಜ್ಯ ಹಾಗೂ ಅನುಭವ ಕೇಂದ್ರದ ಅಭಿವೃದ್ಧಿ ಮತ್ತು ಕಾರ್ಯಾಚರಣೆಗೆ ಪರವಾನಗಿ ಮಂಜೂರು

ಟೆಂಡರ್ ವಿವರ:	
ಕೆಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ:	ದಿನಾಂಕ: 20.05.2026ರ ಸಂಜೆ 5:00 ಗಂಟೆಯ ಒಳಗೆ
ಕೆಪಿಪಿ ಪೋರ್ಟಲ್ ಮುಖಾಂತರ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 21.05.2026 ಸಂಜೆ 5:30ರ ನಂತರ

ಟಿಪ್ಪಣಿ: ನಿರೀಕ್ಷಿತ ಟೆಂಡರ್‌ದಾರರು, ಬಿಎಂಆರ್‌ಸಿಎಲ್ ವತಿಯಿಂದ ಬಿಡ್ ಪೂರ್ವ ಪ್ರಶ್ನೆಗಳಿಗೆ ನೀಡಿದ ಪ್ರತಿಕ್ರಿಯೆಗಳು ಮತ್ತು ಆರ್‌ಎಫ್‌ಪಿ.ಗೆ ಸಂಬಂಧಿಸಿದಂತೆ ಹೊರಡಿಸಲಾದ ತಿದ್ದುಪಡಿಗಳನ್ನು ಪರಿಶೀಲಿಸಿ, ಕೆಪಿಪಿ ಜಾಲತಾಣದ ಮೂಲಕ ನಿಗದಿತ ದಿನಾಂಕ/ಸಮಯಕ್ಕಿಂತ ಮೊದಲು ತಮ್ಮ ಬಿಡ್‌ಗಳನ್ನು ಸಲ್ಲಿಸಲು ಕೋರಿದೆ.

ಸಹಿ/– ನಿರ್ದೇಶಕರು (ಹಣಕಾಸು)

ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆ

ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ
ಶ್ರೀ ವಿನಾಯಕ ಸ್ವಾಮಿ ದೇವಾಲಯ
ಜಯನಗರ 4ನೇ ಬಡಾವಣೆ, ಬೆಂಗಳೂರು –560 011, Ph.No.: 080-22443255, , e-mail: srivinayakajayanagara@gmail.com
ಸಂ: ಎಸ್.ವಿ.ಟಿ/ಸಿ.ಆರ್./05/2026–27 ದಿನಾಂಕ: 02.05.2026

ಟೆಂಡರ್ ಪ್ರಕಟಣೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ

ಬೆಂಗಳೂರು ನಗರ ಜಯನಗರ 4ನೇ ಬಡಾವಣೆಯಲ್ಲಿರುವ ಶ್ರೀ ವಿನಾಯಕ ಸ್ವಾಮಿ ದೇವಾಲಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ವಿವಿಧ ಸೇವೆಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ (E-Procurement) ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಸಂಸ್ಥೆ/ ಟೆಂಡರ್‌ದಾರರು ಇ–ಪೋರ್ಟಲ್ **https:/kppp.karnataka.gov.in** ನ ವೆಬ್‌ಸೈಟ್ ಮೂಲಕ ಸೂಕ್ತ ಷರತ್ತು ಮತ್ತು ನಿಬಂಧನೆಗಳನ್ವಯ ತಮ್ಮ ಕನಿಷ್ಠ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೇವಾಲಯದ ಕಚೇರಿಯಲ್ಲಿ ಸಂಪರ್ಕಿಸಬಹುದಾಗಿದೆ.

ಕ್ರ. ಸಂ.	ಟೆಂಡರ್‌ಗಳ ವಿವರ	ಕಡತ ಸಂಖ್ಯೆ	ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ದಿನಾಂಕ: ರಿಂದ	ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ದಿನಾಂಕ: ರವರೆಗೆ	ಆನ್‌ಲೈನ್ ಮೂಲಕ ಟೆಂಡರ್ ತೆರೆಯುವ ದಿನಾಂಕ
1	ಗ್ರಂಧಿಗೆ	HRICE/26-27/IND1038	02.05.2026	02.06.2026ರ ಬೆಳಿಗ್ಗೆ 11:00 ಗಂಟೆಗೆ	03.06.2026ರ ಬೆಳಿಗ್ಗೆ 11:00 ಗಂಟೆಗೆ
2	ದಿನಸಿ	HRICE/26-27/IND1041			
3.	ಹೂವು	HRICE/26-27/IND1042			
4.	ಬಾಳೆಹಣ್ಣು	HRICE/26-27/IND 1043			
5.	ತೆಂಗಿನಕಾಯಿ	HRICE/26-27/IND1044			
6.	ಬೆಣ್ಣೆ	HRICE/26-27/IND 1045			

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ವಿನಾಯಕ ಸ್ವಾಮಿ ದೇವಾಲಯ
DIPR/CP/463/SA/2025-26

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ

ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ
ಟ್ರಾಂಚ್–2, "ಜಲಸಿರಿ", ಪ್ರಾದೇಶಿಕ ಕಾರ್ಯಕ್ರಮ ನಿರ್ವಹಣಾ ಘಟಕ
ಮೊದಲನೇ ಮಹಡಿ, ಮಹಾನಗರ ಪಾಲಿಕೆ ಮಾರ್ಕೆಟ್ ಸಂಕೀರ್ಣ, ಬಿಜೈ ಚರ್ಚ್ ಎದುರುಗಡೆ, ಬಿಜೈ, ಮಂಗಳೂರು–575004 ದೂ: 0824–2981109
ಇ–ಮೇಲ್: jalairitranche2dpd@gmal.com
No:KIUWMIP/RPMU/CR.41/2016-17 ದಿನಾಂಕ: 02.05.2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ವಿಷಯ: ಹೊರಗುತ್ತಿಗೆ ಆಧಾರದಲ್ಲಿ ಆಫೀಸ್ ಬಾಯ್ / ಪಿಯೋನ್ ಸೇವೆಯನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನ್ನು ಆಹ್ವಾನಿಸುವ ಬಗ್ಗೆ.

ಉಪಯೋಜನಾ ನಿರ್ದೇಶಕರು, ಕ್ವಿಮಿಪ್ ಟ್ರಾಂಚ್–2 ಕೆಯುಐಡಿಎಫ್‌ಸಿ ಮಂಗಳೂರು ಕಛೇರಿ ಹಾಗೂ ಅಧೀನ ಕಛೇರಿಗಳಲ್ಲಿ ಆಫೀಸ್ ಬಾಯ್ / ಅಟೆಂಡರ್ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಏಜೆನ್ಸಿ ಮುಖಾಂತರ ಪಡೆಯಲು ದ್ವಿಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

(1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18–05–2026 ಸಾಯಂಕಾಲ 4.30 ಗಂಟೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20–05–2026 ಬೆಳಿಗ್ಗೆ 11.00 ಗಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 22–05–2026 ಮಧ್ಯಾಹ್ನ 3.00 ಗಂಟೆಗೆ. ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in/#/portal/portal-home ರಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಕ್ವಿಮಿಪ್ ಟ್ರಾಂಚ್–2, ಕೆಯುಐಡಿಎಫ್ ಸಿ
ಪ್ರಾದೇಶಿಕ ಕಾರ್ಯಕ್ರಮ ನಿರ್ವಹಣಾ ಘಟಕ, ಮಂಗಳೂರು
DIPR/DK/KSMCA/161/26-27 dt.02.05.2026

ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಮುಖ್ಯ ನಗರ ಯೋಜಕರು ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು – 560002.
ಸಂಖ್ಯೆ: ಮು.ನ.ಯೋ/ಜಿಬಿಎ/ಪಿಆರ್/686/CLU–6/2025–26/ಇ–205432 ದಿನಾಂಕ: 30–04–2026

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 ರಡಿಯಲ್ಲಿ)

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ಸಾರಿಗೆ ಸಂಪರ್ಕ'** ವಲಯದಿಂದ **'ವಸತಿ'** ಉಪಯೋಗಕ್ಕಾಗಿ ಭೂ ಉಪಯೋಗ ಮರು ನಿಗಧಿಪಡಿಸುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಮರು ನಿಗಧಿಪಡಿಸುವ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆಯು ಪ್ರಕಟವಾದ ದಿನದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ನರಸಿಂಹರಾಜ ಚೌಕ, ಬೆಂಗಳೂರು** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ (ಎ/ಗುಂ)	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಶಾಮಣ್ಣ	ಬೆಂಗಳೂರು ಪೂರ್ವ	ಕೆ.ಆರ್. ಪುರ	ಸಾದರ ಮಂಗಲ	8/4	00ಎ–13.08ಗುಂ (00ಎ–0.08ಗುಂ ಖರಾಬು ಹೊರತುಪಡಿಸಿ)	ಸಾರಿಗೆ ಸಂಪರ್ಕ	ವಸತಿ
2	ಶ್ರೀ ಅಶ್ವಥ ರೆಡ್ಡಿ. ಎಸ್				8/9	00ಎ–14ಗುಂ (00ಎ–0.12ಗುಂ ಖರಾಬು ಹೊರತುಪಡಿಸಿ)		
3					9/6	1ಎ–28.08ಗುಂ		

ಷರಾ:– ಅರ್ಜಿದಾರರು ಪ್ರಶ್ನಿತ ಜಮೀನುಗಳು ವ್ಯವಸಾಯಕ್ಕೆ ಬಳಸಲು ಸಾಧ್ಯವಿರುವುದಿಲ್ಲ, ಹಾಗಾಗಿ ಅಭಿವೃದ್ಧಿಪಡಿಸುವ ಅಗತ್ಯವಿರುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ನಮ್ಮ ಜಮೀನಿನ ಸುತ್ತಮುತ್ತ ವಾಸದ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನ / ಅಪಾರ್ಟ್‌ಮೆಂಟ್ ಲಭ್ಯವಾಗುತ್ತವೆ. ಭೂ ಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ಸಾರಿಗೆ–ಸಂಪರ್ಕ'** ವಲಯದಿಂದ **'ವಸತಿ'** ಉಪಯೋಗಕ್ಕೆ ಭೂಉಪಯೋಗ ಮರು ನಿಗಧಿಪಡಿಸಲು ಕೋರಿರುತ್ತಾರೆ.

ಸಹಿ/– ಮುಖ್ಯ ನಗರ ಯೋಜಕರು
ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ(ರಿ),

ಜಿಲ್ಲಾ ಯೋಜನಾ ಅಭಿವೃದ್ಧಿ ಅಧಿಕಾರಿಗಳ ಕಛೇರಿ,
ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಆವರಣ, ಮಂಡ್ಯ.
mail ID : dpdomandya@gmail.com
ಸಂಖ್ಯೆ :ಡಿ.ಹೆಚ್.ಎಸ್/ಎನ್.ಹೆಚ್.ಎಂ/ಮಾನವಸಂಪನ್ಮೂಲ ಟೆಂಡರ್/68/2026–27 ದಿ:28.04.2026

ಇ–ಟೆಂಡರ್ ಅಧಿಸೂಚನೆ
ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು E-Procurement ಮೂಲಕ ಪಡೆಯುವ ಬಗ್ಗೆ

2026–2027 ನೇ ಸಾಲಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಮಂಡ್ಯ ಜಿಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳ ಕಛೇರಿ ಹಾಗೂ ಪ್ರತಿ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಲು ಜಿಲ್ಲಾ ಕಾರ್ಯಕ್ರಮ ಸಹಾಯಕರು–01, ಲೆಕ್ಕ ಪತ್ರ ಸಹಾಯಕರು–09, ಗಣಕಯಂತ್ರ ಸಹಾಯಕರು–27, ಎಂ.ಐ.ಎಸ್.ಐ.ಟಿ ಸಹಾಯಕರು–01, ಅಡುಗೆ ತಯಾರಕರು (ಕುಕ್)–01, ಎಲ್.ಡಿ.ಸಿ (ಎನ್.ಯು.ಹೆಚ್.ಎಂ)–08, ವಾಹನ ಚಾಲಕರು–18, ಗ್ರೂಪ್–ಡಿ–24 ಮತ್ತು ಮಲ್ಟಿ ಟಾಸ್ಕ್ ವರ್ಕರ್–02, ಆಯುಷ್ ಪಂಚಕರ್ಮ ವಿಭಾಗದ ಸ್ವಚ್ಚತಾ ಸಿಬ್ಬಂದಿ–05, ನೌಕರರನ್ನು ಒಳಗೊಂಡಂತೆ ಒಟ್ಟು – 96 ನೌಕರರಿಗೆ ಒಟ್ಟು ರೂ.2,93,97,366/– (ಎರಡು ಕೋಟಿ ತೊಂಬತ್ತ ಮೂರು ಲಕ್ಷ ತೊಂಬತ್ತ ಏಳು ಸಾವಿರ ಮುನ್ನೂರ ಅರವತ್ತ ಆರು ರೂ) ಗಳ ಅಂದಾಜು ವಾರ್ಷಿಕ ವೇತನವನ್ನು ನೀಡಲು (ಇ.ಪಿ.ಎಫ್, ಇ.ಎಸ್.ಐ ಮತ್ತು ಜಿ.ಎಸ್.ಟಿ ಒಳಗೊಂಡಂತೆ), ಹೊರ ಗುತ್ತಿಗೆ ಆಧಾರದ ಮೇಲೆ ಎನ್.ಹೆಚ್.ಎಂ ಮಾರ್ಗಸೂಚಿ ಹಾಗೂ ಕೆ.ಟಿ.ಪಿ.ಪಿ ಕಾಯ್ದೆ 1999 ರ ನಿಯಮಗಳು ಹಾಗೂ ಪ್ರಕಾರ 2000 ನಿಯಮನುಸಾರ ಹೊರ ಸಂಪನ್ಮೂಲ ಏಜೆನ್ಸಿ ಮುಖಾಂತರ ಸೇವೆ ಪಡೆಯಲು ಇ–ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ. (1) ಟೆಂಡರ್ ಪ್ರಕಟಣೆಯ ದಿನಾಂಕ : 29.04.2026. (2) ಟೆಂಡರ್ ಅಂದಾಜು ಮೊತ್ತ : ರೂ. 2,93,97,366/–. (3) ಇ.ಎಂ.ಡಿ ಮೊತ್ತ : ರೂ. 7,35,000/–/. (4) ಟೆಂಡರ್ ಪ್ರಾರಂಭದ ದಿನಾಂಕ (Web Portal) : 29.04.2026 ಬೆಳಗ್ಗೆ: 11.00 ಗಂಟೆಯಿಂದ. (5) ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ : 29.05.2026 ಸಂಜೆ: 05.00 ಗಂಟೆಯವರೆಗೆ. ತಾಂತ್ರಿಕ ಲಕೋಟೆಯನ್ನು ತೆರೆದ ನಂತರ ಆರ್ಥಿಕ ಲಕೋಟೆಯನ್ನು ತೆರೆಯಲಾಗುವುದು. ಯಾವುದೇ ಬದಲಾವಣೆಗಳು ಇದ್ದಲ್ಲಿ ಟೆಂಡರ್ ಸಮಿತಿ ಸಭೆಯಲ್ಲಿ ನಿರ್ಣಯಿಸಿ ಇ–ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. ಯಾವುದೇ ರೀತಿಯ ಪತ್ರಿಕಾ ಪ್ರಕಟಣೆಯನ್ನೂ ಹೊರಡಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು http://eproc.karnataka.gov.in ಹಾಗೂ ಕಛೇರಿ ವೇಳೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆಯಲ್ಲಿ ಪಡೆಯುವುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಉಪಾಧ್ಯಕ್ಷರು, ಜಿಲ್ಲಾ ಆರೋಗ್ಯ ಸಂಘ,
ಎನ್.ಹೆಚ್.ಎಂ, ಮಂಡ್ಯ ಜಿಲ್ಲೆ
ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/081/2026–27

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಎಇ–1/ಐಎಫ್‌ಟಿ–05/2026–27
ದಿನಾಂಕ: 30–04–2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಇ ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ–2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:04–05–2026 ರಿಂದ 11–05–2026 5054–80–190–0–01–132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ–ಬಂಡವಾಳ ವೆಚ್ಚ ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು

1. ಶಿಕಾರಿಪುರ ತಾಲ್ಲೂಕು 1 ಕಾಮಗಾರಿ (ಇಡೆಂಟ್ ಸಂ:35905) ಪ್ರವರ್ಗ–2 (ಎ) ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು
2. ಶಿಕಾರಿಪುರ ತಾಲ್ಲೂಕು 1 ಕಾಮಗಾರಿ (ಇಡೆಂಟ್ ಸಂ:35907) ಎಲ್ಲಾ ಗುತ್ತಿಗೆದಾರರಿಗೆ ಭಾಗವಹಿಸಬಹುದಾದ ಕಾಮಗಾರಿಗಳು
3. ಶಿಕಾರಿಪುರ ತಾಲ್ಲೂಕು 3 ಕಾಮಗಾರಿ (ಇಡೆಂಟ್ ಸಂ:35904, 35906 & 35903) ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ) : 09 ತಿಂಗಳುಗಳು

ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ–2.0 kppp.karnataka.gov.in ನಲ್ಲಿಯೇ ಪ್ರಕಟಿಸಲಾಗುವುದು, ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182– 274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–25501216/ 080–25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/– ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/04/05/172

ಪುರಸಭೆ ಕಾರ್ಯಾಲಯ, ಸೊರಬ 577429

ಶಿವಮೊಗ್ಗ ಜಿಲ್ಲೆ, ಕರ್ನಾಟಕರಾಜ್ಯ, ದೂರವಾಣಿ ಸಂ: 08184–272232,,
e-mail: itstaff_ulb_sorab@yahoo.com,
Web: www.sorabatown.mrc.gov.in
ಸಂಖ್ಯೆ:ಸೊಪುಸ.ಜೆ.ಇ/ಸಿಆರ್/ಟೆಂಡರ್/05/2026–27 ದಿ: 27.04.2026

"ಟೆಂಡರ್ ಪ್ರಕಟಣೆ"
(ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ)

ಸೊರಬ ಪುರಸಭೆಯ ಉದ್ದಿಮೆ ನಿಧಿ ಅನುದಾನದಡಿ ವಿವಿಧ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 2000ರ ಪ್ರಕಾರ ಪ್ರಸಕ್ತ ಬ್ಲಾಕ್ ಅವಧಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ಸ್ KW-3 ನಿಯಮದನ್ವಯ ಕೆ.ಪಿ.ಪಿ. ಪೋರ್ಟ್‌ಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹಗುತ್ತಿಗೆದಾರರಿಂದ ಕೆ.ಪಿ.ಪಿ. ಪೋರ್ಟ್‌ಲ್ ಮುಖಾಂತರ ಆಹ್ವಾನಿಸಲಾಗಿದೆ. ಕೆ.ಪಿ.ಪಿ. ಪೋರ್ಟ್‌ಲ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದು ಭಾಗವಹಿಸಬಹುದಾಗಿದೆ.

ಕ್ರಸಂ. 1. ಇಂಡೆಂಟ್ ನಂ.: DMA/2025-26/OW/WORK_INDENT56087/CALL-2 **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 75.00 **ಟೆಂಡರ್ ಇ.ಎಂ.ಡಿ:** 126991.00 **ಕಾಲಾವಧಿ:** 6 ತಿಂಗಳು

*) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿ: 11.05.2026 ಸಮಯ: ಸಂಜೆ 5.30 ಗಂಟೆಗೆ *) ಟೆಂಡರ್ ಸಲ್ಲಿಸುವ ಕೊನೆಯ ದಿ: 12.05.2026 ಸಮಯ: ಸಂಜೆ 5.30 ಗಂಟೆವರೆಗೆ. *) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 14.05.2026 ಸಮಯ :ಸಂಜೆ 5.30 ಗಂಟೆಗೆ *) ಆರ್ಥಿಕ ಬಿಡ್ ತೆರೆಯುವ ದಿನಾಂಕ : 15.05.2026 ಸಮಯ : ಸಂಜೆ 5.30 ಗಂಟೆಗೆ

ಸಹಿ/– ಅಧ್ಯಕ್ಷಿಯಾಧಿಕಾರಿ, ಪುರಸಭೆ, ಸೊರಬ
ಸಹಿ/– ಮುಖ್ಯಾಧಿಕಾರಿ, ಪುರಸಭೆ, ಸೊರಬ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/157/04/158

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.
ಸಂ: ಬೆಂಅಪ್ರಾ/ಉಕಾ–1/ಹೆಚ್‌ಎಸ್‌ಆರ್/7/1461/2025–26 ದಿನಾಂಕ: 23.03.2026

ಪ್ರಕಟಣೆ

ಶ್ರೀ ಕೆ.ಎಸ್.ಎಲ್. ಸ್ವಾಮಿ ಎಂಬುವವರಿಗೆ 'ಜಿ' ಪ್ರವರ್ಗದಡಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹೊಸೂರು ಸರ್ಜಾಪುರ ರಸ್ತೆ (ಹೆಚ್.ಎಸ್.ಆರ್) ಸೆಕ್ಟರ್–7 ಬಡಾವಣೆಯ 228.67 ಚದರ ಮೀಟರ್ ಅಳತೆಯ ನಿವೇಶನ ಸಂಖ್ಯೆ 1461 ಅನ್ನು ಹಂಚಿಕೆ ಮಾಡಿ, ದಿನಾಂಕ 27–02–2007 ರಂದು ಗುತ್ತಿಗೆ ಹಾಗೂ ಮಾರಾಟ ಒಪ್ಪಂದಪತ್ರವನ್ನು ನೋಂದಾಯಿಸಿ, ಸ್ವಾಧೀನ ಪತ್ರವನ್ನು ನೀಡಲಾಗಿರುತ್ತದೆ

ನಂತರ ನಿವೇಶನದ ಹಂಚಿಕೆದಾರರಾದ ಶ್ರೀ.ಕೆ.ಎಸ್.ಎಲ್. ಸ್ವಾಮಿ ರವರ ಹೆಸರಿನಿಂದ ದಿನಾಂಕ:09–01–2012 ರಂದು ನೋಂದಾಯಿತ ಜಿಪಿಎ ಮೂಲಕ ಪಡೆದಿರುವ ಶ್ರೀ ಭದ್ರಾ ರೆಡ್ಡಿ ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಸದರಿ ನಿವೇಶನವನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿ. ನಿವೇಶನದ ಗುತ್ತಿ ಅವಧಿಯು ಮುಕ್ತಾಯವಾಗಿರುವುದರಿಂದ ಶುದ್ಧ ಕ್ರಯಪತ್ರವನ್ನು ನೋಂದಾಯಿಸಿಕೊಡುವಂತೆ ಕೋರಿರುತ್ತಾರೆ.

ಆದುದರಿಂದ ಮೇಲ್ಕಂಡ ನಿವೇಶನವನ್ನು ಅರ್ಜಿದಾರರಾದ ಶ್ರೀ ಭದ್ರಾ ರೆಡ್ಡಿ ರವರ ಹೆಸರಿಗೆ ಜಿಪಿಎ ಮತ್ತು ಕ್ರಯದ ಕರಾರು ಪತ್ರದ ಮೂಲಕ ವರ್ಗಾವಣೆ ಮಾಡಿ ಶುದ್ಧ ಕ್ರಯಪತ್ರವನ್ನು ನೋಂದಾಯಿಸುವ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆ/ತಂಟೆ ತಕರಾರು ಇದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ 30 ದಿವಸಗಳೊಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಪ್ರಾಧಿಕಾರಕ್ಕೆ ಸಲ್ಲಿಸುವುದು. 30 ದಿನಗಳು ಮುಗಿದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪ್ರಾಧಿಕಾರವು ಪುರಸ್ಕರಿಸುವುದಿಲ್ಲ ಹಾಗೂ ಮೇಲ್ಕಂಡ ನಿವೇಶನವನ್ನು ಅರ್ಜಿದಾರರಾದ ಶ್ರೀ ಭದ್ರಾ ರೆಡ್ಡಿ ರವರ ಹೆಸರಿಗೆ ವರ್ಗಾವಣೆ ಮಾಡಿ, ಶುದ್ಧ ಕ್ರಯಪತ್ರವನ್ನು ನೋಂದಣಿ ಮಾಡುವ ಬಗ್ಗೆ ಪ್ರಾಧಿಕಾರದಿಂದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಸಹ ಸಾರ್ವಜನಿಕರಿಗೆ ಈ ಪ್ರಕಟಣೆಯ ಮೂಲಕ ತಿಳಿಸಿದೆ.

ಸಹಾಯವಾಣಿ/ವಾಟ್ಸಪ್: 94831 66622 (24x7). @BDAOfficialGoK
ಸಹಿ/– ಆಯುಕ್ತರು, ಬಿಡಿಎ, ಬೆಂಗಳೂರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ ಮ.ಟೆಂಡರ.ಪ್ರ–35/2025–26/391 ದಿನಾಂಕ: 29–04–2026

ಮರು ಟೆಂಡರ್ (Call-2) ಪ್ರಕಟಣೆ
(ಇ–ಪ್ರಕ್ಯೂರಮೆಂಟ್ ಪದ್ದತಿಯಲ್ಲಿ ಮಾತ್ರ)

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ಟೆಂಡರ–35/2025–26/5604 ದಿನಾಂಕ: 04–03–2026

ಉಲ್ಲೇಖದ ಈ ಕಚೇರಿಯ ಪತ್ರದಲ್ಲಿ ಕರೆಯಲಾಗಿದ್ದ 2025–26ನೇ ಸಾಲಿನ 4059-80-051-0-60-132-CMIDP ಯೋಜನೆ ಅಡಿಯಲ್ಲಿ ಕರೆಯಲಾಗಿದ್ದ Construction of Cement Concrete Road from Karnakod Road to Sonagarjaddi, NH-66 to Kabbinhakkala Road, Mogehalla Road to Basakuli Road, Krishnakere to Heggar, Jaddi to Kasabail, NH-66 to Bommanakodlu and Constuction of Retaining Wall near Kranshakere Kenel in Nagarbastikere Gram Panchayat in Honavar Taluk U K Dist Under CMIDP During 2025-26 PWD/2025-26/RD/WORK_INDENT 32931/CALL-2 ರೂ. 100.88 ಲಕ್ಷದ ಕಾಮಗಾರಿಗಳಿಗೆ ಮರು ಟೆಂಡರನ (Call-2) ದಿನಾಂಕದ ವಿವರ ಈ ಕೆಳಗಿನಂತಿದೆ.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 08–05–2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 11–05–2026 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 12–05–2026 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 14–05–2026 17.00 ಗಂಟೆವರೆಗೆ

ಹೆಚ್ಚಿನ ವಿವರಗಳನ್ನು, ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಕಾರವಾರ ಇವರ ಕಛೇರಿಗೆ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ
DIPR/KWR/KSMCA/96/26-27 dt. 30.04.2026

ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ

ಸತ್ಯಮೇವ ಜಯತೇ — ಆರೋಗ್ಯವೇ ಭಾಗ್ಯ
ದೂರವಾಣಿ ಸಂಖ್ಯೆ: 0836–2741277, 0836–2748374,
ಫ್ಯಾಕ್ಸ್ ಸಂಖ್ಯೆ: 0836–2741277,
Email Id: dsdharwad@gmail.com
ಕ್ರ: ಜಿಆಧಾ/ಎ.ಆರ್.ಎಸ್/02/2026–27 ದಿನಾಂಕ: 22–04–2026

ಟೆಂಡರ್ ಪ್ರಕಟಣೆ

ವಿಷಯ: 2026–2027 ನೇ ಸಾಲಿಗೆ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಹಾಗೂ ತಾಯಿ ಮಕ್ಕಳ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ 32 ಗ್ರೂಪ್ ಡಿ. 04–ಸ್ವೀಪರ್, 02–ಡಾಟಾ ಎಂಟ್ರಿ ಆಪರೇಟರ, 01–ಲ್ಯಾಬ ಟೆಕ್ನಿಷಿಯನ್, 01–ಫಾರ್ಮಾಸಿಸ್ಟ, 03–ಶುಶ್ರೂಷಾ ಅಧಿಕಾರಿಗಳ ಮಾನವ ಸಂಪನ್ಮೂಲವನ್ನು ಒದಗಿಸಲು ಇ–ಟೆಂಡರ್ ಆಹ್ವಾನಿಸಿರುವ ಕುರಿತು.

2026–2027 ನೇ ಸಾಲಿಗೆ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಹಾಗೂ ತಾಯಿ ಮಕ್ಕಳ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ 32 ಗ್ರೂಪ್ ಡಿ. 04 ಸ್ವೀಪರ್, 02–ಡಾಟಾ ಎಂಟ್ರಿ ಆಪರೇಟರ, 01–ಲ್ಯಾಬ ಟೆಕ್ನಿಷಿಯನ್, 01–ಫಾರ್ಮಾಸಿಸ್ಟ, 03–ಶುಶ್ರೂಷಾ ಅಧಿಕಾರಿಗಳ ಮಾನವ ಸಂಪನ್ಮೂಲವನ್ನು ಒದಗಿಸಲು ಇ–ಟೆಂಡರ್ ಮೂಲಕ ಅರ್ಹ ಮತ್ತು ಆಸಕ್ತ ಸಂಸ್ಥೆಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999–2000 ರ ಪ್ರಕಾರ ದ್ವಿ–ಬಿಡ್ (ತಾಂತ್ರಿಕ ಮತ್ತು ಆರ್ಥಿಕ) ಪದ್ಧತಿಯಲ್ಲಿ ಟೆಂಡರ್ (ಇ–ಟೆಂಡರ್) ಆಹ್ವಾನಿಸಲಾಗಿದೆ.

1) ಇ–ಪೋರ್ಟಲ್‌ದಲ್ಲಿ ಅಪ್‌ಲೋಡ್ ಮಾಡುವ **ದಿನಾಂಕ: 22–04–2026 ರಿಂದ 06–05–2026ರ ವರೆಗೆ ಸಾಯಂಕಾಲ 4.00 ಗಂಟೆಯವರೆಗೆ** 2) ತಾಂತ್ರಿಕ್ ಬಿಡ್‌ನ್ನು ತೆರೆಯುವ **ದಿನಾಂಕ: 08–05–2026 ರಂದು 11.30 ಗಂಟೆಗೆ** 3) ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 11–05–2026 ರಂದು 12.00 ಗಂಟೆಗೆ**

ಟೆಂಡರಿಗೆ ಸಂಬಂಧಪಟ್ಟ ಎಲ್ಲ ಮಾಹಿತಿಯನ್ನು ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ **(www.kppp.karnataka.gov.in)** ದಿಂದ ಪಡೆಯಬಹುದು ಅಥವಾ ಕಚೇರಿ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು
ಜಿಲ್ಲಾ ಆಸ್ಪತ್ರೆ ಧಾರವಾಡ
ಡಿಐಪಿಆರ್/ಧಾರವಾಡ/112/ಮಣಿಪಾಲ್/2026–27

ಐಪಿಎಲ್-2026 ಅಂಕಪಟ್ಟಿ

ತಂಡಗಳು	ಪಂದ್ಯ	ಗೆಲುವು	ಸೋಲು	ರದ್ದು	ನೆಟ್ ರನ್‌ರೇಟ್	ಅಂಕ
ಪಂಜಾಬ್	08	06	01	01	+1.043	13
ಆರ್‌ಸಿಬಿ	09	06	03	00	+1.420	12
ಹೈದ್ರಾಬಾದ್	09	06	03	00	+0.832	12
ರಾಜಸ್ಥಾನ	10	06	04	00	+0.510	12
ಗುಜರಾತ್	09	05	04	00	-0.192	10
ಚೆನ್ನೈ	09	04	05	00	+0.005	08
ಡೆಲ್ಲಿ	09	04	05	00	-0.895	08
ಕೋಲ್ಕತಾ	08	02	05	01	-0.751	05
ಮುಂಬೈ	09	02	07	00	-0.803	04
ಲಖನೌ	08	02	06	00	-1.106	04

ಪ್ಲೇ-ಆಫ್‌ನಿಂದ ಮುಂಬೈ ಔಟ್?

ಚೆನ್ನೈ ವಿರುದ್ಧ 8 ವಿಕೆಟ್ ಹೀನಾಯ ಸೋಲು | ಮುಂಬೈ 159/7, ಚೆನ್ನೈ 160/2

7ನೇ ಸೋಲು ಕಂಡ ಮುಂಬೈ | ಬಾಕಿ 5ರಲ್ಲಿ ಗೆದ್ದರೂ ಪ್ಲೇ-ಆಫ್‌ಗೆ ಪ್ರವೇಶ ಕಷ್ಟ

ಚೆನ್ನೈ: 5 ಬಾರಿ ಚಾಂಪಿಯನ್ ಮುಂಬೈ ಇಂಡಿಯನ್ಸ್, 2026ರ ಐಪಿಎಲ್‌ನ ಪ್ಲೇ-ಆಫ್ ರೇಸ್‌ನಿಂದ ಬಹುತೇಕ ಹೊರಬಿದ್ದಿದೆ. 5 ಬಾರಿ ಕಪ್ ಗೆದ್ದಿರುವ ಮತ್ತೊಂದು ತಂಡ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಶನಿವಾರ ಇಲ್ಲಿನ ಚೆಪಾಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ, ಮುಂಬೈಗೆ 8 ವಿಕೆಟ್‌ಗಳ ಹೀನಾಯ ಸೋಲು ಎದುರಾಯಿತು. 7ನೇ ಸೋಲಿನೊಂದಿಗೆ ಮುಂಬೈ 9ನೇ ಸ್ಥಾನದಲ್ಲೇ ಉಳಿದರೆ, 4ನೇ ಗೆಲುವು ಸಾಧಿಸಿದ ಚೆನ್ನೈ, ಅಂಕಪಟ್ಟಿಯಲ್ಲಿ 6ನೇ ಸ್ಥಾನಕ್ಕೇರಿದೆ.

ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಮುಂಬೈ 20 ಓವರಲ್ಲಿ 7 ವಿಕೆಟ್‌ಗೆ 159 ರನ್ ಗಳಿಸಿತು. ಮೊದಲ 11 ಓವರಲ್ಲಿ 3 ವಿಕೆಟ್‌ಗೆ 100 ರನ್ ಗಳಿಸಿದ್ದ ಮುಂಬೈ, ಕೊನೆ 9 ಓವರಲ್ಲಿ 4 ವಿಕೆಟ್ ಕಳೆದುಕೊಂಡು ಕೇವಲ 59 ರನ್ ಗಳಿಸಿತು. ನಾಯಕ ಹಾರ್ದಿಕ್ ಪಾಂಡ್ಯ 23 ಎಸೆತ ಎದುರಿಸಿ ಕೇವಲ 18 ರನ್ ಗಳಿಸಿದ್ದು ತಂಡಕ್ಕೆ ಹಿನ್ನಡೆ ಉಂಟು ಮಾಡಿತು. ಚೆನ್ನೈ ಪರ ಅನ್ಶುಲ್ ಕಾಂಬೋಜ್ ಹಾಗೂ ನೂರ್ ಅಹ್ಮದ್ ಅತ್ಯುತ್ತಮ ಬೌಲಿಂಗ್ ದಾಳಿ ಸಂಘಟಿಸಿ, ಮುಂಬೈ ಇಂಡಿಯನ್ಸ್ ಬ್ಯಾಟರ್‌ಗಳನ್ನು ಕಟ್ಟಿಹಾಕಿದರು.


ಸತತ 2ನೇ 50 ಬಾರಿಸಿದ ಋತುರಾಜ್

ಚೆನ್ನೈ ಎಚ್ಚರಿಕೆ ಆಟ: ಸುಲಭ ಗುರಿ ಬೆನ್ನತ್ತಿದ ಚೆನ್ನೈ, ಆರಂಭದಲ್ಲೇ ಸಂಜು ಸ್ಯಾಮ್ಸನ್ (11)ರ ವಿಕೆಟ್ ಕಳೆದುಕೊಂಡಿತು. ಆದರೆ ನಾಯಕ ಋತುರಾಜ್ ಗಾಯಕ್ವಾಡ್ ಲಯ ಕಾಯ್ದುಕೊಂಡು ಕೊನೆವರೆಗೂ ಕ್ರೀಸ್‌ನಲ್ಲಿ ನಿಂತರು. ಉರ್ವಿಲ್ ಪಟೇಲ್ 12 ಎಸೆತದಲ್ಲಿ 27 ರನ್ ಸಿಡಿಸಿ, ರನ್ ಗಳಿಕೆಗೆ ವೇಗ ತುಂಬಿದರೆ, ಇಂಪ್ಯಾಕ್ಟ್ ಆಟಗಾರನಾಗಿ ಕ್ರೀಸ್ ಗಿಳಿದ ಕಾರ್ತಿಕ್ ಶರ್ಮಾ 40 ಎಸೆತದಲ್ಲಿ ಔಟಾಗದೆ 54 ರನ್ ಗಳಿಸಿದರು. ಐಪಿಎಲ್‌ನಲ್ಲಿ ಕಾರ್ತಿಕ್‌ಗೆ ಇದು ಚೊಚ್ಚಲ ಅರ್ಧಶತಕ. ಋತುರಾಜ್ 48 ಎಸೆತದಲ್ಲಿ ಔಟಾಗದೆ 67 ರನ್ ಗಳಿಸಿ, ತಂಡವನ್ನು 18.1 ಓವರಲ್ಲಿ ಜಯದ ದಡ ಸೇರಿಸಿದರು.

ಸ್ಕೋರ್: ಮುಂಬೈ 20 ಓವರಲ್ಲಿ 159/7 (ನಮನ್ 57, ರಿಕೆಲ್ಟನ್ 37, ಅನ್ಶುಲ್ 3-32, ನೂರ್ 2-26), ಚೆನ್ನೈ 18.1 ಓವರಲ್ಲಿ 160/2 (ಋತುರಾಜ್ 67*, ಕಾರ್ತಿಕ್ 54*, ಬೂಮ್ರಾ 1-20) ಪಂದ್ಯಶ್ರೇಷ್ಠ: ಋತುರಾಜ್ ಗಾಯಕ್ವಾಡ್

ಇಂದು ಹೈದ್ರಾಬಾದ್ vs ಕೆಕೆಆರ್ ಪಂಜಾಬ್ vs ಗುಜರಾತ್ ಸೆಣಸು

ಪಂಜಾಬ್‌ಗೆ ಪ್ಲೇ-ಆಫ್ ಹೊಸ್ತಿಲು ತಲುಪುವ ಗುರಿ

ಹೈದ್ರಾಬಾದ್ / ಅಹಮದಾಬಾದ್: ಐಪಿಎಲ್‌ನಲ್ಲಿ ಭಾನುವಾರ ಎರಡು ಮಹತ್ವದ ಪಂದ್ಯಗಳು ನಡೆಯಲಿವೆ. ಮೊದಲ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದ್ರಾಬಾದ್ ಹಾಗೂ ಕೋಲ್ಕತಾ ನೈಟ್‌ರೈಡರ್ಸ್ ಸೆಣಸಲಿದ್ದು, ಸತತ 5 ಗೆಲುವು ದಾಖಲಿಸಿರುವ ಸನ್‌ರೈಸರ್ಸ್ ಜಯದ ಓಟ ಮುಂದುವರಿಸಲು ಕಾತರಿಸುತ್ತಿವೆ. ಮತ್ತೊಂದೆಡೆ ಸತತ ಸೋಲುಗಳಿಂದ ಕಂಗೆಟ್ಟಿದ್ದ ಕೆಕೆಆರ್, ಕಳೆದೆರಡು ಪಂದ್ಯಗಳಲ್ಲಿ ಜಯಿಸಿದ್ದು, ಹ್ಯಾಟ್ರಿಕ್ ಜಯದ ಮೂಲಕ ಪ್ಲೇ-ಆಫ್ ರೇಸ್‌ನಲ್ಲಿ ಉಳಿಯುವ ನಿರೀಕ್ಷೆಯಲ್ಲಿದೆ.

ದಿನದ 2ನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಹಾಗೂ ಗುಜರಾತ್ ಟೈಟಾನ್ಸ್ ಮುಖಾಮುಖಿಯಾಗಲಿವೆ. 7 ಪಂದ್ಯಗಳಲ್ಲಿ ಅಜೇಯವಾಗಿ ಉಳಿದಿದ್ದ ಪಂಜಾಬ್, ಕಳೆದ ಪಂದ್ಯದಲ್ಲಿ ಸೋಲು ಅನುಭವಿಸಿತ್ತು. ಆ ಸೋಲಿನ ಆಘಾತದಿಂದ ತಂಡ ಹೊರಬರಬೇಕಿದೆ. ಈ ಪಂದ್ಯದಲ್ಲಿ ಗೆದ್ದರೆ ಪ್ಲೇ-ಆಫ್ ಪ್ರವೇಶಿಸುವುದು ಬಹುತೇಕ ಖಚಿತವಾಗಲಿದೆ. ಇನ್ನು, ಗುಜರಾತ್ ಕೂಡ ಸತತ 2 ಪಂದ್ಯ ಗೆದ್ದು ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದೆ.

ಪಂದ್ಯ ಆರಂಭ: ಸನ್‌ರೈಸರ್ಸ್-ಕೆಕೆಆರ್, ಮಧ್ಯಾಹ್ನ 3.30ಕ್ಕೆ, ಪಂಜಾಬ್-ಗುಜರಾತ್, ಸಂಜೆ 7.30ಕ್ಕೆ

ಸುದ್ದಿ ಸಿಂಚನ

2 ದಿನದಲ್ಲಿ ಐಪಿಎಲ್ ಪ್ಲೇ-ಆಫ್ ವೇಳಾಪಟ್ಟಿ: ಬೆಂಗ್ಳೂರಲ್ಲಿ ಫೈನಲ್ ಪಂದ್ಯ ನಡೆಸುತ್ತಾ ಬಿಸಿಸಿಐ?

ಮುಂಬೈ: 19ನೇ ಆವೃತ್ತಿಯ ಐಪಿಎಲ್ ವೇಳಾಪಟ್ಟಿಯನ್ನು ಮುಂದಿನ 2 ದಿನಗಳಲ್ಲಿ ಪ್ರಕಟಿಸುವುದಾಗಿ ಶನಿವಾರ ಬಿಸಿಸಿಐ ಕಾರ್ಯದರ್ಶಿ ದೇವ್‌ಜಿತ್ ಸಾಯ್ಕಿಯಾ ತಿಳಿಸಿದ್ದಾರೆ. ಈ ಆವೃತ್ತಿ ಆರಂಭಕ್ಕೂ ಮುನ್ನ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) 'ಪ್ಲೇ-ಆಫ್‌ನ ಒಂದು ಪಂದ್ಯ, ಫೈನಲ್ ಬೆಂಗಳೂರಿಗೆ ನೀಡುವುದಾಗಿ ಬಿಸಿಸಿಐ ಭರವಸೆ ನೀಡಿದೆ' ಎಂದಿತ್ತು. ಹೀಗಾಗಿ, ಬಿಸಿಸಿಐ ಘೋಷಣೆ ಬಗ್ಗೆ ರಾಜ್ಯದ ಕ್ರಿಕೆಟ್ ಅಭಿಮಾನಿಗಳಲ್ಲಿ ಕುತೂಹಲ ಮೂಡಿದೆ.



ಬಾಂಗ್ಲಾ-ಕಿವೀಸ್ ಟಿ20 ಸರಣಿ 1-1ರಲ್ಲಿ ಸಮ

ಮೀರ್‌ಪುರ: ಬಾಂಗ್ಲಾದೇಶ ವಿರುದ್ಧದ 3ನೇ ಟಿ20 ಪಂದ್ಯವನ್ನು 6 ವಿಕೆಟಲ್ಲಿ ಗೆಲ್ಲುವ ಮೂಲಕ ನ್ಯೂಜಿಲೆಂಡ್, 3 ಪಂದ್ಯಗಳ ಸರಣಿಯನ್ನು 1-1ರಲ್ಲಿ ಡ್ರಾ ಮಾಡಿಕೊಂಡಿದೆ. ಶನಿವಾರ, ಮಳೆಯಿಂದಾಗಿ ಪಂದ್ಯವನ್ನು ತಲಾ 15 ಓವರ್‌ಗೆ ಇಳಿಸಲಾಗಿತ್ತು. ಮೊದಲು ಬ್ಯಾಟ್ ಮಾಡಿದ ಬಾಂಗ್ಲಾ, 14.2 ಓವರಲ್ಲಿ 102 ರನ್‌ಗೆ ಆಲೌಟ್ ಆಯಿತು. ಬೆವೊನ್ ಜೇಕಬ್ಸ್‌ರ ಆಕರ್ಷಕ ಅರ್ಧಶತಕ (31 ಎಸೆತದಲ್ಲಿ 62*)ದ ನೆರವಿನಿಂದ ಕಿವೀಸ್ 11.4 ಓವರಲ್ಲಿ 4 ವಿಕೆಟ್‌ಗೆ 104 ರನ್ ಗಳಿಸಿ ಜಯಿಸಿತು. ಮೊದಲ ಪಂದ್ಯವನ್ನು ಬಾಂಗ್ಲಾ ಗೆದ್ದರೆ, 2ನೇ ಪಂದ್ಯ ಮಳೆಗೆ ಬಲಿಯಾಗಿತ್ತು.

ಮಾಜಿ ಕ್ರಿಕೆಟರ್ ಶಾಂತಾಗೆ ಸನ್ಮಾನ


ಭಾರತ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕ ಶಾಂತಾ ಅವರನ್ನು ಶನಿವಾರ ಸನ್ಮಾನಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಭಾರತ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ, ಅರ್ಜುನ ಪ್ರಶಸ್ತಿ ವಿಜೇತೆ ಶಾಂತಾ ರಂಗಸ್ವಾಮಿ ಅವರನ್ನು ಶನಿವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸನ್ಮಾನಿಸಲಾಯಿತು. ಅವರ ಮಾಜಿ ಸಹ ಆಟಗಾರ್ತಿಯರು, ಸ್ನೇಹಿತೆಯರು ಈ ಸನ್ಮಾನ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ, ಹಿರಿಯ ರಂಗಕರ್ಮಿ ಶ್ರೀನಿವಾಸ್ ಕಪ್ಪಣ್ಣ ಅವರು ಶಾಂತಾ ಅವರಿಗೆ ಹೂಗುಚ್ಛ ನೀಡಿ ಗೌರವಿಸಿದರು. ಭಾರತದ ಮಾಜಿ ವೇಗಿ, ಕೆಎಸ್‌ಸಿಎ ಮಾಜಿ ಕಾರ್ಯದರ್ಶಿ, ಐಸಿಸಿ ಮ್ಯಾಚ್ ರೆಫ್ರಿ, ಜಾವಗಲ್ ಶ್ರೀನಾಥ್ ಅವರು ಶಾಂತಾ ಅವರ ಸಾಧನೆಗಳ ಬಗ್ಗೆ ಮಾತನಾಡಿದರು. ಕರ್ನಾಟಕದ ಹಲವು ಯುವ ಮಹಿಳಾ ಕ್ರಿಕೆಟಿಗರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಟಿ20 ವಿಶ್ವಕಪ್ ಟೀಂನಲ್ಲಿ ಶ್ರೇಯಾಂಕ

ಹರ್ಮನ್‌ಪ್ರೀತ್ ನಾಯಕಿ | ಜೂ.12ರಿಂದ ಇಂಗ್ಲೆಂಡಲ್ಲಿ ಟೂರ್ನಿ

ಮುಂಬೈ: ಜೂ.12ರಿಂದ ಇಂಗ್ಲೆಂಡ್ ಹಾಗೂ ವೇಲ್ಸ್‌ನಲ್ಲಿ ನಡೆಯಲಿರುವ ಐಸಿಸಿ ಟಿ20 ವಿಶ್ವಕಪ್ ಟೂರ್ನಿಗೆ ಭಾರತ ಮಹಿಳಾ ತಂಡ ಪ್ರಕಟಗೊಂಡಿದೆ. ಶನಿವಾರ ನಡೆದ ಬಿಸಿಸಿಐ ಸಭೆಯಲ್ಲಿ 15 ಸದಸ್ಯೆಯರ ತಂಡವನ್ನು ಆಯ್ಕೆ ಮಾಡಲಾಯಿತು.



ಹರ್ಮನ್‌ಪ್ರೀತ್ ತಂಡ ಮುನ್ನಡೆಸಲಿದ್ದು, ಸ್ಮೃತಿ ಮಂಧನಾ ಉಪನಾಯಕಿಯಾಗಿ ಮುಂದುವರಿಯಲಿದ್ದಾರೆ. ಕರ್ನಾಟಕದ ಆಲ್ರೌಂಡರ್ ಶ್ರೇಯಾಂಕ ಪಾಟೀಲ್‌ಗೆ ತಂಡದಲ್ಲಿ ಸ್ಥಾನ ನೀಡಲಾಗಿದೆ. ಡಬ್ಲ್ಯುಪಿಎಲ್‌ನಲ್ಲಿ ಗಮನ ಸೆಳೆದಿದ್ದ ಮಧ್ಯಮ ವೇಗಿ ನಂದಿನಿ ಶರ್ಮಾಗೆ ಮೊದಲ ಬಾರಿಗೆ ತಂಡದಲ್ಲಿ ಸ್ಥಾನ ಸಿಕ್ಕಿದೆ.

ಭಾರತ ತನ್ನ ಮೊದಲ ಪಂದ್ಯವನ್ನು ಜೂ.14 ರಂದು ಪಾಕಿಸ್ತಾನ ವಿರುದ್ಧ ಆಡಲಿದೆ. ಜು.5ರಂದು ಫೈನಲ್ ನಿಗದಿಯಾಗಿದೆ. ಭಾರತ ಚೊಚ್ಚಲ ಟಿ20 ವಿಶ್ವಕಪ್ ಗೆಲ್ಲುವ ಗುರಿಯೊಂದಿಗೆ ಟೂರ್ನಿಯಲ್ಲಿ ಕಣಕ್ಕಿಳಿಯಲಿದೆ.

ತಂಡ: ಹರ್ಮನ್‌ಪ್ರೀತ್ (ನಾಯಕಿ), ಸ್ಮೃತಿ ಮಂಧನಾ, ಶಫಾಲಿ ವರ್ಮಾ, ಜೆಮಿಮಾ ರೋಡ್ರಿಗ್ಸ್, ಭಾರತಿ ಫೂಲ್ಮಾಲಿ, ದೀಪ್ತಿ ಶರ್ಮಾ, ರಿಚಾ ಘೋಷ್, ಶ್ರೀ ಚರಣಿ, ಯಸ್ತಿಕಾ ಭಾಟಿಯಾ, ನಂದಿನಿ ಶರ್ಮಾ, ಅರುಂಧತಿ ರೆಡ್ಡಿ, ರೇಣುಕಾ ಠಾಕೂರ್, ಕ್ರಾಂತಿ ಗೌಡ್, ಶ್ರೇಯಾಂಕ ಪಾಟೀಲ್, ರಾಧಾ ಯಾದವ್.

ವಿಶ್ವ ಅಥ್ಲೆಟಿಕ್ಸ್ ರಿಲೇ: ಭಾರತ ತಂಡಕ್ಕೆ ನಿರಾಸೆ

ಗ್ಯಾಬರೋನ್ (ಬೋಟ್ಸ್‌ವಾನಾ): ವಿಶ್ವ ಅಥ್ಲೆಟಿಕ್ಸ್ ರಿಲೇ ಚಾಂಪಿಯನ್‌ಶಿಪ್‌ನ ಐದೂ ವಿಭಾಗಗಳಲ್ಲಿ ಭಾರತ ಫೈನಲ್ ಪ್ರವೇಶಿಸಲು ವಿಫಲವಾಯಿತು. ಶನಿವಾರ ನಡೆದ ಅರ್ಹತಾ ಸುತ್ತಿನಲ್ಲಿ ಪುರುಷರ 4X400 ಮೀ., 4X100 ಮೀ., ಮಹಿಳೆಯರ 4X100 ಮೀ., 4X400 ಮೀ. ಹಾಗೂ 4X400 ಮೀ. ಮಿಶ್ರ ತಂಡ ವಿಭಾಗಗಳಲ್ಲಿ ಭಾರತೀಯರು ಫೈನಲ್‌ಗೇರಲಿಲ್ಲ. ಆದರೆ ಈ ಪೈಕಿ 4 ತಂಡಗಳು ಭಾನುವಾರ, 2027ರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗೆ ಅರ್ಹತೆ ಪಡೆಯಲು ಸ್ಪರ್ಧಿಸಲಿವೆ.

'ಭಾರತ ಒಲಿಂಪಿಕ್ಸ್ ಆತಿಥ್ಯ ಹಕ್ಕು ಪಡೆಯಬೇಕಿದ್ದರೆ ಡೋಪಿಂಗ್ ನಿಯಂತ್ರಿಸಬೇಕು'

ಅಂತಾರಾಷ್ಟ್ರೀಯ ಟೆಸ್ಟಿಂಗ್ ಏಜೆನ್ಸಿ ಎಚ್ಚರಿಕೆ

ನ್ಯೂಯಾರ್ಕ್: 2036ರ ಒಲಿಂಪಿಕ್ಸ್ ಆತಿಥ್ಯ ಹಕ್ಕು ಭಾರತಕ್ಕೆ ಸಿಗಬೇಕಿದ್ದರೆ, ದೇಶದ ಕ್ರೀಡಾ ವ್ಯವಸ್ಥೆಯಲ್ಲಿ ಹಲವು ಬದಲಾವಣೆ ಹಾಗೂ ಸುಧಾರಣೆ ಆಗಬೇಕಿದ್ದು, ಪ್ರಮುಖವಾಗಿ ಡೋಪಿಂಗ್ ಪ್ರಕರಣಗಳನ್ನು ನಿಯಂತ್ರಿಸಬೇಕಿದೆ ಎಂದು ಅಂತಾರಾಷ್ಟ್ರೀಯ ಟೆಸ್ಟಿಂಗ್ ಏಜೆನ್ಸಿ(ಐಟಿಎ) ಮುಖ್ಯಸ್ಥ ಬೆನ್ಜಮಿನ್ ಕೊಹೆನ್ ಹೇಳಿದ್ದಾರೆ. ನ್ಯೂಯಾರ್ಕ್ ಟೈಮ್ಸ್ ಜೊತೆಗೆ ಮಾತನಾಡಿರುವ ಅವರು, 'ಭಾರತ ಸತತ 3 ವರ್ಷ ಅತಿಹೆಚ್ಚು ಡೋಪಿಂಗ್ ಪ್ರಕರಣಗಳು ದಾಖಲಾದ ದೇಶಗಳ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದಿದೆ. ಅಲ್ಲಿ, ಡೋಪಿಂಗ್ ಪರೀಕ್ಷೆಗಳ ಬಗ್ಗೆ ಕ್ರೀಡಾಪಟುಗಳಿಗೆ ಮೊದಲೇ ಮಾಹಿತಿ ಸಿಗುತ್ತಿದ್ದು, ಪರೀಕ್ಷೆಗೆ ಒಳಗಾಗದೆ ಓಡಿ ಹೋಗುತ್ತಿದ್ದಾರೆ. ಭಾರತೀಯ ಒಲಿಂಪಿಕ್ ಸಂಸ್ಥೆ (ಐಒಸಿ) ಹಾಗೂ ರಾಷ್ಟ್ರೀಯ ಉದ್ದೀಪನ ಮದ್ದು ನಿಗ್ರಹ ಘಟಕ (ನಾಡಾ) ಕಠಿಣ ಕ್ರಮ ಕೈಗೊಳ್ಳಬೇಕಿದೆ' ಎಂದಿದ್ದಾರೆ.

ಫುಟ್ಬಾಲ್: ಭಾರತಕ್ಕೆ 0-2 ಸೋಲು

ಸುಝೋ (ಚೀನಾ): ಅಂಡರ್-17 ಮಹಿಳೆಯರ ಏಷ್ಯನ್ ಕಪ್ ಫುಟ್ಬಾಲ್ ಟೂರ್ನಿಯ ಆರಂಭಿಕ ಪಂದ್ಯದಲ್ಲಿ ಭಾರತ 0-2 ಗೋಲುಗಳಿಂದ ಆಸ್ಟ್ರೇಲಿಯಾ ವಿರುದ್ಧ ಸೋಲುಂಡಿದೆ. 'ಬಿ' ಗುಂಪಿನಲ್ಲಿರುವ ಭಾರತಕ್ಕೆ ಮೇ 5ರಂದು 4 ಬಾರಿ ಚಾಂಪಿಯನ್ ಜಪಾನ್ ಎದುರಾಗಲಿದೆ. ಮೇ 8ರಂದು ಲೆಬನಾನ್ ವಿರುದ್ಧ ಸೆಣಸಲಿದೆ.

ಬಿಡುವಿನ ಓದಿನ ಒಡನಾಡಿ
ಭಾನುಪ್ರಭ

ಸಾಹಿತ್ಯಪ್ರಭ
ಓದಲು ಇಲ್ಲಿ ಸ್ಕ್ಯಾನ್ ಮಾಡಿ



ಪ್ರವಾಸ ಹೋಗುವಾಗ ಫೋಟೋ, ವೀಡಿಯೋ ಕಡೆಗೆ ಈ ಹಿಂದೆ ಗಮನ ನೀಡಲಾಗುತ್ತಿತ್ತು. ಈಗ ಟ್ರೆಂಡ್ ಬದಲಾಗಿದೆ. ಈಗಿನ ಜೆನ್‌ಜೀ, ಮಿಲೇನಿಯಲ್ಸ್ ಹೊಸ ಸ್ಥಳಗಳನ್ನು ನೋಡುವುದರ ಜೊತೆ ಮನಸ್ಸು, ದೇಹ ಹಗುರಾಗಿಸುವ ಚಿಕಿತ್ಸೆಗಳ ಕಡೆಗೆ ಗಮನ ಹರಿಸುತ್ತಿದ್ದಾರೆ. ಮುಖದ ಗ್ಲೋ ಹೆಚ್ಚು ಮಾಡಲು ನೋಡುತ್ತಿದ್ದಾರೆ. ಹಾಗಾಗಿ ಆರಂಭವಾಗಿರುವ ಲೇಟೆಸ್ಟ್ ಟ್ರೆಂಡ್ ಇದು.

ಗ್ಲೋಕೇಷನ್

ಜೆನ್‌ಜೀಗಳ ಹೊಸ ಟ್ರಾವೆಲ್ ಟ್ರೆಂಡ್



• ಡಾ. ಸುಮಲತಾ ಜೋಶಿ

ಸುರಭಿ ರಜೆ ಮುಗಿಸಿಕೊಂಡು ಕಚೇರಿಗೆ ಬಂದಿದ್ದರೂ ಕಳೆಕಳೆಯಾಗಿ ಕಾಣಿಸುತ್ತಿದ್ದಳು. ಅವಳ ಸಹೋದ್ಯೋಗಿಗಳು ಅಚ್ಚರಿಯಿಂದ ನೋಡುತ್ತಿದ್ದರೆ ಸುರಭಿ ಉತ್ಸಾಹಿತಳಾಗಿ ಕೆಲಸ ಮಾಡುತ್ತಿದ್ದಳು. ಸಾಮಾನ್ಯವಾಗಿ ರಜೆ ಮುಗಿಸಿಕೊಂಡು ಸೋಮವಾರ ಕಚೇರಿಗೆ ಬಂದರೆ ಅಂಥಾ ಉತ್ಸಾಹ ಏನೂ ಕಾಣಿಸುವುದಿಲ್ಲ. ಸ್ವಲ್ಪ ಡಲ್ ಆಗಿ ಇರುವುದು ಸಹಜ. ಆದರೆ ಸುರಭಿ ಮಾತ್ರ ಹಾಗೆ ಇರಲಿಲ್ಲ. ಅದಕ್ಕೆ ಏನು ಕಾರಣ ಎಂದರೆ, ಈಗಿನ ಹೊಸ ಟ್ರಾವೆಲ್ ಟ್ರೆಂಡ್ ಗ್ಲೋಕೇಷನ್.

ಏನಿದು ಗ್ಲೋಕೇಷನ್?

ಇಂದಿನ ಆಧುನಿಕ ಜೀವನದಲ್ಲಿ ಪ್ರಯಾಣ ಎಂದರೆ ಕೇವಲ ಸ್ಥಳಗಳನ್ನು ನೋಡುವುದಷ್ಟೇ ಅಲ್ಲ. ನಿಮ್ಮನ್ನು ನೀವು ಕಂಡುಕೊಳ್ಳುವ, ಆರೈಕೆ ಮಾಡಿಕೊಳ್ಳುವ ಒಂದು ಪ್ರಕ್ರಿಯೆ ಕೂಡ ಆಗಿದೆ. ಇದೇ ತತ್ವದ ಮೇಲೆ ಹುಟ್ಟಿಕೊಂಡಿರುವ ಹೊಸ ಪ್ರವಾಸ ಟ್ರೆಂಡ್ ಗ್ಲೋಕೇಷನ್.

ಗ್ಲೋ ಎಂದರೆ ಇಂಗ್ಲಿಷಿನ ಹೊಳಪು, ವೆಕೇಷನ್ ಎಂದರೆ ರಜೆ, ಅವೆರಡೂ ಪದಗಳನ್ನು ಸೇರಿಸಿದರೆ ಗ್ಲೋಕೇಷನ್. ಜೆನ್‌ಜೀಗಳು ಪ್ರವಾಸಪ್ರಿಯರು. ಪ್ರವಾಸ ಮಾಡುವುದಕ್ಕೆ ಲೋನ್ ಪಡೆಯುವುದಕ್ಕೂ ಹಿಂಜರಿಯದವರು. ಈಗ ಪ್ರವಾಸ ಬರೀ ಪ್ರವಾಸವಾಗಿ ಇರಬಾರದು ಅನ್ನುವುದು ಅವರ ನಿಲುವು. ಪ್ರವಾಸ ಹೋಗಿ ಬಂದರೆ ಮನಸ್ಸು, ದೇಹ ಎಲ್ಲವೂ ರಿಫ್ರೆಶ್ ಆಗಬೇಕು, ಮೆದುಳು ಸೂಪರ್‌ಕಂಪ್ಯೂಟರ್‌ನಂತೆ ಫ್ರೆಶ್ ಆಗಿರಬೇಕು ಅನ್ನುವುದು ಅವರ ಹಂಬಲ. ಅದಕ್ಕಾಗಿ ಹುಟ್ಟಿಕೊಂಡಿದ್ದೇ ಗ್ಲೋಕೇಷನ್.

ಸುಂದರ ಸ್ಥಳ ಮತ್ತು ಅಲ್ಲಿ ಸಿಗುವ ಚಿಕಿತ್ಸೆ

ಮೊದಲು ಸುಂದರ ಸ್ಥಳ ಯಾವುದು ಎಂದು ಹುಡುಕುತ್ತಿದ್ದರು. ಆಗ ಸುಂದರ ಸ್ಥಳ ಹುಡುಕುವುದರ ಜೊತೆ, ಅಲ್ಲಿ ಮನಸ್ಸು ಮತ್ತು ದೇಹ ಹಗುರಾಗುವಂತಹ ಯೋಗಕ್ಷೇಮ ಚಿಕಿತ್ಸೆ ಯಾವುದಿದೆ ಎಂದೂ ಹುಡುಕುತ್ತಾರೆ. ಸೌಂದರ್ಯ ಚಿಕಿತ್ಸೆಯಿಂದ ಹಿಡಿದು ಸ್ಪಾ ಸೌಲಭ್ಯಗಳು, ಸ್ಕಿನ್‌ಕೇರ್ ಟ್ರೀಟ್‌ಮೆಂಟ್‌ಗಳು, ಯೋಗ ರಿಟ್ರೀಟ್‌ಗಳು ಎಲ್ಲವೂ ಇಲ್ಲಿ ಮಹತ್ವ ಪಡೆದುಕೊಳ್ಳುತ್ತಿವೆ.

ಹಾಗಂತ ಸ್ಪಾಗೆ ಹೋಗಿಬರುವುದಲ್ಲ. ಸಂಪೂರ್ಣ ಬದುಕೇ ಈ ಪ್ರವಾಸದಲ್ಲಿ ಬದಲಾಗಬೇಕು. ಬೆಳಿಗ್ಗೆದ್ದು ಸೂರ್ಯೋದಯದ ವೇಳೆ ಬೀಚ್ ಅಥವಾ ಬೆಟ್ಟದ ಮೇಲೆ ಯೋಗ, ಪ್ರಾಣಾಯಾಮ ಮಾಡುವುದು. ಮಧ್ಯಾಹ್ನ ಮಡ್ ಥೆರಪಿ, ಫೇಷಿಯಲ್, ಅಭ್ಯಂಗ ಮಸಾಜ್ ಇತ್ಯಾದಿ. ಸಂಜೆ ಹೊತ್ತು ಔಷಧೀಯ ಗಿಡಮೂಲಿಕೆಗಳ ಸ್ನಾನ, ಮೆಡಿಟೇಶನ್, ಡಿಜಿಟಲ್ ಡಿಟಾಕ್ಸ್. ರಾತ್ರಿ ಸ್ಥಳೀಯ ಸಾವಯವ ಊಟ, ಚಂದ್ರನ ಬೆಳಕಲ್ಲಿ ಮೆಲ್ಲನೆ ಓಡಾಡುವುದು, ಸ್ಕಿನ್ ರಿಪೇರ್‌ನೈಟ್ ಮಾಸ್ಕ್ ಮುಂತಾದ ಕ್ರಮಗಳಿಗೆ ಈಗ ಬೇಡಿಕೆ ಹೆಚ್ಚುತ್ತಿದೆ.

ಇವೆಲ್ಲದರ ಒಟ್ಟಾರೆ ಉದ್ದೇಶ ಒಂದೇ- ರಜೆಯಿಂದ ಹಿಂತಿರುಗುವಾಗ ನೀವು ಒಳಗೂ ಹೊರಗೂ ಹೊಳೆಯುತ್ತಿರಬೇಕು!

ಗ್ಲೋಕೇಷನ್ ಏಕೆ ಇಷ್ಟು ಜನಪ್ರಿಯ!

ಈ ಟ್ರೆಂಡ್ ಮೊದಲು ಅಮೆರಿಕಾ ಮತ್ತು ಯೂರೋಪ್‌ನಲ್ಲಿ ಪ್ರಾರಂಭವಾಯಿತಾದರೂ, ಈಗ ಭಾರತದಲ್ಲೂ ವೇಗವಾಗಿ ಜನಪ್ರಿಯಗೊಳ್ಳುತ್ತಿದೆ. ಬೆಂಗಳೂರು, ಮುಂಬೈ, ದಿಲ್ಲಿಯ ಮಿಲೇನಿಯಲ್ಸ್ ಮತ್ತು ಜೆನ್‌ಜೀಗಳು ಗ್ಲೋಕೇಷನ್ ಅನ್ನು ಬಹಳ ಇಷ್ಟಪಡುತ್ತಿದ್ದಾರೆ.

ಕೋವಿಡ್ ನಂತರದ ಪ್ರಪಂಚದಲ್ಲಿ ಜನರು ತಮ್ಮ ಆರೋಗ್ಯ ಮತ್ತು ಸೌಂದರ್ಯದ ಬಗ್ಗೆ ಹೆಚ್ಚು ಜಾಗರೂಕರಾಗಿದ್ದಾರೆ. ಕೇವಲ ಸೆಲ್ಫಿಗಾಗಿ ಹೋಟೆಲ್ ಬಾಲ್ಕನಿಯಲ್ಲಿ ನಿಂತ ಫೋಟೋ ತೆಗೆಯುವ ಕಾಲ ಹೋಗಿದೆ. ಈಗ ಜನರಿಗೆ ಬೇಕಿರುವುದು ಒಳಗಿನ ಹೊಳಪು. ಯಾವ ಫಿಲ್ಟರ್ ಕೂಡ ಬೇಕಾಗಿಲ್ಲದೆ ಸಹಜವಾಗಿ ಹೊಳೆಯುವ ಚರ್ಮ, ಸ್ಥಿರ ಮನಸ್ಸು ಮತ್ತು ಶಕ್ತಿ ತುಂಬಿದ ದೇಹ ಹೊಂದುವ ಕಡೆ ಈಗಿನ ಯುವ ಜನರು ಗಮನಹರಿಸುತ್ತಿದ್ದಾರೆ.

ಈ ನಿಟ್ಟಿನಲ್ಲಿ ಇನ್‌ಸ್ಟಾಗ್ರಾಮ್ ಮತ್ತು ಟಿಕ್‌ಟಾಕ್‌ನಲ್ಲಿ Glow Vacation ಮತ್ತು #SkincareTraveler ಹ್ಯಾಶ್‌ಟ್ಯಾಗ್‌ಗಳು ಲಕ್ಷಾಂತರ ಪೋಸ್ಟ್‌ಗಳನ್ನು ಹೊಂದಿರುವುದನ್ನು ನೀವು ಈಗ ಗಮನಿಸಬಹುದು. ಈ ಟ್ರೆಂಡ್ ಈಗ ಕೇವಲ ಟ್ರೆಂಡ್ ಅಲ್ಲ, ಬದಲಿಗೆ ಒಂದು ಸಂಸ್ಕೃತಿಯಾಗಿ ಬದಲಾಗುತ್ತಿದೆ.

ಹಿತವಾದ ವಿಶ್ರಾಂತಿ

ಈಗ ಬಹಳಷ್ಟು ಮಂದಿ ನಿಧಾನಕ್ಕೆ ಸ್ಲೋಲಿವಿಂಗ್ ಪರಿಕಲ್ಪನೆ ಕಡೆಗೆ ವಾಲುತ್ತಿದ್ದಾರೆ. ನಿಧಾನಕ್ಕೆ ಬದುಕು ಸಾಗಿಸುವ, ಡಿಜಿಟಲ್‌ನಿಂದ ಅವಶ್ಯಕತೆ ಇಲ್ಲದಿದ್ದಾಗ ದೂರ ಇರುವ, ಒತ್ತಡ ಮುಕ್ತವಾಗಿರುವ ಬದುಕನ್ನು ಅಪ್ಪಿಕೊಳ್ಳುತ್ತಿದ್ದಾರೆ. ಅದಕ್ಕೆ ಪೂರಕವಾಗಿಯೇ ಗ್ಲೋಕೇಷನ್ ಮುನ್ನೆಲೆಗೆ ಬಂದಿದೆ.

ಬಹಳಷ್ಟು ಮಂದಿ ವಿದೇಶದಲ್ಲಿ ಚಿಕಿತ್ಸೆಗಾಗಿ ಹೋಗುತ್ತಾರೆ. ಆದರೆ ಭಾರತದಲ್ಲಿಯೇ ಅಂಥಾ ಗ್ಲೋಕೇಷನ್ ಸ್ಥಳಗಳು ಸಾಕಷ್ಟಿದ್ದು, ಬಹಳಷ್ಟು ಜನಪ್ರಿಯತೆ ಗಳಿಸುತ್ತಿವೆ. ಅಲ್ಲಿ ಡಿಜಿಟಲ್ ಜಗತ್ತಿನಿಂದ, ಒತ್ತಡದ ಕೆಲಸದ ಜಗತ್ತಿನಿಂದ ದೂರ ಉಳಿದು ಮನಸ್ಸು ಹಗುರಾಗುವ, ದೇಹ ಹಗುರಾಗುವ ಪ್ರಕೃತಿ ಚಿಕಿತ್ಸೆಗಳಿಗೆ ಶರಣಾಗುತ್ತಿದ್ದಾರೆ.

ದೇಹದ ಜೀವಕೋಶಗಳಿಗೆ ಆಮ್ಲಜನಕದ ಮೂಲಕ ಹೊಸ ಚೈತನ್ಯ ನೀಡುವ ಹೈಪರ್‌ಬಾರಿಕ್ ಆಕ್ಸಿಜನ್ ಥೆರಪಿ, ಚರ್ಮದ ಕಾಂತಿಯನ್ನು ಹೆಚ್ಚಿಸಿ ಆಯಾಸವನ್ನು ದೂರ ಮಾಡುವ ರೆಡ್-ಲೈಟ್ ಥೆರಪಿ, ಕೃತಕ ಬೆಳಕಿನ ಮಾಲಿನ್ಯವಿಲ್ಲದ ಜಾಗದಲ್ಲಿ ನಕ್ಷತ್ರಗಳನ್ನು ವೀಕ್ಷಿಸುತ್ತಾ, ನರಮಂಡಲವನ್ನು ಶಾಂತಗೊಳಿಸುವ ಡಾರ್ಕ್ ಸ್ಕೈ ಟೂರಿಸಂ ಈ ವಿಧಾನದಲ್ಲಿ ಮತ್ತಷ್ಟು ಜನಪ್ರಿಯವಾಗಿವೆ.

ಆಹಾರವೇ ಇಲ್ಲಿ ಔಷಧ

ಗ್ಲೋಕೇಷನ್‌ನಲ್ಲಿ ನೀವು ಹೋದಲ್ಲೆಲ್ಲಾ ಬಫೆ ಸೌಲಭ್ಯ ಇರುವುದಿಲ್ಲ. ಬದಲಾಗಿ ನಿಮ್ಮ ದೇಹಕ್ಕೆ ಯಾವ ಪೋಷಕಾಂಶಗಳ ಅಗತ್ಯವಿದೆ ಎಂಬುದನ್ನು ವಿಶ್ಲೇಷಿಸಿ, ನಿಮಗಾಗಿಯೇ ವಿಶೇಷ ಮೆನುವನ್ನು ಸಿದ್ಧಪಡಿಸಲಾಗುತ್ತದೆ. ಇದನ್ನು ಇಂದಿನ ಕಾಲದಲ್ಲಿ 'ಲ್ಯಾಬೊರೇಟರಿ ಟು ಟೇಬಲ್' ಎಂದು ಕರೆಯಲಾಗುತ್ತಿದೆ. ನೀವು ತಿನ್ನುವ ಪ್ರತಿಯೊಂದು ತುತ್ತೂ ನಿಮ್ಮ ಆಯಸ್ಸನ್ನು ಹೆಚ್ಚಿಸುವಂತೆ ಮತ್ತು ರೋಗನಿರೋಧಕ ಶಕ್ತಿಯನ್ನು ವೃದ್ಧಿಸುವಂತೆ ವಿನ್ಯಾಸಗೊಳಿಸಲಾಗಿರುತ್ತದೆ.

ನರಮಂಡಲಕ್ಕೆ ವಿರಾಮ

ಇಂದಿನ ಡಿಜಿಟಲ್ ಯುಗದಲ್ಲಿ ನಮ್ಮ ನರಮಂಡಲ ಸದಾ ಅಲರ್ಟ್ ಸ್ಥಿತಿಯಲ್ಲಿರುತ್ತದೆ. ಇದನ್ನು ಸರಿಪಡಿಸಲು ಗ್ಲೋಕೇಷನ್‌ಗಳಲ್ಲಿ ಸೈಲೆನ್ಸ್ ರಿಟ್ರೀಟ್ ಅಥವಾ ಡಿಜಿಟಲ್ ಡಿಟಾಕ್ಸ್ ಕಡ್ಡಾಯವಾಗಿರುತ್ತದೆ. ಫೋನ್ ಇಲ್ಲದ, ನೋಟಿಫಿಕೇಶನ್‌ಗಳ ಕಿರಿಕಿರಿ ಇಲ್ಲದ ಪರಿಸರದಲ್ಲಿ ಪ್ರಕೃತಿಯ ಮಡಿಲಲ್ಲಿ ಮಲಗುವುದೇ ಇಲ್ಲಿನ ಅತಿದೊಡ್ಡ ಲಕ್ಸುರಿ.

ಮೈಕ್ರೋ ಗ್ಲೋ ಟ್ರೆಂಡ್

ಗ್ಲೋಕೇಷನ್ ಎಂದರೆ ಕೇವಲ ಲಕ್ಷಾಂತರ ರೂಪಾಯಿ ಖರ್ಚು ಮಾಡುವುದಲ್ಲ. ಬರೀ ಶ್ರೀಮಂತರ ಟ್ರೆಂಡ್ ಕೂಡ ಅಲ್ಲ. ವಿದೇಶಕ್ಕೆ, ಪರರಾಜ್ಯಗಳಿಗೆ ಹೋಗಲು ಸಾಧ್ಯವಾಗದಿದ್ದರೆ ವಾರಾಂತ್ಯದಲ್ಲಿ ಮೊಬೈಲ್ ಸ್ವಿಚ್ ಆಫ್ ಮಾಡಿ, ಹತ್ತಿರದ ಯಾವುದಾದರೂ ಹಳ್ಳಿಗೋ, ಕಾಡಿನ ಪಕ್ಕದ ಗ್ರಾಮಕ್ಕೋ, ಪ್ರಕೃತಿ ಸೊಬಗಿನ ತಾಣಕ್ಕೆ ಹೋದರೂ ಸಾಕು. ಯಾವುದೂ ಬೇಡ, ನಿಮ್ಮ ನಿಮ್ಮ ಹಳ್ಳಿಗೆ ಹೋಗಿ ಇದ್ದು ಬಂದರೂ ಸಾಕು. ಅಲ್ಲಿ ಮೊಬೈಲ್‌ನಿಂದ ದೂರವಿದ್ದು, ಮೌನವಾಗಿ ಕಾಲ ಕಳೆಯಬಹುದು. ಅದಕ್ಕೂ ಒಂದು ಹೆಸರಿದೆ, 'ಮೈಕ್ರೋ-ಗ್ಲೋ' ಟ್ರೆಂಡ್ ಎಂಬುದು ಆ ಹೆಸರು. ಈ ಟ್ರೆಂಡ್ ಕೂಡ ಈಗ ಸಾಕಷ್ಟು ಜನಪ್ರಿಯವಾಗುತ್ತಿದೆ.

ಫೋಟೋ ಆದ್ಯತೆ ಬದಲಾಗಿದೆ

ಒಂದು ಕಾಲವಿತ್ತು. ಫೋಟೋ ತೆಗೆಯಲೆಂದೇ ಪ್ರವಾಸ ಹೋಗುತ್ತಿದ್ದರು. ಮೊಬೈಲ್ ಇಲ್ಲದೆ, ಎಲ್ಲೂ ಹೋಗುತ್ತಿರಲಿಲ್ಲ. ಆದರೆ ಈಗ ಟ್ರೆಂಡ್ ಬದಲಾಗಿದೆ. ಆದ್ಯತೆ ಬದಲಾಗಿದೆ. ಜೆನ್‌ಜೀ ಪ್ರವಾಸಿಗರು ಕೇವಲ ಫೋಟೋಗಳಿಗಾಗಿ ಪ್ರವಾಸ ಮಾಡುತ್ತಿಲ್ಲ. ಬದಲಾಗಿ, ತಾನು ಕಳೆದುಕೊಂಡಿರುವ ನೆಮ್ಮದಿಯನ್ನು ಮರಳಿ ಪಡೆಯಲು ಮತ್ತು ತನ್ನ ದೇಹದ ಬ್ಯಾಟರಿಯನ್ನು ರೀಚಾರ್ಜ್ ಮಾಡಿಕೊಳ್ಳಲು ಗ್ಲೋಕೇಷನ್ ಮೊರೆ ಹೋಗುತ್ತಿದ್ದಾರೆ.

ಈ ವೇಗದ ಕಾಲದಲ್ಲಿ ಅದು ಬಹಳ ಮುಖ್ಯ ಕೂಡ. ಗಳಿಕೆಯೇ ಮುಖ್ಯವಲ್ಲ, ಕಲಿಕೆಯೂ ಮುಖ್ಯ, ಮನಸ್ಸಿನ ನೆಮ್ಮದಿ ಮುಖ್ಯ, ಆರೋಗ್ಯ ಮುಖ್ಯ ಅನ್ನುವುದನ್ನೂ ಈ ಹೊಸ ಟ್ರೆಂಡ್ ಹೇಳಿಕೊಡುತ್ತಿದೆ. ನೀವು ಈ ಬಾರಿ ಪ್ರವಾಸ ಹೋಗುವ ಪ್ಲಾನ್ ಮಾಡುತ್ತಿದ್ದರೆ, ಅದು ಬರೀ 'ಲೊಕೇಷನ್' ಆಗಿರದೆ 'ಗ್ಲೋಕೇಷನ್' ಆಗಿರಲಿ!

> **ಈಗ ಜನರಲ್ಲಿ ಆರೋಗ್ಯ ಪ್ರಜ್ಞೆ ಹೆಚ್ಚಿದೆ. ಪ್ರವಾಸದ ಜೊತೆ ಆರೋಗ್ಯ ಪಾಲನೆಗೂ ಮಹತ್ವ ಕೊಡುತ್ತಿದ್ದಾರೆ. ನಮ್ಮಲ್ಲಿಗೆ ವಿದೇಶದ ಹಲವು ಕಡೆಗಳಿಂದ ಜನ ಬರುತ್ತಾರೆ. 4 ವಾರ ಭಾರತಕ್ಕೆ ಪ್ರವಾಸ ಬಂದರೆ, 3 ವಾರ ನಮ್ಮಲ್ಲೇ ಆಯುರ್ವೇದ ಚಿಕಿತ್ಸೆ ಪಡೆಯುತ್ತಾರೆ. ನಮ್ಮದು ಕುಂದಾಪುರ- ಕೊಲ್ಲೂರಿನ ಸಮೀಪ ಇರುವ ಆಯುರ್ವೇದ ಚಿಕಿತ್ಸಾಲಯ. ಹಾಗಾಗಿ ಈಗ ರಜೆಯಲ್ಲಿ ಹೆಚ್ಚು ಜನ ಪ್ರವಾಸದ ಜೊತೆ ಆರೋಗ್ಯ ಪಾಲನೆ ಕಡೆಗೆ ಮಹತ್ವ ನೀಡುತ್ತಿದ್ದಾರೆ.**
>
> **ಡಾ. ರಾಜೇಶ್ ಬಾಯರಿ**
> ಚಿತ್ರಕೂಟ ಆಯುರ್ವೇದ ಸಂಸ್ಥೆಯ ಸ್ಥಾಪಕರು



ವಿಡಂಬನಾ ಶೈಲಿಯಲ್ಲಿ ಹಿರಿಯ ಸಾಹಿತಿಗಳ ವ್ಯಕ್ತಿಚಿತ್ರ

ಪುಸ್ತಕ ಪರಿಚಯ



ಕೃತಿ: ಒಡನಾಡಿದ ಸೂರ್ಯನ ಚೂರುಗಳು
ಲೇ: ಕುಂ ವೀರಭದ್ರಪ್ಪ
ಪ್ರ: ಅಂಕಿತ ಪುಸ್ತಕ
ದೂ: 9019190502

ಖ್ಯಾತ ಕಾದಂಬರಿಕಾರ ಕುಂವೀ ಹಿರಿಯ ಸಾಹಿತಿಗಳೊಂದಿಗಿನ ತನ್ನ ಒಡನಾಟದ ಕ್ಷಣಗಳನ್ನು ವಿಡಂಬನಾತ್ಮಕವಾಗಿ ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. 'ಅಪೂರ್ವ ರಾಗಂಗಳ್' ಎಂಬ ಅಡಿಬರಹವಿರುವ ಈ ಪುಸ್ತಕ ವ್ಯಕ್ತಿಚಿತ್ರವನ್ನು ಭಿನ್ನ ನೆಲೆಯಲ್ಲಿ ಕಟ್ಟಿಕೊಟ್ಟ ಅಪರೂಪದ ಪ್ರಯತ್ನ.


ಜಿ.ಎಸ್ ಶಿವರುದ್ರಪ್ಪ, ಯು.ಆರ್.ಅನಂತಮೂರ್ತಿ, ಲಂಕೇಶ್, ಸಿದ್ದಲಿಂಗಯ್ಯ, ಚೆನ್ನಣ್ಣ ವಾಲಿಕಾರ, ಚಂದ್ರಶೇಖರ ಕಂಬಾರ ಮುಂತಾದ ಹಿರಿಯ ಲೇಖಕರ ವ್ಯಕ್ತಿತ್ವದ ಭಿನ್ನನೋಟವನ್ನು ಈ ಪುಸ್ತಕದಲ್ಲಿ ಕಾಣಬಹುದು. ದೊಡ್ಡವರ ಸಣ್ಣತನಗಳು, ಪ್ರತಿಭೆಯನ್ನು ಸಹಿಸದ ಮತ್ಸರ, ಅವಜ್ಞೆಯ ಜಾಣತನ, ಅಸಹಿಷ್ಣುತೆ, ಅವಕಾಶವಾದಿತನ ಮುಂತಾದ ಗುಣಗಳು ಮುನ್ನೆಲೆಗೆ ಬಂದು ನಮ್ಮ ಸಾರಸ್ವತ ಲೋಕದ ಅನೇಕ ತಾರೆಗಳ ಬಣ್ಣ ಕಳಚುತ್ತದೆ. ಕೆಲವೊಮ್ಮೆ ವಿನೋದದಲ್ಲಿ, ಕೆಲವೊಮ್ಮೆ ತಮ್ಮ ವಿಶಿಷ್ಟ ವ್ಯಂಗ್ಯದಲ್ಲಿ ಮತ್ತೆ ಕೆಲವೊಂದು ಭಾಗಗಳನ್ನು ಮನಸ್ಸು ತಟ್ಟುವಂತೆ ಆರ್ದ್ರವಾಗಿ ಕುಂವೀ ಈ ಕೃತಿ ಕಟ್ಟಿದ್ದಾರೆ.

ಇನ್ನೊಂದು ವಿಶೇಷ ಅಂದರೆ ಲೇಖಕರ ಬದುಕಿನಲ್ಲಿ ಅನ್ನದೇವರಂತೆ ಬಂದು ಕಾಪಾಡಿದ ದುರುಗ್ಯಾ ನಾಯಕ ಎಂಬ ಅತಿ ಸಾಮಾನ್ಯ ವ್ಯಕ್ತಿಯ ಚಿತ್ರಣ ಸೊಗಸಾಗಿ ಮೂಡಿಬಂದಿದೆ.

ಖ್ಯಾತ ರಂಗಕಲಾವಿದ ಪಿ.ಬಿ ಧುತ್ತರಗಿಯವರು ಒಂದು ಹೊತ್ತಿನ ಊಟಕ್ಕಾಗಿ ಪೇಚಾಡುವ ಪರಿಸ್ಥಿತಿ ಮನಕಲಕುತ್ತದೆ. ಗಣಿತದಲ್ಲಿ ಅಂಕ ಕಡಿಮೆ ಬಂದಾಗ ತಮ್ಮ ಮಾಸ್ತರರಿಗೆ ಹೇಳಿ ತಮ್ಮನ್ನು ಮುಲಾಜಿಲ್ಲದೆ ಫೇಲು ಮಾಡಿಸುವ ತಮ್ಮ ತಂದೆ ಕು. ಹಾಲಪ್ಪನವರ ಬಗ್ಗೆ ಬರೆಯುವಾಗ ಲೇಖಕರು ಹೆಮ್ಮೆಯಿಂದ ಗದ್ಗದಿತರಾಗುತ್ತಾರೆ. ಒಟ್ಟಿನಲ್ಲಿ ಈ ಕೃತಿಯಲ್ಲಿ ಲೇಖಕರು ಸಾಹಿತ್ಯ ಜಗತ್ತಿನ ಮಹನೀಯರ ಗುಣಾತ್ಮಕ ಋಣಾತ್ಮಕ ಅಂಶಗಳನ್ನು ನಿರ್ಭೀತವಾಗಿ ಕಟ್ಟಿಕೊಟ್ಟಿದ್ದಾರೆ.


ಕೃತಿ: ಬೆಲ್ ವೆಲ್
ಲೇ: ವಿಕ್ರಮ್ ಬಿ.ಕೆ ಪ್ರ: ತ್ರಿಲೋಕ ಬರಹ ದೂ: 7676625251

ಜೀವನ್ಮುಖೀ ಬರಹಗಳ ಗುಚ್ಛ



ಒಟ್ಟು 19 ಲಘು ಬರಹಗಳಿರುವ ಸಂಗ್ರಹ. ಮೊದಲನೆಯ ಬರಹ 'ಸಂತೆಯಲ್ಲಿ ನಿಲ್ಲಿರಿ ಇಂಗ್ಲಿಷ್ ಕಲಿಯಿರಿ'ಯಲ್ಲಿ ತೀರಾ ಬಡತನದ ಹಿನ್ನೆಲೆಯ ತನ್ನ ಬದುಕು, ಇಂಗ್ಲಿಷ್ ಕಲಿಯುವ ಛಲಕ್ಕೆ ಬಿದ್ದು ಮಾಡಿದ ಪ್ರಯತ್ನಗಳನ್ನು ಪ್ರಾಮಾಣಿಕವಾಗಿ ಬರೆದುಕೊಂಡಿದ್ದಾರೆ. ಹೊಸಪೇಟೆಯಲ್ಲಿ ಬಾಲ್ಯವನ್ನು ಕಳೆದಿದ್ದ ಲೇಖಕರು ಹಂಪಿಗೆ ಬರುತ್ತಿದ್ದ ವಿದೇಶಿ ಪ್ರವಾಸಿಗರನ್ನು ತನ್ನ ಹರಕು ಮುರುಕು ಇಂಗ್ಲಿಷಿನಲ್ಲಿ ಮಾತನಾಡಿಸಿ ಅವರನ್ನು ಪ್ರಭಾವಿಸಿ ಅವರೊಡನೆ ಸಂಭಾಷಿಸುತ್ತ ಇಂಗ್ಲಿಷ್ ಕಲಿತದ್ದನ್ನು ವಿವರಿಸಿದ್ದಾರೆ. ಜೊತೆಗೆ ಅಲ್ಲಿ ಆಂಡ್ರಿಯಾ ಎಂಬ ವಿದೇಶಿ ದಂಪತಿಗೆ ಹತ್ತಿರವಾದದ್ದು ಅವರ ಪ್ರೀತಿಗೆ ಪಾತ್ರವಾದ ಬಗೆಯನ್ನು ವಿವರಿಸಿದ್ದಾರೆ. ಬಾಲ್ಯದಲ್ಲಿ ಕಷ್ಟಪಟ್ಟು ರೂಢಿಸಿಕೊಂಡ ಅಪರಿಚಿತರನ್ನು ಮಾತನಾಡಿಸುವ ಕಲೆ ಮುಂದೆ ವೃತ್ತಿಯಲ್ಲೂ ತನ್ನ ಕೈಹಿಡಿದ ಬಗೆಯನ್ನು ಸೊಗಸಾಗಿ ಹೇಳಿದ್ದಾರೆ.

'ಸೆಲಬ್ರೇಟಿಂಗ್ ಲೈಫ್' ಎಂಬ ಟ್ಯಾಗ್‌ಲೈನ್‌ನ ಈ ಕೃತಿಯಲ್ಲಿ ಜೀವನಾನುಭವದ ಅನೇಕ ವಿವರಗಳಿವೆ. ಕಷ್ಟ, ನೋವು, ಅವಮಾನಗಳನ್ನು ದಾಟಿ ಛಲದಿಂದ ಮುಂದೆ ಬಂದ ಕಥೆಗಳಿವೆ. ಇವೆಲ್ಲ ಓದಲೂ ಖುಷಿ, ಬದುಕಿಗೂ ಪ್ರೇರಣೆ.



ಇರಾನ್ ಗುಡ್ ಬ್ಯಾಡ್ ಅಗ್ಲಿ
ಲೇ: ಗೋಪಾಲಕೃಷ್ಣ ಕುಂಟಿನಿ
ಪ್ರ: ಸಾವಣ್ಣ ಪ್ರಕಾಶನ, ಬೆಂಗಳೂರು
ಬೆಲೆ: ರೂ.150
ದೂ: 9036312786


ಇರಾನ್ ದಿಟ್ಟತನದ ಸೂಕ್ಷ್ಮ ಅನಾವರಣ

ಮೇಲಕ್ಕೆ ಏನು ಕಾಣುತ್ತದೋ, ಒಳಗೆ ಹಾಗಿರಬೇಕಿಲ್ಲ. ಈ ಮಾತು ಮತ್ತಷ್ಟು ಸ್ಪಷ್ಟಗೊಂಡಿರುವುದು ಇರಾನ್- ಅಮೆರಿಕಾ ಯುದ್ಧದಲ್ಲಿ. ಅಮೆರಿಕಾ ಅತ್ಯಂತ ಸುಲಭವಾಗಿ ಹೊಸಕಿಹಾಕಿಬಿಡಬಹುದು ಅಂದುಕೊಂಡಿದ್ದ ಇರಾನ್ ದಿಟ್ಟವಾಗಿ ಎದೆಗೊಟ್ಟು ನಿಂತು ಹೋರಾಡಿದ್ದು ಇಡೀ ಜಗತ್ತಿಗೆ ಅಚ್ಚರಿ ತಂದಿದೆ. ಹಾಗಿದ್ದರೆ ಇರಾನ್‌ಗೆ ಅಷ್ಟು ಶಕ್ತಿ ಬಂದಿದ್ದಾದರೂ ಹೇಗೆ? ಅದಕ್ಕೆ ಉತ್ತರ ಈ ಕೃತಿ. ಪುರಾಣ ಬಲ್ಲ, ಪತ್ರಕರ್ತನ ಒಳನೋಟ ಹೊಂದಿರುವ, ಕತೆಗಾರನ ಭಾಷಾ ಸೊಗಸು ತನ್ನದಾಗಿಸಿಕೊಂಡಿರುವ ಗೋಪಾಲಕೃಷ್ಣ ಕುಂಟಿನಿ ಇರಾನ್‌ನ ಆಂತರ್ಯವನ್ನು ಇಲ್ಲಿ ತೆರೆದಿಟ್ಟಿದ್ದಾರೆ. ಜಿಯೋಪೊಲಿಟಿಕಲ್ ಪುಸ್ತಕ ಬರೆಯಬೇಕಾದರೆ ಮಾಹಿತಿ ಇದ್ದರೆ ಮಾತ್ರ ಸಾಲದು, ಆ ದೇಶದ ಪರಂಪರೆ, ಇತಿಹಾಸದ ತಿಳಿದಿರಬೇಕು. ಒಳಗಣ್ಣಿನಿಂದ ಪರಿಸ್ಥಿತಿ ಅರಿಯಬೇಕು. ಲೇಖಕರು ಆ ಕೆಲಸವನ್ನು ಸಮರ್ಥವಾಗಿ ಮಾಡಿರುವುದಕ್ಕೆ ಈ ಕೃತಿಯ ಅಧ್ಯಾಯಗಳೇ ಪುರಾವೆ. ಇರಾನ್‌ನ ಭೌಗೋಳಿಕತೆ, ಆರ್ಥಿಕತೆಯಿಂದ ಹಿಡಿದು ಅಲ್ಲಿನ ನಾಯಕರ ವ್ಯಕ್ತಿತ್ವದ ಕುರಿತ ಸೊಗಸಾದ ಚಿತ್ರಣ ಕಟ್ಟಿಕೊಟ್ಟಿದ್ದಾರೆ.

ಇರಾನ್ ದೇಶವನ್ನು ಅಲ್ಲಾಡಿಸಿದ ಸಕ್ಕರೆ ಚಳುವಳಿಯಿಂದ ಆರಂಭಿಸಿ ಸಂಧಾನ ಮುರಿದು ಬಿದ್ದಿದ್ದು ಹೇಗೆ ಎಂಬ ವಿಶ್ಲೇಷಣೆವರೆಗೆ ಪ್ರತಿಯೊಂದು ಬರಹವೂ ಆಕರ್ಷಕವೂ ಕುತೂಹಲಕರವೂ ಆಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಒಂದು ಯುದ್ಧವನ್ನು ಹೇಗೆ ನೋಡಬಹುದು ಅಥವಾ ನೋಡಬೇಕು ಎಂಬುದಕ್ಕೆ ಇದೊಂದು ಮಾರ್ಗದರ್ಶಿಯೂ ಹೌದು. ಇಲ್ಲಸಲ್ಲದ ಊಹೆಗಳಲ್ಲಿ ಕಳೆದುಹೋಗುವ ಬದಲು ಇಂತಹ ಮಾಹಿತಿಪೂರ್ಣ, ಒಳನೋಟಪೂರ್ಣ ಕೃತಿಯನ್ನು ಓದಿ ಒಂದು ಸ್ಪಷ್ಟ ಚಿತ್ರಣ ಹೊಂದುವುದು ಉತ್ತಮ. ಈ ಕಾರಣಕ್ಕೆ ಇದು ಸದ್ಯ ಮತ್ತು ಶಾಶ್ವತ ಎರಡಕ್ಕೂ ಸಲ್ಲುವ ಕೃತಿ.

ಕೃತಿ: ನಕ್ಸಲನ ಮನೆಯ ಹೊಸ್ತಿಲು ಲೇ: ಜಿ.ವಿ ಅರುಣ ಪ್ರ: ಪ್ರಿಸಮ್ ಬುಕ್ಸ್ ದೂ: 080-26714108

ಬದುಕಿನ ಸರಳತೆ, ಸಂಕೀರ್ಣತೆಗಳ ಸೊಗಸಾದ ನಿರೂಪಣೆ



ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಕಥೆಗಳ ಸಂಕಲನ. ಒಟ್ಟು 14 ಕತೆಗಳಿವೆ. ಈ ಕಥೆಗಳಲ್ಲಿ ಕಲ್ಪನೆಗಿಂತ ಜೀವನಾನುಭವ ಹೆಚ್ಚಿದೆ.

ಮೊದಲ ಕತೆ 'ನಕ್ಸಲನ ಮನೆಯ ಹೊಸ್ತಿಲು'ನಲ್ಲಿ ಲೇಖಕರು ರಾಂಚಿಯ ಕಾರ್ಮಿಕ ವರ್ಗದ ಬದುಕಿನ ಚಿತ್ರಗಳನ್ನು ಹರವಿಟ್ಟಿದ್ದಾರೆ. ದೌರ್ಜನ್ಯವೆಂಬ ಹಲವು ಅಲಗುಗಳ ಕತ್ತಿಯ ಹೊಡೆತದಿಂದ ಜರ್ಝರಿತರಾದವರ ನೋವು, ಮೇಲೆದ್ದರೆ ಹೊಡೆಯುವವರ ನಡುವೆ ಅವರ ಕಡುಕಷ್ಟದ ಬದುಕಿನ ವಿವರ ಈ ಕಥೆಯಲ್ಲಿದೆ. ಜೊತೆಗೆ ಇಂಥಾದ್ದೊಂದು ಸಂಕಷ್ಟದಿಂದ ಪಾರಾಗಲು ಅವರು ಕಂಡುಕೊಂಡ ಪರ್ಯಾಯ ಹಾದಿಯ ಬದುಕಿನ ನೋಟವೂ ಸಿಗುತ್ತದೆ. 'ದಮನಿತರ ಶೋಷಣೆ ಅವರನ್ನು ಹೇಗೆ ಹೋರಾಟಕ್ಕೆ ನೂಕುತ್ತದೆ ಅನ್ನುವುದನ್ನು ಈ ಕಥೆ ಚೆನ್ನಾಗಿದೆ ನಿರೂಪಿಸಿದೆ' ಎಂದು ಕತೆಗಾರ ವಿಕಾಸ್ ನೇಗಿಲೋಣಿ ಹಿನ್ನುಡಿಯಲ್ಲಿ ಹೇಳಿದ್ದಾರೆ.

'ಬುದ್ಧ ನಕ್ಕ' ಎಂಬ ಕಥೆ ಬಹಳ ಸರಳವಾಗಿದೆ, ಅರ್ಥಗರ್ಭಿತವಾಗಿದೆ. ವ್ಯಾಪಾರ ಕುದುರಿಸಲು ವರ್ತಕನೊಬ್ಬ ಹೂಡುವ ತಂತ್ರ ಕೊನೆಗೆ ಸ್ವತಃ ಅವನನ್ನೇ ಮೋಡಿ ಮಾಡುವ ಬಗೆ, ಅದನ್ನು ಕಂಡು ಬುದ್ಧ ನಗುವ ರೂಪಕ ಸೊಗಸಾಗಿದೆ.

ಸಿದ್ಧ ಮಾದರಿಗೆ ಅಂಟಿಕೊಳ್ಳದೆ ಸೊಗಸಾಗಿ ವಸ್ತುನಿಷ್ಠವಾಗಿ ಜಿ.ವಿ. ಅರುಣ ಕಥೆ ಬರೆದಿದ್ದಾರೆ. ಓದುವ ಖುಷಿ ಹೆಚ್ಚಿಸುವ ಕೃತಿಯಿದು.

ಕನ್ನಡಪ್ರಭ | ಭಾನುವಾರ 03.05.2026 | epaper.kannadaprabha.in | email: kpsp@kannadaprabha.in

2 ಒಳಪುಟ ಜವಾಬ್ದಾರಿ ಪ್ರೀತಿ ಹಾಗೂ ಛಲ
4 ಒಳಪುಟ ಸ್ವಗತದಲ್ಲಿ ಸಂವಾದ: ಮಾತಿನ ವಿಸ್ಮಯ
6 ಒಳಪುಟ ಅಪ್ಪಯ್ಯ ಮಾಡಿದ ಉಪ್ಪಿಟ್ಟು

ಸಾಹಿತ್ಯಪ್ರಭ
KANNADAPRABHA LITERARY SUPLIEMENT ಸಂಚಿಕೆ: 41

ತಾನೊಬ್ಬ ಪಾರ್ಟ್‌ಟೈಮರ್ ಸಾಹಿತಿ ಎನ್ನುವ ಎಚ್. ಡುಂಡಿರಾಜ್ 72 ಕೃತಿಗಳನ್ನು ಬರೆದಿದ್ದಾರೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿದ್ದು ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿದ್ದ ಅವರಿಗೆ ಆಗಸ್ಟ್ ತಿಂಗಳಲ್ಲಿ 70ನೇ ಹುಟ್ಟುಹಬ್ಬ ಸಂಭ್ರಮ. ಅದೇ ಸಂದರ್ಭದಲ್ಲಿ ಅವರ 2022ರವರೆಗಿನ ದೀರ್ಘಕವನಗಳ ಸಮಗ್ರ ಸಂಕಲನ 'ಕಾವ್ಯ ಡುಂಡಿಮ- ಇದುವರೆಗಿನ ಇಡಿ ಕವನಗಳು' ಕೃತಿಯನ್ನು ಪುಸ್ತಕ ಮನೆ ಪ್ರಕಾಶನ ಪ್ರಕಟಿಸುತ್ತಿದೆ. ಅನಂತರ ಬಂದ ದೀರ್ಘಕವನಗಳನ್ನು ಅಂಕಿತ ಪುಸ್ತಕ 'ಪಾಲಿಗೆ ಬಂದ ಬಿಂದು' ಎಂಬ ಹೆಸರಿನಲ್ಲಿ ಪ್ರಕಟಿಸುತ್ತಿದೆ. ಇದೆಲ್ಲಾ ಸಂಭ್ರಮಗಳಿಗೆ ಮುನ್ನುಡಿಯಾಗಿ **ಡುಂಡಿರಾಜ್** ಜೊತೆ ಮಾತುಕತೆ.

ಕಾವ್ಯಧ್ವನಿಯನ್ನು ಗ್ರಹಿಸುವ ಶಕ್ತಿ ಕಡಿಮೆಯಾಗಿದೆ

ಡುಂಡಿರಾಜ್



ವಸ್ತುನಿಷ್ಠತೆಗೆ ಸೂಕ್ತ ಮನ್ನಣೆ ದೊರಕುತ್ತಿಲ್ಲ

ವ್ಯಂಗ್ಯ, ವಿಡಂಬನೆ ಮಾಡದಂತಹ ಅಸಹಾಯಕತೆ ಎದುರಾಗಿದೆ

• ರಾಜೇಶ್ ಶೆಟ್ಟಿ

ಹನಿಗವನ ಪ್ರಕಾರಕ್ಕೆ ಪರ್ಯಾಯದಂತಿದ್ದೀರಿ. ಹನಿಗವನವನ್ನೇ ನೆಚ್ಚಿಕೊಂಡಿದ್ದು ಏಕೆ?

ಉಡುಪಿ ಪರ್ಯಾಯದಲ್ಲಿ ಕವಿತೆ ಓದಿದ್ದು ಬಿಟ್ಟರೆ, ಹನಿಗವನಕ್ಕೆ ಪರ್ಯಾಯ ಅಂತ ನಾನು ಭಾವಿಸುವುದಿಲ್ಲ. ನಾನು ನೆಚ್ಚಿಕೊಂಡಿದ್ದಕ್ಕಿಂತ ಓದುಗರು, ಕೇಳುಗರು ಮತ್ತು ಮಾಧ್ಯಮಗಳು ಹನಿಗವನಕ್ಕಾಗಿ ನನ್ನನ್ನು ಹೆಚ್ಚು ನೆಚ್ಚಿಕೊಂಡರು. ನಾನು ಬೇರೆ ಬೇರೆ ಪ್ರಕಾರಗಳಲ್ಲಿ ಬರೆದಿದ್ದೇನೆ. ಆರಂಭದಲ್ಲಿ ಮಕ್ಕಳ ಕವನ ಬರೆಯುತ್ತಿದ್ದೆ. ನಂತರ ವೃತ್ತಿ ಜೀವನದ ಆರಂಭದ ದಿನಗಳಲ್ಲಿ ಮಂಗಳೂರಿನಲ್ಲಿ ರಂಗಭೂಮಿ ಜೊತೆ ತೊಡಗಿಸಿಕೊಂಡಿದ್ದರಿಂದ ನಾಟಕ ಬರೆಯುತ್ತಿದ್ದೆ. ದೀರ್ಘ ಕವನ ಬರೆಯುತ್ತಿದ್ದೆ. ನನ್ನ ಮೊದಲ ಕವನ ಸಂಕಲನ 'ನಮ್ಮ ಗೋಡೆಯ ಹಾಡು' ದೀರ್ಘ ಕವನಗಳ ಸಂಕಲನ. ಅದರ ಹಸ್ತಪ್ರತಿಗೆ ಕಡೆಂಗೋಡ್ಲು ಶಂಕರ್ ಭಟ್ ಪ್ರಶಸ್ತಿ ಬಂದಿತ್ತು. ನನಗೆ ಹೆಸರೂ ತಂದಿತ್ತು. ಆಮೇಲೆ ನಾನು ಕವಿಗೋಷ್ಠಿಗಳಿಗೆ ಹೋಗುತ್ತಿದ್ದಾಗ ಅಲ್ಲಿ ಗಂಭೀರ ಕವನಗಳ ವಾಚನದಿಂದ ಸಂತಾಪಸೂಚಕ ಸಭೆಯ ವಾತಾವರಣವಿದ್ದಿದ್ದು ಕಂಡು, ಲವಲವಿಕೆಯ ಹಾಸ್ಯದ ಅಂಶಗಳಿದ್ದ ಕವಿಗವನ ಓದಲು ಶುರುಮಾಡಿದೆ. ಅದಕ್ಕೆ ಸಿಕ್ಕ ಉತ್ತಮ ಪ್ರತಿಕ್ರಿಯೆಯಿಂದ ಹನಿಗವನ ಕ್ಷೇತ್ರದಲ್ಲಿ ಹೆಚ್ಚು ದುಡಿಯುವಂತಾಯಿತು.

• ಹನಿಗವನ, ದೀರ್ಘ ಕವನ ಬರೆಯುವ ಪ್ರಕ್ರಿಯೆ ಹೇಗಿರುತ್ತದೆ?

ನನಗೆ ಮೊದಲು ಹೊಳೆಯುವುದು ಐಡಿಯಾ. ಆಮೇಲೆ ಅದು ಹನಿಗವನವಾಗುತ್ತದೋ, ದೀರ್ಘಕವನ ಆಗುತ್ತದೋ ಎಂಬುದು ವಸ್ತುವಿಗೆ ಬಿಟ್ಟಿದ್ದು. ಕವಿತೆಯಲ್ಲಿ ಇಮೇಜ್‌ಗಳನ್ನು ದಾಟಿಸಬೇಕು ಎಂದಾಗ ಅದು ದೀರ್ಘಕವನ ಆಗುತ್ತದೆ. ಸಣ್ಣಕವನದಲ್ಲಿ ಚುರುಕು ಮುಟ್ಟಿಸಿದಾಗ ಅದು ಹನಿಗವನ ಆಗುತ್ತದೆ. ನನಗೆ ಹೀಗೆ ಲವಲವಿಕೆಯ ಹನಿಗವನ ಬರೆಯಲು ಸಾಕಷ್ಟು ಮಂದಿ ಸ್ಫೂರ್ತಿ ನೀಡಿದ್ದಾರೆ. ಇದರ ಜೊತೆಗೆ ಗಂಭೀರ ಹನಿಗವನ ಕೂಡ ಬರೆದಿದ್ದೇನೆ. ಹಾಯ್ಕುಗಳನ್ನು ಬರೆದಿದ್ದೇನೆ.

• ಸುದೀರ್ಘ ಪ್ರಬಂಧಗಳ ಕಾಲದಲ್ಲಿ ನೀವು ಸಂಕ್ಷಿಪ್ತತೆಯನ್ನೇ ಏಕೆ ಆರಿಸಿಕೊಂಡಿರಿ?

ನಾನು ಬರೆದ ಕಾಲಕ್ಕೆ ಹೆಚ್ಚು ಸೂಕ್ತ ಅನ್ನಿಸಿತ್ತು. ಈಗಿನ ಕಾಲಕ್ಕೆ ಸಂಕ್ಷಿಪ್ತತೆ ಮತ್ತಷ್ಟು ಸೂಕ್ತವಾಗಿದೆ. ಈಗ ಎಲ್ಲವನ್ನೂ ಸಣ್ಣ ರೂಪದಲ್ಲಿಯೇ ತಲುಪಿಸಬೇಕು. ಹಾಗಿದ್ದರೆ ಬೇಗ ಹೆಚ್ಚು ಜನರನ್ನು ತಲುಪುತ್ತದೆ. ನನಗೆ ನನ್ನ ಕವನ ಹೆಚ್ಚು ಜನರನ್ನು ತಲುಪಬೇಕು. ಕೆಲವರು ತಮಗಾಗಿ ಬರೆಯುತ್ತೇನೆ ಅನ್ನುತ್ತಾರೆ. ತಮಗಾಗಿ ಬರೆಯುವುದಾದರೆ, ಬರೆಯದೇ ಇರುವುದೇ ಲೇಸು. ಮನಸ್ಸಲ್ಲೇ ಇರತ್ತಲ್ಲ.

• ಜನಪ್ರಿಯ ಸಾಹಿತ್ಯದ ಕುರಿತು ತಕರಾರುಗಳೂ ಇವೆಯಲ್ಲ?

ಶ್ರೇಷ್ಠವಾದದ್ದು ಜನಪ್ರಿಯವೂ ಆಗಿರುತ್ತದೆ. ಅದಕ್ಕೆ ಬೇಕಾದಷ್ಟು ಉದಾಹರಣೆ ನಮ್ಮ ಮಧ್ಯೆ ಇವೆ. ಪುರಂದರದಾಸರು, ಕನಕದಾಸರು ಬರೆದಿದ್ದು ಶ್ರೇಷ್ಠವೂ ಜನಪ್ರಿಯವೂ ಆಗಿದೆ. ಬೇಂದ್ರೆ, ಕುವೆಂಪು ಬರೆದಿದ್ದೂ ಅಷ್ಟೇ. ಹಾಗಾಗಿ ಜನಪ್ರಿಯತೆಯ ಕುರಿತು ನಾಚಿಕೊಳ್ಳಬೇಕಿಲ್ಲ. ಹಾಗಂತ ಕ್ಷಣಿಕ ಜನಪ್ರಿಯತೆಗೆ ಮಾರುಹೋಗಬಾರದು. ಸಾರ್ವಕಾಲಿಕ ಜನಪ್ರಿಯತೆ ಮಾತ್ರ ಶ್ರೇಷ್ಠವಾದದ್ದನ್ನು ರೂಪಿಸಬಲ್ಲದು.

• ಕವನಕ್ಕೆ ಪ್ರಾಸ ಎಷ್ಟು ಒಳ್ಳೆಯದು, ಎಷ್ಟು ಕೆಟ್ಟದ್ದು?

ಸಹಜವಾಗಿ ಬರೆದರೆ ಕಾವ್ಯಮಯ
ಒತ್ತಡಕ್ಕೆ ಬರೆದರೆ ಕಾವ್ಯ ಮಾಯ

ಇದು ನನ್ನದೇ ಪದ್ಯ. ನನ್ನ ಪ್ರಕಾರ ಪ್ರಾಸ ಕವನದ ಬಂಧವನ್ನು ಬಿಗಿಗೊಳಿಸುತ್ತದೆ. ಹಾಗಂತ ಕ್ಲೀಷೆಯಾಗಿರುವ ಪ್ರಾಸ ಬಳಸಬಾರದು. ಆ ಕಡೆಗೆ ನಾನು ಗಮನ ಹರಿಸುತ್ತಿರುತ್ತೇನೆ. ಹೊಸ ಹೊಸ ಪದ ಪರಿಚಯಿಸಲು ಶ್ರಮಿಸುತ್ತೇನೆ. ಕೆಲವರು ಪ್ರಾಸ ವಿರೋಧಿಗಳೂ ಇದ್ದಾರೆ. ಆದರೆ ಪ್ರಾಸ ನನ್ನ ಶಕ್ತಿ. ಅದೇ ಮಿತಿಯಾಗದ ಹಾಗೆ ಪ್ರಾಸ ಬಳಸುತ್ತೇನೆ.

• ಪ್ರಾಸದಿಂದಾಗಿ ಕವನದ ಗಾಂಭೀರ್ಯ ಕೆಡುತ್ತದೆಯೇ?

ದ.ರಾ. ಬೇಂದ್ರೆಯವರ ಕವನಗಳಲ್ಲಿ ಅವರು ಸೊಗಸಾಗಿ ಪ್ರಾಸ ಬಳಸುತ್ತಾರೆ. ಕುವೆಂಪು ಪ್ರಾಸ ಬಳಸಿದ್ದಾರೆ. ಅಡಿಗರ ಕವನಗಳಲ್ಲಿ ಅಂತರ್‌ಪ್ರಾಸ ಇರುತ್ತದೆ. ಅದನ್ನೆಲ್ಲಾ ಗುರುತಿಸುವ ಶಕ್ತಿ ಬೇಕು. ಅವರು ಪ್ರಾಸ ಬಳಸಿಯೇ ಶ್ರೇಷ್ಠವಾದ ಸಾಹಿತ್ಯ ನೀಡಿದ್ದಾರೆ. ನಮ್ಮ ಕನ್ನಡ ಸಾಹಿತ್ಯ ಪರಂಪರೆಯಲ್ಲಿಯೇ ಪ್ರಾಸಕ್ಕೆ ಮಹತ್ವ ಇದೆ. ಪ್ರಾಸ ಹೇಗೆ ಬಳಸುತ್ತಾರೆ ಅನ್ನುವುದು ಮುಖ್ಯ.

• ಹನಿಗವನದ ಈಗಿನ ಪ್ರಸ್ತುತತೆ ಏನು?

ಜಗತ್ತು ವೇಗವಾಗಿ ಸಾಗುತ್ತಿರುವ ಸಂದರ್ಭ ಇದು. ತಂತ್ರಜ್ಞಾನಗಳು ಬದಲಾಗುತ್ತಿವೆ. ಹೊಸ ತಂತ್ರಜ್ಞಾನಗಳು ಬರುತ್ತಿವೆ. ಇಂಥ ಸಮಯದಲ್ಲಿ ಹನಿಗವನದ ಪ್ರಸ್ತುತತೆ ಮೊದಲಿಗಿಂತ ಜಾಸ್ತಿಯಾಗಿದೆ. ಈಗ ಜನಪ್ರಿಯವಾಗಿರುವ ರೀಲ್ಸ್ ಅನ್ನು ನೋಡಿದರೆ ಅದು ಹನಿಗವನದ ಗುಣವೇ. ಕೊನೆಗೊಂದು ಅನಿರೀಕ್ಷಿತ ಪಂಚ್ ಇರುತ್ತದೆ. ವಿಡಿಯೋ ಮಾಧ್ಯಮ ಆಗಿರುವುದರಿಂದ ಜನಪ್ರಿಯವಾಗಿದೆ. ಈಗ ನಾನೂ ನನ್ನ ಮಗಳು ಸಹಜಾ ಸೋಷಿಯಲ್ ಮೀಡಿಯಾದಲ್ಲಿ ಹನಿಗವನ ಓದುತ್ತೇವೆ. ಅದನ್ನೂ ಲಕ್ಷಾಂತರ ಜನ ನೋಡುತ್ತಾರೆ. ಅಲ್ಲದೇ ಹೊಸ ಹೊಸ ತಂತ್ರಜ್ಞಾನಗಳನ್ನು ಸುಲಭವಾಗಿ ಹನಿಗವನದಲ್ಲಿ ತರಬಹುದು ಅನ್ನುವುದು ಕೂಡ ಹನಿಗವನದ ಹೆಚ್ಚುಗಾರಿಕೆ.

• ವ್ಯಂಗ್ಯ, ವಿಡಂಬನೆ ಮೂಲಕ ನೀವು ಸಮಾಜದ ಆಗುಹೋಗುಗಳಿಗೆ ಪ್ರತಿಕ್ರಿಯಿಸುತ್ತೀರಿ. ಈ ವ್ಯಂಗ್ಯ ಕೋಪದಿಂದ ಹುಟ್ಟಿದ್ದೋ, ಅಸಹಾಯಕತೆಯಿಂದಲೋ?

ಬಹುತೇಕ ಅಸಹಾಯಕತೆಯಿಂದಲೇ ಹುಟ್ಟಿದ್ದು. ಯಾವುದೋ ವಿಚಾರಕ್ಕೆ, ಸರಿ ಇಲ್ಲವಲ್ಲ ಇದು ಅಂತ ಕೋಪ ಬರುತ್ತದೆ. ಅದರ ವಿರುದ್ಧ ಬೇರೇನೂ ಮಾಡಲು ಆಗುವುದಿಲ್ಲ, ಅದಕ್ಕೆ ಕವನ ಬರೆಯುತ್ತೇನೆ. ಆದರೆ ಈಗೀಗ ಸಾಮಾಜಿಕ ಆಗುಹೋಗುಗಳಿಗೆ ಪ್ರತಿಕ್ರಿಯಿಸುವುದು ಬಹಳ ಕಷ್ಟವಾಗಿಬಿಟ್ಟಿದೆ. ಮೋದಿಯವರಿಗೆ ಹೊಗಳಿದರೆ ಕೋಮುವಾದಿ ಅನ್ನುತ್ತಾರೆ, ವಿರೋಧಿಸಿದರೆ ಎಡಚ ಅನ್ನುತ್ತಾರೆ. ಅದೇ ಕಾಂಗ್ರೆಸ್ ಕುರಿತು ಬರೆದರೆ ನಿಮಗೆ ಬರೆಯುವುದು ಈ ಪಕ್ಷ ಮಾತ್ರವೇ ಸಿಗುವುದು ಅನ್ನುತ್ತಾರೆ. ಏನೇ ಬರೆದರೂ ಬ್ರಾಂಡ್ ಮಾಡುತ್ತಾರೆ. ಮೊದಲು ಹಾಗಿರಲಿಲ್ಲ. ಇನ್ನು ದೇವರ ಕುರಿತು ಬರೆಯುವುದೂ ಕಷ್ಟವೇ. ಇತ್ತೀಚೆಗೆ ಒಂದು ಹನಿಗವನ ಸೋಷಿಯಲ್ ಮೀಡಿಯಾದಲ್ಲಿ ಓದಿ ಹಾಕಿದ್ದೆವು.

ಶ್ರೀರಾಮನ ಜೊತೆ
ಸದಾ ಇರುತ್ತಾರೆ
ಸೀತೆ, ಲಕ್ಷ್ಮಣ, ಹನುಮಾನ
ನಾನು ಎಲ್ಲಿಗೆ ಹೋದರೂ ಬರುತ್ತಾಳೆ ನನ್ನಾಕೆ
ಕಾರಣ ನನ್ನ ಮೇಲೆ ಅನುಮಾನ

ಇದಕ್ಕೆ ಬಂದ ಕಮೆಂಟ್ ಹೀಗಿತ್ತು– ನಿಮಗೆ ಹಾಸ್ಯಕವನ ಬರೆಯಲಿಕ್ಕೆ ನಮ್ಮ ಹಿಂದೂ ದೇವರುಗಳ ಹೆಸರೇ ಬೇಕೇ ಎಂದು. ಇದಕ್ಕೆಲ್ಲಾ ಹೇಗೆ ಪ್ರತಿಕ್ರಿಯಿಸಬೇಕು ಗೊತ್ತಾಗುವುದಿಲ್ಲ. ಕಾವ್ಯ ಧ್ವನಿಯನ್ನು ಸಮರ್ಪಕವಾಗಿ ಗ್ರಹಿಸದ ಕಾಲಘಟ್ಟದಲ್ಲಿ ನಾವಿದ್ದೇವೆ. ಮೊದಲೆಲ್ಲಾ ಈ ವರ್ಗಕ್ಕೆ ಕಾವ್ಯ ತಲುಪುತ್ತಿರಲಿಲ್ಲ. ಈಗ ತಲುಪುತ್ತಿದೆ ಮತ್ತು ಅದರಿಂದ ಅಸಮರ್ಪಕ ಪ್ರತಿಕ್ರಿಯೆ ಎದುರಿಸಬೇಕಾಗಿದೆ. ವ್ಯಂಗ್ಯವನ್ನೂ ವಿಡಂಬನೆಯನ್ನೂ ಮಾಡಲಾಗದ ಅಸಹಾಯಕತೆ ಈಗ ಎದುರಾಗಿದೆ.

• ಹಾಸ್ಯ ಪ್ರಸಂಗ, ಹಾಸ್ಯ ಲೇಖನಕ್ಕೆ ನಿಮ್ಮನ್ನು ನೀವು ಸೀಮಿತಗೊಳಿಸಿಬಿಟ್ಟಿರಿ ಅನ್ನಿಸುತ್ತದೆಯೇ?

ನಾನು ಭಾವಗೀತೆಗಳನ್ನೂ ಬರೆದಿದ್ದೇನೆ. ನನ್ನ ಹೆಂಡತಿ, ಮಗಳಿಗೆ ನನ್ನ ಭಾವಗೀತೆಗಳು ಬಹಳ ಇಷ್ಟ. ಹೆಂಡತಿಯಂತೂ ನೀವು ಭಾವಗೀತೆಯನ್ನೇ ಚೆನ್ನಾಗಿ ಬರೆಯುತ್ತೀರಿ, ಆ ಹಾಸ್ಯ ಬಿಟ್ಟು ಇದನ್ನೇ ಬರೆಯಿರಿ ಅನ್ನುತ್ತಾಳೆ. ನಾಟಕ, ಅಂಕಣ, ವಿಮರ್ಶೆ ಹೀಗೆ ವಿವಿಧ ಪ್ರಕಾರಗಳಲ್ಲಿ ಬರೆದಿದ್ದೇನೆ. ಆದರೆ ಪ್ರಮಾಣ ಕಡಿಮೆ.

• ನೀವು ಇವತ್ತಿಗೂ ನಿರಂತರವಾಗಿ ಹನಿಗವನ ಬರೆಯುತ್ತಲೇ ಇದ್ದೀರಿ, ನಿರಂತರತೆ ಕಾಪಾಡಿಕೊಳ್ಳುವುದು ಹೇಗೆ?

ನನಗೂ ಅನೇಕರು ಸಾಕು ಹನಿಗವನ ಬರೆದಿದ್ದು, ನೀವು ದೊಡ್ಡ ಕವನ, ಮಹಾಕಾವ್ಯ ಬರೆಯಿರಿ ಎಂದು ಹೇಳಿದ್ದಿದೆ. ಹನಿಗವನ ಬರೆದರೆ ಐಡಿಯಾ ವೇಸ್ಟ್ ಆಗುತ್ತದೆ ಎಂದು ಹೇಳಿದ್ದೂ ಇದೆ. ನನಗೂ ಹಾಗೆ ಅನ್ನಿಸಿತ್ತು. ಗೊಂದಲದಲ್ಲಿದ್ದೆ. ಆದರೆ ಹಿರಿಯ ಕವಿ ಬಿ. ಆರ್.ಲಕ್ಷ್ಮಣರಾವ್, 'ಹನಿಗವನವೇ ನಿನ್ನ ಸ್ಟ್ರೆಂತ್, ನಿನ್ನ ಥರ ಬೇರೆಯವರು ಬರೆಯೋಕಾಗಲ್ಲ. ಅದನ್ನು ಬಿಡಬೇಡ' ಎಂದು ಹೇಳಿದರು. ನನಗೂ ಅದು ಸರಿ ಎನ್ನಿಸಿತು. ಜೊತೆಗೆ ನನಗೆ ಮಾಧ್ಯಮದವರು ಹನಿಗವನ ಬರೆಯಲು ಕೇಳುತ್ತಲೇ ಇರುತ್ತಾರೆ. ನನ್ನ ಬಳಿ ಬರಿ ಅಂತ ಹೇಳುವವರು ಇರುವುದೇ ನನ್ನ ಅದೃಷ್ಟ.

• ವಿಮರ್ಶಕರು ನಿಮ್ಮ ಬರವಣಿಗೆ ಉಪೇಕ್ಷಿಸಿದ್ದಾರೆ ಅಂತ ಅನ್ನಿಸುತ್ತದೆಯೇ?

ನನಗೆ ಹಾಗೇನೂ ಅನ್ನಿಸಿಲ್ಲ. ಮೊದಲೆಲ್ಲಾ ಹಿರಿಯ ಸಾಹಿತಿಗಳು ಓದಿ ಪತ್ರ ಬರೆಯುತ್ತಿದ್ದರು. ಜಿಎಸ್ ಶಿವರುದ್ರಪ್ಪನವರು, ಚನ್ನವೀರ ಕಣವಿ, ತಿರುಮಲೇಶ್ ನನ್ನ ಕವನ ಮೆಚ್ಚಿ ಬರೆದ ಪತ್ರಗಳು ನನ್ನಲ್ಲಿವೆ. ಹೆಚ್‌ಎಸ್ ವೆಂಕಟೇಶಮೂರ್ತಿ, ರಾಘವೇಂದ್ರ ಪಾಟೀಲ್, ಬಿಆರ್ ಲಕ್ಷ್ಮಣರಾವ್ ಸೇರಿದಂತೆ ಸಾಕಷ್ಟು ಸಾಹಿತಿಗಳು ನನ್ನ ಸಾಹಿತ್ಯದ ಕುರಿತು ಬರೆದಿದಿದ್ದಾರೆ. ಬೇರೆಬೇರೆಯವರು ನನ್ನ ಸಾಹಿತ್ಯದ ಕುರಿತು ಬರೆದ ಲೇಖನಗಳು 'ಡುಂಡಿ ಮಲ್ಲಿಗೆ' ಎಂಬ ಕೃತಿಯಲ್ಲಿವೆ. ಅಲ್ಲದೇ, ಈಗೀಗ ನನಗೆ ಅಂತಲ್ಲ, ಯಾರ ಕೃತಿಗೂ ಉತ್ತಮ ವಿಮರ್ಶೆ ದೊರೆಯುವುದಿಲ್ಲ. ಪತ್ರಿಕೆಗಳಲ್ಲಿ ವಿಮರ್ಶೆಗೆ ಜಾಗ ಇಲ್ಲ. ಯಾರಿಗಾದರೂ ಪುಸ್ತಕ ಕಳುಹಿಸಿದರೆ ತಲುಪಿತು ಅಂತಲೂ ಹೇಳುವುದಿಲ್ಲ. ಹಾ.ಮಾ. ನಾಯಕರಿಗೆ ಪುಸ್ತಕ ಕಳುಹಿಸಿದರೆ ತಲುಪಿತು ಅಂತ ಕಾರ್ಡ್ ಬರೆಯುತ್ತಿದ್ದರು. ಈ ನಿಟ್ಟಿನಲ್ಲಿ ನನ್ನ ಯೋಗ್ಯತೆ ಮೀರಿ ನನಗೆ ಮನ್ನಣೆ ದೊರೆತಿದೆ ಅಂದುಕೊಳ್ಳುತ್ತೇನೆ.

• ನೀವು ಸಾಹಿತ್ಯ ಕೃಷಿ ಆರಂಭಿಸಿದ ಸಂದರ್ಭಕ್ಕೂ ಈಗಿನ ಕಾಲಕ್ಕೂ ಏನೇನು ವ್ಯತ್ಯಾಸ ಕಾಣುತ್ತೀರಿ?

ಆಗ ಅವಕಾಶ ಕಡಿಮೆ ಇದ್ದುವು. ಪತ್ರಿಕೆಗಳು ಮತ್ತು ಆಕಾಶವಾಣಿ ಮಾತ್ರ ಇದ್ದಿದ್ದು. ಅಲ್ಲದೇ ಆಗಿನ ಸಂಪಾದಕರುಗಳು ಬಂದ ಎಲ್ಲಾ ಲೇಖನಗಳನ್ನು ಪ್ರಕಟಿಸುತ್ತಲೂ ಇರಲಿಲ್ಲ. ಜರಡಿ ಹಿಡಿಯುತ್ತಿದ್ದರು. ಕೆಲವೇ ಕೆಲವು ಬರಹಗಳು ಪ್ರಕಟವಾಗುತ್ತಿದ್ದವು. ಆದರೆ ಈಗ ಅವಕಾಶಗಳು ಜಾಸ್ತಿ ಇವೆ. ಜರಡಿ ಹಿಡಿಯುವ ವ್ಯವಸ್ಥೆ ಇಲ್ಲವಾಗಿದೆ. ಸೋಷಿಯಲ್ ಮೀಡಿಯಾಗಳಲ್ಲಿ ಅವರವರೇ ಬರೆದು ಪ್ರಕಟಿಸುವುದರಿಂದ ಎಲ್ಲಾ ರೀತಿಯ ಸಾಹಿತ್ಯಗಳೂ ಬರುತ್ತಿವೆ.



• ನೀವು ಭಾಷೆಯನ್ನು ದುಡಿಸಿಕೊಳ್ಳುತ್ತಲೇ ಇರುತ್ತೀರಿ. ಹೊಸ ಕಾಲಕ್ಕೆ ಭಾಷೆಯನ್ನು ಈಗಿನ ಪರಿಭಾಷೆಯಲ್ಲಿ ಹೇಗೆ ತಲುಪಿಸಬಹುದು?

ಸಾಹಿತ್ಯ ಒಂದು ಸಂವಹನ ಮಾಧ್ಯಮ ಅಂತ ನಂಬಿಕೊಂಡಿರುವವನು ನಾನು. ನಾನು ಎಂಎಸ್ಸಿ ಅಗ್ರಿಕಲ್ಚರ್ ಓದಿದವನು. ಆಗೆಲ್ಲಾ ಕೃಷಿ ತಂತ್ರಜ್ಞಾನವನ್ನು ರೈತರಿಗೆ ಹೇಗೆಲ್ಲಾ ತಲುಪಿಸಲು ಸಾಧ್ಯ ಎಂದು ಆಲೋಚಿಸುತ್ತಿದ್ದೆ. ಲೇಖನ, ಆಕಾಶವಾಣಿ ಮೂಲಕ ಸಂವಹನ ಮಾಡುತ್ತಿದ್ದೆ. ನಾನು ಒಂಥರಾ ಸಂವಹನದ ವಿದ್ಯಾರ್ಥಿಯೇ. ಭಾಷೆ ವಿಚಾರದಲ್ಲಿ ನಾವು ಅಪ್‌ಡೇಟ್ ಆಗುತ್ತಿರಬೇಕು. ನಿರ್ಲಕ್ಷ್ಯ, ಮಡಿವಂತಿಕೆ ಇರಕೂಡದು. ಭಾಷೆಯನ್ನು ಗಮನಿಸುತ್ತಾ ಇರಬೇಕು. ನಾನು ಸತ್ಯ ಮೇವ ಜಯತೇ ಅನ್ನು ಪಥ್ಯ ಮೇವ ಜಯತೇ ಎಂದು ಬರೆದಿದ್ದೆ. ಅಭಿಮಾನಿನಿಯರು ಎಂಬ ಪದ ಬಳಸಿದ್ದೆ. ಹೀಗೆ ಹೊಸ ಹೊಸ ಪದಗಳನ್ನು ಬಳಕೆಗೆ ತರುತ್ತಿರಬೇಕು. ಈ ನಿಟ್ಟಿನಲ್ಲಿ ನಾನು ಸದಾ ಕಾಲ ತೆರೆದ ಕಣ್ಣುಗಳಿಂದ ಗಮನಿಸುತ್ತಾ ಇರುತ್ತೇನೆ.

• ಪ್ರಸ್ತುತ ಸಾಹಿತ್ಯ ಜಗತ್ತಿನ ಕುರಿತ ನಿಮ್ಮ ಅಬ್ಸರ್ವೇಷನ್‌ಗಳೇನು?

ಹೊಸಬರಿಗೆ ಉತ್ತೇಜಕ ವಾತಾವರಣ ಕಡಿಮೆ ಇದೆ. ಆಗೆಲ್ಲಾ ಸಿ.ಅಶ್ವತ್ಥ್ ನಮಗೆ ದುಡ್ಡು ಕೊಟ್ಟು ಬರೆಸುತ್ತಿದ್ದರು. ಪ್ರಕಾಶಕರು ಕೂಡ ಉತ್ತಮ ರೀತಿಯಲ್ಲಿ ಸಂಭಾವನೆ ನೀಡಿ ಪುಸ್ತಕ ಪ್ರಕಟಿಸುತ್ತಿದ್ದರು. ಈಗ ಆ ರೀತಿಯ ವಾತಾವರಣ ಇಲ್ಲ. ಜೊತೆಗೆ ಆ ಕಾಲದಲ್ಲಿ ದಲಿತ, ಬಂಡಾಯ, ನವ್ಯ, ನವ್ಯೋತ್ತರ ಮುಂತಾದ ಚಳುವಳಿಗಳು ನಡೆದವು. ಅದಕ್ಕೆ ಪೂರಕವಾಗಿ ನಾವೂ ಆ ಚಳುವಳಿಗಳಲ್ಲಿ ತೊಡಗಿಕೊಂಡೆವು. ವ್ಯವಸ್ಥೆಯನ್ನು ಪ್ರಶ್ನಿಸುವುದು, ಹಳೆಯ ಮಾರ್ಗವನ್ನು ಪ್ರಶ್ನಿಸುವುದು ಆ ಹೊತ್ತಿನಲ್ಲಿ ನಮಗೆ ಅಭ್ಯಾಸವಾಯಿತು. ಆದರೆ ಈಗ ಯಾವುದೇ ಸಾಹಿತ್ಯ ಚಳುವಳಿಗಳಿಲ್ಲ. ಹಾಗಾಗಿ ಅಂಥದ್ದೊಂದು ವಾತಾವರಣದ ಕೊರತೆ ಇದೆ.

ಎಲ್ಲಕ್ಕಿಂತ ಹೆಚ್ಚಾಗಿ ವಸ್ತು ನಿಷ್ಠತೆಗೆ, ಪ್ರತಿಭೆಗೆ ಮನ್ನಣೆ ಸಿಗುತ್ತಿಲ್ಲ ಅನ್ನಿಸುತ್ತದೆ. ಕಾಂಗ್ರೆಸ್ ಬಂದಾಗ ಆ ಕಡೆಯವರು ಮನ್ನಣೆ ಪಡೆಯುತ್ತಾರೆ, ಬಿಜೆಪಿ ಅಧಿಕಾರಕ್ಕೆ ಬಂದಾಗ ಈ ಕಡೆಯವರಿಗೆ ಪುರಸ್ಕಾರ ದೊರೆಯುತ್ತದೆ. ಈಗಂತೂ ಅದು ಢಾಳಾಗಿ ಕಾಣಿಸುತ್ತದೆ. ಹಾಗಾಗಿ ವಸ್ತುನಿಷ್ಠತೆಗೆ ಸಲ್ಲಬೇಕಾದ ಗೌರವ ಸಲ್ಲಬೇಕಿದೆ.

ಜವಾಬ್ದಾರಿ ಪ್ರೀತಿ ಹಾಗೂ ಛಲ



ಎಲ್.ಪಿ.ಕುಲಕರ್ಣಿ

ಲೇಖಕರ ಪರಿಚಯ

ಮೂಲತಃ ಬಾಗಲಕೋಟೆ ಜಿಲ್ಲೆಯ ಹುನಗುಂದ ಸ್ವಂತ ಊರು. ಎಮ್.ಎಸ್ಸಿ, ಬಿ.ಇಡಿ, ಪತ್ರಿಕೋದ್ಯಮದಲ್ಲಿ ಪಿಜಿ ಡಿಪ್ಲೋಮಾ ಓದಿರುವ ಇವರು ಸರಕಾರಿ ಶಾಲಾ ಶಿಕ್ಷಕನಾಗಿ ಕಾರ್ಯ ನಿರ್ವಹಿಸುತ್ತಿರುವುದು ಹಿರೇಮಗಳೂರಿನಲ್ಲಿ. ಸಣ್ಣ ಕಥೆ, ವಿಜ್ಞಾನ,ಗಣಿತಕ್ಕೆ ಸಂಬಂಧಿಸಿದ ಲೇಖನ ಬರೆಯುವುದು ಹವ್ಯಾಸ.

2019-20 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ನಡೆಸಿದ ಎಚ್.ನರಸಿಂಹಯ್ಯನವರ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ಪ್ರಶಸ್ತಿ, ಚೊಚ್ಚಲ ಕೃತಿ 'ಯುರೇಕಾ- ವಿಜ್ಞಾನಲೋಕದ ಬೆಳಕಿಂಡಿ' ಯಿಂದ ಆಯ್ದ ಲೇಖನವೊಂದು ಬೆಂಗಳೂರು ವಿಶ್ವವಿದ್ಯಾಲಯದ ಬಿಬಿಎ ಏವಿಯೇಷನ್ ಪದವಿ ತರಗತಿ ವಿದ್ಯಾರ್ಥಿಗಳಿಗೆ ಪಠ್ಯವಾಗಿದೆ. 'ಕ್ಯೂರಿಯಸ್', 'ವಿಜ್ಞಾನ ವೈಶಿಷ್ಟ್ಯ', 'ವಿಶಿಷ್ಟ ವಿಜ್ಞಾನಿಗಳ ವಿಭಿನ್ನ ಸಾಧನೆಗಳು', 'ಅಮೂಲ್ಯ ರತ್ನಗಳು', 'ಲೂಸಿ ಮರ ಏರುತ್ತಿದ್ದಳೇ?','ಯಕ್ಷ ಪ್ರಶ್ನೆ: ಭಾಗ-1,3', 'ವಿಜ್ಞಾನ ಕೌತುಕಗಳ ಮಹಾಯಾನ','ವಿಜ್ಞಾನ ವಿಶಾರದರು' ಪ್ರಮುಖ ಕೃತಿಗಳು.

'ಕ್ಯೂರಿಯಸ್' ಹಾಗೂ 'ಲೂಸಿ ಮರ ಏರುತ್ತಿದ್ದಳೇ?' ಕೃತಿಗಳಿಗೆ ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕೊಡಮಾಡುವ ದತ್ತಿ ಪ್ರಶಸ್ತಿಗಳು ಲಭಿಸಿವೆ. 'ವಿಜ್ಞಾನ ಕೌತುಕಗಳ ಮಹಾಯಾನ' ಕೃತಿಗೆ

2025 ನೇ ಸಾಲಿನ ಅವ್ವ ಪುಸ್ತಕ ಪ್ರಶಸ್ತಿ ದೊರೆತಿದೆ.



ಇವತ್ತು ಅವಳ ಮದುವೆ ಹೇಗಾದರೂ ಮಾಡಿ ಮದುವೆ ಮಂಟಪಕ್ಕೆ ಹೋಗಿ ಇವಳ ಪ್ರಿಯತಮ ನಾನೇ ಈ ಮದುವೆ ನಿಲ್ಲಿಸಿ ಅಂತಾ ಹೇಳಿದರೆ? ಒಂದು ವೇಳೆ ಅವಳ ಮದುವೆ ನಿಂತು ಅವಳ ತಂದೆ-ತಾಯಿ ಮರ್ಯಾದೆಗೆ ಅಂಜಿ ಸಾವು ತಂದು ಕೊಂಡರೆ? ಇಲ್ಲವೆ ನನಗೆ ಆಪತ್ತು ತಂದಿಟ್ಟರೆ? ಹೃದಯಾಂತರಾಳದಿಂದ ನನ್ನನ್ನು ಪ್ರೀತಿಸಿದ ಇವಳು ತಂದೆ-ತಾಯಿಗೋಸ್ಕರ ಈಗ ಅನಿವಾರ್ಯವಾಗಿ ಮದುವೆಯಾಗುತ್ತಿದ್ದಾಳೆ. ರಂಪಮಾಡುತ್ತಿರುವ ನನ್ನನ್ನು ಮದುವೆ ಮಂಟಪದಲ್ಲಿ ನೋಡಿ, ನೀನ್ಯಾರು ನನಗೆ ಗೊತ್ತೇ ಇಲ್ಲ ಎಂದು ಸುಳ್ಳು ಹೇಳಿಬಿಟ್ಟರೆ? ಒಂದು ವೇಳೆ ನನ್ನ ಬರುವಿಕೆಯನ್ನು ಕಂಡು ಅವಳು ಅಲ್ಲಿಂದ ಓಡಿ ಹೋಗಿ ಆತ್ಮಹತ್ಯೆ ಮಾಡಿಕೊಂಡರೆ? ಎಂಬಂತಹ ನೂರಾರು ಪ್ರಶ್ನೆಗಳು ಗುರುವಿನ ಮನದಲ್ಲಿ ಮೂಡಿದವು. ಬೇಡ, ಬೇಡ ನನ್ನಿಂದ ಆ ಮದುವೆ ಮಂಟಪ ಸ್ಮಶಾನವಾಗುವುದು ಬೇಡ, ಅವರ ಮಾನ ಹೋಗುವುದು ಬೇಡ. ಬದಲಾಗಿ ನಾನೇ ಸಮುದ್ರದ ಆ ಬೃಹತ್ ಅಲೆಯಾಕಾರಾದ ದುಃಖವನ್ನು ನುಂಗಿ ಸುಮ್ಮನಿದ್ದರಾಯಿತೆಂದು ನಿರ್ಧರಿಸಿದ ಗುರು.

• **ಎಲ್.ಪಿ.ಕುಲಕರ್ಣಿ**

ಮೊದಲೆಲ್ಲಾ ಟಿಸಿಎಚ್ ಕೋರ್ಸ್ ಕಲಿತರೆ ಸಾಕು ಸರಕಾರಿ ಶಾಲಾ ಶಿಕ್ಷಕರಾಗಿಬಿಡುತ್ತಿದ್ದರು. ಈಗ ಡಿ.ಇಡಿ ಮುಗಿಸಿ ಅದರ ಜೊತೆಗೆ ಪದವಿಯನ್ನೂ ಕಲಿತಿರಬೇಕು. ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ನಿರ್ದಿಷ್ಟ ಅಂಕಗಳನ್ನು ಪಡೆದು ಪ್ರಾಧಿಕಾರ ಕರೆಯುವ ಸಿಇಟಿ (ಸಾಮಾನ್ಯ ಪ್ರವೇಶ ಪರೀಕ್ಷೆ)ಯಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿ ರ್‍ಯಾಂಕ್ ಪಡೆಯಬೇಕು. ನಂತರದಲ್ಲಿ ಸರಕಾರ ಕಾಲಕಾಲಕ್ಕೆ ನಿಗದಿಪಡಿಸುವ ಮೀಸಲಾತಿಗಳನ್ವಯ ನಿಮಗೊಂದು ಶಿಕ್ಷಕ ಹುದ್ದೆ ಸಿಗುತ್ತದೆ, ಆಗ ನೀವೊಬ್ಬ ಸರಕಾರಿ ಶಿಕ್ಷಕ. ಹೌದು, ಜಗತ್ತಿನಲ್ಲಿನ ಎಲ್ಲ ವೃತ್ತಿಗಳೂ ಕೂಡ ಶ್ರೇಷ್ಠವೆ. ಆದರೆ, ಅವೆಲ್ಲವುಗಳಿಗಿಂತ ಪರಮೋಚ್ಚವಾಗಿರುವುದು ಗುರುಸ್ಥಾನ, ಅರ್ಥಾತ್ ಶಿಕ್ಷಕನ ಸ್ಥಾನ. ತಾನೊಬ್ಬ ಆದರ್ಶ ಶಿಕ್ಷಕನಾಗಲು ಜೀವನದಲ್ಲಿ ಕೆಲವೊಂದಿಷ್ಟು ಬದಲಾವಣೆಗಳ ಜೊತೆಗೆ ಉತ್ತಮ ಆದರ್ಶಗಳನ್ನು ಬೆಳೆಸಿಕೊಳ್ಳಬೇಕಾಗುತ್ತದೆ.

ವಿದ್ಯಾರ್ಥಿಗಳನ್ನು ತನ್ನ ಮಕ್ಕಳಿಗಿಂತ ಹೆಚ್ಚು ಪ್ರೀತಿಸುವ, ಮೆಚ್ಚುವ ಹಾಗೂ ಅವರು ತಪ್ಪು ಮಾಡಿದಾಗ ತಿಳಿಹೇಳಿ ಸರಿದಾರಿಗೆ ತರುವ ಗುಣ ಯಾರಲ್ಲಿರುತ್ತದೋ ಅವನೇ ಆದರ್ಶ ಶಿಕ್ಷಕ ಎನಿಸಿಕೊಳ್ಳುತ್ತಾನೆ, ಆತ ವಿದ್ಯಾರ್ಥಿಗಳ ಮನದಲ್ಲಿ ದೇವತಾ ಸ್ಥಾನಕ್ಕೇರಿರುತ್ತಾನೆ. ಕಲಿತು ಶಿಕ್ಷಕ ವೃತ್ತಿಹಿಡಿದು ತನ್ನ ವಿದ್ಯಾರ್ಥಿಗಳಿಂದ ಆದರ್ಶ ಶಿಕ್ಷಕನೆನಿಸಿಕೊಳ್ಳುವ ಮಹದಾಸೆ ಪ್ರತಿಯೊಬ್ಬ ಶಿಕ್ಷಕನಲ್ಲೂ ಇರುತ್ತದೆ.

ಯಾವುದೋ ಊರಿಗೆ ಹೋದಾಗ ಅಲ್ಲಿನ ರಸ್ತೆಯ ಮೇಲೆ ನಡೆದುಕೊಂಡು ಹೋಗುವಾಗಲೋ, ಹೊಟೇಲಿನಲ್ಲಿ ತಿಂಡಿ ತಿನ್ನುವಾಗಲೋ, ಯಾವುದೋ ಒಂದು ಕಾರ್ಯಕ್ರಮದಲ್ಲೊ ಹೀಗೆ ಎಲ್ಲೊ ಒಂದು ಕಡೆ ಹೋದಾಗ ತಮ್ಮಲ್ಲಿ ವಿದ್ಯಾರ್ಜನೆ ಮಾಡಿದ ವಿದ್ಯಾರ್ಥಿ, 'ಸರ್, ಹೇಗಿದ್ದೀರಿ ನಾನು...' ಎಂದು ಹೇಳಿ ಪರಿಚಯ ಮಾಡಿಕೊಂಡು ಮಾತನಾಡಲು ಮುಂದಾದಾಗ ಶಿಕ್ಷಕನಿಗಾಗುವ ಖುಷಿಯ ಮುಂದೆ ಮತ್ತೆಲ್ಲವೂ ನಗಣ್ಯ. ತನ್ನ ಹಳೆಯ ವಿದ್ಯಾರ್ಥಿಯ ಸಾಧನೆ, ಬದುಕು, ಉದ್ಯೋಗ ಎಲ್ಲವನ್ನು ಕೇಳಿ ತಿಳಿದುಕೊಂಡ ಶಿಕ್ಷಕ ಮನದಲ್ಲಿ ಹರ್ಷಗೊಳ್ಳುವ ಬಗೆ ಇದೆಯಲ್ಲ, ಅದು ವರ್ಣನಾತೀತ, ಅನುಭವಿಸಿದವರಿಗೆ ಮಾತ್ರ ಗೊತ್ತಾಗುವುದು. ಈ ರೀತಿಯ ಬದುಕನ್ನು ಇಷ್ಟಪಡುವ ಅದೆಷ್ಟೋ ಶಿಕ್ಷಕರು ನಮ್ಮ ಸುತ್ತಲೂ ಸಿಗುತ್ತಾರೆ.

'ಗುರು, ಎಷ್ಟೊತ್ತು ಅಂತಾ ಓದ್ತಿಯೋ ಸ್ಕೂಲ್‌ಗೆ ಹೋಗೋಕೆ ಟೈಮ್ ಆಗುತ್ತೆ ಸ್ನಾನ, ಸಂಧ್ಯಾವಂದನೆಗಳನ್ನು ಮಾಡಿ ಬೇಗ ರೆಡಿಯಾಗು' ಅನ್ನುವ ಅಮ್ಮನ ಮಾತುಗಳು ಕಿವಿಗೆ ಬೀಳುತ್ತಲೇ ಗುರು ಬಚ್ಚಲು ಮನೆಗೆ ಹೋದ. ಆ ಬಡ ದಂಪತಿಗಳಿಗೆ ಮೂವರು ಮಕ್ಕಳು; ಹಿರಿಯ ಮಗ ಗುರು, ತಂಗಿ ಪೂಜಾ, ತಮ್ಮ ಶೇಖರ. ಪೂಜಾ ಎಸ್.ಎಸ್.ಎಲ್.ಸಿ ಓದುತ್ತಿದ್ದರೆ ಶೇಖರ ಏಳನೇ ತರಗತಿಯಲ್ಲಿದ್ದ. ಪದವೀಧರನಾಗಿದ್ದ ಗುರು ಪ್ರೈವೇಟ್ ಶಾಲೆಯಲ್ಲಿ ಶಿಕ್ಷಕನಾಗಿದ್ದ. ಬರುವ ಮೂರು ಸಾವಿರ ಸಂಬಳ ಹೊಟ್ಟೆಗೆ ಒಂಚೂರು ಬಟ್ಟೆಗೆ ಅಷ್ಟೇ ಆಗುತ್ತಿತ್ತು. ಜೀವನದಲ್ಲಿ ಬಡತನ, ಬಂಧುಗಳ ತುಚ್ಛ ಮಾತುಗಳನ್ನು ಅನುಭವಿಸಿದ್ದ ಗುರುವಿಗೆ ಕಷ್ಟಪಟ್ಟು ಓದಿ ಸರಕಾರಿ ಶಿಕ್ಷಕನಾಗಬೇಕೆಂಬ ಛಲವಿತ್ತು.

ಅದಕ್ಕಾಗೇ ಆತ, ಮುಂಜಾನೆಯಿಂದ ರಾತ್ರಿ ಎಂಟರವರೆಗೆ ಆ ವಸತಿಸಹಿತವಾದ ಪ್ರೈವೇಟ್ ಸ್ಕೂಲಿನಲ್ಲಿ ಕೆಲಸಮಾಡಿ ದಣಿದು ಬಂದರೂ ಅದನ್ನು ಲೆಕ್ಕಿಸದೇ ರಾತ್ರಿ ಹನ್ನೆರಡವರೆಗೂ ಓದುತ್ತಿದ್ದ. ಬೆಳಿಗ್ಗೆ ಮೂರು ಗಂಟೆಗೇ ನಿದ್ರೆಯಿಂದ ಎದ್ದು ಮತ್ತೆ ಸ್ಟಡಿ ಮಾಡಲು ಕೂಡುತ್ತಿದ್ದ. ಹಾಗೆ ಓದಲು ಕುಳಿತಾಗ ಸುತ್ತಲಿನ ಜಂಜಡಗಳನ್ನು ಮರತೇಬಿಡುತ್ತಿದ್ದ. ಹೀಗಾಗಿ ಅಮ್ಮ, ಅವನನ್ನು ಆಗಾಗ ಎಚ್ಚರಿಸುತ್ತಿದ್ದಳು.

ಸ್ನಾನದ ಕೋಣೆಯಿಂದ ಹೊರಬಂದವನೇ ಒದ್ದೆ ಪಂಜೆಯನ್ನುಟ್ಟುಕೊಂಡು ಥಾಲಿ, ಸೌಟುಗಳನ್ನು ತೆಗೆದುಕೊಂಡು ದೇವರ ಕೋಣೆಯಲ್ಲಿ ಕುಳಿತು ಗೋಪಿಚಂದನವನ್ನು ಹಣೆಗೆ, ಮೈಗೆಲ್ಲ ಲೇಪಿಸಿಕೊಂಡು ಸಂಧ್ಯಾವಂದನೆ ಮಾಡುವುದು ಆತನ ದಿನನಿತ್ಯದ ರೂಢಿ ಹಾಗೂ ಸಂಪ್ರದಾಯ ಕೂಡ. ಅಷ್ಟೊತ್ತಿಗಾಗಲೇ ತಂಗಿ ಹಾಸಿಗೆಯಿಂದ ಎದ್ದು ಮನೆಯ ಅಂಗಳವನ್ನೆಲ್ಲ ಗುಡಿಸಿ ಥಳಿಹೊಡೆದು ರಂಗೋಲಿ ಇಟ್ಟಿರುತ್ತಿದ್ದಳು. ಇಷ್ಟೆಲ್ಲಾ ಆಗುವುದರೊಳಗಾಗಲೇ ಮುಂಜಾನೆ ಏಳು ಗಂಟೆಯಾಗುತ್ತಿತ್ತು. ಅಮ್ಮ, ಅಪ್ಪ, ತಂಗಿ, ತಮ್ಮ ಹಾಗೂ ಗುರು ಎಲ್ಲರೂ ಒಟ್ಟಿಗೆ ಕುಳಿತು ಚಹಾವನ್ನು ಸೇವಿಸುತ್ತಿದ್ದರು.

ಅದಾದನಂತರ ಗುರು, ಸ್ಕೂಲ್ ಕಡೆಗೆ ಹೊರಡುತ್ತಿದ್ದ. ಆತನ ಸೋದರ ಮಾವ ಅಲ್ಲಿಯೇ ಇರುವ ರಾಯರ ಮಠದಲ್ಲಿ ಅರ್ಚಕನಾಗಿದ್ದ. ಗುರು ಮಾತ್ರ ಒಮ್ಮೆಯೂ ಶ್ರಾವಣ ಮಾಸದಲ್ಲಿ ಮೂರು ದಿನ ಜರುಗುವ ರಾಯರ ಆರಾಧನಾ ಉತ್ಸವದ ಊಟಕ್ಕೆ ಹೋಗುತ್ತಿರಲಿಲ್ಲ. ಸಂಜೆ ಮಾತ್ರ ತಪ್ಪದೇ ರಾಯರ ಮಠಕ್ಕೆ ಹೋಗಿ ಗುರುರಾಯರ ದರ್ಶನ ಪಡೆದು, ಮಂಗಳಾರತಿ ತೆಗೆದುಕೊಂಡು ದಕ್ಷಿಣೆ ಹಾಕಿ ಕೈಮುಗಿದು ಬರುತ್ತಿದ್ದ. ಆಗ ಮಾವ, 'ಅಳಿಯ, ಆ ಪ್ರೈವೇಟ್ ಸ್ಕೂಲಿನಲ್ಲಿ ಕಡಿಮೆ ಸಂಬಳಕ್ಕೆ ಎಷ್ಟು ಅಂತಾ ದುಡೀತೀಯಾ, ಆರಾಧನೆ ಅದು ಇದು ಇದ್ದಾಗ ಮಠಕ್ಕೆ ಬಂದು ಊಟ ಬಡಿಸುವುದು, ಕೈಕೆಲಸ ಮುಂತಾದವನ್ನು ಮಾಡಿದರೆ ದಕ್ಷಿಣೆ ರೂಪದಲ್ಲಿ ಚೂರು ದುಡ್ಡಾದರೂ ಸಿಗುತ್ತೆ. ಮೇಲಾಗಿ ನೀನು ರ್‍ಯಾಂಕ್ ವಿದ್ಯಾರ್ಥಿಯಂತೂ ಅಲ್ಲ. ನೀನು ಎಷ್ಟೇ ಓದಿದರೂ ಸರಕಾರಿ ಉದ್ಯೋಗ ಸಿಗುವುದು ಕಷ್ಟ. ಏಕೆಂದರೆ ಜನರಲ್ ಮೆರಿಟ್ ಇದ್ದವರಿಗೆ ಈಗ ಸರಕಾರಿ ಕೆಲಸ ಗಗನ ಕುಸುಮ. ಏನು ಮಾಡುತ್ತಿಯೋ ನೋಡು.' ಎಂಬುದಾಗಿ ಖಡಾಖಂಡಿತವಾಗಿ ಅಲ್ಲಿ ನೆರೆದಿದ್ದ ಎಲ್ಲರಿಗೂ ಕೇಳಿಸುವ ಹಾಗೆ ಹೇಳಿಬಿಡುತ್ತಿದ್ದ. ಇನ್ನೊಬ್ಬ ಮಾವ, 'ಏ ಗುರು, ಸರಕಾರಿ ನೌಕರಿ ಈಗ ಜನರಲ್ ಮೆರಿಟ್‌ನವರಿಗೆ ಸಿಗೋದು ದುರ್ಲಭ. ಅದಕ್ಕೆ ಹೇಳ್ತಿದ್ದೀನಿ ಈ ಓದು ಆ ಕೆಲಸ ಎಲ್ಲಾ ಬಿಟ್ಟು ಎಲ್ಲಾದರೂ ಒಂದು ಅಂಗಡಿ, ರೆಸ್ಟೋರೆಂಟ್ ಇಲ್ಲವೇ ಬೆಂಗಳೂರಲ್ಲಿ ಯಾವುದಾದರೂ ಒಂದು ಕಂಪನೀಲಿ ಕೆಲಸ ನೋಡು. ಈ ಸರಕಾರಿ ನೌಕರಿ ಸಿಗುತ್ತೆ ಅಂತ ವ್ಯರ್ಥ ಕಾಲಹರಣ ಮಾಡಬೇಡ' ಎನ್ನುತ್ತಿದ್ದ. ಇಂತಹ ಮಾತುಗಳಿಂದ ಗುರುವಿಗೆ ಒಂದು ರೀತಿಯ ಇರಿಸುಮುರುಸಾಗುತ್ತಿತ್ತು. ಹಾಗಾದರೆ ಕಷ್ಟಪಟ್ಟು ಓದಿದವರಿಗೆ ಬೆಲೆನೇ ಇಲ್ಲವೇನೋ ಎಂದೆನಿಸುತ್ತಿತ್ತು.

ಎಸ್.ಎಸ್.ಸಿ, ಬ್ಯಾಂಕ್, ರೈಲ್ವೇ, ಕೆ.ಪಿ.ಎಸ್.ಸಿ ಮುಂತಾದ ಉದ್ಯೋಗಗಳಿಗೆ ಅರ್ಜಿ ಹಾಕಿ ಪರೀಕ್ಷೆ ಬರೆದು ಒಂದು ಎರಡು ಅಂಕಗಳಲ್ಲಿ ರ್‍ಯಾಂಕ್ ಕಡಿಮೆ ಬಂದು ಸೆಲೆಕ್ಷನ್ ಲಿಸ್ಟ್‌ನಲ್ಲಿ ಈತನ ಹೆಸರು ಇರುತ್ತಿರಲಿಲ್ಲ. ಹೀಗಾದಾಗ ಮಾವಂದಿರ ಆ ಮಾತುಗಳು ನೆನಪಾಗುತ್ತಿದ್ದವು. ಮನಸ್ಸು ಮ್ಲಾನಗೊಂಡು ಏಕಾಂತದಲ್ಲಿ ಸುಮ್ಮನೇ ಕುಳಿತುಬಿಡುತ್ತಿದ್ದ. ಅಪ್ಪನ ಅನಾರೋಗ್ಯ, ತಮ್ಮ-ತಂಗಿಯರ ಜವಾಬ್ದಾರಿ ಈತನ ಹೆಗಲಮೇಲೆ ಬಿದ್ದುದರಿಂದ ಒಮ್ಮೊಮ್ಮೆ ಏನು ಮಾಡಬೇಕೆಂದು ತೋಚುತ್ತಿರಲಿಲ್ಲ ಗುರುವಿಗೆ. ಇಂತದ್ದರ ಮಧ್ಯ ಒಂದು ಹುಡುಗಿಯನ್ನು ಮನಸಾರೆ ಪ್ರೀತಿಸುತ್ತಿದ್ದ. ಮನೆಯ ಜವಾಬ್ದಾರಿಗಳು, ಕಷ್ಟಗಳನ್ನೆಲ್ಲಾ ಆಕೆಯ ಮುಂದೆ ಹೇಳುತ್ತಿದ್ದ. ಅವಳು ತಕ್ಕಮಟ್ಟಿಗೆ ಈತನನ್ನು ಸಮಾಧಾನಿಸುತ್ತಿದ್ದಳು. ಅವಳ ಆ ಪ್ರೀತಿಯ ಮಾತುಗಳಿಂದ ಆತ ತನ್ನ ದುಃಖಗಳನ್ನೆಲ್ಲಾ ಮರೆತು ಕೆಲವು ಕ್ಷಣ ಖುಷಿಯಾಗಿರುತ್ತಿದ್ದ.

ಮಧ್ಯಮ ಹಾಗೂ ಬಡ ಕುಟುಂಬದ ಸಂಸಾರವನ್ನು ನೀಗಿಸಲು ದುಡಿಯುತ್ತಿರುವ ಮಧ್ಯದ ವಯಸ್ಸಿನ ಯುವಕರ ಜೀವನ ಹಿಂಡಿ ಹಿಪ್ಪೆ ಮಾಡಿದ ಹಾಗಿರುತ್ತದೆ. ಅಂತಹ ಜೀವಗಳಿಗೆ ಪ್ರೀತಿಸುವ ಹೃದಯ ಬೇಕಾಗಿರುತ್ತದೆ. ಅಂತಹ ಹೃದಯದ ಸಾಂಗತ್ಯ ಸಿಕ್ಕಾಗಮಾತ್ರ ಅವರು ತಮ್ಮ ಎಲ್ಲಾ ನೋವುಗಳನ್ನು ಮರೆತು ಸಮಾಧಾನದಿಂದಿರುತ್ತಾರೆ. ಇಲ್ಲವಾದರೆ ಜವಾಬ್ದಾರಿಯಿಂದ ಸಂಸಾರದ ನೊಗ ಹೊತ್ತವನ ಜೀವನ ನರಕ ಸದೃಶ.

'ಗುರು, ತುಂಬಾ ಓದ್ಕೊಂಡಿದ್ದಿಯಾ. ಇನ್ನು ಎಷ್ಟು ದಿನ ಅಂತಾ ಆ ಸಂಸ್ಥೆಯಲ್ಲಿ ಕಡಿಮೆ ಸಂಬಳಕ್ಕೆ ದುಡೀತೀಯಾ ಹೇಳು. ನೋಡು ನಿನ್ನ ಗೆಳೆಯ ಸರಕಾರಿ ಜಾಬ್ ತಗೊಂಡು ಮದುವೆಯಾಗಿ ಒಂದು ಮಗು ಮಾಡಿಕೊಂಡು ಹೆಂಗಿದ್ದಾನೆ. ಈಗಲೂ ಕಾಲ ಮಿಂಚಿಲ್ಲ ಇನ್ನಷ್ಟು ಕಷ್ಟಪಟ್ಟು ಓದಿ ಜಾಬ್ ತಗೊ' ಎಂದು ತನ್ನ ಉಚಿತ ಸಲಹೆಕೊಟ್ಟಳು ರಮಾ ಆಂಟಿ. ಇದಕ್ಕೆ ಪ್ರತಿಯಾಗಿ ಗುರು, 'ಆಯ್ತು ಆಂಟಿ ಓದ್ತೀನಿ' ಅಂತ ಹೇಳ್ತಾ ಅವರ ಕುಶಲೋಪರಿ ವಿಚಾರಿಸಿ ದೂರ ನಡೆದ. ಈ ರಮಾ ಆಂಟಿ ಗುರುವಿನ ಆತ್ಮೀಯ ಗೆಳೆಯ ನಿಖಿಲ್‌ನ ತಾಯಿ. ಸಾಮಾಜಿಕ ಕಾರ್ಯಕರ್ತೆಯಾಗಿದ್ದ ಆಕೆ ತುಂಬಾ ಜಿಪುಣೆ, ಲೆಕ್ಕ ಅಂದ್ರೆ ಲೆಕ್ಕ ಅವಳದು. ಮತ್ತೊಬ್ಬರಿಗೆ ಹರ್ಟ್ ಆಗುವ ಹಾಗೆ ಮಾತನಾಡುವುದೆಂದರೆ ಅವಳ ಮನಸ್ಸಿಗೆ ಏನೋ ಒಂದು ತರಹದ ಆನಂದ, ವಿಕೃತ ಮನಸ್ಸಿನವಳು. ಇಂತಹ ವಾತಾವರಣದಲ್ಲಿ ಒಮ್ಮೊಮ್ಮೆ ಗುರುವಿಗೆ ತುಂಬಾ ಬೇಸರವೆನಿಸುವುದು.

ಪಿಯುಸಿ ಮುಗಿಸಿದ ತಂಗಿಗೆ ಮದುವೆಯ ನಿಶ್ಚಯವಾಯಿತು. ಈತ ದುಡಿಯುತ್ತಿರುವುದು ಹೊಟ್ಟೆ, ಬಟ್ಟೆಗಷ್ಟೇ ಸಾಕಾಗುತ್ತಿತ್ತು. ಇನ್ನು ಮದುವೆಯ ಖರ್ಚೆಂದರೆ ಹುಡುಗಾಟವೇ! ಏನು ಮಾಡುವುದೆಂದು ಚಿಂತೆ ಮಾಡತೊಡಗಿದ ಗುರು. ಹೆಂಗೂ ನಾನು ಆ ಸಂಸ್ಥೆಯಲ್ಲಿ ದುಡೀತಿದ್ದೀನಲ್ಲ ಅಲ್ಲಿಯೇ ಸಾಲ ಕೇಳಿದರಾಯಿತೆಂದು ಸಮಾಧಾನ ಮಾಡಿಕೊಂಡ. ಅಲ್ಲಿಯೇ ಎಂಟು ಲಕ್ಷ ರೂ. ಸಾಲ ಪಡೆದು ತಂಗಿಯ ಮದುವೆ ಮಾಡಿದ. ಇನ್ನು ತಮ್ಮನ ಶಿಕ್ಷಣದ ಜವಾಬ್ದಾರಿ ಇದ್ದೇ ಇತ್ತು. ಮತ್ತೆ ಒಂದೆರಡು ಕಡೆ ಟ್ಯೂಷನ್ ಮಾಡ್ತಾ ಇತ್ತ ಕಡೆ ಮನೆಯ ಜವಾಬ್ದಾರಿ, ಅತ್ತ ಕಡೆ ತನ್ನ ಹಾಗೂ ತಮ್ಮನ ಓದಿಗೆ ಹಣ ಹೊಂದಿಸುತ್ತಿದ್ದ.

ಒಂದು ದಿನ ಎಂದಿನಂತೆ ಶಾಲೆ ಮುಗಿಸಿ ವಾಕ್ ಮಾಡಲು ಆಟದ ಮೈದಾನದ ಕಡೆ ಹೊರಟಾಗ ಈತನ ಪ್ರೇಯಸಿಯಿಂದ ಒಂದು ಮೆಸೇಜ್, 'ಗುರು, ಯಾವಾಗ ಸಿಗುತ್ತೀಯ ಹೇಳು. ನಿನ್ನ ಜೊತೆ ಅರ್ಜೆಂಟಾಗಿ ಮಾತನಾಡಬೇಕು. ತಕ್ಷಣವೇ, 'ಸರಿ, ನಾಳೆ ಊರ ಹೊರಗಿನ ಗುಡ್ಡದಾಚೆ ಭೇಟಿಯಾಗೋಣ.' ಎಂದು ಟೈಪಿಸಿ ಮೆಸೇಜ್ ಕಳಿಸಿದ. 'ಸಮಯ ಹೇಳು.','ಮಧ್ಯಾಹ್ನ ಎರಡು ಗಂಟೆಗೆ.'

ಅವಳು, 'ಸರಿ, ಬರುತ್ತೇನೆ' ಎಂದಳು.

ಇವಳು ತನ್ನ ತಂದೆ-ತಾಯಿಯ ಕಣ್ಣುತಪ್ಪಿಸಿ ಊರ ಹೊರಗಿನ ಗುಡ್ಡದ ಹತ್ತಿರ ಬಂದಳು. ಇವಳಿಗಾಗಿಯೇ ಕಾಯುತ್ತ ನಿಂತಿದ್ದ ಗುರುನನ್ನು ಕಂಡು, ಓಡಿ ಬಂದು ದುಃಖ ತಡೆಯಲಾಗದೇ ಅಳಲು ಪ್ರಾರಂಭಿಸಿದಳು. 'ಏನಾಯ್ತೇ, ಪ್ರತಿ ಸಾರಿ ನನ್ನ ದುಃಖ ಕಂಡು ಸಮಾಧಾನ ಮಾಡುತ್ತಿದ್ದ ನೀನೇ ಇವತ್ತು ದುಃಖಿಸುತ್ತಿದ್ದಿಯಲ್ಲಾ. ಹೇಳು ಏನಾಯ್ತು ಅಂತಾ'.. ಅವಳು ಅವನ ಭುಜದ ಮೇಲೆ ಒರಗಿ ಅತ್ತು, ಅತ್ತು, ಅತ್ತು ತನಗೆ ತಾನು ಸಮಾಧಾನಿಸಿಕೊಂಡು, 'ಗುರು, ಒಂದು ಕೇಳ್ತೀನಿ, ಬೇಜಾರಾಗ್ಬೇಡಾ' ಎಂದಳು.

'ಇಲ್ಲ, ಹೇಳು.'

'ಖಂಡಿತಾ ಬೇಜಾರಾಗ್ಬಾರ್ದು, ಪ್ರಾಮೀಸ್ ಮಾಡು' ಎಂದಳು.

'ಮನೆಯಲ್ಲಿ ನನಗೆ ಮದುವೆ ಫಿಕ್ಸ್ ಮಾಡಿದ್ದಾರೆ. ಅದು ನನ್ನ ಮಾವನ ಜೊತೆ'.

ಈ ಮಾತು ಕೇಳುತ್ತಿದ್ದಂತೆ ಗುರುಗೆ ಬರಸಿಡಿಲು ಬಡಿದಂತಾಯಿತು. ಜೀವನದಲ್ಲಿ ಬರೀ ಕಷ್ಟಗಳನ್ನೇ ಅನುಭವಿಸುತ್ತಿರುವ ನಾನು ಇವಳ ಸಾಂಗತ್ಯದಿಂದಲೇ ಪ್ರೀತಿ ಎಂದರೇನು ಎಂಬುದನ್ನು ತಿಳಿದಿದ್ದೆ, ಕೊಂಚ ಮನಸ್ಸಿಗೆ ನೆಮ್ಮದಿ ಅನ್ನೋದು ಸಿಗುತ್ತಿತ್ತು. ಈಗ ಇವಳು ನನ್ನಿಂದ ದೂರವಾಗುವ ಮಾತುಗಳನ್ನಾಡುತ್ತಿದ್ದಾಳಲ್ಲ ಇನ್ನು ನನ್ನ ಗತಿಯೇನು? ಎಂದು ಯೋಚಿಸುತ್ತಾ ಅರೆಕ್ಷಣ ಕಲ್ಲಿನ ಕಂಬದಂತೆ ನಿಂತು ಬಿಟ್ಟ. ಹೆಣ್ಣಿಗೆ ಸ್ವಲ್ಪ ನೋವಾದರೆ ಸಾಕು ಕಣ್ಣೀರು ಬರುತ್ತದೆ. ಆದರೆ, ಗಂಡಸು ಜೀವನದಲ್ಲಿ ಎಷ್ಟೇ ನೋವು ಬಂದರೂ ತಡೆದುಕೊಳ್ಳುತ್ತಾನೆ. ತಾಯಿಯಿಂದ, ಪ್ರೇಯಸಿಯಿಂದ ನೋವಾದರೆ ಮಾತ್ರ ಆತನಿಗೆ ತಡೆದುಕೊಳ್ಳಲು ಆಗುವುದಿಲ್ಲ, ಕಣ್ಣೀರು ಹಾಕುತ್ತಾನೆ. ಇಲ್ಲಿ ಆಗಿದ್ದೂ ಅದೇ. ಕಲ್ಲಿನ ಕಂಬದಂತೆ ನಿಂತಿದ್ದ ಗುರು, ಒಮ್ಮಿಂದೊಮ್ಮೆಲೆ ಅಳಲು ಪ್ರಾರಂಭಿಸಿದ. ಬೇಡ, ಬೇಡ ಎಂದು ಸಾವಿರ ಸಾರಿ ಹೇಳಿದರೂ ಅವಳಿಗೂ ಮನಸ್ಸಿಲ್ಲದಿದ್ದರೂ ತಂದೆ-ತಾಯಿಯರ ಒತ್ತಾಯಕ್ಕೆ ಮಣಿದು ಮದುವೆ ಮಾಡಿಕೊಂಡಳು.

ತನಗಾದ ನೋವನ್ನು ಯಾರ ಮುಂದೆಯೂ ಹೇಳುವ ಹಾಗಿಲ್ಲ. ಒಳಗೊಳಗೇ ದುಃಖದ ಆ ನಿಗಿನಿಗಿ ಕೆಂಡದಲ್ಲಿ ಬೇಯುತ್ತಾ, ಕುಗ್ಗಿ ಹೋದ ಗುರು. ಇನ್ನೇನು ನನ್ನ ಪ್ರೀತಿ ಕೈಬಿಟ್ಟು ಹೋಯಿತೆಂದು ಎಷ್ಟೋ ಸಾರಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿ ಸೋತುಹೋದ. ಕಾರಣ, ಪ್ರತಿ ಸಾರಿ ಆತ್ಮಹತ್ಯೆ ಮಾಡಿಕೊಳ್ಳಲು ಹೋಗುವಾಗ ತಂದೆ-ತಾಯಿ, ತಮ್ಮ ಕಣ್ಣಮುಂದೆ ಬರುತ್ತಿದ್ದರು. ಮನೆಗೆ ಯಜಮಾನನಂತಿದ್ದ ನಾನು ಹೀಗೆ ಆತ್ಮಹತ್ಯೆಗೆ ಶರಣಾದರೆ ಇವರ ಗತಿಯೇನು? ಎಂಬ ಪ್ರಶ್ನೆ ಮನದಲ್ಲಿ ಮೂಡಿ ಸುಮ್ಮನಾಗಿಬಿಡುತ್ತಿದ್ದ.

ಇವತ್ತು ಅವಳ ಮದುವೆ ಹೇಗಾದರೂ ಮಾಡಿ ಮದುವೆ ಮಂಟಪಕ್ಕೆ ಹೋಗಿ ಇವಳ ಪ್ರಿಯತಮ ನಾನೇ ಈ ಮದುವೆ ನಿಲ್ಲಿಸಿ ಅಂತಾ ಹೇಳಿದರೆ? ಒಂದು ವೇಳೆ ಅವಳ ಮದುವೆ ನಿಂತು ಅವಳ ತಂದೆ-ತಾಯಿ ಮರ್ಯಾದೆಗೆ ಅಂಜಿ ಸಾವು ತಂದು ಕೊಂಡರೆ? ಇಲ್ಲವೆ ನನಗೆ ಆಪತ್ತು ತಂದಿಟ್ಟರೆ? ಹೃದಯಾಂತರಾಳದಿಂದ ನನ್ನನ್ನು ಪ್ರೀತಿಸಿದ ಇವಳು ತಂದೆ-ತಾಯಿಗೋಸ್ಕರ ಈಗ ಅನಿವಾರ್ಯವಾಗಿ ಮದುವೆಯಾಗುತ್ತಿದ್ದಾಳೆ. ರಂಪಮಾಡುತ್ತಿರುವ ನನ್ನನ್ನು ಮದುವೆ ಮಂಟಪದಲ್ಲಿ ನೋಡಿ, ನೀನ್ಯಾರು ನನಗೆ ಗೊತ್ತೇ ಇಲ್ಲ ಎಂದು ಸುಳ್ಳು ಹೇಳಿಬಿಟ್ಟರೆ? ಒಂದು ವೇಳೆ ನನ್ನ ಬರುವಿಕೆಯನ್ನು ಕಂಡು ಅವಳು ಅಲ್ಲಿಂದ ಓಡಿ ಹೋಗಿ ಆತ್ಮಹತ್ಯೆ ಮಾಡಿಕೊಂಡರೆ? ಎಂಬಂತಹ ನೂರಾರು ಪ್ರಶ್ನೆಗಳು ಗುರುವಿನ ಮನದಲ್ಲಿ ಮೂಡಿದವು. ಬೇಡ, ಬೇಡ ನನ್ನಿಂದ ಆ ಮದುವೆ ಮಂಟಪ ಸ್ಮಶಾನವಾಗುವುದು ಬೇಡ, ಅವರ ಮಾನ ಹೋಗುವುದು ಬೇಡ. ಬದಲಾಗಿ ನಾನೇ ಸಮುದ್ರದ ಆ ಬೃಹತ್ ಅಲೆಯಾಕಾರಾದ ದುಃಖವನ್ನು ನುಂಗಿ ಸುಮ್ಮನಿದ್ದರಾಯಿತೆಂದು ನಿರ್ಧರಿಸಿದ ಗುರು.

ಅವಳ ಮದುವೆಯಾಗಿ ಒಂದು ವರ್ಷವಾದರೂ ಅವಳಿಂದ ಒಂದು ಕಾಲ್, ಮೆಸೇಜ್ ಕೂಡಾ ಇಲ್ಲ. ಜೀವಕ್ಕೆ ಜೀವಕೊಡುತ್ತೇನೆ. ನಿನ್ನ ಬಿಟ್ಟು ಒಂದರೆಕ್ಷಣ ಇರುವುದಿಲ್ಲ. ನನ್ನ ಪ್ರಾಣ ನೀನು ಎಂದು ಹೇಳುತ್ತಿದ್ದ ಅವಳ ಪ್ರೀತಿಯ ಮಾತುಗಳು ನೆನಪಾದಾಗೊಮ್ಮೆ ಕಣ್ಣಲ್ಲಿ ನೀರು ಜಿನುಗುತ್ತಿತ್ತು. ಯಾರಿಗೂ ಗೊತ್ತಾಗದ, ಯಾರೂ ಇರದ ಕತ್ತಲೆಯಿಂದ ಕೂಡಿದ ಹಾಳು ಮನೆಯ ಗೋಡೆ, ಗದ್ದೆಯ ಬದುವಿನಲ್ಲಿ, ನಿರ್ಜನ ಪ್ರದೇಶದಲ್ಲಿ ಕುಳಿತುಕೊಂಡು ಅತ್ತು, ಅತ್ತು ತನ್ನಷ್ಟಕ್ಕೆ ತಾನೇ ಸಮಾಧಾನ ಮಾಡಿಕೊಂಡು ಬರುತ್ತಿದ್ದ ಗುರು.

ಜೀವನ ಹೀಗೆ ಇರುವುದಿಲ್ಲ. ಕಷ್ಟ-ಸುಖಗಳೆಂಬ ತಿರುವುಗಳಿಂದ ಕೂಡಿದ ಬದುಕು ನಮ್ಮೆಲ್ಲರದು. ಆ ವರ್ಷದ ಶಿಕ್ಷಕರ ನೇಮಕಾತಿ ಪರೀಕ್ಷೆಯಲ್ಲಿ ಉನ್ನತ ರ್‍ಯಾಂಕ್ ಗಳಿಸಿ ಪಾಸಾಗಿದ್ದ ಗುರು. ನೇಮಕಾತಿಗೆ ಮೂಲದಾಖಲೆಗಳ ಪರಿಶೀಲನೆ ಕೂಡ ಪೂರ್ಣಗೊಳಿಸಿ ಇನ್ನೇನು ಫೈನಲ್ ಸೆಲೆಕ್ಷನ್ ಲಿಸ್ಟ್ ಬರಬೇಕು ಅಷ್ಟರೊಳಗೆ ಗುರುವಿಗೆ ಇನ್ನೊಂದು ಆಘಾತ ಕಾದಿತ್ತು. ಅಂದು ಮಧ್ಯಾಹ್ನ ಪೂಜೆಗೆಂದು ಹೂವು ತರಲು ಹೋಗಿದ್ದ ಗುರುವಿಗೆ ತಾಯಿ ಕರೆ ಮಾಡಿದಳು, 'ಗುರು, ನಿಮ್ಮಪ್ಪನಿಗೆ ಈಗತಾನೆ ಗಂಜಿ ಕುಡಿಸಿದೆ. ಸ್ವಲ್ಪ ಹೊತ್ತು ಮಾತನಾಡಿದರು. ನೀನು ಎಲ್ಲಿದ್ದಿಯಾ ಅಂತ ಕೇಳಿದರು. ಮರು ಕ್ಷಣವೆ ಬಲಗಡೆ ಹೊರಳಿದರು. ಈಗ ಮಾತನ್ನೇ ಆಡುತ್ತಿಲ್ಲ. ಎಲ್ಲಿದ್ದಿಯಾ ಬೇಗ ಬಾರೋ.'

'ಏನಿಲ್ಲಮ್ಮ, ಅವರು ಸಿಗರೇಟು ಸೇದಿ ಸೇದಿ ಆರೋಗ್ಯ ಕೆಡಿಸಿಕೊಂಡಿದ್ದಾರೆ. ಕೆಮ್ಮು ಬಂದು ಎದೆ ಹಿಡಿದಂತಾಗಿರಬಹುದು. ನಾನು ಈಗಲೇ ವೈದ್ಯರನ್ನು ಕರೆದುಕೊಂಡು ಬರುವೆ' ಎಂದು ಫೋನ್ ಕಟ್ ಮಾಡಿದ ಗುರು, ನೇರವಾಗಿ ವೈದ್ಯರ ಬಳಿ ಹೋಗಿ ಅವರನ್ನು ಮನೆಗೆ ಕರೆದುಕೊಂಡು ಬಂದ. ಅಷ್ಟರೊಳಗಾಲೇ ಅವರು ತೀರಿಹೋಗಿ ಹದಿನೈದು ನಿಮಿಷವಾಗಿತ್ತು. 'ನಿಮಗೆ ಗೊತ್ತೇ ಆಗಿಲ್ಲ. ಅದಾಗಲೇ ಅವರಿಗೆ ಲೋ ಬಿಪಿಯಾಗಿ ಹಾರ್ಟ್ ಅಟ್ಯಾಕ್ ಆಗಿದೆ' ಎಂದು ಹೇಳಿದ ವೈದ್ಯರು 'ಮೊದಲು ಅಮ್ಮನನ್ನು ಸಮಾಧಾನಿಸು ಗುರು' ಎಂದು ಹೇಳಿ ಹೊರಟು ಹೋದರು.

ಏನು ತೋಚದಂತಾದ ಗುರು, ತಾಯಿ ತಮ್ಮನನ್ನು ತಬ್ಬಿಕೊಂಡು ಕಣ್ಣಲ್ಲಿ ಬರುತ್ತಿರುವ ನೀರನ್ನು ತಡೆಹಿಡಿದು ಸುಮ್ಮನೆ ಕುಳಿತುಬಿಟ್ಟ. ಪರಿಚಯದವರು ಬಂದು ಬೇರೆ ಊರಿನಲ್ಲಿರುವ ಎಲ್ಲರಿಗೂ ಕರೆಮಾಡಿ ಸುದ್ದಿ ತಿಳಿಸಿದರು. ಎಲ್ಲರೂ ಬಂದರು ತಂದೆಯ ಅಂತ್ಯಕ್ರಿಯೆ ಮುಗಿಸಿ ತಮ್ಮ ಪಾಡಿಗೆ ತಾವು ಹೊರಟು ಹೋಗಿಬಿಟ್ಟರು.

ವಿಧಿಯಾಟದ ಮುಂದೆ ಮನುಷ್ಯ ತೃಣಮಾತ್ರ. ಒಬ್ಬನ ಬದುಕು ಯಾವಾಗಲೂ ಹೀಗೆ ಇರುತ್ತದೆಂದು ಹೇಳಲಾಗುವುದಿಲ್ಲ. ಪ್ರತಿಕ್ಷಣವೂ ಬದಲಾವಣೆ ಅಗತ್ಯ, ಅದು ಹಾಗಾಗುತ್ತದೆ ಕೂಡ. ನನ್ನ ಜೀವನವೇ ಇಷ್ಟು ಕಷ್ಟ,ಕಷ್ಟ,ಕಷ್ಟ ಎಂದು ಗರಬಡಿದವರಂತೆ ಕುಳಿತಿದ್ದ ಗುರುವಿಗೆ ಆಚೆ ಗೆಳೆಯನಿಂದ ಕರೆ ಬಂದಿತು. 'ಅಭಿನಂದನೆಗಳು ಗುರು. ಇಂದಿಗೆ ನಿನ್ನ ಕಷ್ಟದ ದಿನಗಳೆಲ್ಲವೂ ಕರಗಿ ನೆಮ್ಮದಿಯ ದಿನಗಳು ಬರುತ್ತಲಿವೆ ಬರಮಾಡಿಕೊ. ಶಿಕ್ಷಕರ ನೇಮಕಾತಿಯ ಫೈನಲ್ ಲಿಸ್ಟ್‌ನಲ್ಲಿ ನಿನ್ನ ಹೆಸರು ಅಗ್ರಶ್ರೇಣಿಯಲ್ಲಿದೆ. ಕಡೆಗೂ ನೀನು ಅಂದುಕೊಂಡಿದ್ದನ್ನು ಸಾಧಿಸಿಯೇ ಬಿಟ್ಟೆ.'


ಕೈಮರ



ಕನ್ನಡದಲ್ಲೀಗ ಹೊಸ ಪುಸ್ತಕಗಳ ಸುಗ್ಗಿ. ನಿತ್ಯವೂ ಹತ್ತಾರು ಕೃತಿಗಳು ಬೆಳಕು ಕಾಣುವಾಗ ಯಾವುದನ್ನು ಓದುವುದು ಎಂದು ಗೊಂದಲಕ್ಕೆ ಬೀಳುವ ಕನ್ನಡದ ಓದುಗರಿಗೆ ಆಯ್ಕೆ ಸುಲಭವಾಗಲಿ ಎಂದು ಈ ಪ್ರಯತ್ನ. 6 ಹೊಸ ಪುಸ್ತಕಗಳ ಪರಿಚಯ ಇಲ್ಲಿದೆ.

• ವೀಣಾ ರಾವ್






ಕೃತಿ: ಕಾಯಕಾರ್ಥ ಕ್ರಾಂತಿ
ಲೇ: ಡಾ. ಬಸವರಾಜ ಸಾದರ
ಪ್ರ: ಬೆರಗು ಪ್ರಕಾಶನ, ಬಿಜಾಪುರ
ದೂ: 7795341335

ವಚನಕಾಲದ ಮಾನವೀಯ ಚಿಂತನೆಗಳ ಅನುಸಂಧಾನ

ಕಾಯಕಕ್ಕೆ ಸಂಬಂಧಿಸಿದಂತೆ ಇರುವ ವರ್ಗ ಶೋಷಣೆಯ ನೀತಿ, ಜಾಗತಿಕ ಸಮಸ್ಯೆ ಹಾಗೂ ವರ್ಣಶೋಷಣೆಯ ಕ್ರೌರ್ಯಕ್ಕೆ ಸಂಬಂಧಿಸಿದ ವಿಶ್ಲೇಷಣೆ ಈ ಕೃತಿಯಲ್ಲಿದೆ. ವರ್ಣತ್ವದ ವರ್ಗತ್ವದ ಕಪ್ಪು ಬಿಳುಪಿನ ವಿಭಾಗೀಕರಣವನ್ನು ಮೀರಿದ ನೆಲೆ ಇಲ್ಲಿದೆ. ಸಾಮಾಜಿಕ ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ಮುಖಗಳ ಸೂಕ್ಷ್ಮಾತಿಸೂಕ್ಷ್ಮಗಳನ್ನು ಅಂತರ್ಗತಗೊಳಿಸಿಕೊಂಡ ಸಂವೇದನಾಶೀಲ ವಿಮರ್ಶೆಯನ್ನು ಈ ಕೃತಿಯಲ್ಲಿ ಕಾಣಬಹುದು.

ನಮ್ಮ ಕನ್ನಡ ನೆಲದ ಅಸ್ಮಿತೆ ಎಂದರೆ ಅದು ಶರಣ ಚಳವಳಿ. ಈ ಚಳವಳಿಯು ವರ್ಣ ವ್ಯವಸ್ಥೆಯ ಎಲ್ಲ ಕ್ರೌರ್ಯ-ಹಿಂಸೆಗಳ ವಿರುದ್ಧ ಅರಿವಿನೆಚ್ಚರದ ಕ್ರಾಂತಿಯಾಗಿದೆ. ಈ ಕ್ರಾಂತಿಯ ಗರ್ಭದಲ್ಲಿ ವರ್ಣ, ಜಾತಿ, ವರ್ಗ, ಲಿಂಗ, ವಿದ್ಯೆ, ಭೂಮಿ, ಸಂಪತ್ತು, ಮನುಷ್ಯನು ತಾನೇ ಸೃಷ್ಟಿಸಿರುವ ಅಮಾನವೀಯ ಅಸಮಾನತೆ ವಂಚನೆಗಳ ವಿರುದ್ಧ ಮೂಲಭೂತ ಪ್ರಶ್ನೆಗಳಿವೆ. ಈ ಕೃತಿಯಲ್ಲಿ ಆ ವಿವರಗಳ ಜೊತೆಗೆ ಆಧುನಿಕ ಸಂದರ್ಭದ ಅರ್ಥನೀತಿ, ಅರ್ಥಶಾಸ್ತ್ರೀಯ ತಾತ್ವಿಕ ವಿಚಾರಗಳಿವೆ. ಮಾನವ ಬದುಕಿನ ಘನತೆಯನ್ನು ಉನ್ನತೀಕರಿಸುವ ಮಾನವೀಯತೆ ಆಶಯಗಳ ಹಕ್ಕು ಬಾಧ್ಯತೆಗಳಿವೆ ಮತ್ತು ನಡೆನುಡಿ ಸಿದ್ಧಾಂತದ ಬದ್ಧತೆಯ ವಿಚಾರಗಳಿವೆ.





ಕೃತಿ: ಮನಸು ಆಕಾಶದ ನಿಹಾರಿಕೆ
ಲೇ: ಗಂಗಾಧರ ಕೊಳಗಿ
ಪ್ರ: ಯಾಜಿ ಪ್ರಕಾಶನ
ದೂ: 9448722800


ಯೋಚನೆಗೆ ಹಚ್ಚುವ ಭಿನ್ನ ನೋಟದ ಕಥಾಗುಚ್ಛ

ಆರು ಕತೆಗಳಿರುವ ಸಂಕಲನ. ಒಂದೊಂದು ಕತೆಯಲ್ಲೂ ಬದುಕನ್ನು ನೋಡುವ ನೋಟ ಭಿನ್ನವಾಗಿದೆ. ಪ್ರತಿ ಕತೆಯಲ್ಲೂ ನಾಯಕ ಹೊಸದನ್ನು ಬಯಸುತ್ತಾನೆ. ಅಪ್ಪ ಹಾಕಿದ ಆಲದ ಮರಕ್ಕೆ ಜೋತು ಬೀಳುವ ಸ್ವಭಾವ ಅವನದಲ್ಲ. ಸಂಪ್ರದಾಯಗಳನ್ನು ಒಪ್ಪಿದರೂ ಗೊಡ್ಡು ಸಂಪ್ರದಾಯಗಳನ್ನು ಒಪ್ಪುವುದಿಲ್ಲ. ಪ್ರತಿಯೊಂದನ್ನೂ ಪ್ರಶ್ನೆ ಮಾಡುತ್ತಾನೆ.

ಮೊದಲ ಕತೆಯ ನಾಯಕ ಕೃಷ್ಣ ಕರ್ಮಠ ಬ್ರಾಹ್ಮಣರ ಮನೆಯಲ್ಲಿ ಹುಟ್ಟಿ ತಾಯಿ ಸತ್ತನಂತರ ಅಪ್ಪನನ್ನು ಊರಲ್ಲೇ ಬಿಟ್ಟು ನಗರಕ್ಕೆ ಬಂದು ಬದುಕು ಕಟ್ಟಿಕೊಳ್ಳುತ್ತಾನೆ. ಆದರೆ ಅವನು ನೆಲೆ ನಿಂತದ್ದು ಒಂದು ಅನ್ಯಧರ್ಮದವರ ಮನೆಯಲ್ಲಿ. ಎರಡನೇ ಕತೆಯ ನಾಯಕ ರಾಜಗೋಪಾಲನೂ ತಂದೆಯನ್ನು ತಾನು ಹುಟ್ಟಿಬೆಳೆದ ಹಳ್ಳಿಯನ್ನೂ ಧಿಕ್ಕರಿಸಿ ಹೊರನಡೆದು ಬದುಕು ಕಟ್ಟಿಕೊಳ್ಳುತ್ತಾನೆ.

ತನ್ನ ಯೋಚನೆ ಅಭಿಪ್ರಾಯಗಳು ಬರೀ ಕಾಗದದ ಅಕ್ಷರಗಳಾಗದಂತೆ ಅದನ್ನು ಜಾರಿಗೊಳಿಸುವ ಅದರಂತೆ ಬದುಕುವ ತನ್ನ ನಿರ್ಧಾರವನ್ನು ಗಟ್ಟಿಗೊಳಿಸುತ್ತಾನೆ. ಹೀಗೆ ಎಲ್ಲ ಕತೆಗಳೂ ಬಂಡಾಯ ರೀತಿಯಲ್ಲಿ ಇದ್ದು ಹೊಸ ಹೊಳಹನ್ನು ಮೂಡಿಸುತ್ತವೆ, ಯೋಚನೆಗೆ ಹಚ್ಚುತ್ತವೆ.





ಕೃತಿ: ಅನಾಮಧೇಯ ಕರೆ
ಲೇ: ರವಿರಾಜ ಬೈಕಂಪಾಡಿ
ಪ್ರ: ಅಂಕಿತಪುಸ್ತಕ
ದೂ 9019190502

ರೋಚಕ ಓದಿಗೆ ಪತ್ತೇದಾರಿ ಕಥಾ ಹರಿವು

ಇದೊಂದು ಪತ್ತೇದಾರಿ ಕಾದಂಬರಿ ಎಂದು ಹೆಸರೇ ಸೂಚಿಸುತ್ತಿದೆ. ಪತ್ತೇದಾರಿ ಕಾದಂಬರಿಯ ಪತ್ತೆಯೇ ಇಲ್ಲ ಎಂದು ಗೊಣಗುವವರು ಈ ಪುಸ್ತಕ ಓದಬಹುದು.

ಪತ್ತೇದಾರ ಪೊನ್ನಪ್ಪನಿಗೆ ಅಪರಾತ್ರಿಯಲ್ಲಿ ಒಂದು ಅಪರಿಚಿತ ಕರೆ ಬರುತ್ತದೆ. ಪೆಮ್ಮಯ್ಯ ಎಂಬ ವ್ಯಕ್ತಿಗೆ ಮಾಡಬೇಕಾಗಿದ್ದ ಕರೆ ಪೊನ್ನಪ್ಪನಿಗೆ ಬರುತ್ತದೆ. ಅಪರಿಚಿತವಾದ ಗಾಬರಿಯ ಧ್ವನಿ ಪೊನ್ನಪ್ಪನನ್ನು ಗಲಿಬಿಲಿಗೊಳಿಸುವುದರೊಂದಿಗೆ ಆ ಧ್ವನಿಯ ಒಂದು ಆರ್ತನಾದ ಪೊನ್ನಪ್ಪನನ್ನು ಚಕಿತಗೊಳಿಸುತ್ತದೆ. ಫೋನ್ ಕರೆಯಲ್ಲಿ ಸಿಕ್ಕಿದ ಆಕೆಯ ಮನೆ ವಿಳಾಸ ಹಿಡಿದು ಅಲ್ಲಿಗೆ ಧಾವಿಸಿದವನಿಗೆ ಕಂಡ ಭಯಾನಕ ದೃಶ್ಯ , ಪೊಲೀಸರ ತನಿಖೆಯಲ್ಲಿ ತೆರೆದುಕೊಳ್ಳುವ ಅನೇಕ ಆಯಾಮಗಳ ಕಥನ ಈ ಕೃತಿಯಲ್ಲಿದೆ.

ಕಾನೂನು ತಿಳಿದವನೊಬ್ಬ ಕಾನೂನಿನ ಬಲೆಗೆ ಸಿಲುಕದಂತೆ ಪಾರಾದ ಬಗೆ ಆಸಕ್ತಿದಾಯಕ. ಬುದ್ಧಿವಂತಿಕೆ, ತರ್ಕ, ಕಣ್ಣಾರೆ ಕಂಡದ್ದೂ ನಿಜವಲ್ಲ ಎಂದು ಸಾಬೀತಾಗುವ ಬಗೆಯನ್ನು ಲೇಖಕರು ಪರಿಣಾಮಕಾರಿಯಾಗಿ ಹೇಳಿದ್ದಾರೆ. ರೋಚಕ ಓದಿನ ಪತ್ತೇದಾರಿ ಕಾದಂಬರಿ ಇದು.





ಕೃತಿ: ಜಗತ್ತಿನ ಭೀಕರ ಯುದ್ಧಗಳು
ಲೇ: ಡಾ. ಎಂ. ವೆಂಕಟಸ್ವಾಮಿ
ಪ್ರ: ವೀರಲೋಕ ಪ್ರಕಾಶನ
ದೂ: 7022122121

ವಿಶ್ವವನ್ನು ಕಂಗೆಡಿಸಿದ ಯುದ್ಧಗಳ ಕುರಿತ ವಿವರ

ಜಗತ್ತಿನಲ್ಲಿ ನಡೆದ ಭೀಕರ ಯುದ್ಧಗಳ ಬಗ್ಗೆ ಬರೆದ ಬೃಹತ್ ಕೃತಿ ಇದಾಗಿದೆ. ನಮಗೆ ಗೊತ್ತಿರುವ ಪ್ರಕಾರ ಜಗತ್ತಿನಲ್ಲಿ ನಡೆದ ಯುದ್ಧಗಳು ಮೊದಲ ಮಹಾಯುದ್ಧ ಹಾಗೂ 2ನೇ ಮಹಾಯುದ್ಧ.

ಆದರೆ ಇವೆರಡನ್ನು ಹೊರತುಪಡಿಸಿ ಯಾವ ಯಾವ ದೇಶಗಳ ನಡುವೆ ಎಷ್ಟು ಯುದ್ಧಗಳು ನಡೆದವು ಅವುಗಳ ಸ್ವರೂಪ ಹೇಗಿತ್ತು? ಯಾವ ರೀತಿ ನಡೆಯಿತು? ಅದರಿಂದ ಆದ ಕಷ್ಟನಷ್ಟಗಳೇನು ಎಂಬುದನ್ನೆಲ್ಲ ಈ ಕೃತಿಯಲ್ಲಿ ಮೂರು ಭಾಗಗಳಾಗಿ ಬರೆದಿದ್ದಾರೆ. ಮೊದಲ ಭಾಗದಲ್ಲಿ ಜಗತ್ತಿನ 14 ಭೀಕರ ಯುದ್ಧಗಳು ಎಂಬ ಶೀರ್ಷಿಕೆಯಡಿಯಲ್ಲಿ ಕುರುಕ್ಷೇತ್ರ ಯುದ್ಧದಿಂದ ಶುರುವಾಗಿ ಇಸ್ರೇಲ್ ಪ್ಯಾಲೆಸ್ತೀನ್ ಯುದ್ಧದವರೆಗೂ 14 ಅಧ್ಯಾಯಗಳು ಇವೆ.

ಅಶೋಕನ ಕಳಿಂಗ ಯುದ್ಧ , ಮೊದಲ ಮಹಾಯುದ್ಧ, ಚೀನಾ ದಂಗೆ, ಎರಡನೇ ವಿಶ್ವಮಹಾಯುದ್ಧ, ಚೀನಾ ಜಪಾನ್ ಯುದ್ಧ, ರಷ್ಯಾ-ಉಕ್ರೇನ್ ಯುದ್ಧ, ಹೀಗೆ ಎಲ್ಲಾ ಮುಖ್ಯ ಸಮರಗಳನ್ನು ವಿಷದವಾಗಿ ಕಟ್ಟಿಕೊಟ್ಟಿದ್ದಾರೆ. ಎರಡನೇ ಭಾಗದಲ್ಲಿ ಬ್ರಿಟೀಷ್ ನಾಗಾಗಳ ಭೀಕರ ಯುದ್ಧ, ಇಂಡೋ ಚೈನಾ ಯುದ್ಧ, ಭಾರತ-ಪಾಕಿಸ್ತಾನ ಯುದ್ಧದ ಬಗ್ಗೆ ವಿವರಗಳಿವೆ.

ಮೂರನೇ ಭಾಗದಲ್ಲಿ ಜಗತ್ತಿನ ಅತ್ಯಂತ ಕ್ರೂರ ಸೇನಾಪತಿಗಳು ಹಾಗೂ ಸರ್ವಾಧಿಕಾರಿಗಳ ಬಗ್ಗೆ ವಿವರಗಳಿವೆ. ತೆಮುಜಿನ್ ಎಂಬ ಮಂಗೋಲಿಯಾದ ಗೆಂಘಿಸ್ ಖಾನ್, ರಷ್ಯಾದ ಜೋಸೆಫ್ವಿಸ್ಸಾರಿಯೋನೊವಿಚ್ ಸ್ಟಾಲಿನ್, ಅಡಾಲ್ಫ್ ಹಿಟ್ಲರ್, ಚೇರ್‌ಮನ್ ಮಾವೂ ಜೆಡಾಂಗ್ ಇವರ ಬಗ್ಗೆ, ಇವರ ಕ್ರೂರ ನಿರ್ಧಾರಗಳು, ಮಾರಣ ಹೋಮಗಳು, ರಕ್ಕಸ ವರ್ತನೆಗಳ ಬಗ್ಗೆ ವಿವರಗಳು ಇವೆ.





ಕೃತಿ: ವಿದ್ಯುತ್ ನಡೆದು ಬಂದ ದಾರಿ ಮತ್ತು ವಿದ್ಯುತ್ ಜೀವನ
ಲೇ: ರೋ| ಪಿ.ಎಚ್.ಎಫ್ ಗೋಪಿನಾಥರಾವ್ ಸರ್ವದೆ
ಪ್ರ: ವಸಂತಗೀತಾ ಪ್ರಕಾಶನ, ಮಣಿಪಾಲ
ದೂ: 9741738419

ಜಲವಿದ್ಯುತ್ ಯೋಜನೆ ಕುರಿತ ಕುತೂಹಲಕಾರಿ ಓದು

ಈ ಕೃತಿಯ ಶೀರ್ಷಿಕೆಯೇ ಹೇಳುವಂತೆ ಇದು ವಿದ್ಯುತ್ ಬೆಳೆದು ಬಂದ ದಾರಿ ಅಥವಾ ವಿದ್ಯುತ್ತಿನ ಕತೆಯನ್ನು ಹೇಳುತ್ತದೆ. ಮೈಸೂರು ಸಂಸ್ಥಾನದ ಅರಸ ನಾಲ್ವಡಿ ಕೃಷ್ಣರಾಜ ಒಡೆಯರ್ ನೇತೃತ್ವದಲ್ಲಿ ಭಾರತದಲ್ಲೇ ಮೊದಲ ಜಲವಿದ್ಯುತ್ ಯೋಜನೆ ಪ್ರಾರಂಭವಾಯಿತು. ಯಾವುದೇ ಮೂಲ ಸೌಕರ್ಯ, ನುರಿತ ಕಾರ್ಮಿಕರು ಇಲ್ಲದೆ ಇಂಥ ಬೃಹತ್ ಯೋಜನೆಯನ್ನು ಕೈಗೆತ್ತಿಕೊಂಡಿದ್ದು ಒಂದು ಸಾಹಸವೇ ಸರಿ. ಆ ಸಾಹಸಗಳ ವಿವರ ಕೃತಿಯಲ್ಲಿದೆ.


ಆಗ ಇದ್ದ ನೆಲಸಾರಿಗೆ ಗೂಡ್ಸ್ ರೈಲು ಮಾತ್ರ. ಸಮುದ್ರಕ್ಕೆ ಹಡಗು. ವಿದೇಶಗಳಿಂದ ಮೆಷಿನುಗಳನ್ನು ತರಿಸಿ ಹಾಗೆ ಬಂದ ಯಂತ್ರಗಳನ್ನು ರೈಲಿನ ಮುಖಾಂತರ ಮದ್ದೂರಿಗೆ ತರಿಸಿ ಅರಮನೆಯ ಆನೆಗಳಿಂದ ಹೊರಿಸಿಕೊಂಡು ಶಿವನ ಸಮುದ್ರದ ಕೊಳದಲ್ಲಿ ಇಳಿಸಲಾಯಿತು. ಜಲತಾಣಗಳಲ್ಲಿ ನೀರಿನಲ್ಲಿರುವ ಅಗಾಧ ಚೈತನ್ಯವನ್ನು ಯಂತ್ರದ ಶಕ್ತಿಯಿಂದ ವಿದ್ಯುಚ್ಛಕ್ತಿಯನ್ನಾಗಿ ಪರಿವರ್ತಿಸಿ ದೂರ ಪ್ರದೇಶಗಳಲ್ಲಿ ನಡೆಯುವ ಕಾರ್ಯಗಳಿಗೆ ಬೇಕಾದ ಯಂತ್ರಕ್ಕೆ ಶಕ್ತಿಯನ್ನು ಹಾಯಿಸಿ ಬಳಸಲಾಯಿತು ಎಂಬ ಆಸಕ್ತಿಕರ ಮಾಹಿತಿ ಇದೆ.


ಮೊದಲು ಶಿವನ ಸಮುದ್ರ, ನಂತರ ಜೋಗದಲ್ಲಿ ಈ ರೀತಿ ವಿದ್ಯುತ್ತನ್ನು ತಯಾರಿಸಲಾಯಿತು. 800 ಅಡಿಗಳ ಜಲಪಾತವನ್ನು ಸರ್ವೆ ಮಾಡಿ ಅಲ್ಲಿ ಕಾಡಿನಲ್ಲಿ ಇಂಬಳ, ಹಾವು ಮುಂತಾದ ಸರೀಸೃಪಗಳು, ರಣಚಂಡಿಮಳೆ, ಕ್ರೂರ ಪ್ರಾಣಿಗಳ ಕಾಟ ಇವುಗಳ ಮಧ್ಯೆ ಈ ಯೋಜನೆ ಶುರು ಮಾಡಿದ್ದು ಯಶಸ್ವಿಯಾಗಿದ್ದು ಯಾವ ಯುದ್ಧಕ್ಕೂ ಕಡಿಮೆ ಇಲ್ಲದಂಥ ಸಾಹಸ. ಸಾವಿರಾರು ಕಾರ್ಮಿಕರು ಈ ಯೋಜನೆಗೆ ಕೆಲಸ ಮಾಡಿದ್ದಾರೆ. ಪ್ರಕೃತಿ ವಿಕೋಪಕ್ಕೆ ಪ್ರಾಣ ತೆತ್ತಿದ್ದಾರೆ.

ಈ ತ್ಯಾಗಕ್ಕೆ ಬೆಲೆ ಕಟ್ಟಲಾಗದು. ಇಂದು ವಿದ್ಯುತ್ ಈಗ ಮೂಲಸೌಕರ್ಯ. ಆದರೆ ಅಂದು ಅದನ್ನು ತಯಾರು ಮಾಡುವಾಗ ಯಾವುದೇ ಆಧುನಿಕ ತಂತ್ರಜ್ಞಾನ ಇಲ್ಲದೆ ಹೇಗೆ ಕೆಲಸ ಮಾಡಿರಬಹುದು? ಇದೊಂದು ವಿಸ್ಮಯ. ಈ ವಿದ್ಯುತ್ ನಡೆದುಬಂದ ದಾರಿಯನ್ನು ಈ ಕೃತಿಯಲ್ಲಿ ರೋಚಕವಾಗಿ ಕಟ್ಟಿಕೊಟ್ಟಿದ್ದಾರೆ. ಇದು ಪ್ರತಿಯೊಬ್ಬರೂ ಓದಬೇಕಾದ ತಿಳಿದುಕೊಳ್ಳಬೇಕಾದ ವಿಷಯ.

ಪುಸ್ತಕ ಪರಿಚಯ


ಕೃತಿ: ಕನ್ನಡ ಕಥಾನಕ
ಸಂ: ಡಾ. ಪ್ರಸಾದಸ್ವಾಮಿ ಮತ್ತು ಡಾ. ಮಂಜುಳಾ ಬಿ.ಕೆ
ಪ್ರ: ಕಣ್ವ ಪ್ರಕಾಶನ
ದೂ: 9845052481
ಪುಟಗಳು: 500, **ಬೆಲೆ:** ರೂ 500.
ನವ್ಯ, ನವ್ಯೋತ್ತರದ ಕತೆಗಳು. ಅನೇಕ ಪ್ರಸಿದ್ಧರ ಕತೆಗಳ ಕಥಾಸಂಕಲನ.






ಕೃತಿ: ಜೀವನವಿದು ಪಾಕಶಾಲೆ
ಲೇ: ಅರುಣ ವರರತ್ನ
ಪ್ರ: ದುರ್ಗಾ ಪುಸ್ತಕಾಲಯ ಮುಗಳಿ, ಶಿಗ್ಗಾಂವ ತಾ ಹಾವೇರಿ ಜಿಲ್ಲೆ
ಬೆಲೆ: ರೂ 80, **ಪುಟ:** 72
ಕತೆ, ಆಖ್ಯಾನ, ಪ್ರಸಂಗ, ಸನ್ನಿವೇಶ, ಆಶೋತ್ತರ ಎಲ್ಲವನ್ನೂ ಒಳಗೊಂಡ ಕೃತಿ.


ಕೃತಿ: ಅರ್ಥವಾಗದ ಲೋಕ (ಆತ್ಮಕಥನ)
ಲೇ: ಜಾಣಗೆರೆ ವೆಂಕಟರಾಮಯ್ಯ
ಪ್ರ: ಜಾಣಗೆರೆ ಪತ್ರಿಕೆ ಪ್ರಕಾಶನ
ದೂ: 9343798078
ಪುಟ: 454, **ಬೆಲೆ:** ರೂ 400
ಪತ್ರಕರ್ತ, ಬರಹಗಾರ ಜಾಣಗೆರೆ ವೆಂಕಟರಾಮಯ್ಯನವರ ಆತ್ಮಕಥನ.





ಕೃತಿ: ಭೂಮಿಗೆ ರಾಗಿ ಬಂದದ್ದು
ಲೇ: ಮಲ್ಲಿಕಾರ್ಜುನ ಹೊಸಪಾಳ್ಯ, ಜಿ.ಕೃಷ್ಣಪ್ರಸಾದ್
ಪ್ರ: ಧಾನ್ಯ ಪ್ರಕಾಶನ, ತುಮಕೂರು
ದೂ: 9880862058
ಪುಟ: 96, **ಬೆಲೆ:** ರೂ 120
ಕೃಷಿ, ಪರಿಸರ, ಹಾಗೂ ಜನಪದ ಕತೆಗಳು.

ಕೃತಿ: ಇಂಡಿಯನ್ ಜೇಮ್ಸ್ ಬಾಂಡ್ ಅಜಿತ್ ದೋವಲ್
ಲೇ: ರವೀಂದ್ರ ಜೋಷಿ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ದೂ: 9448110034
ಪುಟ: 80, **ಬೆಲೆ:** ರೂ 120
ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಕುರಿತಾದ ಕೃತಿ.





ಸ್ವಗತದಲ್ಲಿ ಸಂವಾದ: ಮಾತಿನ ವಿಸ್ಮಯ

• ವಿಕ್ರಮ ವಿಸಾಜಿ

2004ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ನನಗೊಂದು ಟ್ರ್ಯಾವೆಲ್ ಗ್ರ್ಯಾಂಟ್ ಕೊಟ್ಟಿತ್ತು. ಆ ಹಣದಲ್ಲಿ ಪಶ್ಚಿಮ ಬಂಗಾಳಕ್ಕೆ ಹೋದೆ. ಕೋಲ್ಕತ್ತಾದಲ್ಲಿ ಒಂದು ತಿಂಗಳು ಉಳಿದುಕೊಂಡಿದ್ದೆ. ಆ ಮಹಾನಗರದಲ್ಲಿ ಅಲೆಯುವುದು, ನಾಟಕಗಳನ್ನು ನೋಡುವುದು, ಸಾಹಿತ್ಯ ಸಂಸ್ಥೆಗಳಿಗೆ ಭೇಟಿ ಕೊಡುವುದು, ಲೇಖಕರೊಂದಿಗೆ ಸಂವಾದಿಸುವುದು ನನ್ನ ಮುಖ್ಯ ಉದ್ದೇಶವಾಗಿತ್ತು. ಅಲ್ಲಿನ ಲೇಖಕರನ್ನು ಭೇಟಿ ಮಾಡಿಸಲು ಜಿ.ಕುಮಾರಪ್ಪ ಇದ್ದರು. ಬಂಗಾಳಿ ಲೇಖಕರ ಜೊತೆ ಅವರಿಗೆ ಒಳ್ಳೆಯ ಒಡನಾಟವಿತ್ತು. ಆ ಲೇಖಕರನ್ನು ಭೇಟಿ ಮಾಡಬೇಕಾದರೆ ಅವರ ಕುರಿತು ಅಲ್ಪಸ್ವಲ್ಪ ತಿಳುವಳಿಕೆ ಪಡೆಯುವುದು ಅಗತ್ಯವಿತ್ತು. ಅವರ ಒಂದೆರಡು ಕೃತಿಗಳನ್ನಾದರೂ ಓದಬೇಕಾಗಿತ್ತು. ಅದೆಲ್ಲಾ ಆಗ ಸ್ವಲ್ಪ ಕಷ್ಟವೇ ಎನಿಸಿತು. ಹೇಗೊ ಒದ್ದಾಡಿ ಅಲ್ಪ ಸ್ವಲ್ಪ ಮಾಹಿತಿ ಕಲೆ ಹಾಕುತ್ತಿದ್ದೆ. ಜಿ.ಕುಮಾರಪ್ಪ ನೆರವು ನೀಡಿದರು. ಲೇಖಕರ ಸಾಹಿತ್ಯ ಲೋಕದ ಕೆಲ ಸಂಗತಿಗಳಾದರೂ ಗೊತ್ತಿರದಿದ್ದರೆ ಮಾತುಕತೆ ಕಷ್ಟ ಎಂಬುದು ಅರಿವಾಗತೊಡಗಿತು. ಹಾಗೆಂದು ತೀರಾ ಬೌದ್ಧಿಕ ಪ್ರಶ್ನೆಗಳು ಕೇಳಿದರೆ ಭಾರವೆನಿಸುತ್ತಿತ್ತು. ಸಂದರ್ಶನ ಮಾಡುವ ಲೇಖಕರ ವ್ಯಕ್ತಿತ್ವದ ಕುರಿತು ಸರಿಯಾದ ಕಲ್ಪನೆ ಇಲ್ಲದಿದ್ದರೆ ಮಾತುಕತೆಗಳಲ್ಲಿ ಜೀವಂತಿಕೆ ಚಿಮ್ಮುವುದಿಲ್ಲ. ಇದೆಲ್ಲಾ ಪಶ್ಚಿಮ ಬಂಗಾಳದ ತಿರುಗಾಟದಲ್ಲಿ ಮನವರಿಕೆಯಾಗಿತ್ತು. ಯಾವ ಲೇಖಕರೇ ಆಗಿರಲಿ ಅವರನ್ನು ಕಾಡುವ, ಕೊಂಚ ಅಚ್ಚರಿಗೊಳಿಸುವ, ಒಮ್ಮೊಮ್ಮೆ ವಿಚಲಿತಗೊಳಿಸುವ, ಅವರ ಅಂತರಂಗವನ್ನು ಕೆಣಕುವ, ಗಾಢವಾದ ಕಲಾ ಚಿಂತನೆಗೆಳೆಸುವ, ತಾತ್ವಿಕ ಜಿಜ್ಞಾಸೆಗೊಳಪಡಿಸುವ ಪ್ರಶ್ನೆಗಳ ಅಗತ್ಯವಿದೆ ಎನಿಸಿತು. ಅವರ ಸಾಹಿತ್ಯವನ್ನು ಹತ್ತಿರದಿಂದ ಓದದೇ, ಸಾಹಿತ್ಯ ಲೋಕದ ತಾತ್ವಿಕ ಜಿಜ್ಞಾಸೆ ಇಲ್ಲದೆ ಇದೆಲ್ಲಾ ಎಟುಕುವುದಿಲ್ಲ ಎಂಬುದನ್ನು ಒಂದೆರಡು ಸಂದರ್ಶನಗಳಲ್ಲೆ ಕಂಡುಕೊಂಡೆ. ಎಷ್ಟೇ ಬೌದ್ಧಿಕ ಮಾತುಕತೆ ಇದ್ದರೂ ಅದೆಲ್ಲಾ ನಡೆಯಬೇಕಾದದ್ದು ಒಂದು ಆಪ್ತವಾದ, ಆರ್ದ್ರವಾದ ಮನಸ್ಥಿತಿಯಲ್ಲಿ. ವಿಚಿತ್ರವೆಂದರೆ ಒಬ್ಬರನ್ನು ಸಂದರ್ಶಿಸಿದ ರೀತಿ ಇನ್ನೊಬ್ಬರ ಸಂದರ್ಶನದ ಹೊತ್ತಿನಲ್ಲಿ ಅನೇಕ ಸಲ ಅಷ್ಟೇನೂ ಕೆಲಸಕ್ಕೆ ಬರುವುದಿಲ್ಲ. ಪ್ರತಿಯೊಂದು ಜೀವವೂ ಅನನ್ಯವಾಗಿರುವಂತೆ ಪ್ರತಿಯೊಂದು ಮಾತುಕತೆ ಕೂಡ ಅನನ್ಯವೇ. ವೇದಿಕೆಯ ಮೇಲೆ ಘನಗಂಭೀರವಾಗಿ ಇರುವ ಲೇಖಕರನೇಕರು ಖಾಸಗಿ ಮಾತುಕತೆಯಲ್ಲಿ ಅರಳುವುದನ್ನು ನೋಡಿರುವೆ. ವೇದಿಕೆಯ ಮೇಲಿನ ಸಂಕೋಚ, ಹಿಂಜರಿಕೆ, ಒಂಚೂರು ಇಮೇಜಿನ ಕಾಪಾಡಿಕೊಳ್ಳುವಿಕೆ ಇಲ್ಲಿ ಅಷ್ಟಾಗಿ ಇರುವುದಿಲ್ಲ. ಎದುರಿನವರ ಬಗ್ಗೆ ಕೊಂಚ ವಿಶ್ವಾಸ ಇದ್ದರಂತೂ ಮುಗಿಯಿತು. ಅದೊಂದು ಅತ್ಯುತ್ತಮ ಶಾಸ್ತ್ರೀಯ ಸಂಗೀತದ ಜುಗಲ್ಬಂದಿಯಂತಿರುವುದು. ಅವರು ತಮ್ಮೊಳಗೇ ಮುಳುಗಿ ಸಂವಾದಿಸುವರು.

ಎಷ್ಟೋ ಸಲ ಬರಹದಲ್ಲಿ ಕಾಣಿಸಿಕೊಳ್ಳದ ಹಲವು ಸಂಗತಿಗಳು ಮಾತುಕತೆಯಲ್ಲಿ ಕಾಣಿಸಿಕೊಳ್ಳುತ್ತವೆ. ಪ್ರಶ್ನೆ ಅಲ್ಲಿ ಚಿಮ್ಮು ಹಲಗೆ ಮಾತ್ರ. ಮನುಷ್ಯರ ಮಾತಿನ ತುಡಿತ ವಿಚಿತ್ರವಾದದ್ದು. ಏನೆಲ್ಲವನ್ನೂ ಹಂಚಿಕೊಳ್ಳುವ ಅಥವಾ ಯೋಚಿಸುತ್ತಲೇ ಹುಡುಕುವ ಕ್ರಿಯೆ ನಡೆಯುವುದರಿಂದ ಹೊಳಹುಗಳು ಹೆಚ್ಚಿನ ರೀತಿಯಲ್ಲಿ ಕಾಣಿಸಿಕೊಳ್ಳುವವು. ಸಂವಾದವೊಂದು ಸ್ವಗತವಾಗಿ ಲೋಕಾಂತವಾಗುವುದು. ಲೇಖಕರು ತಮ್ಮ ವ್ಯಕ್ತಿತ್ವದ ನಿಗೂಢ ಲೋಕಗಳಲ್ಲಿ ಬೆರೆತು ಮಾತಾಡಿದರು. ಅವು ತಮಗೆ ತಾವೇ ಮಾಡಿಕೊಂಡ ಸ್ವಗತದಂತಿದ್ದವು. ಜೊತೆಗೆ ಆ ಮಾತುಗಳು ಲೋಕವೂ ಕೇಳುವಂತಿದ್ದವು. ಲೋಕದ ಕುರಿತಾಗಿಯೂ ಇದ್ದವು. ಅದಕ್ಕೆಂದೇ ಇದಕ್ಕೆ ಸ್ವಗತದಲ್ಲಿ ಸಂವಾದ ಎಂದು ಹೆಸರು ಕೊಟ್ಟೆ. ಯಾಕೆಂದರೆ ಸ್ವಗತವಾಗದ ಮಾತುಗಳು ಸಂವಾದವೂ ಆಗುವುದಿಲ್ಲ. ಸ್ವಗತದೊಡನೆ ಸಂವಾದ ಮಾಡುತ್ತ ಅನುಭವಗಳು ವಿಶೇಷ ಆಕಾರ ಪಡೆದುಕೊಳ್ಳುತ್ತವೆ. ಒಂದು ಟ್ರಾನ್ಸ್ ತರಹ ಮಾತಾಡುವವರನ್ನೂ ಕಂಡಿರುವೆ. ಒಮ್ಮೊಮ್ಮೆ ತಮ್ಮದೇ ಬರಹದ ಪೆಡಸುತನ ಮೀರುವಂತೆ. ಕೆಲವರು ತುಂಬಾ ಜಿಗುಟು ಕೂಡ. ಇಮೇಜ್‌ಗೆ ಧಕ್ಕೆಯಾಗದಂತೆ ಅಳೆದು ತೂಗಿ ಮಾತಾಡುವವರು. ಹಾಗಾದಾಗ ಕೊಂಚ ಸರಳ, ಯಾಂತ್ರಿಕ ಉತ್ತರಗಳೂ ಬಂದುಬಿಡಬಹುದು. ಹಾಗೂ ಕೆಲ ಕಡೆ ಆಗಿದೆ.

ಲೇಖಕ ವ್ಯಕ್ತಿತ್ವದ ಕಾಮನಬಿಲ್ಲು ಆಗೆಲ್ಲ ತೆರೆದುಕೊಳ್ಳುತ್ತಿತ್ತು. ಎಷ್ಟೋ ಸಲ ಇಂಥ ಮಾತುಕತೆಗಳಲ್ಲಿ ಸಂದರ್ಭಗಳೇ ಹೊಸ ಪ್ರಶ್ನೆಗಳಿಗೆ ಖೋ ಕೊಡುವುದುಂಟು. ಸಿದ್ಧಪಡಿಸಿಕೊಂಡ ಪ್ರಶ್ನೆಗಳು ಹಿನ್ನೆಲೆಗೆ ಸರಿದು ಹೊಸ ಪ್ರಶ್ನೆಗಳಿಗೆ ಅವಕಾಶವಾಗುವುದು. ಬರಹಗಾರರ ಈ ಪಯಣವನ್ನು ಅರಿಯುವುದೆಂದರೆ ನಮ್ಮ ಪೂರ್ವಗ್ರಹಗಳನ್ನು ಒಡೆದುಕೊಳ್ಳುವುದೆಂದರ್ಥ. ಸಾಹಿತ್ಯ ಚಿಂತನೆಯ ಹಲವು ಸಂಗತಿಗಳು ತಲೆಕೆಳಕಾಗಿ ಹೊಸ ಲೋಕವೊಂದು ನೋಡುನೋಡುವಷ್ಟರಲ್ಲಿ ಕಣ್ಣೆದುರು ನಿರ್ಮಾಣಗೊಂಡು ಬಿಡುವುದು. ಇಂಥ ವಿಸ್ಮಯವೇ ಮಾತುಕತೆಗಳ ಜೀವಾಳ. ಇಲ್ಲಿ ಅವರ ಜೀವನ ಚಿತ್ರಗಳು, ಬರಹದ ಚಿಂತನೆಗಳು ಒಟ್ಟಿಗೆ ದಾಖಲಾಗಿವೆ. ಮಾತುಕತೆಗಳಲ್ಲಿ ಆತ್ಮಕಥನಾತ್ಮಕ ಅಂಶಗಳು ಬರುವುದು ಸಹಜ. ಅವು ಒಂದಿಲ್ಲೊಂದು ರೀತಿಯಲ್ಲಿ ಅವರ ಸೃಜನಶೀಲತೆಯೊಂದಿಗೆ ಬೆರೆತಿವೆ. ಒಮ್ಮೊಮ್ಮೆ ನಾನು ಅವರ ಜೀವನದ ಕೆಲ ತಿರುವುಗಳ ಬಗ್ಗೆ ಪ್ರಶ್ನಿಸಿದೆ. ಮತ್ತೆ ಕೆಲವೊಮ್ಮೆ ಅವರೇ ಬರೆದ ಬರಹಗಳ ಸಾರವನ್ನು ಎತ್ತಿಕೊಂಡು ಮಾತಿಗಿಳಿದೆ. ಲೇಖಕರು ಗಾಢವಾಗಿ ನಂಬಿ ಬರೆದ ಬರಹಗಳಲ್ಲಿ ಅವರ ಚಿಂತನೆಯ ಮೂಲ ಧಾತುಗಳಿರುತ್ತವೆ. ಅವು ಅವರ ಮನೋಧರ್ಮದ, ಕೆಲವೊಮ್ಮೆ ಅವರ ಕಾಲದ ಬಿಂಬಗಳೂ ಆಗಿರುತ್ತವೆ.


ಇಲ್ಲಿನ ಸಂದರ್ಶನಗಳು ಕಳೆದ ಎರಡು ದಶಕಗಳಲ್ಲಿ ಮಾಡಿದ್ದು. ಇವರಲ್ಲಿ ಎಲ್ಲರೂ ಲೇಖಕರು. ಈ ಲೇಖಕರಲ್ಲಿ ಒಬ್ಬರು ಇಂಗ್ಲಿಷ್, ಇಬ್ಬರು ಬೆಂಗಾಳಿ, ಮೂವರು ಹಿಂದಿ, ಉಳಿದವರು ಕನ್ನಡದಲ್ಲಿ ಬರೆಯುವವರು. ಇವರ ಬರಹದ ಕ್ಷೇತ್ರಗಳು ಬೇರೆ ಬೇರೆ. ಆದರೆ ಇವರೆಲ್ಲರ ಮೂಲ ಆಸಕ್ತಿ ಬರಹ. ಈ ಬರಹದ ವಿಸ್ತರಣೆಯಾಗಿ ಕೆಲವರು ಚಿತ್ರಕಲೆ, ರಂಗಭೂಮಿ ಮತ್ತು ಚಳವಳಿಗೆ ಒಳಗಾದರು. ವ್ಯಕ್ತಿತ್ವವನ್ನು ತೊಡಗಿಸಿಕೊಂಡು ಬರೆದ ಇವರ ಬರಹ ಸೃಜಶೀಲತೆಯ ಹಲವು ಮುಖಗಳನ್ನು ದಿಟ್ಟವಾಗಿ ತೆರೆದಿಟ್ಟಿದೆ. ತಮ್ಮದೇ ಆದ ಸ್ವತಂತ್ರ ಆಯ್ಕೆ ಮತ್ತು ದಾರಿಗಳಿಗೆ ಬದ್ಧವಾಗಿವೆ. ತಮ್ಮ ದಾರಿಗಳನ್ನು ಕಾಲಕಾಲಕ್ಕೆ ವಿಸ್ತರಿಸಿಕೊಂಡಿವೆ. ಇವರ ಇಂಥ ಗಾಢ ಶ್ರದ್ಧೆ ಮತ್ತು ಹುಡುಕಾಟದಿಂದ ಪ್ರತಿಯೊಂದು ತಲೆಮಾರು ಕಲಿಯುವಂತಿದೆ.

ಸಂದರ್ಶನಕ್ಕೆ ಇಷ್ಟು ಪ್ರಮಾಣದ ಓದುಗರಿದ್ದಾರೆನ್ನುವುದೇ ನನಗೆ ಅಚ್ಚರಿ. ಈ ಸಂದರ್ಶನಗಳು ಓದುಗರ ಯೋಚನಾ ಸಾಮರ್ಥ್ಯವನ್ನು ಕೆಣಕಿದ್ದವು. ಬರಹಗಾರರ ಸಂಕೀರ್ಣಲೋಕ, ನಿಗೂಢ ಹುಡುಕಾಟಗಳು, ಓದಿನ ದಾರಿಗಳು, ಅಭಿವ್ಯಕ್ತಿಯ ಕ್ರಮಗಳು ಗೊತ್ತಾಗತೊಡಗಿದವು. ಸೃಜನಶೀಲತೆಯ ವಿಚಿತ್ರ ರಭಸ, ಆಲೋಚನೆಯ ಅದೃಶ್ಯ ಲೋಕ ಅನುಭವಕ್ಕೆ ಬರತೊಡಗಿತು. ಬರಹದ ಹಿಂದಿನ ಅಪರಿಚಿತ ಲೋಕದ ಒಂದೊಂದೇ ಮುಖ ತೆರೆದುಕೊಳ್ಳತೊಡಗಿದವು. ಅಪಾರ ಪ್ರಮಾಣದ ಬರಹವನ್ನು ರಚಿಸಿ ಈಗ ಚಳವಳಿಯೇ ನನ್ನ ಆದ್ಯತೆ ಎಂದ ಮಹಾಶ್ವೇತಾದೇವಿ, ತನ್ನ ಇಳಿವಯಸ್ಸಿನಲ್ಲಿ ಸನ್ನತಿಯ ಬೌದ್ಧ ಶಿಲ್ಪಗಳನ್ನು ಎಡತಾಕುತ್ತ ಅವುಗಳ ಪ್ರಮಾಣ, ಶೈಲಿಗಳನ್ನು ದಾಖಲಿಸಿಕೊಳ್ಳುತಿದ್ದ ಷ.ಶೆಟ್ಟರ್, ದೇಸಿದ್ರವ್ಯಗಳ ಶೋಧವನ್ನು ಮುಂದುವರೆಸಿದ್ದ ಚಂದ್ರಶೇಖರ ಕಂಬಾರ, ಕಾಲದ ಸದ್ದನ್ನು ಆಲಿಸುತ್ತ ಅದಕ್ಕೆ ಪ್ರತಿಕ್ರಿಯಿಸುತ್ತ ಲೇಖಕನ ಹೊಣೆಗಾರಿಕೆಯನ್ನು ಅರುಹುತ್ತಿದ್ದ ಬರಗೂರು ರಾಮಚಂದ್ರಪ್ಪ, ಉದ್ದೇಶಪೂರ್ವಕವಾಗಿ ತನ್ನ ತಾಯಿಯ ಸಾಹಿತ್ಯದ ಪ್ರಭಾವದಿಂದ ಪಾರಾಗಲು ಬಯಸುತ್ತಿದ್ದ ನಬಾರುಣ್ ಭಟ್ಟಾಚಾರ್ಯ, ಭಾಷೆಯ ಅಂತಸ್ಥ ಜಗತ್ತನ್ನು ನಂಬಿಕೊಂಡಿದ್ದ ಕೆ.ವಿ.ನಾರಾಯಣ, ಹೊಸ ತಲೆಮಾರಿನ ಬಿಂಬಪ್ರತಿಬಿಂಬಗಳನ್ನು ಅರಿತಿದ್ದ ಎಚ್.ಎಸ್.ರಾಘವೇಂದ್ರರಾವ್, ಭಾರತದ ಅಭಿಜಾತ ಸಾಹಿತ್ಯವನ್ನು ಹಠದಿಂದ ಒಳಗಿಳಿಸಿಕೊಳ್ಳುತ್ತಿದ್ದ ಶೆಲ್ಡನ್ ಪೊಲಾಕ್, ಕನ್ನಡ ಭಾಷೆಯನ್ನು ಅಂತಾರಾಷ್ಟ್ರೀಯ ಭಾಷಾ ತತ್ವಗಳಿಂದ ಓದತೊಡಗಿದ್ದ ಎಸ್.ಎನ್.ಶ್ರೀಧರ, ಕ್ಷೇತ್ರಕಾರ್ಯದ ಮೂಲಕ ಜಾನಪದ ಅಧ್ಯಯನ, ವಚನ ಅಧ್ಯಯನವನ್ನು ವಿಸ್ತರಿಸುತ್ತಿದ್ದ ವೀರಣ್ಣ ದಂಡೆ, ಲೋಹಿಯಾ ಬರಹಗಳ ಓದಿನಿಂದ ತನ್ನನ್ನು ಪುಷ್ಟಗೊಳಿಸಿಕೊಂಡಿದ್ದ ಡಿ.ಎಸ್.ನಾಗಭೂಷಣ, ಗ್ರೀಕ್ ಸಾಹಿತ್ಯದ ಅಪರೂಪದ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದ ವಿಜಯಾ ಗುತ್ತಲ, ಚಿತ್ರಕಲೆಯನ್ನೂ ಬರಹವನ್ನೂ ಒಟ್ಟಿಗೆ ಸ್ವೀಕರಿಸಿದ್ದ ಅಶೋಕ್ ಭೌಮಿಕ್, ಸಂಸ್ಕೃತಿಯ ಹೊಸ ತಾಣಗಳಿಂದ ತನ್ನ ಕಾವ್ಯವನ್ನು ಮುನ್ನಡೆಸುತ್ತಿದ್ದ ಎಚ್.ಎಸ್.ಶಿವಪ್ರಕಾಶ್, ಕಾವ್ಯವನ್ನು ಎರೋಟಿಕ್ ಅನುಭವಗಳ ಸಂಗಮವಾಗಿಯೂ, ಸಾಮಾಜಿಕ ಅಸ್ವಸ್ಥತೆಯ ಅಭಿವ್ಯಕ್ತಿಯಾಗಿಯೂ ಸ್ವೀಕರಿಸಿದ್ದ ಅರುಣ್ ಕಮಲ್, ಕೃತಿನಿಷ್ಠ ಓದನ್ನು ಸಶಕ್ತ ಸಾಂಸ್ಕೃತಿಕ ಓದನ್ನಾಗಿ ಮಾಡಿಕೊಂಡಿದ್ದ ರಾಜೇಂದ್ರ ಚೆನ್ನಿ, ಮಧ್ಯಕಾಲೀನ ಸಾಹಿತ್ಯ ಮತ್ತು ಭಕ್ತಿಯ ವಿವಿಧ ರಚನೆಗಳಿಗೆ ಹೊಸಪ್ರವೇಶಿಕೆ ಕಲ್ಪಿಸುತ್ತಿದ್ದ ಬಸವರಾಜ ಕಲ್ಗುಡಿ, ಸಮುದಾಯದ ಅನುಭವಗಳಿಂದ ಸಾಂಸ್ಕೃತಿಕ ಚಿಂತನೆಯ ಮಾರ್ಗವನ್ನು ಕಂಡುಕೊಳ್ಳುತ್ತಿದ್ದ ರಹಮತ್ ತರೀಕೆರೆ, ಕಿರಂ ಸಾಹಿತ್ಯಾಲೋಚನೆಯ ಕ್ರಮಗಳನ್ನು ಎಳೆಎಳೆಯಾಗಿ ಬಿಡಿಸಿಡುತ್ತಿದ್ದ ನಟರಾಜ್ ಹುಳಿಯಾರ್, ಅಜ್ಞಾತ ಲೇಖಕರ ಕುರಿತು ವಿದ್ವತ್ಪೂರ್ಣ ಕೃತಿಗಳನ್ನು ಬರೆಯುತ್ತಿದ್ದ ಪ್ರೊ.ರಾಜಕುಮಾರ್, ಸಾವೆಂಬ ಸ್ನೇಹಿತನನ್ನು ಯಾವುದೇ ತಕರಾರುಗಳಿಲ್ಲದೆ ಕಣ್ಣೊಳಗೆ ಇಟ್ಟುಕೊಂಡೇ ಮಾತನಾಡಿದ ಮೊಗಳ್ಳಿ ಗಣೇಶ್, ವಿಕ್ಷಿಪ್ತ ಅನುಭವಗಳಿಂದ ಹೊಸ ಸೌಂದರ್ಯಲೋಕವನ್ನು ಕಟ್ಟಿದ್ದ ವಿ.ಎಂ.ಮಂಜುನಾಥ ಒಬ್ಬೊಬ್ಬರದು ಒಂದೊಂದು ಲೋಕ. ಈ ಲೋಕಗಳ ಕೆಲ ಅನುಭವಗಳನ್ನು ಕಾಣಿಸುವ ಪ್ರಯತ್ನ ಇಲ್ಲಿನ ಮಾತುಕತೆಗಳಲ್ಲಿದೆ. ಇವರೆಲ್ಲರನ್ನು ಕೆಲಹೊತ್ತು ಹತ್ತಿರದಿಂದ ಕಂಡೆ, ಆಲಿಸಿದೆ. ಇವರ ಹೊಳಹುಗಳು, ಓದಿನ ಕ್ರಮಗಳು, ದೀರ್ಘ ಪಯಣದಲ್ಲಿ ಕಂಡುಕೊಂಡ ತಾತ್ವಿಕ ನೆಲೆಗಳು ಇಲ್ಲಿವೆ. ಇದರ ಹಿಂದೆ ಇದ್ದದ್ದು ಇವರ ಅಪಾರವಾದ ಪರಿಶ್ರಮ ಮತ್ತು ವೈವಿಧ್ಯಮಯ ಜೀವನಾನುಭವ. ಸಾಹಿತ್ಯ, ಕಲಾಲೋಕದ ಚಿಂತನೆಯನ್ನು ಹಲವು ದಿಕ್ಕಿಗೆ ತಿರುಗಿಸುವ ಉತ್ಸಾಹ. ಇಲ್ಲಿರುವ ಸೃಜನಶೀಲ, ಬೌದ್ಧಿಕ, ವೈಚಾರಿಕ ಜಿಜ್ಞಾಸೆಗಳು ಒಂದು ಸಂಸ್ಕೃತಿಯ ಜೀವಂತಿಕೆಗೆ ನಿದರ್ಶನ ಕೂಡ.

ಇವರೆಲ್ಲ ತಮ್ಮ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಇತರರನ್ನು ಪ್ರಭಾವಿಸಿದರು. ರೂಢಿಗೆ ಬಿದ್ದ ಮಾದರಿಗಳನ್ನು ಪ್ರಶ್ನಿಸಿದರು. ತಮ್ಮ ತಾತ್ವಿಕ ಪ್ರಶ್ನೆಗಳಿಂದಾಗಿ ಆಯಾ ಭಾಷೆಯ ಸಾಹಿತ್ಯ ಸಂಸ್ಕೃತಿಯ ವಲಯವನ್ನು ಕೊಂಚ ವಿಚಲಿತಗೊಳಿಸಿದರು. ರಾಜಕೀಯ ಪ್ರಜ್ಞೆಯನ್ನು ಹಲವು ಸ್ತರಗಳಲ್ಲಿ ಮಂಡಿಸಿದರು. ಕಲೆಯ ಮಾನದಂಡಗಳನ್ನು ಬದಲಾಯಿಸಿದರು. ಕನ್ನಡದಲ್ಲಾಗಲಿ, ಭಾರತದಲ್ಲಾಗಲಿ ಇವರಷ್ಟೇ ಇಂಥ ಕೆಲಸ ಮಾಡಿದ್ದಾರೆ ಎಂದು ನಾವ್ಯಾರೂ ನಂಬಬೇಕಿಲ್ಲ. ಇಂಥ ಲೇಖಕರು ಅನೇಕರಿದ್ದಾರೆ. ಆದರೆ ನನಗೆ ತಲುಪಲು ಸಾಧ್ಯವಾದದ್ದು ಕೆಲವರನ್ನು ಮಾತ್ರ. ಈ ಕೆಲಸವನ್ನು ಕನ್ನಡದ ಇತರೆ ಲೇಖಕರು ಮುಂದುವರೆಸಿದರೆ ಇನ್ನೂ ಚೆಂದ. ಯಾಕೆಂದರೆ ಇದು ಅಂತಿಮವಾಗಿ ಒಂದು ಭಾಷೆಯ, ಹಲವು ಭಾಷೆಗಳ ಅನುಭವ ಲೋಕ. ನಾವು ಮತ್ತೆ ಮತ್ತೆ ಎದುರುಗೊಳ್ಳಬೇಕಾದ ಅನುಭವಲೋಕ. ಇಂಥವರನ್ನು ಮಾತನಾಡಿಸುವುದು ಕೆಲವೊಮ್ಮೆ ಒಂದು ಕಾಲಮಾನವನ್ನು ಮಾತನಾಡಿಸಿದಂತೆ. ಅವರ ಅನುಭವದ ಬೀಸು ಹಲವು ದಶಕಗಳ ಬರವಣಿಗೆಯ ಏಳುಬೀಳುಗಳನ್ನು ಧ್ವನಿಸುತ್ತದೆ. ಸೃಜನಶೀಲತೆಯ ಸಂಕೀರ್ಣಲೋಕ, ಕಲಾಲೋಕದ ವಿಸ್ಮಯಗಳು, ಸಂಶೋಧನೆಯ ದುರ್ಗಮ ಹಾದಿಗಳಿಗೆ ಸಾಕ್ಷಿಯಾಗಿರುತ್ತದೆ. ಹೊಸಬರಿಗೆ ಇರಬಹುದಾದ ದಾರಿಗಳ ಬಗ್ಗೆ ಮುನ್ಸೂಚನೆಯನ್ನು ಕೊಡುವಂತಿರುತ್ತದೆ. ಹೊಸ ಪೀಳಿಗೆ ಸಮರ್ಥವಾಗಿ ಮುನ್ನಡೆಯಬೇಕಾದರೆ ಹಿರಿಯರು ಶ್ರಮವಹಿಸಿ ದುಡಿಯಬೇಕೆಂಬ ಅವರ ಕಾಳಜಿ ಕಂಡು ನಾನು ವಿನಮ್ರತೆಯಿಂದ ಕುಗ್ಗಿಹೋದೆ. ಇವರಲ್ಲಿ ಅನೇಕರು ಚರಿತ್ರೆಯ ಭಾರವನ್ನೂ, ಭವಿಷ್ಯದ ಭಾರವನ್ನೂ ಒಟ್ಟಿಗೆ ಹೆಗಲೆಣೆಯಾಗಿಸಿಕೊಂಡಿದ್ದರು. ಅವರ ತೀವ್ರವಾದ ಕಾಳಜಿ, ಬೌದ್ಧಿಕ ವಿಹ್ವಲತೆ ನನ್ನಲ್ಲಿ ಅನೇಕ ಪ್ರಶ್ನೆಗಳನ್ನು ಹುಟ್ಟಿಸಿತು. ಸಮುದಾಯಗಳಲ್ಲಿ ಮೇಲುಗೈ ಸಾಧಿಸುತ್ತಿರುವ ದುಷ್ಟ ಚಿಂತನೆಗಳ ಬಗ್ಗೆ ನೊಂದಿದ್ದರು. ಸಾಮಾಜಿಕ ಕೇಡಿಗೆ ಕಾರಣವಾಗುತ್ತಿರುವ ವಿಚಾರಗಳನ್ನು ಎದುರಿಸಲು ಹಾತೊರೆಯುತ್ತಿದ್ದರು. ಅಭಿವ್ಯಕ್ತಿಯ ಮೇಲಿನ ದಾಳಿಗಳು, ಮನುಷ್ಯರ ಮೇಲಿನ ದಾಳಿಗಳು ಅವರನ್ನು ನಿರಂತರ ಚಡಪಡಿಕೆಯಲ್ಲಿಟ್ಟಿದ್ದವು. ತಾವಿನ್ನೂ ಸಮರ್ಥವಾಗಿ ತಮ್ಮ ಹೊಣೆಗಾರಿಕೆ ನಿರ್ವಹಿಸುತ್ತಿಲ್ಲವೆಂಬ ಚಿಂತೆಯಲ್ಲಿ ಕಂಗೆಟ್ಟಿದ್ದರು. ಕೆಲವರು ಪಾಪಪ್ರಜ್ಞೆಯಲ್ಲಿ ತೊಳಲಾಡಿದರು. ಇನ್ನಾದರೂ ಇದನ್ನು ಎದುರಿಸಲೇಬೇಕೆಂದು ಹತ್ತು ಹಲವು ಓದಿನ ದಾರಿಗಳನ್ನೂ, ಚಿಂತನೆಯ ದಾರಿಗಳನ್ನೂ ತಡಕಾಡುತ್ತಿದ್ದರು. ಅವರ ಕೃತಿಗಳಿಗೆ ಕಣ್ಣಾಗಿದ್ದ ನಾನು ಅವರ ಮಾತುಗಳಲ್ಲಿಯ ಅಪರಾಧೀ ಪ್ರಜ್ಞೆಗೆ ಅಲ್ಲಾಡಿಹೋಗಿದ್ದೆ. ದಣಿವರಿಯದ ಈ ಪಥಿಕರ ಹೆಜ್ಜೆಗುರುತುಗಳು ಈ ಕೃತಿಯಲ್ಲಿವೆ.

ಸಾಹಿತ್ಯ ಮತ್ತು ಅನುಭವಗಳ ಒಳಗುಟ್ಟುಗಳನ್ನು ಇವರು ಅನಾವರಣಗೊಳಿಸುತ್ತ ಹೋದರು. ಹಾಗೆ ಅನಾವರಣಗೊಳಿಸುವಾಗ ಅವರ ಚಿಂತನೆಯ ಮೂಲಗಳು ಕೂಡ ಅನಾವರಣಗೊಳ್ಳುತ್ತಿದ್ದವು. ಸಂದರ್ಶನವೆಂದರೆ ಹೀಗೇ ಇರುತ್ತದೇನೊ: ಒಂದೊಂದೇ ಪೊರೆ ಕಳಚಿದಂತೆ. ಯಾರಿಗೆ ಗೊತ್ತು? ನಾನು ಕೂಡ ಅವರಿಗೆ ಅನಾವರಣಗೊಳ್ಳುತ್ತಿರಬಹುದು. ಓದುಗರೆದುರು ನಾವಿಬ್ಬರೂ ಅನಾವರಗೊಳ್ಳುತ್ತಿರಬಹುದು. ಒಟ್ಟಿನಲ್ಲಿ ಭಾಷೆ, ಭಾಷೆಯಲ್ಲಿ ಅಡಗಿಕೊಂಡಿರುವ ಅಪಾರವಾದ ಅನುಭವಲೋಕ ತನಗೆ ತಾನೇ ಅನಾವರಣಗೊಳ್ಳುತ್ತಿರಬಹುದು.

- ಮುಂದಿನ ಪುಟದಲ್ಲಿ ಮುಂದುವರಿದಿದೆ



ಸಂವೇದನಾಶೀಲ ಬರಹಗಾರ ವಿಕ್ರಂ ವಿಸಾಜಿ ಭಾರತೀಯ ಸಾಹಿತ್ಯ ಜಗತ್ತಿನ ಅನೇಕ ಬರಹಗಾರರ ಜೊತೆಗೆ ಸಂವಾದ ನಡೆಸಿ ಅದನ್ನು 'ಸ್ವಗತದಲ್ಲಿ ಸಂವಾದ' ಎಂಬ ಕೃತಿಯ ಮೂಲಕ ಓದುಗರೊಂದಿಗೆ ಹಂಚಿಕೊಂಡಿದ್ದಾರೆ. ಪ್ರಸ್ತುತ ಈ ಲೇಖನದಲ್ಲಿ ವಿಕ್ರಂ, ಹಿರಿಯ ಸಾಹಿತಿಗಳ ಅನುಭವ ಜಗತ್ತನ್ನು ಹತ್ತಿರದಿಂದ ಕಂಡುಂಡ ಬಗೆಯನ್ನು ಹೇಳಿದ್ದಾರೆ. 'ಸಂದರ್ಶನವೆಂದರೆ ಒಂದೊಂದೇ ಪೊರೆ ಕಳಚಿದಂತೆ' ಎನ್ನುವ ಅವರು, ಓದುಗರೆದುರು ಸಾಹಿತಿಯ ಒಳಗುಟ್ಟುಗಳನ್ನು ಬಿಚ್ಚಿಡುತ್ತಾ ತಾನೂ ಅನಾವರಣಗೊಂಡ ಅಚ್ಚರಿಯನ್ನು ಬಿಚ್ಚಿಟ್ಟಿದ್ದಾರೆ.

ನಾವು ಮತ್ತೆ ಮತ್ತೆ ಎದುರುಗೊಳ್ಳಬೇಕಾದ ಅನುಭವಲೋಕ. ಇಂಥವರನ್ನು ಮಾತನಾಡಿಸುವುದು ಕೆಲವೊಮ್ಮೆ ಒಂದು ಕಾಲಮಾನವನ್ನು ಮಾತನಾಡಿಸಿದಂತೆ. ಅವರ ಅನುಭವದ ಬೀಸು ಹಲವು ದಶಕಗಳ ಬರವಣಿಗೆಯ ಏಳುಬೀಳುಗಳನ್ನು ಧ್ವನಿಸುತ್ತದೆ. ಸೃಜನಶೀಲತೆಯ ಸಂಕೀರ್ಣಲೋಕ, ಕಲಾಲೋಕದ ವಿಸ್ಮಯಗಳು, ಸಂಶೋಧನೆಯ ದುರ್ಗಮ ಹಾದಿಗಳಿಗೆ ಸಾಕ್ಷಿಯಾಗಿರುತ್ತದೆ.

- ವಿಕ್ರಮ ವಿಸಾಜಿ

> ಇಲ್ಲಿನ ಮಾತುಕತೆಗಳಲ್ಲಿ ಸೃಜನಶೀಲತೆಗೆ ಒದಗಿರುವ ಅಪಾಯಗಳ ಕುರಿತ ಚರ್ಚೆ ಕೂಡ ಇದೆ. ಸಾಮಾಜಿಕವಾಗಿ ಅಪ್ರಸ್ತುತವಾಗುವ ಭಯ ಇಪ್ಪತ್ತೊಂದನೇ ಶತಮಾನದ ಲೇಖಕರಿಗೆ ಯಾಕಿಷ್ಟು ಕಾಡುತ್ತಿದೆ? ಸಾಮಾಜಿಕ ಸಂಗತಿಗಳಿಗೆ ದಿಢೀರಾಗಿ ಸ್ಪಂದಿಸುವ ಸಾಹಿತ್ಯದ ಸ್ವರೂಪ ಎಂಥದ್ದು? ತಮ್ಮ ರಾಜಕೀಯ ಪ್ರಜ್ಞೆಯನ್ನು ಪ್ರಕಟಿಸಲೇಬೇಕಾದ ಒತ್ತಡದಲ್ಲಿ ಲೇಖಕರು ಸಿಲುಕಿದ್ದಾರೆಯೆ? ಅವಸರದ ತೀರ್ಮಾನ ಧಾಟಿಯ ವಿಮರ್ಶೆಗಳು ಚರ್ಚೆಗಳನ್ನು ಅಳ್ಳಕಗೊಳಿಸಿವೆಯೆ? ಸಾಹಿತ್ಯದ ಪ್ರಸ್ತುತತೆಯನ್ನು ನಿರ್ವಹಿಸುತ್ತಿರುವ ಕ್ರಮ ಸೂಕ್ಷ್ಮವಾಗಿದೆಯೆ? ಇಂಥ ಪ್ರಶ್ನೆಗಳು ಅನೇಕ ಬರಹಗಾರರನ್ನು ಕಾಡಿವೆ.

ಸ್ವಗತದಲ್ಲಿ ಸಂವಾದ: ಮಾತಿನ ವಿಸ್ಮಯ





> ಈ ಮಾತುಕತೆಗಳಲ್ಲಿ ಹೊಸ ತಲೆಮಾರಿನ ದಾಹವನ್ನು ಉತ್ತೇಜಿಸುವ ಅಂಶಗಳಿವೆ. ಜೊತೆಗೆ ನಮ್ಮ ದಾಹವನ್ನು ನೀಗಿಸಿಕೊಳ್ಳಲು ಬೇಕಾದ ನೀರಿನ ಒರತೆಗಳನ್ನು ನಾವೇ ಹುಡುಕಿಕೊಳ್ಳಬೇಕೆಂಬ ಸೂಚನೆಗಳೂ ಇವೆ. ಹೊಸ ತಲೆಮಾರಿಗೆ ಹಿರಿಯರ ಅನುಭವಗಳು ದಾರಿಯೂ ಹೌದು, ದಾಟಬೇಕಾದ ಸೀಮೆಗಳೂ ಹೌದು.
>
> – ವಿಕ್ರಮ ವಿಸಾಜಿ

– ಹಿಂದಿನ ಪುಟದಿಂದ ಮುಂದುವರಿದಿದೆ...

ಅಥವಾ ಒಂದು ಕಾಲಮಾನವೇ ಅನಾವರಣಗೊಳ್ಳುತ್ತಿರಬಹುದು. ಬೌದ್ಧಿಕತೆಯ ಹಲವು ಸ್ತರಗಳಲ್ಲಿ ಬದುಕುತ್ತಿದ್ದ ಇವರು ಅಷ್ಟೇ ಭಾವುಕರೂ, ಖಾಸಗಿ ಸಂಗತಿಗಳ ಬಗ್ಗೆ ಕೊಂಚ ಎಚ್ಚರವುಳ್ಳವರೂ ಆಗಿದ್ದರು. ಕೊನೆಗೂ ತಮ್ಮ ವ್ಯಕ್ತಿತ್ವವನ್ನು ಸೀಳಿಕೊಂಡು ಬರುವ ಮಾತುಗಳಿಗೆ ಸುಮ್ಮನೆ ಸಾಕ್ಷಿಯಾಗಿದ್ದರು. ಬೌದ್ಧಿಕ ರಹಸ್ಯಗಳನ್ನೂ, ಜೀವನದ ರಹಸ್ಯಗಳನ್ನೂ ಪೋಣಿಸುತ್ತಿದ್ದರು. ತನ್ನ ತಾಯಿ ಮನೆ ಹೊರಗೆ ಹೋಗಲು ಅವಕಾಶವೇ ಇಲ್ಲದ ಸ್ಥಿತಿ, ತನ್ನ ಕಣ್ಣೆದುರೇ ತಾಯಿಯನ್ನು ಕೊಂದ ಅಪ್ಪ, ಸುಳ್ಳಿನ ಅಪಾದನೆ ಹೊತ್ತು ಜೈಲಿನಲ್ಲಿ ನರಳಿದ ಅಪ್ಪ, ಮುರಿದುಹೋದ ಸಂಬಂಧಗಳು, ಕಣ್ಣೆದುರೇ ನಾಶವಾದ ಹಳ್ಳಿಗಳು, ಇನ್ನೇನು ಮುಗಿದೇ ಹೋಯಿತು ಎಂದಾಗ ಕೈಹಿಡಿದ ಬರಹಗಳು ಹೀಗೆ ವಿಚಿತ್ರ ತಿರುಗಣಿಯಲ್ಲಿ ಸಿಲುಕಿದ್ದರು. ಅವರ ಈ ತೊಳಲಾಟಗಳು ಬದುಕಿನ ಗಹನತೆಯನ್ನೂ, ಸಾಹಿತ್ಯದ ಗಹನತೆಯನ್ನೂ ಒಟ್ಟಿಗೆ ಅರಿಯಲು ನೆರವಾಗುವಂಥವು. ಮನುಷ್ಯರ ಬಾಳಿನ ಜಿಜ್ಞಾಸೆ ಅವರ ಚಿಂತನೆಯ ಮೂಲ ಭಿತ್ತಿಯಾಗಿತ್ತು.

ಇವರೆಲ್ಲ ಸೃಜನಶೀಲ ಲೋಕವನ್ನು ಕಟ್ಟಿಕೊಂಡದ್ದು ಅಪಾರ ಸಂಘರ್ಷ ಮತ್ತು ತಳಮಳಗಳಿಂದ. ಈ ತಳಮಳಗಳೇ ಇವರ ಬರಹಗಳ ಆತ್ಮವಿಶ್ವಾಸವಾಗಿತ್ತು. ಈ ಲೋಕದ ವಾಸ್ತವ, ಪುರಾಣ ಲೋಕ, ಚರಿತ್ರೆಯ ಲೋಕ ಎಲ್ಲೆಡೆ ಅದೇ ಆತ್ಮವಿಶ್ವಾಸದಿಂದ ಸಾಗಬಲ್ಲವರಾಗಿದ್ದರು. ಅಲ್ಲಿನ ಪಾತ್ರ, ಕಲ್ಪನೆ, ಚಿಂತನೆಗಳನ್ನು ಹೊಸದಾಗಿ ಕಟೆದು ನಿಲ್ಲಿಸಿದ್ದರು. ತಮ್ಮ ಅಸ್ತಿತ್ವವನ್ನು ಹಲವು ನೆಲೆಗಳಲ್ಲಿ ಹುಡುಕುವುದು ಇವರೆಲ್ಲರಿಗೆ ಇಷ್ಟ. ಇವರಿಗೆ ಬರಹ ಮುಖವಾಡವಲ್ಲ, ಇದೇ ಮುಖ. ತಮ್ಮ ಸೃಜನಶೀಲತೆಯ ನಿಗೂಢ ಲೋಕಗಳಿಗೆ ತಾವೇ ಮಾಡಿದ ಮಾನಸಿಕ ಪಯಣವಿದು. ಬಹಳಷ್ಟು ಲೇಖಕರು ತಮ್ಮ ಬಾಲ್ಯದ ನೆನಪುಗಳಿಗೆ ಜಾರುತ್ತಿದ್ದರು. ಬಾಲ್ಯ, ಕಲಿಕೆ, ಆಘಾತ, ಸಂತೋಷ, ಸಂಬಂಧ, ಯಾರದೋ ಮಾರ್ಗದರ್ಶನ ಅವರ ಸೃಜನಶೀಲತೆಯ ಎಳೆಗಳನ್ನು ಪೋಷಿಸಿತ್ತು. ಬೆಳೆದಂತೆ ಬದುಕಿನ ಸಂಕೀರ್ಣ ಚಿತ್ರಗಳಿಗೆ ತಾತ್ವಿಕ ದ್ವಂದ್ವಗಳೂ ಸೇರಿ ಹೊಸ ನುಡಿಗಟ್ಟು ದಕ್ಕತೊಡಗಿತು.

ಇವರೆಲ್ಲ ತಮ್ಮ ಹಿರಿಯರಿಗಿಂತ ಭಿನ್ನ ದಾರಿ ತುಳಿಯಬೇಕೆಂಬ ಒತ್ತಡದಲ್ಲಿದ್ದಂತೆ ಕಂಡಿತ್ತು. ಇದು ಸಹಜ ಕೂಡ. ಹೀಗಾಗಿಯೇ ಈಗಾಗಲೇ ಇದ್ದ ಕ್ರಮಗಳನ್ನು ಪ್ರಶ್ನಿಸಿದರು. ಅನುಭವವನ್ನು ನಿರೂಪಿಸುವ, ಬೆಲೆ ಕಟ್ಟುವ ದಾರಿಗಳ ಜೊತೆ ತಾತ್ವಿಕ ಸಂಘರ್ಷಕ್ಕಿಳಿದರು. ತನ್ನ ವ್ಯಕ್ತಿತ್ವಕ್ಕೆ ತಕ್ಕುದಾದ ನುಡಿಗಟ್ಟನ್ನು ಕಂಡುಕೊಳ್ಳತೊಡಗಿದರು. ತನ್ನೊಳಗೆ ರೂಪುಗೊಳ್ಳುತ್ತಿದ್ದ ಹೊಸ ತಾತ್ವಿಕತೆಯನ್ನು ದಿಟ್ಟವಾಗಿ ಮಂಡಿಸಿದರು. ಇದಕ್ಕಾಗಿ ಅಪಾರವಾದ ಓದನ್ನೂ, ವಿಭಿನ್ನ ಜಗತ್ತುಗಳ ಸೈದ್ಧಾಂತಿಕ ತಿಳಿವಳಿಕೆಗಳನ್ನು ಅರಿಯತೊಡಗಿದ್ದರು. ಕೊಂಚ ಆಕ್ರಮಣಕಾರಿಯಾಗಿಯೂ, ಹಠದಿಂದಲೂ, ಆದರೆ ನೈತಿಕವಾಗಿ ತಮ್ಮ ವಾದವನ್ನು ಮಂಡಿಸುತ್ತಿರುವಂತೆ ಕಂಡರು. ತಮ್ಮ ನಂಬಿಕೆಗಳ ಲೋಕದಲ್ಲಿ ಬೇರೂರದೆ ಹೊಸಮಾತು ಸಾಧ್ಯವಿಲ್ಲವೇನೊ. ಲೋಕ ಒಪ್ಪಲಿ ಬಿಡಲಿ ಇದು ತನ್ನ ಮಾರ್ಗ ಎಂಬ ಖಚಿತತೆ ಅವರ ದನಿಯಲ್ಲಿತ್ತು. ಇದಕ್ಕೆ ಕೊಂಚ ಭಾವುಕತೆಯೂ, ಸೈದ್ಧಾಂತಿಕ ಬಿಗಿಪಟ್ಟೂ ಸೇರಿಕೊಂಡಿತ್ತು.

ಇವರ ಓದಿನ ವ್ಯಾಪಕತೆ ಅಚ್ಚರಿ ಉಂಟುಮಾಡಿತ್ತು. ಇದು ಕೇವಲ ಸಾಹಿತ್ಯ ಕೇಂದ್ರಿತವಾದ ಓದು ಆಗಿರಲಿಲ್ಲ. ಇತಿಹಾಸ, ತತ್ವಶಾಸ್ತ್ರ, ಕಾವ್ಯಮೀಮಾಂಸೆ, ಭಾಷಾಶಾಸ್ತ್ರ ಹಾಗೂ ಜಾಗತಿಕ ಕಲಾಚಿಂತನೆಗಳು ಇವರ ಓದಿನ ಕೇಂದ್ರದಲ್ಲಿದ್ದವು. ಇವರ ಯೋಚನಾ ಕ್ರಮ ಮತ್ತು ಅಭಿವ್ಯಕ್ತಿ ಕ್ರಮಗಳು ಇದರಿಂದ ವಿಶಿಷ್ಟ ಹೊಳಪು ಪಡೆದಿದ್ದವು. ಆಕರದ ಮೂಲ ರೂಪ ಇವರಲ್ಲಿ ಹೊಸ ಆಕಾರ ತಾಳಿತ್ತು. ಮೂಲ ಆಕರವೇ ಮರೆತು ಹೋಗುವಂತೆ. ಹಲವು ಕೃತಿಗಳು, ಸಮುದಾಯದ ಅನುಭವಗಳು ಅವರ ವ್ಯಕ್ತಿತ್ವದಲ್ಲಿ ಕರಗಿಹೋಗಿದ್ದವು. ತೊಡಗಿಕೊಳ್ಳುವ ಸುಖವನ್ನು ಇವರು ಬಲ್ಲವರಾಗಿದ್ದರು. ಅಪಾರ ಓದಿನ ಜೊತೆಗೆ ಜೀವನಾನುಭವ, ತಿರುಗಾಟ ಕೂಡ ಇವರ ಚಿಂತನೆಯನ್ನು ಪ್ರಭಾವಿಸಿದ್ದವು. ಕೆಲವರು ಚಳವಳಿಗಳಿಂದಲೂ ಪುಷ್ಟಿ ಪಡೆದಿದ್ದರು. ಬುದ್ಧಿಜೀವಗಳ ಒಡನಾಟ ಮಾತ್ರವಲ್ಲ, ಸಾಮಾನ್ಯರ ಒಡನಾಟದಿಂದಲೂ ದಕ್ಕಿದ ತಿಳಿವಳಿಕೆಯನ್ನು ತಾತ್ವಿಕವಾಗಿ ಮಂಡಿಸಿದರು. ಸಮುದಾಯದ ಕಥನಗಳ ಬಗ್ಗೆ ಇವರ ಆಸ್ಥೆ ಕೂಡ ದಟ್ಟವಾದದ್ದು. ತನ್ನ ಬರಹಕ್ಕೆ ಬೇಕಾದ ತ್ರಾಣವನ್ನು ಬುಡಕಟ್ಟು, ಹಳ್ಳಿ, ಕಾಡು, ಸ್ಮಾರಕಗಳಿಂದ ಪಡೆದುಕೊಂಡಿದ್ದರು. ತಿಳಿವಳಿಕೆಯ ಹಲವು ಲೋಕಗಳನ್ನು ನಂಬಿದ್ದರು.

ಬರಹ ಅವರಿಗೆ ಒಂದು ರೀತಿಯಲ್ಲಿ ಲೋಕದೊಂದಿಗೆ ನಡೆಸುವ ಸಂವಾದ, ಪ್ರತಿರೋಧ, ಭಿನ್ನಮತ ಮತ್ತು ಸಹ ಅಸ್ತಿತ್ವ ಕೂಡ. ಅವರಿಗೆ ಮಾತನಾಡಲು ಒಂದು ನೆಪ ಬೇಕಾಗಿತ್ತು. ಎಷ್ಟೋ ಸಲ ಪ್ರಶ್ನೆಗಳ ಅಗತ್ಯವೇ ಇಲ್ಲವೆಂಬಂತೆ ಕೆಲವರು ಮಾತನಾಡಿದರು. ಇದೂ ಒಂದರ್ಥದಲ್ಲಿ ಎಂದೆಂದೂ ಮುಗಿಯದ ಕತೆ. ಶ್ರೇಷ್ಠ ಸಂಗೀತಗಾರರು ತಮ್ಮ ಇಳಿವಯಸ್ಸಿನಲ್ಲಿ ತನ್ನಲ್ಲಿರುವ ರಾಗಗಳ ವಿನ್ಯಾಸವನ್ನು ಹಂಚಿಕೊಳ್ಳುವಂತೆ ಕೆಲವರು ಕಂಡುಬಂದರು. ಈ ಅನುಭವವನ್ನು ಬೆಲೆ ಕಟ್ಟಲು ಸಾಧ್ಯವೆ?

ಎದುರಿನವರು ಕೊಂಚ ವಿಚಲಿತರಾಗುವ ಪ್ರಶ್ನೆಗಳನ್ನು ಕೇಳಿದರೆ ಸಂವಾದ ವಿಭಿನ್ನ ದಾರಿ ಹಿಡಿಯುತ್ತಿತ್ತು. ಅವರನ್ನು ಕೊಂಚ ಇಕ್ಕಟ್ಟಿಗೆ ಸಿಲುಕಿಸುವ, ಉದ್ದೀಪಿಸುವ ಪ್ರಶ್ನೆಗಳನ್ನೂ ಕೇಳಿದೆ. ಈ ಪ್ರಚೋದನೆಗೆ ದಕ್ಕಿದ ಉತ್ತರಗಳು ಕೊಂಚ ಮುನಿಸಿಗೂ ಕಾರಣವಾಗುತ್ತಿದ್ದವು. ಆದರೆ ಹೊಮ್ಮಿದ ನೋಟಗಳು ಮಾತ್ರ ಇದೆಲ್ಲವನ್ನೂ ಮೀರಿದ್ದಾಗಿದ್ದವು. ಮನುಷ್ಯರ ಸಣ್ಣತನಗಳನ್ನು ಮೀರಿ ಸಾಹಿತ್ಯದ ನಿರೂಪಣೆಗಳು ಬೇರೆಯದೇ ಆದ ಸತ್ಯಗಳನ್ನು ನುಡಿದಿದ್ದವು. ಕೆಲವರಿಗೆ ಬದುಕಿನಲ್ಲಿ ದಕ್ಕದೇ ಇದ್ದುದು ಬರಹದಲ್ಲಿ ದಕ್ಕಿತ್ತು. ತಾನೇನೇ ಬರೆದರೂ ಈ ಬರಹದ ಆಚೆಯೇ ಉಳಿದುಬಿಡುವ ಹಲವು ಸಂಗತಿಗಳಿವೆ ಎಂಬುದನ್ನೂ ಅವರು ಬಲ್ಲವರಾಗಿದ್ದರು. ಇದನ್ನೆಲ್ಲ ಆಪ್ತ ಮಾತುಕತೆಗಳಲ್ಲಿ ಹಂಚಿಕೊಳ್ಳಲು ಒಂದು ಅವಕಾಶ ಒದಗಿತ್ತೇನೊ, ಜೊತೆಗೆ ತಾನು ಹಾದು ಬಂದ ದಾರಿಯನ್ನು ಮರುಪರಿಶೀಲಿಸಲು ಕಾರಣವಾಗಿತ್ತೇನೊ, ಅಥವಾ ಸರಿ ತಪ್ಪುಗಳಾಚೆ ಬರಹದೊಂದಿಗೆ ನಡೆಸಿದ ನೈತಿಕ ತಿಕ್ಕಾಟವನ್ನು ಕಾಣಿಸುವ ಉಮೇದೂ ಇತ್ತೇನೊ. ತನ್ನ ಪಯಣದ ಸುಖ, ಪಾಪಪ್ರಜ್ಞೆ, ತೊಳಲಾಟ, ವಿಸ್ಮಯಗಳು ಅವರ ಮಾತುಗಳಲ್ಲಿ ಹಾದುಹೋದವು. ಹೊಸ ದಾರಿ ಹುಡುಕುವ ಹಂಬಲ, ತನ್ನ ನಂಬಿಕೆಯ ಬುಡವನ್ನೇ ಅಲ್ಲಾಡಿಸಿಬಿಟ್ಟ ವಿಚಾರಗಳು, ಗುಂಪುಗಳ ಒತ್ತಡದಿಂದ ಪಾರಾಗುವ ಕನಸು, ಲೋಕದೊಂದಿಗೆ ಬೆಸೆದುಕೊಳ್ಳುವ ಅಭೀಪ್ಸೆ, ಏಕಾಂಗಿ ಪಯಣದಲ್ಲಿ ಹೊಳೆದ ಸತ್ಯಗಳು, ಲೋಕ ಒಪ್ಪದ ನಿಲುವುಗಳನ್ನು ಕಾಣಿಸಬೇಕೆಂಬ ನಿಷ್ಠುರತೆ, ಅವರ ಮಾತುಗಳು ಇವೆಲ್ಲದರ ಸಂಗಮವಾಗಿದ್ದವು.

ದಣಿವರಿಯದ ಇವರ ಹುಡುಕಾಟಗಳೇ ಇವರ ಶಕ್ತಿ. ಎಷ್ಟೇ ದೊಡ್ಡ ಸಿದ್ಧಾಂತವಿರಲಿ ಅದು ತನಗೆ ತಾಕದಿದ್ದರೆ ನಿರಾಕರಿಸಿದ್ದರು. ಅದರ ಮಿತಿಗಳನ್ನೂ ಬಲ್ಲವರಾಗಿದ್ದರು. ತನ್ನ ವ್ಯಕ್ತಿತ್ವಕ್ಕೆ ಹೊಂದದ ಮಾತುಗಳಿಂದ ಆದಷ್ಟು ಅಂತರ ಕಾಯ್ದುಕೊಂಡಿದ್ದರು. ಇತರೆ ಬರಹಗಾರರ ಕುರಿತು ಇವರು ಮಾಡಿದ ಟೀಕೆ ಟಿಪ್ಪಣಿಗಳು ಬರಹದ ಕುರಿತಾಗಿತ್ತೆ ಹೊರತು ವೈಯಕ್ತಿಕ ದಾಳಿಯಾಗಿರಲಿಲ್ಲ. ಬರಹಗಾರರ ಜಡತ್ವ, ಅಸೂಕ್ಷ್ಮತೆ ಅವರಿಗೆಲ್ಲಾ ಆತಂಕದ ವಿಷಯವಾಗಿತ್ತು. ಸಾಮಾನ್ಯವಾಗಿ ಕೆಲವರು ತಮ್ಮ ಸಮಕಾಲೀನ ಲೇಖಕರ ಬಗ್ಗೆ ಮಾತಾಡುವುದನ್ನು ತಪ್ಪಿಸಿಕೊಳ್ಳುತ್ತಿದ್ದರು. ಸಾಹಿತ್ಯ ವಲಯದಲ್ಲಿ ನಡೆಯುವ ಬೈನರಿ ಚರ್ಚೆಗಳಿಂದ ರೋಸಿಹೋಗಿದ್ದರು. ಹಿರಿಯರ ಕಾಣ್ಕೆಗಳನ್ನು ನೆನೆಯುತ್ತಲೇ ಅವರು ಹೊರೆಸಿದ ಭಾರವನ್ನು ಕಳಚಿಕೊಂಡಿದ್ದರು. ತಾವು ಕೆಲಸ ಮಾಡಿದ ಸ್ಥಳಗಳ ಬಗ್ಗೆ ಮಾತಾಡಲು ಹಿಂಜರಿಯುತ್ತಿದ್ದರು. ಅವೆಲ್ಲಾ ಬಹುತೇಕರಿಗೆ ಕಹಿ ಅನುಭವಗಳನ್ನು ಉಳಿಸಿದ್ದವು. ನಿಜಗೊಳ್ಳದ ಸಂಬಂಧಗಳು, ವೃತ್ತಿಪರ ಅಸೂಯೆಗಳು ಕೆಲವರನ್ನು ಹಿಂಡಿ ಹಿಪ್ಪೆ ಮಾಡಿದ್ದವು. ಈ ಬಿಕ್ಕಟ್ಟುಗಳನ್ನು ಎಲ್ಲಾ ಲೇಖಕರು ಒಂದಲ್ಲ ಒಂದು ಘಟ್ಟದಲ್ಲಿ ಎದುರಿಸಬೇಕಾದದ್ದು ಇಂಡಿಯಾದ ಸಂದರ್ಭದಲ್ಲಿ ಅನಿವಾರ್ಯವೇನೊ. ಅನೇಕರು ತಾವು ಕೆಲಸ ಮಾಡಿದ ವಿಶ್ವವಿದ್ಯಾಲಯಗಳಲ್ಲಿ ದ್ವೀಪದಂತೆ ಬದುಕಿ ಹೊರಗೆ ದೀಪವಾದರು. ಬಾಳಿನ ದುಃಖಗಳು, ವೃತ್ತಿಯ ದುಃಖಗಳು ಅವರನ್ನು ಕುಗ್ಗಿಸಲಿಲ್ಲ. ಹೊಸ ಹೊಸ ಪ್ರಯೋಗಕ್ಕೆ ಇಳಿಯುವಂತೆ ಮಾಡಿದವು. ಅಲ್ಲಿನ ಕೊರತೆಗಳನ್ನು ಮೀರುವಂತೆ ಬರಹಗಳಲ್ಲಿ ತೊಡಗಿಕೊಂಡರೆನಿಸುತ್ತದೆ.

ಓದುಗರ ಪೂರ್ವಗ್ರಹಗಳನ್ನು ಒಡೆಯಲು ಬರಹ ಇವರಿಗೆ ಒಂದು ದಾರಿಯಾಗಿತ್ತು. ಜೊತೆಗೆ ತನ್ನ ಪೂರ್ವಗ್ರಹಗಳನ್ನು ಕೂಡ. ಓದುಗರಿಗೆ ಪಠ್ಯದ ಸತ್ಯಗಳನ್ನು ಹೇಳುವುದು ಒಂದು ಕಡೆಯಾದರೆ, ಓದುಗರೇ ಪಠ್ಯಗಳನ್ನು ಕಂಡುಕೊಳ್ಳಲು ಕೆಲ ಸೂಚನೆಗಳನ್ನು ಒದಗಿಸುವುದು ಇನ್ನೊಂದು ಕಡೆ. ತಮಗೆ ಗೊತ್ತಿರುವ ಅರ್ಥಗಳಿಗೆ ಪಠ್ಯಗಳನ್ನು ಮಣಿಸುವುದಲ್ಲ, ಕೃತಿಯೇ ಕಾಣಿಸುತ್ತಿರುವ.. ಭಾಷೆಯಲ್ಲಿ ದಕ್ಕುತ್ತಿರುವ ಅರ್ಥದ ಸ್ತರಗಳನ್ನು ಕಂಡುಕೊಳ್ಳುವುದು. ತನ್ನೆಲ್ಲಾ ಬೌದ್ಧಿಕ ಸಿದ್ಧತೆಗಳನ್ನು ಬಳಸಿಯೂ, ಕೃತಿಯ ಆಂತರ್ಯಕ್ಕೆ ಕಿವಿಗೊಟ್ಟು ತಾನು ಕಲಿತ ಶಾಸ್ತ್ರಾರ್ಥಗಳನ್ನು ತ್ಯಜಿಸುವುದೂ ಇವರ ಓದಿನ ಮಾದರಿಗಳಲ್ಲಿ ಒಂದಾಗಿತ್ತು. ಸಾಹಿತ್ಯದಲ್ಲಿ ಮಾತ್ರ ಇದು ಸಾಧ್ಯ, ರೂಪಕ ಪ್ರತಿಮೆಗಳಲ್ಲಿ ಮಾತ್ರ ಇದು ಸಾಧ್ಯ, ಭಾಷೆಯಲ್ಲಿ ಮಾತ್ರ ಇದು ಸಾಧ್ಯ ಎಂಬ ಅಸಲಿ ತಾಣಗಳ ಹುಡುಕಾಟವಿದು. ಕೆಲ ಕಾಲದ ನಂತರ ಈ ತಾಣಗಳೂ ಬದಲಾಗಬಹುದು. ಕೃತಿಯ ಭಾಷೆ, ಲೋಕದ ಭಾಷೆ ಹೊಸ ತಾಣಗಳನ್ನು ತೋರಬಹುದು ಅಥವಾ ಹಳೆಯ ತಾಣಗಳು ಇನ್ನಷ್ಟು ವಿಸ್ತಾರಗೊಳ್ಳಬಹುದು ಎಂಬ ನಂಬಿಕೆಯಲ್ಲಿದ್ದರು.

ಈಗಾಗಲೇ ಜನಮಾನಸದಲ್ಲಿ ನೆಲೆಸಿರುವ ಸಂಸ್ಕೃತಿಯ ಹಲವು ನಿರೂಪಣೆಗಳು ಇವರ ಚರ್ಚೆಗಳಲ್ಲಿ ತಿರುವು ಮುರುವಾಗಿದ್ದವು. ಸಂಸ್ಕೃತಿಯೊಂದಕ್ಕೆ ಅಂಟಿಕೊಂಡಿದ್ದ ಸೀಮಿತ ವ್ಯಾಖ್ಯಾನಗಳು ದೂರ ಸರಿದಿದ್ದವು. ಅವರು ಹೊಸ ಆಕರಗಳನ್ನು ಹುಡುಕಿದ್ದರು, ಅಲ್ಲದೆ, ಇರುವ ಆಕರವನ್ನೇ ಹೊಸ ನೆಲೆಯಲ್ಲಿ ಓದಿದ್ದರು. ಈಗ ಇರುವ ಸಂಸ್ಕೃತಿಯಲ್ಲ, ಸದಾ ಆಗುವ ಸಂಸ್ಕೃತಿಯ ಬಗ್ಗೆ ಆಸ್ಥೆ ಹೊಂದಿದ್ದರು. ಸಂಸ್ಕೃತಿಯ ಚರ್ಚೆಯಲ್ಲಿ ದೂರವಿದ್ದ ಕೆಲ ಸಮುದಾಯಗಳು, ಪಠ್ಯಗಳು ಈಗ ಚರ್ಚೆಯ ಕೇಂದ್ರಕ್ಕೆ ಬಂದಿದ್ದವು. ಕರ್ನಾಟಕ ಸಂಸ್ಕೃತಿಯನ್ನು, ಭಾರತೀಯ ಸಂಸ್ಕೃತಿಯನ್ನು ಅರಿಯುವ ಹೊಸ ನೆಲೆಗಳು ಅವರ ಓದಿನಲ್ಲಿ ಬೆರೆತುಕೊಂಡಿದ್ದವು. ಅವರು ತಮಗೆ ತಾವೇ ಕೇಳಿಕೊಂಡ ಪ್ರಶ್ನೆಗಳು ಹಲವು: ಬರಹವೊಂದು ಯಾಕೆ ನಮ್ಮನ್ನು ಚೈತನ್ಯಶೀಲರಾಗಿಸುತ್ತದೆ? ಕಾವ್ಯ ಮತ್ತು ಗದ್ಯ ನಮ್ಮನ್ನು ಉದ್ದೀಪಿಸುವಂತೆ ವಿಮರ್ಶೆ ಕೂಡ ಉದ್ದೀಪಿಸಬಲ್ಲದೆ? ಸಂಶೋಧನೆಯ ಚೈತನ್ಯ ಎಲ್ಲಿದೆ? ಕಾವ್ಯ ಮತ್ತು ಗದ್ಯ ಕೊಡುವ ಅನುಭವಕ್ಕೆ ಮೀರಿದ ಅನುಭವ ವಿಮರ್ಶೆ ಕೊಡಬಹುದೆ? ಕಾದಂಬರಿಯೊಂದು ಜೀವನದ ರಹಸ್ಯ ಬಿಚ್ಚಿಡುವಂತೆ, ವಿಮರ್ಶೆಯೂ ಕಾದಂಬರಿಯ ರಹಸ್ಯವನ್ನು ಬಿಚ್ಚಿಡಬಹುದೆ? ಜೀವನದ ಪ್ರವಾಹವನ್ನು ಕಾವ್ಯ, ಕಾದಂಬರಿ, ನಾಟಕಗಳು ಹಿಡಿದಿಟ್ಟರೆ, ಕೃತಿಗಳಲ್ಲಿ ಪ್ರವಹಿಸಿದ ಜೀವನದ ಹೊಸ ಪ್ರವಾಹವನ್ನು ವಿಮರ್ಶೆ ಹಿಡಿದಿಡುವುದು ಕಡಿಮೆ ಸಾಧನೆ ಹೇಗಾಗುತ್ತದೆ? ಸೈದ್ಧಾಂತಿಕ ಮಾದರಿಗಳ ಉಪಯುಕ್ತತೆ ಏನು? ಸೈದ್ಧಾಂತಿಕ ಮಾದರಿಗಳನ್ನು ಅನ್ವಯಿಸಿ ಕೃತಿಗಳನ್ನು ಓದುವಂತೆ, ಶ್ರೇಷ್ಠ ಸೃಜನಶೀಲ ಕೃತಿಗಳಿಂದ ಸೈದ್ಧಾಂತಿಕ ಮಾದರಿಗಳನ್ನು ಪುನರ್‌ಪರಿಶೀಲಿಸಬಹುದೆ? ಜೀವನದ ಅನುಭವಗಳು, ಕಲಾನುಭವಗಳಾದಾಗ ಏನಾಗುವುದು? ಸೃಜನಶೀಲತೆಯ ಬೆಂಕಿಯಲ್ಲಿ ಹದವಾಗುವ ಅನುಭವಗಳ ಪರಿಣಾಮಗಳೇನು? ಅಥವಾ ಇದರ ಬೆಂಕಿಯಲ್ಲಿ ಸುಟ್ಟು ತನ್ನ ಅಸ್ತಿತ್ವವನ್ನು ಕುಗ್ಗಿಸಿಕೊಳ್ಳುವ ಅನುಭವಗಳ ಪರಿಣಾಮ ಏನು? ಕಾಮಕ್ಕೂ ಸೃಜನಶೀಲತೆಗೂ ಇರುವ ಸಂಬಂಧ ಯಾವ ಬಗೆಯದು? ಸಮುದಾಯದಿಂದ ಏನನ್ನು ಕಲಿಯಬೇಕು? ಇಂಥ ಹಲವು ಪ್ರಶ್ನೆಗಳ ಸಿಕ್ಕುವಿನಲ್ಲಿ ಯೋಚಿಸುತ್ತಿದ್ದರು.

ಇವರ ಯೋಚನೆಯ ತುದಿಯಲ್ಲಿ ಕೆಲ ನಿಲುವುಗಳು ಗೋಚರಿಸುತ್ತಿದ್ದವು: ಅದರಲ್ಲಿ ನನಗೆ ಮುಖ್ಯವಾಗಿ ಕಂಡದ್ದು ಯಾವುದೇ ಮಹತ್ವದ ಕೃತಿಯ ರಹಸ್ಯ ಕೊನೆಯವರೆಗೂ ರಹಸ್ಯವಾಗಿಯೇ ಉಳಿಯುವುದಿಲ್ಲ, ವಿಮರ್ಶೆಯ ಯಾವುದೋ ಒಂದು ಓದಿನ ಕ್ರಮಕ್ಕೆ ಅದು ತೆರೆದುಕೊಳ್ಳುತ್ತದೆ ಎನ್ನುವ ಪ್ರಜ್ಞೆ. ಆ ರಹಸ್ಯವನ್ನು ಒಡೆಯುವ ದಾರಿಯೊಂದು ಆ ಕೃತಿಯಲ್ಲಿಯೇ ಇರುತ್ತದೆ. ಸಾವಿರಾರು ಸತ್ಯಗಳಿರುವ ಈ ಜಗತ್ತಿನಲ್ಲಿ ಕೃತಿಯ ಅನುಭವ ತನಗೆ ಬೇಕಾದ ಸತ್ಯವನ್ನು ಭಾಷೆಯಲ್ಲಿ ಅಡಗಿಸಿಟ್ಟುಕೊಂಡಿರುತ್ತದೆ. ಅಥವಾ ಅದು ಹೊಸದೇ ಸತ್ಯವನ್ನು ಹೇಳಬಹುದು. ಕೃತಿಯೊಂದರ ಮಾತುಗಳ ಮೂಲಕ ಅಲ್ಲಿನ ಮೌನವನ್ನೂ ತಲುಪಲು ಸಾಧ್ಯವಾದರೆ ಮಾತ್ರ ಅದು ಯಶಸ್ವಿಯಾದ ಓದು. ಅಲ್ಲಿ ಕಥಿಸಲ್ಪಟ್ಟ ಲೋಕದಂತೆಯೇ, ಕಥಿಸಲು ಸಾಧ್ಯವಾಗದ ಲೋಕವೂ ಇದೆ. ಎರಡೂ ಒಂದರೊಳಗೊಂದು ಬೆರೆತಿವೆ.

ಇಲ್ಲಿನ ಮಾತುಕತೆಗಳಲ್ಲಿ ಸೃಜನಶೀಲತೆಗೆ ಒದಗಿರುವ ಅಪಾಯಗಳ ಕುರಿತ ಚರ್ಚೆ ಕೂಡ ಇದೆ. ಸಾಮಾಜಿಕವಾಗಿ ಅಪ್ರಸ್ತುತವಾಗುವ ಭಯ ಇಪ್ಪತ್ತೊಂದನೇ ಶತಮಾನದ ಲೇಖಕರಿಗೆ ಯಾಕಿಷ್ಟು ಕಾಡುತ್ತಿದೆ? ಸಾಮಾಜಿಕ ಸಂಗತಿಗಳಿಗೆ ದಿಢೀರಾಗಿ ಸ್ಪಂದಿಸುವ ಸಾಹಿತ್ಯದ ಸ್ವರೂಪ ಎಂಥದ್ದು? ತಮ್ಮ ರಾಜಕೀಯ ಪ್ರಜ್ಞೆಯನ್ನು ಪ್ರಕಟಿಸಲೇಬೇಕಾದ ಒತ್ತಡದಲ್ಲಿ ಲೇಖಕರು ಸಿಲುಕಿದ್ದಾರೆಯೆ? ಅವಸರದ ತೀರ್ಮಾನ ಧಾಟಿಯ ವಿಮರ್ಶೆಗಳು ಚರ್ಚೆಗಳನ್ನು ಅಳ್ಳಕಗೊಳಿಸಿವೆಯೆ? ಸಾಹಿತ್ಯದ ಪ್ರಸ್ತುತತೆಯನ್ನು ನಿರ್ವಹಿಸುತ್ತಿರುವ ಕ್ರಮ ಸೂಕ್ಷ್ಮವಾಗಿದೆಯೆ? ಇಂಥ ಪ್ರಶ್ನೆಗಳು ಅನೇಕ ಬರಹಗಾರರನ್ನು ಕಾಡಿವೆ. ಸಾಮಾಜಿಕ ಶೋಷಣೆ, ಮಾರುಕಟ್ಟೆಯ ಮೋಸ, ಧಾರ್ಮಿಕ ಹಿಂಸೆ, ರಾಜಕೀಯ ಪಕ್ಷಗಳ ಕುಟಿಲತೆಗೆ ಒದಗಿಬರಬೇಕಾದ ಹೊಸ ನುಡಿಗಟ್ಟುಗಳ ಬಗ್ಗೆಯೂ ಚಿಂತಿತರಾಗಿದ್ದರು. ಸೃಜನಶೀಲತೆ ಎದುರಿಸಬೇಕಾದ ಸವಾಲುಗಳ ಬಗ್ಗೆ ಅವರಿಗೆ ದೂರದೃಷ್ಟಿಯ ನಿಲುವುಗಳಿದ್ದವು. ಕೆಲವರು ಶಬ್ದ–ಅರ್ಥ–ಅನುಭವಗಳ ನಡುವಿನ ಸಂಬಂಧವನ್ನು ವ್ಯಾಖ್ಯಾನಿಸಿದರು. ಅರ್ಥ ವಾಸ್ತವವೊ, ಅಮೂರ್ತವೊ?, ಪ್ರಾಚೀನವೊ, ಆಧುನಿಕವೊ? ಪರಂಪರೆಯದೊ, ವರ್ತಮಾನದ್ದೊ?, ಲೇಖಕರದ್ದೊ, ಓದುಗರದ್ದೊ? ಓದುಗರ ಆಂತರ್ಯದಲ್ಲಿ ಹೊಳೆಯುವ ಅರ್ಥವೊ? ಪ್ರತಿ ಓದಿನಲ್ಲಿ ಸಂಭವಿಸುವ ಅರ್ಥವೊ? ಶಬ್ದಗಳ ಅರ್ಥ ಎಲ್ಲರಿಗೂ ಪರಿಚಿತವೆ. ವಾಸ್ತವದಲ್ಲಿ ಅದಕ್ಕೆ ಬೇರೆ ಬೇರೆ ಅರ್ಥಗಳಿವೆ. ಅವು ಪದ್ಯ ಮತ್ತು ಗದ್ಯದಲ್ಲಿ ಬಂದಾಗ ಅವುಗಳ ಅರ್ಥದ ಸ್ತರಗಳು ಇನ್ನೂ ಬದಲಾಗುತ್ತವೆ. ಬೇರೆ ಬೇರೆ ಪದಗಳ ಸಂಯೋಜನೆಯಿಂದ ಅಲ್ಲೊಂದು ಹೊಸ ಅರ್ಥವೇ ಸಂಭವಿಸುತ್ತದೆ. ಇದೇ ಸೃಜನಶೀಲತೆಯ ವಿಸ್ಮಯ. ನಮಗೆ ಪರಿಚಿತವಾಗಿರುವ ಶಬ್ದಗಳು ಕೂಡ ಸಂಯೋಜನೆಯಲ್ಲಿ ಅಪರಿಚಿತವೆನಿಸುತ್ತವೆ. ಒಟ್ಟು ಸಂದರ್ಭದಲ್ಲಿ ಇನ್ನೊಂದು ಅರ್ಥವನ್ನೇ ಧರಿಸಿ ನಿಂತಿರುತ್ತವೆ. ನಮ್ಮ ಈವರೆಗಿನ ಅರ್ಥಗಳನ್ನು ತಲೆಕೆಳಗು ಮಾಡಿಬಿಡುತ್ತವೆ. ಇದು ಕೇವಲ ಅರ್ಥಕ್ಕೆ ಸಂಬಂಧಿಸಿದ ಸಂಗತಿ ಮಾತ್ರವಲ್ಲ. ಇನ್ನೊಂದು ಹೊಸ ಅನುಭವ ಬಂದು ಸೇರುವ ಗಳಿಗೆ ಕೂಡ. ಈಗಿರುವ ಅನುಭವಗಳಿಗೆ ಹೊಸ ದೃಷ್ಟಿ ಕಲ್ಪಿಸುವ ರೀತಿ ಕೂಡ. ಮನುಷ್ಯರು ತಮ್ಮ ಅಸ್ತಿತ್ವವನ್ನೇ ಮರು ರಚಿಸಿಕೊಳ್ಳುವ ಹಂಬಲ ಕೂಡ. ಶಬ್ದ ಅರ್ಥಗಳ ಸಂಬಂಧ ಸಂಕೀರ್ಣವಾದದ್ದು. ಇದಕ್ಕೆ ಕೇವಲ ಸಾಹಿತ್ಯದ ಮುಖಗಳು ಮಾತ್ರವಿರುವುದಿಲ್ಲ.



ಇವರಿಗೆ ಕೆಲವು ಆಕ್ಷೇಪಗಳು ಕೂಡ ಇದ್ದವು: ಕನ್ನಡ ವಿಮರ್ಶೆ ಕೃತಿಯೊಂದರ ಬಹುಮುಖಗಳನ್ನು ನೋಡಲು ಅನೇಕ ಸಲ ಹಿಂದೇಟು ಹಾಕಿದ್ದು, ಒಂದೊಂದೇ ಮುಖಗಳನ್ನು ಢಾಳಾಗಿ ಕಾಣಿಸಿ ಕೃತಿಗಳನ್ನು ಸೀಮಿತ ದೃಷ್ಟಿಕೋನಗಳಿಗೆ ನೇತುಹಾಕಿದ್ದು, ಕೃತಿಯನ್ನು ಯಾವುದಾದರೊಂದು ಗುಂಪಿಗೆ ಅನ್ವಯಿಸುವ ಆತುರ, ಕನ್ನಡ ವಿಮರ್ಶೆಯ ಇಂಥ ಜಡಬಿಂದುಗಳ ಕಡೆ ಅನೇಕರು ಬೆರಳು ಮಾಡಿದರು. ಕೃತಿಯ ಸ್ವಾತಂತ್ರ್ಯವನ್ನೂ, ವಿಮರ್ಶೆಯ ಸ್ವಾತಂತ್ರ್ಯವನ್ನೂ ಏಕಕಾಲಕ್ಕೆ ಒಪ್ಪಿಕೊಂಡಾಗಲೇ ಇವುಗಳ ನಡುವೆ ಸಂವಾದ ಸಾಧ್ಯ. ಒಂದು ಇನ್ನೊಂದರ ಅಧೀನವಾದರೆ ಚರ್ಚೆಯ ದಿಕ್ಕು ತಪ್ಪುವ ಸಾಧ್ಯತೆಗಳೇ ಹೆಚ್ಚು. ವಿಮರ್ಶಕರು ಸಿದ್ಧತೆಯಿಂದಲೇ ಪಠ್ಯವೊಂದಕ್ಕೆ ಪ್ರವೇಶಿಸಬೇಕು ಎಂಬುದೇನೊ ನಿಜ. ಇದುವರೆಗಿನ ಓದು, ಸೈದ್ಧಾಂತಿಕ ತಿಳಿವಳಿಕೆಗಳ ಮೂಲಕವೇ ಪ್ರವೇಶಿಸಬೇಕು, ಬೇರೆ ದಾರಿಯಿಲ್ಲ. ಆದರೆ ತನ್ನ ಸಿದ್ಧತೆ ಒಮ್ಮೊಮ್ಮೆ ಸಫಲವಾಗಲಿಕ್ಕಿಲ್ಲ ಎಂಬ ಎಚ್ಚರವೂ ಇರಬೇಕು. ಯಾವ ಸಂಕೋಚ, ಹಿಂಜರಿಕೆಗಳಿಲ್ಲದೆ ನಮ್ಮನ್ನು ಹೊಸ ಓದಿಗೆ ಸಜ್ಜುಗೊಳಿಸುವ ಕ್ಷಣಗಳನ್ನು ಮುಕ್ತವಾಗಿ ಸ್ವೀಕರಿಸಬೇಕು. ಇದರಿಂದ ಸವೆದ ದಾರಿಗಳನ್ನು ಬಿಟ್ಟು ಹೊಸ ದಾರಿಗಳೆಡೆಗೆ ಸಾಗಲು ಅನುಕೂಲವಾಗುತ್ತದೆ.

ಜೊತೆಗೆ ಅಭಿವ್ಯಕ್ತಿಯ ಸಂಕಟಗಳ ಕುರಿತು ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾದವು. ಸಂವಾದ ರಹಿತ ಸ್ಥಿತಿಗಳ ಬಗ್ಗೆ ಆತಂಕಿತರಾಗಿದ್ದರು. ಇದು ಕೇವಲ ಸಾಹಿತ್ಯಿಕ ಪ್ರಶ್ನೆ ಮಾತ್ರವಲ್ಲ, ಸಾಂಸ್ಕೃತಿಕ ಬಿಕ್ಕಟ್ಟು ಕೂಡ ಹೌದು ಎಂಬುದನ್ನು ಹಲಬಗೆಯಲ್ಲಿ ಕಾಣಿಸಿದರು. ಈ ಸಂವಾದ ರಹಿತ ಸ್ಥಿತಿ ಅಂತಿಮವಾಗಿ ಜಡವಾದ, ವಿಚಾರಶೂನ್ಯ ಹಾಗೂ ನೈತಿಕ ನಿಷ್ಫಲತೆಯನ್ನು ಪೋಷಿಸುತ್ತದೆ. ಸೂಕ್ಷ್ಮ ಪ್ರಶ್ನೆಗಳನ್ನು ಎತ್ತದ ಸಮಾಜ ಮಾರುಕಟ್ಟೆ ಪ್ರೇರಿತ ಸಾಹಿತ್ಯ ಮತ್ತು ಸಮಾಜವನ್ನು ನಿರ್ಮಿಸುತ್ತದೆ. ಇದೆಲ್ಲವೂ ಒಂದು ಸರ್ವಾಧಿಕಾರಿ ರಾಜಕೀಯ ವರ್ತುಲಕ್ಕೆ ಕಾರಣವಾಗುತ್ತದೆ. ಪಕ್ಷದ ಹಿತಾಸಕ್ತಿಗಳು ಮುಖ್ಯವಾಗಿ ಸಮಾಜದ ಹಿತಾಸಕ್ತಿಗಳು ಹಿನ್ನೆಲೆಗೆ ಸರಿಯುತ್ತವೆ. ಅದರಲ್ಲೂ ಬಡ ಸಮುದಾಯಗಳು ನಲುಗುತ್ತವೆ. ದಿಕ್ಕು ತೋಚದೆ ಹಿಂಸೆಗಿಳಿಯುತ್ತವೆ. ಅತಂತ್ರತೆ ಒಂದು ದೇಶದ ಲಕ್ಷಣವಾಗಿಬಿಡುತ್ತದೆ. ಇಂಥ ವಿಷವರ್ತುಲಗಳನ್ನು ದಾಟಲು ಬೇಕಾದ ವಿಚಾರಗಳನ್ನು ರೂಪಿಸುವುದು ಹೇಗೆ? ಅಥವಾ ಈಗಾಗಲೇ ರೂಪುಗೊಂಡಿರುವ ವಿಚಾರಗಳ ಅಪವ್ಯಾಖ್ಯಾನ ತಡೆಗಟ್ಟುವುದು ಹೇಗೆ? ಅಥವಾ ಇಂಥ ವಿಕ್ಷಿಪ್ತ ಜಗತ್ತನ್ನು ಕಲೆ ಎದುರಿಸುವುದು ಹೇಗೆ? ಎಂಬ ಪ್ರಶ್ನೆಗಳು ಕೂಡ ಅವರ ಚರ್ಚೆಯ ಕೇಂದ್ರದಲ್ಲಿದ್ದವು. ಬರಹದೊಳಗೆ ಹುಟ್ಟುವ ವೈಚಾರಿಕ ಭಿನ್ನಾಭಿಪ್ರಾಯವನ್ನು, ಇನ್ನೊಂದು ಬರಹದ ಮೂಲಕವೇ ಬಗೆಹರಿಸಿಕೊಳ್ಳಬೇಕು. ತಾತ್ವಿಕ ಭಿನ್ನಾಭಿಪ್ರಾಯವಿಲ್ಲದ ಸಮಾಜ ಒಂದು ಜಡ ಸಮಾಜ. ಈ ತಾತ್ವಿಕ ಭಿನ್ನಾಭಿಪ್ರಾಯ ವ್ಯಕ್ತಿಗಳ ಮೇಲಿನ ದ್ವೇಷಕ್ಕೆ ಕಾರಣವಾದರೆ ಅದು ಪ್ರಬುದ್ಧ ಸಮಾಜದ ಲಕ್ಷಣವಲ್ಲ. ಇದು ಕೇವಲ ಭಾಷೆಯ ಪ್ರಶ್ನೆ ಮಾತ್ರವಲ್ಲ, ಒಂದು ಸಂಸ್ಕೃತಿಯ ಸೂಕ್ಷ್ಮತೆಯ ಪ್ರಶ್ನೆ ಕೂಡ ಹೌದು. ಭಿನ್ನಾಭಿಪ್ರಾಯಗಳನ್ನು ಸ್ವೀಕರಿಸುವ ಕ್ರಮಗಳು ದಿಕ್ಕುತಪ್ಪಿದಾಗ ಆ ಸಮಾಜ ಕೂಡ ದಿಕ್ಕು ತಪ್ಪುತ್ತದೆ. ನ್ಯಾಯದ ಯಾವ ನಿರೀಕ್ಷೆಯೂ ಇಲ್ಲದೆ ಚರ್ಚೆ ಅಡ್ಡಾದಿಡ್ಡಿ ಬೆಳೆಯುತ್ತದೆ. ಸರಿಯಾದ ದಾರಿಯಲ್ಲಿದ್ದಾಗ ಭಾಷೆಯೂ ಬೆಳೆಯುತ್ತದೆ, ಸಂಸ್ಕೃತಿಯೂ ವಿಕಾಸಗೊಳ್ಳುತ್ತದೆ. ಪ್ರಶ್ನೆ, ವಿರೋಧ, ಭಿನ್ನಮತ, ಅಸಮ್ಮತಿ ಒಂದು ವಿಮರ್ಶಾ ವಲಯದ ಸೌಂದರ್ಯಕ್ಕೆ ಸಾಕ್ಷಿಯೆಂದು ಎಲ್ಲರೂ ಭಾವಿಸಿದ್ದರು. ಅದು ಸಮಾಜದ ಸೌಂದರ್ಯ ಕೂಡ ಎಂದು ವಿಸ್ತರಿಸಿದ್ದರು.

ಅವರಲ್ಲಿ ಸಾಹಿತ್ಯ ವಿಮರ್ಶೆ ಟೊಳ್ಳಾಗದಂತೆ ಮುನ್ನಡೆಸುವ ಎಚ್ಚರಗಳಿದ್ದವು. ವಿತಂಡವಾದ ಅಂತಿಮವಾಗಿ ವಿಮರ್ಶಾ ವಿವೇಕಕ್ಕೆ ಹಾನಿ ಉಂಟುಮಾಡುತ್ತದೆ ಎಂಬ ವಿವೇಕವಿತ್ತು. ವಿಮರ್ಶಾ ಸಂಸ್ಕೃತಿಯ ಬಿಕ್ಕಟ್ಟುಗಳನ್ನು ಅವರು ಬಲ್ಲವರಾಗಿದ್ದರು. ತಮ್ಮ ವಾದಗಳು ತಮಗೇ ಬಂಧನವಾಗದಂತೆ ನಿರ್ವಹಿಸುವ ಜಾಣತನವೂ ಇತ್ತು. ಸಾಮಾಜಿಕ ಅಸಹಿಷ್ಣುತೆ ವಿಮರ್ಶೆಯಲ್ಲೂ ನುಸುಳುತ್ತಿರುವ ಅಪಾಯವನ್ನು ಮನಗಂಡಿದ್ದರು. ಭಾರತದಲ್ಲಿ ಖಂಡನೆ ಮತ್ತು ಮಂಡನೆಗಳಿಗೆ ದೊಡ್ಡ ಪರಂಪರೆಯೇ ಇದೆ. ಇಂಥ ವಾದ ಪ್ರತಿವಾದಗಳ ಸಂವಾದ ಸರಣಿ ತುಂಡಾಗದಂತೆ ಕಾಪಾಡಿಕೊಳ್ಳುವ ಕಾಳಜಿಗಳು ದಟ್ಟವಾಗಿದ್ದವು. ಒಟ್ಟು ಸಾಹಿತ್ಯಿಕ ವಾತಾವರಣದ ಬಗ್ಗೆ ಕೊಂಚ ಹತಾಶೆಯೂ ಆದರೆ ಅಪಾರವಾದ ಭರವಸೆಯೂ ಇತ್ತು. ಓದುಗರ ತಿಳುವಳಿಕೆಯ ಸ್ತರಗಳನ್ನು ಕುಗ್ಗಿಸುವ ಬರಹಗಳ ಬಗ್ಗೆ ನೈತಿಕ ಸಿಟ್ಟಿತ್ತು. ಈ ನೈತಿಕ ಸಿಟ್ಟು ಅವರನ್ನು ಸಿನಿಕರನ್ನಾಗಿ ಮಾಡಲಿಲ್ಲ. ಅವರೆಲ್ಲಾ ನಿರಾಶೆಯ ಕಾಲದ ಕರ್ತವ್ಯಗಳನ್ನು ಮಾಡತೊಡಗಿದ್ದರು. ಸಾಹಿತ್ಯ ಚಿಂತನೆ, ಸಂಸ್ಕೃತಿ ಚಿಂತನೆಯ ಹೊಸ ಕಾಲದ ನೋಟಗಳನ್ನು ಮುಂದಿನ ತಲೆಮಾರಿಗೆ ದಾಟಿಸುವ ದಾರಿಗಳನ್ನು ಗಂಭೀರವಾಗಿ ಹುಡುಕುತ್ತಿದ್ದರು. ಇವರ ಚಿಂತನೆಗಳು ಹೊಸ ತಲೆಮಾರನ್ನು ಮುನ್ನಡೆಸಬಹುದು. ಇಂಥ ದಾರಿಗಳೆಡೆಗೆ ಹೊಸಬರು ಕಣ್ಣು ಹೊರಳಿಸಿ ನೋಡುವಂತಾಗಲಿ. ಯಾಕೆಂದರೆ ಈ ಮಾತುಕತೆಗಳಲ್ಲಿ ಹೊಸ ತಲೆಮಾರಿನ ದಾಹವನ್ನು ಉತ್ತೇಜಿಸುವ ಅಂಶಗಳಿವೆ. ಜೊತೆಗೆ ನಮ್ಮ ದಾಹವನ್ನು ನೀಗಿಸಿಕೊಳ್ಳಲು ಬೇಕಾದ ನೀರಿನ ಒರತೆಗಳನ್ನು ನಾವೇ ಹುಡುಕಿಕೊಳ್ಳಬೇಕೆಂಬ ಸೂಚನೆಗಳೂ ಇವೆ. ಹೊಸ ತಲೆಮಾರಿಗೆ ಹಿರಿಯರ ಅನುಭವಗಳು ದಾರಿಯೂ ಹೌದು, ದಾಟಬೇಕಾದ ಸೀಮೆಗಳೂ ಹೌದು. ಈ ಎಚ್ಚರವೇ ಇಲ್ಲಿನ ಸಂದರ್ಶನಗಳ ಆಂತರ್ಯದ ದನಿ. ಹಿರಿಯರ ದಾರಿಯನ್ನು ಎಳೆಯರು ವಿಸ್ತರಿಸಬಹುದು ಅಥವಾ ನಿರಾಕರಿಸಿ ತಮ್ಮದೇ ದಾರಿ ಕಂಡುಕೊಳ್ಳಬಹುದು. ಅವರು ಹೇಗೆ ಮಾಡಿದರೂ ಅದು ಬರಹಕ್ಕೆ ಸಲ್ಲುವ ಹೊಸ ಸತ್ವವೇ ಆಗಿರುತ್ತದೆ.

ಅಪ್ಪಯ್ಯ ಮಾಡಿದ ಉಪ್ಪಿಟ್ಟು



ಪುಸ್ತಕ: ರಾಧಾಕೃಷ್ಣ ಅಡಿಗ: ಇಡ್ಲಿ ಕಾಫಿ ಪರಂಪರೆ - ಪಯಣ
ನಿರೂಪಣೆ: ವಿನಾಯಕ ಭಟ್ ತದ್ದಲಸೆ
ಪ್ರಕಾಶನ: ಕನ್ನಡ ದೃಶ್ಯಕಾವ್ಯ ಪ್ರತಿಷ್ಠಾನ
ಮೊ: 83101 26604

ಪರಿಚಯ

ರಾಧಾಕೃಷ್ಣ ಅಡಿಗ


ಬೆಂಗಳೂರಿನ ಬಲು ಜನಪ್ರಿಯ 'ಬ್ರಾಹ್ಮಣರ ಕಾಫಿ ಬಾರ್'ನ ಮಾಲೀಕ. ಬೆಂಗಳೂರು ಮಹಾನಗರದಲ್ಲಿ ದಶಕಗಳ ಹಿಂದೆ ದರ್ಶಿನಿ ಸಂಸ್ಕೃತಿ ಪರಿಚಯಿಸಿದವರು. ಇವರ ತಾಯಿ ಸರಸ್ವತಿ ಹಾಗೂ ತಂದೆ ನಾಗೇಶ್ವರ ರಾವ್ 1965ರಲ್ಲಿ ಆರಂಭಿಸಿದ 'ಬ್ರಾಹ್ಮಣರ ಕಾಫಿ ಬಾರ್' ಇಂದು 800ಕ್ಕೂ ಅಧಿಕ ಮಂದಿಗೆ ಕೆಲಸ ನೀಡಿ ಬೆಂಗಳೂರಿನ ಆಹಾರ ಸಂಸ್ಕೃತಿಗೆ ಮಹತ್ವ ಕೊಡುಗೆ ನೀಡಿದೆ. ಕಳೆದ ಐದು ದಶಕದಿಂದ ರಾಧಾಕೃಷ್ಣ ಅಡಿಗರು ಇದರ ಜವಾಬ್ದಾರಿ ಹೊತ್ತಿದ್ದಾರೆ. ಹೋಟೆಲ್ ಉದ್ಯಮದ ಸಾಧನೆಗಾಗಿ ಅಡಿಗರಿಗೆ ಬೆಂಗಳೂರು ವಿ.ವಿಯ ಡಾಕ್ಟರೇಟ್ ಗೌರವ ಸಂದಿದೆ. ಅಡಿಗಾಸ್ ಹೋಟೆಲ್ ಸರಣಿಯ ತಾಯಿಬೇರು ಈ ಬ್ರಾಹ್ಮಣರ ಕಾಫಿ ಬಾರ್. ಹೋಟೆಲ್ ಉದ್ಯಮದ ಹಾದಿ ಹಾಗೂ ಇದರೊಂದಿಗೆ ಬೆಸೆದುಕೊಂಡಿರುವ ತನ್ನ ಬದುಕಿನ ವಿವರಗಳನ್ನು ರಾಧಾಕೃಷ್ಣ ಅಡಿಗರು 'ಇಡ್ಲಿ ಕಾಫಿ ಪರಂಪರೆ – ಪಯಣ' ಕೃತಿಯಲ್ಲಿ ದಾಖಲಿಸಿದ್ದಾರೆ.

ವಿನಾಯಕ ತದ್ದಲಸೆ

ಮೂಲತಃ ಶಿರಸಿಯವರಾದ ಇವರು ಪತ್ರಕರ್ತರಾಗಿದ್ದವರು. ಅನೇಕ ಲೇಖನ, ವಿಮರ್ಶಾ ಬರಹಗಳ ಮೂಲಕ ಗುರುತಿಸಿಕೊಂಡಿದ್ದಾರೆ.

ಬೆಂಗಳೂರಿನ ಅತಿ ಹಳೆಯ ಬಡಾವಣೆ ಚಾಮರಾಜಪೇಟೆ ಮಕ್ಕಳಕೂಟ ವೃತ್ತ ದಾಟಿ ಇಳಿರಸ್ತೆಯಲ್ಲಿ ಚಲಿಸುತ್ತಿದ್ದರೆ ಅಡಿಗರ ರುಜು ಇರುವ ಘಮಘಮ ಕಾಫಿಯ ಸುವಾಸನಾ ವಲಯವನ್ನು ಪ್ರವೇಶಿಸಿದ್ದೀರಿ ಎಂದರ್ಥ. ಶಂಕರ ಮಠ ರಸ್ತೆಯಲ್ಲಿ ಎಡಕ್ಕೆ ತಿರುಗಿದರೆ ಇಕ್ಕೆಲಗಳಲ್ಲಿ ಕೆಂಪುಹಳದಿ ಹೂಗಳ ಹಸಿರು ತುಂಬಿದ ಮರಗಳ ಸ್ವಾಗತ. ಅನತಿ ದೂರದಲ್ಲಿ ಎಡಕ್ಕೆ ಶತಮಾನ ಹಳೆಯ ಶೃಂಗೇರಿ ಶಂಕರ ಮಠದ ಆವರಣ; ಶಾರದಾ ಧಾಮದ ಘಂಟಾನಾದ; ಕರ್ಪೂರ, ಸಂಪಿಗೆ, ಮಲ್ಲಿಗೆ ಹೂಗಳ ಪರಿಮಳದೊಂದಿಗೆ ಕಾಫಿಯ ಘಮ ಬೆರೆತು ಇನ್ನಷ್ಟು ಆಹ್ಲಾದ. ಶಂಕರಪುರದ ಆ ರಸ್ತೆಯಲ್ಲಿ ಕೊಂಚ ಮುಂದೆ ಬಂದರೆ ಎಡಗಡೆ ಶಂಕರಪುರ ಪೊಲೀಸ್ ಠಾಣೆ. ಕಾಫಿಯ ಘಮ ನಾಲಗೆಯ ರಸಗ್ರಂಥಿಗಳಿಗೆ ಆಮಿಷ ಒಡ್ಡುತ್ತಿವೆ ಎಂದು ಅಷ್ಟೇನೂ ಸದ್ದುಗದ್ದಲವಿರದ ಆ ಠಾಣೆಗೆ ದೂರು ನೀಡಲು ಹೋದರೆ ಶಾಸನವೇನೂ ಕಾಫಿ ಕುಡಿದರೆ ಆರೋಗ್ಯಕ್ಕೆ ಹಾನಿಕರ ಎಂಬ ಎಚ್ಚರಿಕೆ ವಿಧಿಸಿಲ್ಲ ಎನ್ನಬಹುದು! ಆರಕ್ಷಕರಿಗೆ ನೀವೂ ಬನ್ನಿ ನಮ್ಮ ಜೊತೆ, ಕೇಳೋಣ ಒಂದು ಕಾಫಿಯ ಕಥೆ ಎಂದು ಠಾಣೆ ಎದುರಿನ ತಿರುವಿನಲ್ಲಿ ಕೆಳಕ್ಕೆ ಬಂದರೆ ವಾಹನ ರಂಗರಾವ್ ರಸ್ತೆ ತಿರುವಿನಿಂದ ಮುಂದಕ್ಕೆ ಚಲಿಸಲು ನಿರಾಕರಿಸುತ್ತದೆ; ಗೊತ್ತು, ಅಲ್ಲೇ ಉಂಟು ಕಾಫಿಯ ಘಮದ ಮೂಲ! ಉಮಾ ಚಿತ್ರಮಂದಿರದಿಂದ ಮುಂದೆ ಎಡತಿರುವು ತೆಗೆದುಕೊಂಡರೂ ಅಲ್ಲಿಗೇ ಬಂದು ನಿಲ್ಲುತ್ತದೆ; ಊರಿನ ಎಲ್ಲಾ ದಾರಿಗಳೂ ಬಸ್ ನಿಲ್ದಾಣದ ಕಡೆಗೆ ಎನ್ನುವ ಹಾಗೆ.

ರಾಧಾಕೃಷ್ಣ ಅಡಿಗರ ಜೀವನಗಾಥೆ
ಇಡ್ಲಿ ಕಾಫಿ ಪರಂಪರೆ- ಪಯಣ
ಕೃತಿಯಿಂದ ಆಯ್ದ ಭಾಗ



ಒಂದು ಕಡೆ ಹಳದಿ-ಕೆಂಪು ಬಣ್ಣದಿಂದ ಕಂಗೊಳಿಸುವ ತಂಗುದಾಣ ಕನ್ನಡ ಧ್ವಜಕಟ್ಟೆ; ಇನ್ನೊಂದು ಕಡೆ ಕಪ್ಪು-ಬಿಳುಪು ಕಾಲದ ಸಿನಿಮಾ ನೆನಪಿಸುವ ಒಂದು ನಾಮಫಲಕ ಬ್ರಾಹ್ಮಣರ ಕಾಫಿ ಬಾರ್, ಸ್ಥಾಪನೆ: 1965. ನಲುವತ್ತು ಚದರಡಿಯ ಪುಟ್ಟ ಕಾಫಿ ಕ್ಲಬ್. ಮಧ್ಯದಲ್ಲಿ ಕಟ್ಟೆ. ಆ ಕಡೆ ಅಡುಗೆ ಮನೆ. ಈ ಕಡೆ ಜನಜಂಗುಳಿ. ಸರ್ವರೂ ನಿಂತೇ ಆಸ್ವಾದಿಸುವ ತುರ್ತು ಉಪಾಹಾರ ತಾಣ. ನಾಲಗೆಯ ರಸಗ್ರಂಥಿ ಕಾಫಿಯ ಘಮದ ದಾಳಿ ಹಿಮ್ಮೆಟ್ಟಿಸಲಾಗದೇ ಚಡಪಡಿಸುತ್ತಿರುವಂತೆಯೇ ಕೌಂಟರ್‌ಬಳಿ ಚೀಟಿ ಪಡೆಯಲು ಹೋದಾಗ ಹೊಟ್ಟೆ ತಾಳ ಹಾಕತೊಡಗಿದರೆ ಅಚ್ಚರಿಯೇನಿಲ್ಲ. ನಾಲಗೆ, ಹೊಟ್ಟೆ ಎರಡೂ ನಮ್ಮವೇ; ಯಾಕೆ ತಾರತಮ್ಯ ಎನ್ನುತ್ತ ಇಡ್ಲಿ-ವಡೆಯ ಚೀಟಿಯನ್ನೂ ಕಾಫಿ ಚೀಟಿಯೊಂದಿಗೆ ಪಡೆದು ಇಡ್ಲಿ-ವಡೆ ಮೆಲ್ಲುವಾಗ ಗಮನ ಸೆಳೆಯುವುದು ಚಟ್ನಿಯ ರುಚಿ. ಸುತ್ತ ಕಣ್ಣು ಹಾಯಿಸಿದರೆ ಜನ ಇಡ್ಲಿವಡೆಯನ್ನು ಚಟ್ನಿಯಲ್ಲಿ ಅದ್ದಿಕೊಳ್ಳುತ್ತಾರಾ ಅಥವಾ ಚಟ್ನಿಯನ್ನೇ ತಿನ್ನುತ್ತ ಇಡ್ಲಿವಡೆ ನಂಚಿಕೊಳ್ಳುತ್ತಾರಾ, ಉಪ್ಪಿಟ್ಟಿನ ಜೊತೆ ಚಟ್ನಿಯೋ ಚಟ್ನಿ ಜೊತೆ ಉಪ್ಪಿಟ್ಟೋ ಎಂಬ ಗೊಂದಲ. ಇನ್ನೊಬ್ಬರ ತಾಟನ್ನು ನೋಡಬಾರದು ಎಂಬ ಪರಿಜ್ಞಾನ ಉಂಟಲ್ಲವಾ.. ಅದು ನೆನಪಿಗೆ ಬಂದು ಕಣ್ಣನ್ನು ಇತ್ತ ಕಡೆ ತಿರುಗಿಸಿದರೆ ಅಲ್ಲಿ ಹೆಚ್ಚುವರಿ ಬೇಕಾದವರಿಗೆ ಬಡಿಸಲು ದೊಡ್ಡ ಪಾತ್ರೆಯಲ್ಲಿ ಚಟ್ನಿ ತುಂಬಿಸಿಕೊಂಡು ಸೌಟು ಹಿಡಿದಿರುವ ಮಾಣಿ ಬ್ರಹ್ಮಕಪಾಲ ಪ್ರಸಂಗದಲ್ಲಿ ಈಶ್ವರನಿಗೆ ಅನ್ನ ಬಡಿಸುವ ಅನ್ನಪೂರ್ಣೆಯ ಹಾಗೆ ನಿರಂತರ ಬಡಿಸುತ್ತಲೇ ಇರುತ್ತಾನೆ. ಅಂದರೆ ಎರಡೇ ಇಡ್ಲಿಗೆ ಮೂರು ಸಲ ಚಟ್ನಿ ಹಾಕಿಸಿಕೊಳ್ಳುವವರೂ ಇದ್ದಾರೆ ಹಾಗೂ ಈ ಚಟ್ನಿ ಉಚಿತ!

ಎಲ್ಲವನ್ನೂ ಸವಿದು ಸ್ವಾದದ ಅಂತಿಮ ಸ್ಪರ್ಶವಾದ ಕಾಫಿ ಸಮಾರಾಧನೆ ಮಾಡುತ್ತ ಹೊಟ್ಟೆಯನ್ನೂ ನಾಲಗೆಯ ರಸಗ್ರಂಥಿಯನ್ನೂ ಏಕಕಾಲಕ್ಕೆ ಸಮಾಧಾನ ಮಾಡಿದ ತೃಪ್ತಿಯಲ್ಲಿ ಕಣ್ಣೆತ್ತಿ ಗಮನಿಸಿದರೆ ಗಲ್ಲಾದಲ್ಲಿ ಸೀದಾ ಸಾದಾ ವ್ಯಕ್ತಿ ಕಾಣಸಿಗುತ್ತಾರೆ. ನಿಷ್ಕಲ್ಮಶವಾಗಿ ಮುಗುಳ್ನಗುತ್ತ ಪರಿಚಯದವರನ್ನು ಬಾಯ್ತುಂಬ ಮಾತಾಡಿಸುತ್ತ ನಾಣ್ಯಗಳನ್ನು ಮುಷ್ಟಿಯಲ್ಲಿ ಹಿಡಿದು ಇಷ್ಟೇ ಚಿಲ್ಲರೆ ಇದೆ ಎಂದು ಕರಾರುವಾಕ್ಕಾಗಿ ಲೆಕ್ಕ ಹೇಳುತ್ತ ಅಡುಗೆ ಕೋಣೆಯ ಇಡ್ಲಿ ವಡಾ ಚಟ್ನಿ ಉಪ್ಪಿಟ್ಟು ಕೇಸರಿಬಾತಿನ ಬಾಕಿ ಉಳಿಕೆ ವಿಚಾರಿಸುತ್ತ, ನಾಳೆಗೆ ಬೇಕಾಗುವ ಅಡುಗೆ ಸಾಮಗ್ರಿಗಳ ಪಟ್ಟಿ ಮಾಡುತ್ತ, ನಿರಂತರ ಬರುವ ಮೊಬೈಲ್ ಕರೆಗಳಲ್ಲಿ ಕೆಲವಕ್ಕೆ ಕನ್ನಡದಲ್ಲಿ, ಅದ್ಯಾವುದೋ ಕರೆಗೆ ಇಂಗ್ಲಿಷಲ್ಲಿ ಮತ್ಯಾವುದೋ ಕರೆಗೆ ತೆಲುಗಲ್ಲಿ ಇನ್ಯಾವುದೋ ಕರೆಗೆ ಹಿಂದಿಯಲ್ಲಿ ಉತ್ತರಿಸುತ್ತ ಇದರ ನಡುವೆಯೂ ನಿರಂತರವಾಗಿ ಬರುವ ಗ್ರಾಹಕರಿಗೆ ಚೀಟಿ ವಿತರಿಸುತ್ತ ಪಕ್ಕದಲ್ಲಿರುವ ವ್ಯವಸ್ಥಾಪರಿಗೆ ಮೊದಲೇ ನಿಗದಿಯಾಗಿರುವ ತಮ್ಮ ತಿರುಪತಿ ಪ್ರವಾಸದ ಬಗ್ಗೆ ಹೇಳುತ್ತ ಸ್ವಲ್ಪವೂ ಉದ್ವೇಗವಿಲ್ಲದೆ ಅತಿ ವೇಗದಲ್ಲಿ ಏಕಕಾಲಕ್ಕೆ ಬಹುಕಾರ್ಯ ನಿರ್ವಹಿಸುತ್ತಿರುವುದು ಗಮನ ಸೆಳೆಯದಿರಲು ಸಾಧ್ಯವಿಲ್ಲ.

ಇಷ್ಟೊಂದು ಸರಳವಾಗಿರುವ ಅವರು ಹೋಟೆಲ್ ಉದ್ಯಮ ಕ್ಷೇತ್ರಕ್ಕೆ ನೀಡಿದ ಕೊಡುಗೆಗೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದಿಂದ 2025ನೇ ಸಾಲಿನ ಗೌರವ ಡಾಕ್ಟರೇಟ್ ಪುರಸ್ಕೃತರು; ಹೆಸರಾಂತ ಹೋಟೆಲ್ ಉದ್ಯಮಿ ಡಾ.ರಾಧಾಕೃಷ್ಣ ಅಡಿಗರು ಎಂದರೆ ನಂಬಲೇಬೇಕು. ಮತ್ತು ಈಗ ಎಲ್ಲೆಡೆ ಪಸರಿಸಿರುವ ಅಡಿಗಾಸ್ ಹೋಟೆಲ್ ಸರಣಿಯ ತಾಯಿಬೇರು ಇದೇ ಬ್ರಾಹ್ಮಣರ ಕಾಫಿ ಬಾರ್ ಎನ್ನುವುದು ಅಚ್ಚರಿಯಾದರೂ ಸತ್ಯ.

ಡಾ.ರಾಧಾಕೃಷ್ಣ ಅಡಿಗರು ಹೀಗೆ ಹೋಟೆಲ್ ಉದ್ಯಮಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡು ಐವತ್ತು ವರ್ಷಗಳೇ ಆದವು. ಅವರ ಯಶಸ್ಸಿನ ಯಾತ್ರೆಯ ಹಿಂದೆ ಬ್ರಾಹ್ಮಣರ ಕಾಫಿ ಬಾರ್‌ಪ್ರಭಾವಳಿಯಿದೆ. ಅದರ ಹಿಂದೆ ಅವರ ಅಪ್ಪಯ್ಯ ನಾಗೇಶ ಅಡಿಗರು, ಅಮ್ಮ ಸರಸ್ವತಿ ಅವರ ಏಳುಬೀಳಿನ ಪರಿಶ್ರಮದ ಯಾತ್ರೆಯಿದೆ. ಅಮ್ಮನ ಸಮರ್ಪಣೆಯಿದೆ. ಅಣ್ಣ-ಅಕ್ಕ-ತಂಗಿಯಂದಿರ ಅವಿಶ್ರಾಂತ ದುಡಿಮೆ ಇದೆ. ಪತ್ನಿಯ ನಿಸ್ವಾರ್ಥ ಶ್ರಮವಿದೆ; ಇಡೀ ಅಡಿಗ ಕುಟುಂಬದ ಒಗ್ಗಟ್ಟಿನ ಬಲವಿದೆ.

ಬೆಂಗಳೂರಿನಲ್ಲಿ ಹೋಟೆಲ್ ಎಂದರೆ ಅಡಿಗರ ಹೋಟೆಲ್ ಎನ್ನುವ ಅನ್ವರ್ಥನಾಮ ಬರಲು ಕಾರಣರಾದವರು ಡಾ.ರಾಧಾಕೃಷ್ಣ ಅಡಿಗರ ತಂದೆ ನಾಗೇಶ್ವರ ಅಡಿಗರು. ನಾಗೇಶ ಅಡಿಗರು ಅಂತಲೇ ಇವರನ್ನು ಸರಳವಾಗಿ ಕರೆಯುತ್ತಿದ್ದುದು. ಕುಂದಾಪುರ ತಾಲೂಕು ಶಂಕರನಾರಾಯಣದ ಬಳಿ ಕೊಂಡಳ್ಳಿ ಅಡಿಗರ ಕುಟುಂಬದ ಮೂಲ ಸ್ಥಳ. ಶಂಕರನಾರಾಯಣದಿಂದ ಕೊಲ್ಲೂರಿಗೆ ಹೋಗುವ ದಾರಿಯಲ್ಲಿ ಸಿಗುವ ಪುಟ್ಟ ಊರು ಕೊಂಡಳ್ಳಿ. ಪಶ್ಚಿಮ ಘಟ್ಟದ ಹಸಿರು ತಪ್ಪಲಿನಲ್ಲಿ ಹುದುಗಿಕೊಂಡಿರುವ ಊರದು. ಅಡಿಗ ಎನ್ನುವುದು ಕುಟುಂಬದ ಅಡ್ಡಹೆಸರು.

ಫೆಬ್ರವರಿ 3, 1918 ರಲ್ಲಿ ಜನಿಸಿದ್ದ ನಾಗೇಶ ಅಡಿಗರ ತಂದೆ ವಾಸುದೇವ, ತಾಯಿ ಸಿಂಗಾರಮ್ಮ. ತನ್ನ 7ನೇ ವಯಸ್ಸಿಗೇ ತಂದೆಯನ್ನು ಕಳೆದುಕೊಂಡವರು. ಆಗೆಲ್ಲ ಕಾಲರಾ ವ್ಯಾಪಕವಾಗಿತ್ತು. ಊರಿನಿಂದ ಹದಿನೇಳು ಕಿಲೋಮೀಟರ್‌ದೂರದ ಕೊಲ್ಲೂರು ಬಳಿ ಯಾವುದೋ ಕಾರ್ಯಕ್ರಮಕ್ಕೆ ಹೋದವರು ಜೀವಂತ ಮರಳಲಿಲ್ಲ. ಸೋದರ ಮಾವ ಒಬ್ಬರ ನಿವಾಸ ಅಲ್ಲಿತ್ತು. ಬಹುಶಃ ಯಾವುದೋ ಹಬ್ಬದ ಋತುವಿಗೆ ಅವರು ಹೋಗಿದ್ದರು. ಆಗೆಲ್ಲ ಸಂಪರ್ಕ ಸುಲಭವಲ್ಲವಾದ್ದರಿಂದ ಮಕ್ಕಳಿಗೆಲ್ಲ ತಂದೆ ತೀರಿಕೊಂಡ ತಿಳಿಸುವ ಹೊತ್ತಿಗೆ ಒಂದು ದಿನವೇ ಕಳೆದುಹೋಗಿತ್ತು.

ನಾಗೇಶ ಅಡಿಗರು ಮೃದು ಸ್ವಭಾವದವರಾದರೂ ಸ್ವಾಭಿಮಾನಿ. ತಂದೆ ಇಲ್ಲದ ಮಗ ಎಂಬ ಅನುಕಂಪ ಇಷ್ಟಪಡದೇ ತಮ್ಮ ಉಪನಯದ ಖರ್ಚನ್ನು ತಾನೇ ದುಡಿದು ಸಂಪಾದಿಸಿ ಜನಿವಾರ ಹಾಕಿಸಿಕೊಂಡವರು. ಒಮ್ಮೆ ಅಜ್ಜನ ಮನೆಯಿಂದ ಪಡೆದುಕೊಂಡಿದ್ದ ಸಾಲವನ್ನು ವಾಪಸ್ ಮಾಡಬೇಕಿತ್ತು. ಅಮ್ಮ 5 ರೂಪಾಯಿ ಕೊಟ್ಟು ತಲುಪಿಸಿ ಬಾ ಎಂದು ಕಳುಹಿಸಿದರು. ಇಪ್ಪತ್ತೈದು ಕಿಲೋಮೀಟರ್ ನಡೆದು ಸಾಗಬೇಕಾದ ಕಾಡುದಾರಿ. ಅಲ್ಲಿಗೆ ಹೋಗಿ ತಲುಪಿದಾಗ 5 ರೂಪಾಯಿ ಕಾಣೆ. ದಾರಿಯಲ್ಲಿ ಎಲ್ಲೋ ಬಿದ್ದು ಹೋಗಿತ್ತು. ಹ್ಯಾಪು ಮೋರೆ ಹಾಕಿಕೊಂಡು ಮನೆಗೆ ಹೋಗಲು ಮನಸ್ಸಾಗಲಿಲ್ಲ. ಅಲ್ಲಿಂದ ಶಿವಮೊಗ್ಗಕ್ಕೆ ನಡೆದುಕೊಂಡೇ ತಲುಪಿ, ಒಂದಿಷ್ಟು ದಿನ ದುಡಿದು, 5 ರೂಪಾಯಿ ಸಂಪಾದಿಸಿ ಋಣ ಸಂದಾಯ ಮಾಡಿ, ಪುನಃ ಮನೆಗೆ ಬಂದಿದ್ದು ಅವರ ಸ್ವಾಭಿಮಾನಕ್ಕೆ ಇನ್ನೊಂದು ನಿದರ್ಶನ.

ಊರಿನಲ್ಲಿ ಕೂಡುಕುಟುಂಬ. ತಕ್ಕಮಟ್ಟಿಗೆ ತೋಟ ಉತ್ಪತ್ತಿ ಇತ್ತು. ಅಲ್ಲದೇ ಪೌರೋಹಿತ್ಯವೂ ಪರಂಪರಾನುಗತವಾಗಿ ಬಂದಿದ್ದು ತಂದೆಯ ಸೋದರರು ನಡೆಸಿಕೊಂಡು ಹೋಗುತ್ತಿದ್ದರು. ನಾಗೇಶರು ಸಹ ಕೊಲ್ಲೂರಿನಲ್ಲಿ ವೇದಪಾಠ ಮಾಡಿದ್ದರು. ಕಂಚಿನ ಕಂಠದಲ್ಲಿ ವೇದಮಂತ್ರ ಹೇಳುತ್ತಿದ್ದರೆ ಕೇಳಿದವರು ಮಂತ್ರಮುಗ್ಧರಾಗುವಂತಿರುತ್ತಿತ್ತು. ಚೆಂದದ ಸ್ವರದಲ್ಲಿ ಹಾಡುವುದೂ ಕರಗತವಾಗಿತ್ತು. ಅಡುಗೆ ಕೆಲಸವನ್ನೂ ಕಲಿತಿದ್ದರು. ಅಡುಗೆಗೋ ಪೌರೋಹಿತ್ಯಕ್ಕೋ ಯಾವುದಕ್ಕೆ ಕರೆ ಬಂದರೂ ಇಲ್ಲ ಎನ್ನದೇ ಹೊರಟೇಬಿಡುತ್ತಿದ್ದರು. ಪಾಂಡಿತ್ಯದ ಧಿಮಾಕು ಅವರ ತಲೆಯಲ್ಲಿ ಕಿಂಚಿತ್ತೂ ಇರಲಿಲ್ಲ.

ನಾಗೇಶ ಅಡಿಗರು ತುಂಬ ವರುಷ ಊರಿನಲ್ಲಿ ನೆಲೆ ನಿಲ್ಲಲಿಲ್ಲ.

ತೀರ್ಥಹಳ್ಳಿಯಲ್ಲಿ ಪರಿಚಯಸ್ಥರ ಒಂದು ಅಡಕೆ ಮಂಡಿಯಲ್ಲಿ ಕೆಲಸಕ್ಕೆ ಸೇರಿದ್ದರು. ಅಲ್ಲಿಯ ಕೆಲಸ ಹೊಂದಾಣಿಕೆ ಆಗಲಿಲ್ಲ ಹಾಗೆಯೇ ಅನಾರೋಗ್ಯವೂ ಕಾಡಿತು. ಹೊಟ್ಟೆಪಾಡು ಅವರನ್ನು ತೀರ್ಥಹಳ್ಳಿಯಿಂದ ಶಿವಮೊಗ್ಗಕ್ಕೆ ಕರೆದೊಯ್ದಿತು. ಶಿವಮೊಗ್ಗದ ನ್ಯಾಯಾಧೀಶರೊಬ್ಬರ ಮನೆಯಲ್ಲಿ ಅಡುಗೆ ಕೆಲಸ ಹಾಗೂ ಪೌರೋಹಿತ್ಯ ನಿರ್ವಹಿಸಿಕೊಂಡು ಕೆಲ ಕಾಲ ವಾಸಿಸಿದ್ದರು. ಹೊರಗಡೆ ಅಡುಗೆ, ಪೂಜೆ ಕೆಲಸ ನಿರ್ವಹಿಸಲೂ ಕರೆಬರುತ್ತಿತ್ತು. ಅಲ್ಲಿಯೂ ಅನಾರೋಗ್ಯ ಬೆಂಬಿಡಲಿಲ್ಲ. ಒಮ್ಮೆ ಖಾಯಿಲೆ ಬಂದು ಬದುಕುವುದಿಲ್ಲ ಎಂಬಂಥ ಪರಿಸ್ಥಿತಿ. ಮೈಲಿಬೇನೆ ಮೈತುಂಬ ವ್ಯಾಪಿಸಿತ್ತು. ಬಾಳೆ ಎಲೆ ಮೇಲೆ ಹುಡುಗನನ್ನು ಮಲಗಿಸಿ ಓರ್ವ ವೃದ್ಧೆ ಆರೈಕೆ ಮಾಡಿದ್ದರಂತೆ.

1932ರಲ್ಲಿ ಬೆಂಗಳೂರಿಗೆ ಬಂದಾಗ ನಾಗೇಶ ಅಡಿಗರ ವಯಸ್ಸು 14ರ ಆಸುಪಾಸು. ನೆಲೆ ಕಂಡುಕೊಳ್ಳಲು ಬಹಳ ಕಷ್ಟಪಟ್ಟರು. ಮೊದಲು ಎಂಟಿಆರ್ ಹೋಟೆಲ್‌ನಲ್ಲಿ ಕೆಲಸ. ಆರು ತಿಂಗಳಲ್ಲೇ ಆ ಕೆಲಸ ಬಿಟ್ಟರು. ನಂತರ ಅಲ್ಲಿ ಇಲ್ಲಿ ಅಡುಗೆ ಕೆಲಸಕ್ಕೆ ಹೋಗತೊಡಗಿದರು. ಶಿವಮೊಗ್ಗದ ದಿನಚರಿಯ ಪುನರಾವರ್ತನೆ. ಆ ಅವಧಿಯಲ್ಲಿ ಬೆಂಗಳೂರಿನ ಜನಸಂಖ್ಯೆ ಅಂದಾಜು 3 ಲಕ್ಷ. ಕೆಲಸಕ್ಕೇನೂ ಕೊರತೆ ಇರಲಿಲ್ಲ. ಆದರೆ ಒಂದು ಭದ್ರವಾದ ತಮ್ಮದೇ ಆದ ಹೋಟೆಲ್ ಆರಂಭಿಸಿದರೆ ಒಳ್ಳೆಯದಲ್ಲವೇ ಎಂದುಕೊಂಡರು. ಹೇಗೂ ಎಂಟಿಆರ್‌ನಲ್ಲಿ ಕೆಲಸ ಮಾಡಿದ ಅನುಭವ ಇತ್ತಲ್ಲ. ಆದರೆ ಆ ಕನಸು ಕೈಗೂಡಲು ಕಾಲ ಕೂಡಿ ಬಂದಿರಲಿಲ್ಲ.

ವಯಸ್ಸು 20 ಕಳೆಯುತ್ತಿದ್ದಂತೆ ದೊಡ್ಡಪ್ಪ ಒಂದು ಸಂಬಂಧ ನೋಡಿದ್ದರು. ಮದುವೆ ಮಾಡಿಕೊಡುವುದಲ್ಲದೇ ಆಸ್ತಿಯನ್ನೂ ಕೊಡುತ್ತೇನೆ ಎಂದು ಹೆಣ್ಣು ಹೆತ್ತವರು ಹೇಳಿದ್ದರಂತೆ. ಆದರೆ ನಾಗೇಶ ಅಡಿಗರಿಗೆ ಹಾಗೆ ಮನೆ ಅಳಿಯನ ಥರ ಬದುಕಲು ಮನಸ್ಸು ಒಪ್ಪಲಿಲ್ಲ. ನನಗೆ ಯಾವ ಆಸ್ತಿಯೂ ಬೇಡ ಏನೂ ಬೇಡ, ನನ್ನ ಸಂಗಾತಿಯನ್ನು ನಾನೇ ಹುಡುಕಿಕೊಳ್ಳುತ್ತೇನೆ ಎಂದಿದ್ದರಂತೆ. ಅಂತೆಯೇ ಪರಿಚಯಸ್ಥರ ಮಗಳಾದ ಸರಸ್ವತಿ ಅವರ ಸಂಬಂಧ ಕುದುರಿದ್ದು.

ಅಷ್ಟರಲ್ಲಿ ಅಡಿಗರು ಬೆಂಗಳೂರಿಗೆ ಬಂದು ಹತ್ತು ಹನ್ನೆರಡು ವರ್ಷಗಳಾಗಿದ್ದವು. 27 ನೇ ವಯಸ್ಸಿಗೆ ಬೆಂಗಳೂರಿನಲ್ಲಿ ನಾಗೇಶ ಅಡಿಗರ ವಿವಾಹ ಪದ್ಮನಾಭ ಭಟ್ಟ ಹಾಗೂ ನಾಗವೇಣಿ ದಂಪತಿಗಳ ಪುತ್ರಿ ಸರಸ್ವತಿಯೊಂದಿಗೆ ನೆರವೇರಿತು. ಪದ್ಮನಾಭರ ಮೂಲ ಊರು ಕುಂದಾಪುರ ತಾಲೂಕಿನ ವಂಡಸೆ. ಬೆಂಗಳೂರಿನ ವಿಶ್ವೇಶ್ವರಪುರ ವೃತ್ತದಲ್ಲಿ ಹೋಟೆಲ್ ನಡೆಸುತ್ತಿದ್ದರು. ಸರ್ಕಲ್ ಲಂಚ್ ಹೋಮ್ ಆ ಕಾಲಕ್ಕೆ ಆಕರ್ಷಕ ಹೆಸರು. ಆದರೆ ಆ ಹೋಟೆಲ್ ನಡೆಯುತ್ತಿದ್ದುದು ಸುಮಾರಾಗಿ. ಮದುವೆಯಾದಾಗ ಸರಸ್ವತಿ ಅಮ್ಮನಿಗೆ ಹದಿಮೂರು ವರ್ಷ. ಬೆಂಗಳೂರಿನಲ್ಲೇ ಹುಟ್ಟಿಬೆಳೆದರೂ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಆಗೆಲ್ಲ ಹೆಚ್ಚಿನ ಆಸ್ಪದ ಇರಲಿಲ್ಲ. ಆದರೆ ಸರಸ್ವತಿ ಚುರುಕುಮತಿ. ಹಾಗೆಯೇ ಮದುವೆಯ ಖರ್ಚು ಅಂದಿಗೆ 280 ರೂ. ಅದನ್ನೂ ನಾಗೇಶ ಅಡಿಗರು ಸ್ವತಃ ದುಡಿದು ಸಂಪಾದಿಸಿದ್ದ ಹಣದಲ್ಲಿ ನಿಭಾಯಿಸಿಕೊಂಡಿದ್ದು ವಿಶೇಷ.

ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಸಿಟಿ ಇನ್‌ಸ್ಟಿಟ್ಯೂಟ್ ಅಂತ ಒಂದು ಸಂಸ್ಥೆಯಿದೆ. ಅಲ್ಲಿ ಸೋದರನೊಬ್ಬ ಆರಂಭಿಸಿದ್ದ ಕ್ಯಾಂಟೀನಿನಲ್ಲಿ ಪಾಲುದಾರನಾಗಿ ಸೇರಿಕೊಂಡರು ನಾಗೇಶ ಅಡಿಗರು. ಅದೊಂದು ದೊಡ್ಡ ಕ್ಯಾಂಟೀನ್ ಸಹ ಆಗಿರಲಿಲ್ಲ. ಅದಕ್ಕೊಂದು ಹೆಸರು ಸಹ ಇರಲಿಲ್ಲ. ಅಲ್ಲೇ ಚಿಕ್ಕ ಕೋಣೆಯಲ್ಲಿ ಸಂಸಾರ ಸಾಗಿಸಬೇಕಿತ್ತು; ಶೌಚಾಲಯವೂ ಇರಲಿಲ್ಲವಾದ್ದರಿಂದ ಬೆಳಗ್ಗೆ ನಾಲ್ಕಕ್ಕೇ ಎದ್ದು ಬಯಲು ಶೌಚಾಲಯದಲ್ಲಿ ನಿತ್ಯಕರ್ಮ ಮುಗಿಸಿ ಸ್ನಾನವನ್ನೂ ಮಾಡಿ ಅಡುಗೆ ಸಿದ್ಧ ಮಾಡಬೇಕಿತ್ತು. ಸಿಟಿ ಇನ್‌ಸ್ಟಿಟ್ಯೂಟಿಗೆ ಟೆನಿಸ್, ಬ್ಯಾಡ್ಮಿಂಟನ್ ಆಡಲು ಬರುವ ಶ್ರೀಮಂತರಲ್ಲಿ ಕೆಲವರು ಸೊಕ್ಕಿನಿಂದ ಇವರನ್ನು ಸತಾಯಿಸುತ್ತಿದ್ದುದೂ ಉಂಟು. ತಿಂಡಿ ರುಚಿ ಇಲ್ಲ, ಕಾಫಿ ಸರಿ ಇಲ್ಲ, ದುಡ್ಡು ಕೊಡುವುದಿಲ್ಲ ಇತ್ಯಾದಿ ಮಾತುಗಳಿಂದ ಮಾನಸಿಕ ಹಿಂಸೆ, ಅವಮಾನ ಎದುರಿಸಬೇಕಾಗುತ್ತಿತ್ತು. ಅಂಥ ಜಾಗದಲ್ಲಿ ನಾಗೇಶ ಅಡಿಗರ ಹೊಸ ಸಂಸಾರ ಆರಂಭವಾಯಿತು.

ಸಿಟಿ ಇನ್‌ಸ್ಟಿಟ್ಯೂಟ್ ಹೋಟೆಲ್ ನಷ್ಟದಲ್ಲೇ ಮುಂದುವರಿಯಿತು. ಮೇಲಾಗಿ ಹೆಣ್ಣುಮಕ್ಕಳಿಗೆ ಅಗತ್ಯವಾಗಿ ಬೇಕಾದ ಕನಿಷ್ಠ ಸೌಲಭ್ಯ ಇರಲಿಲ್ಲವಾದ್ದರಿಂದ ಬೆಳಗ್ಗೆ ನಾಲ್ಕಕ್ಕೇ ಎದ್ದು ಬಯಲುಶೌಚ ಮುಗಿಸಿ ಸ್ನಾನ ಮಾಡಿ ಅಡುಗೆ ಮನೆ ಹೊಕ್ಕರೆ ಮಧ್ಯಾಹ್ನಕ್ಕೇ ಕೊಂಚ ವಿಶ್ರಾಂತಿ. ಶೌಚಾಲಯ ವಿಷಯದಲ್ಲಿ ಅಂತೂ ತಮಗೊದಗಿದ ಪರಿಸ್ಥಿತಿಯಿಂದ ಸರಸ್ವತಿ ಅಮ್ಮ ರೋಸಿಹೋಗಿದ್ದರು. ಕೆಲವು ಸಲ ಕಣ್ಣೀರಾಗುತ್ತಿದ್ದುದೂ ಇತ್ತು. ಪಾಲುದಾರನಾಗಿದ್ದ ಸೋದರ ಕೂಡ ಮೋಸಮಾಡಿಬಿಟ್ಟ. ಆನಂತರ ಅದೇ ಬಡಾವಣೆಯಲ್ಲಿ ಸ್ವತಂತ್ರವಾಗಿ ಆರಂಭಿಸಿದ ಉಲ್ಲಾಸ್ ಕಾಫಿ ಬಾರ್ ಈ ಜೋಡಿಯ ಮೊದಲ ಹೋಟೆಲ್. ಆದರೆ ಇದು ನಾಗೇಶ ಅಡಿಗ -ಸರಸ್ವತಿ ಅಮ್ಮ ಜೀವನದಲ್ಲಿ ಕಿಂಚಿತ್ ಉಲ್ಲಾಸವನ್ನೂ ತರಲಿಲ್ಲ, ಬದಲಿಗೆ ಸಾಕಷ್ಟು ಕಷ್ಟ-ನಷ್ಟಗಳನ್ನು ತಂದೊಡ್ಡಿತು. ನಂತರ ಚಾಮರಾಜಪೇಟೆ ಜಟಕಾ ಸ್ಟ್ಯಾಂಡ್ ಬಳಿ ಆರಂಭಿಸಿದ್ದ ಹೋಟೆಲ್ ಕೂಡ ಕೈ ಹಿಡಿಯಲಿಲ್ಲ. ಒಟ್ಟಿನಲ್ಲಿ ಈ ಮುಗ್ಧ ದಂಪತಿಗಳ ಬದುಕು ಎಳೆವೆಯಲ್ಲೇ ಉಪ್ಪು-ಹುಳಿ-ಖಾರ ಹೆಚ್ಚಾದ ಚಿತ್ರಾನ್ನವಾಯಿತು. ತಿನ್ನಲೂ ಬಾರದು, ಎಸೆಯಲೂ ಆಗದು ಎಂಬಂಥ ಪರಿಸ್ಥಿತಿ. ಬೇರೆ ದಾರಿ ಕಾಣದೇ ಬೆಂಗಳೂರಿನ ಸಹವಾಸ ಸಾಕೆಂದು ಪತ್ನಿಯೊಂದಿಗೆ ಊರಿನ ಬಸ್ ಹತ್ತಿದರು.

ಅದಾಗಲೇ ಊರು ತೊರೆದು ಕೆಲವು ವರ್ಷಗಳಾಗಿದ್ದರಿಂದ, ನಾಗೇಶಅಡಿಗರು ಬೆಂಗಳೂರಿನಲ್ಲಿ ಹುಟ್ಟಿಬೆಳೆದ ಹುಡುಗಿಯನ್ನು ಮದುವೆಯಾಗಿದ್ದರಿಂದಲೋ ಏನೋ, ಊರು ಈ ದಂಪತಿಯನ್ನು ಅಷ್ಟು ಸುಲಭವಾಗಿ ಸ್ವೀಕರಿಸಲಿಲ್ಲ. ಊರಿನವರ ದೃಷ್ಟಿಯಲ್ಲಿ ಇವರು ಪಟ್ಟಣಿಗರು. ಇವರು ಮಾನಸಿಕವಾಗಿ ಇನ್ನೂ ಹಳ್ಳಿಯವರೇ. ಊರು ಇವರನ್ನು ಹೊರ ಹಾಕಿತ್ತು; ಪಟ್ಟಣ ಸ್ವೀಕರಿಸಲೇ ಇಲ್ಲ ಎಂಬಂಥ ತ್ರಿಶಂಕು ಪರಿಸ್ಥಿತಿ. ಆದರೂ ಕೆಲವು ವರ್ಷ ಊರಿನಲ್ಲಿ ಹಾಗೂ ಹೀಗೂ ಸಂಸಾರ ನಡೆಯಿತು. ಇಬ್ಬರು ಮಕ್ಕಳ ಜನನವೂ ಆಗಿತ್ತು.

ಸ್ವಾಭಿಮಾನಿಯಾಗಿದ್ದ ಚುರುಕು ಬುದ್ಧಿಯ ಸರಸ್ವತಿ ಅಮ್ಮನಿಗೆ ಸಂಸಾರ ಬೆಳೆಯುತ್ತಿದ್ದಂತೆ ಮಕ್ಕಳ ಭವಿಷ್ಯದ ಚಿಂತೆ ಶುರುವಾಯಿತು. ಏನಾದರಾಗಲಿ ಬೆಂಗಳೂರಿಗೆ ವಾಪಸು ಹೋಗಿಬಿಡೋಣ. ಅಪರಿಚಿತ ಊರೇನಲ್ಲ. ಹಗಲು ರಾತ್ರಿ ನಿಮ್ಮೊಟ್ಟಿಗೆ ಕಷ್ಟಪಡಲು ನಾನು ಸಿದ್ಧನಿದ್ದೇನೆ. ರಸ್ತೆ ಬದಿಯಲ್ಲಿ ಬೋಂಡಾ ಮಾರಿಯಾದರೂ ವ್ಯಾಪಾರ ಆರಂಭಿಸುವ. ಮತ್ತೆ ಒಂದು ಸಲ ಪ್ರಯತ್ನ ಮಾಡುವ ಎಂದು ನಾಗೇಶರನ್ನು ಹುರಿದುಂಬಿಸಿದರು. 'ಕರಣೇಷು ಮಂತ್ರಿ' ಎಂಬ ನಾಣ್ಣುಡಿ ಅವರಂಥ ದಿಟ್ಟ ಮಹಿಳೆಯರನ್ನು ನೋಡಿಯೇ ಹುಟ್ಟಿಕೊಂಡಿತ್ತೇನೋ. ಪತ್ನಿಯ ಒತ್ತಾಯ ಮತ್ತು ಮನವೊಲಿಕೆಗೆ ಮಣಿದು ನಾಗೇಶರು ಸಂಸಾರ ಸಮೇತ ಮತ್ತೆ ಬೆಂಗಳೂರು ಬಸ್ ಹತ್ತಿದರು.

ಈ ಸಲ ಅವರು ಮತ್ತೆ ಬಂದಿಳಿದಿದ್ದು ಅದೇ ಚಾಮರಾಜಪೇಟೆಯ ಜಟಕಾಸ್ಟ್ಯಾಂಡ್ ಬಳಿ. ಅದೇ ಅವರಿಗೆ ರಾಜಧಾನಿಯೊಳಗಿನ ರಾಜಧಾನಿ. ಸಮೀಪದಲ್ಲೇ ಗವಿಪುರ-ಗುಟ್ಟಳ್ಳಿಯಲ್ಲಿ ಒಂದೇ ಮಲಗುವ ಕೋಣೆ ಇರುವ ಪುಟ್ಟ ಬಾಡಿಗೆ ಮನೆ ಮಾಡಿದರು. ಜಟಕಾಸ್ಟ್ಯಾಂಡ್ ಬಳಿ ಮತ್ತೆ ಹೋಟೆಲ್ ಶುರು ಮಾಡಿದರು. ಪತ್ನಿ ಮೇಲಿನ ಪ್ರೀತಿಗೆ ಸರಸ್ವತಿ ರಿಫ್ರೆಷ್ಮೆಂಟ್ ಎಂದು ಹೆಸರಿಟ್ಟರು. ಈಗಲೂ ಪರಿಸ್ಥಿತಿ ಸುಧಾರಿಸಲಿಲ್ಲ. ಹಾಗೂ ಹೀಗೂ ಕಷ್ಟಪಟ್ಟು ಹೋಟೆಲ್ ನಡೆಸುತ್ತಿದ್ದರು. 1948ರಲ್ಲಿ ದೇಶ ವಿಭಜನೆಯ ಬೆಂಕಿ ಹೊತ್ತಿ ಉರಿಯುತ್ತಿದ್ದ ಕಾಲ. ಮಾರ್ಕೆಟ್ ಪ್ರದೇಶದಲ್ಲಿ ವಸ್ತುಗಳ ಖರೀದಿಗೆ ಎಂದು ನಾಗೇಶ ಅಡಿಗರು ಹೋಗಿದ್ದಾಗ ದಂಗೆ ಒಮ್ಮೆಲೇ ಭುಗಿಲೆದ್ದಿತು. ಅನ್ಯಮತೀಯರು ಇವರ ಮೇಲೆ ಆಕ್ರಮಣ ಮಾಡಿಯೇ ಬಿಟ್ಟರು. ರಕ್ತ ಬರುವ ಹಾಗೆ ಮುಖದ ಮೇಲೇ ಏಟು ಸಹ ಬಿದ್ದಿತ್ತು. ಅಷ್ಟರಲ್ಲಿ ದೂರದಲ್ಲಿ ಪೊಲೀಸ್ ವ್ಯಾನ್ ಕಂಡು ಇದ್ದಬದ್ದ ಬಲವನ್ನೆಲ್ಲ ಒಗ್ಗೂಡಿಸಿ ಪೊಲೀಸ್ ಅಂತ ಕಿರುಚಿದರು. ದಂಗೆಕೋರರು ಚೆಲ್ಲಾಪಿಲ್ಲಿಯಾಗಿ ಓಡಿಹೋದರು. ಅದಾಗಲೇ ಶಂಕರನಾರಾಯಣ ಹಾಗೂ ರುಕ್ಮಿಣಿ ಎಂಬ ಪುಟ್ಟ ಮಕ್ಕಳಿದ್ದರು, ಮೇಲಿಂದ ಸರಸ್ವತಿ ಅಮ್ಮ 3 ತಿಂಗಳ ಗರ್ಭಿಣಿಯಾಗಿದ್ದರು. ದೊಡ್ಡ ದುರಂತವೊಂದು ದೇವರ ದಯೆಯಿಂದ ತಪ್ಪಿ ಬದುಕು ನಿರಾಳವಾಯಿತು. ಅಂದು ಏನಾದರೂ ದುರಂತ ಸಂಭವಿಸಿದ್ದರೆ ಬ್ರಾಹ್ಮಣರ ಕಾಫಿಬಾರ್ ಹುಟ್ಟುತ್ತಲೇ ಇರಲಿಲ್ಲ!

'ಚಾಮರಾಜಪೇಟೆಯಲ್ಲಿ ಹೋಟೆಲ್ ಉದ್ಯಮದಲ್ಲಿ ಅರವತ್ತರ ದಶಕದಲ್ಲೂ ಪೈಪೋಟಿ ಇತ್ತು. ಗಜೇಂದ್ರ ವಿಲಾಸ, ಹೋಟೆಲ್ ಮೆಜೆಸ್ಟಿಕ್ ತುಂಬ ಪ್ರಸಿದ್ಧವಾಗಿದ್ದವು. ನಾವು ಜಟಕಾಸ್ಟ್ಯಾಂಡ್ ಬಳಿ 1956ರ ಸಮಯದಲ್ಲಿ ಸತ್ಯನಾರಾಯಣ ಭವನ ಎಂಬ ಹೋಟೆಲ್ ನಡೆಸುತ್ತಿದ್ದೆವು. ಆಗೆಲ್ಲ ನೆಲಕ್ಕೆ ಮಣೆ ಹಾಕಿ ಬಾಳೆ ಎಲೆಯ ಮೇಲೆ ಮಸಾಲೆ ದೋಸೆ ಬಡಿಸುತ್ತಿದ್ದೆವು. ಬಹಳಷ್ಟು ಸಂಪ್ರದಾಯಸ್ಥ ಗ್ರಾಹಕರು ನೆಲದ ಮೇಲೇ ಕುಳಿತು ತಿನ್ನುವ ಸವಲತ್ತು ಇದ್ದರೆ ಮಾತ್ರ ಬರುತ್ತಿದ್ದರು. ಕೆಲವರಲ್ಲಿ ಸ್ವಲ್ಪ ಮಡಿವಂತಿಕೆಯೂ ಇರುತ್ತಿತ್ತು. ಆ ಕಾರಣಕ್ಕೆ ಎಲ್ಲ ಹೋಟೆಲ್‌ಗಳಲ್ಲೂ ಟೇಬಲ್-ಖುರ್ಚಿ ಇದ್ದರೂ ಒಳ ಹಜಾರದಲ್ಲಿ ಒಂದು ಕಡೆ ನೆಲಕ್ಕೆ ಮಣೆ ಹಾಕಿ ಎಲೆ ಮೇಲೆ ಬಡಿಸುವ ವ್ಯವಸ್ಥೆ ಇರುತ್ತಿತ್ತು. ಆಗಿನ ಮಟ್ಟಿಗೆ ದೊಡ್ಡ ಹೋಟೆಲ್‌ಗಳ ವ್ಯಾಪಾರ ಚೆನ್ನಾಗಿ ಆಗುತ್ತಿತ್ತು. ಅವರೆಲ್ಲ ದಿನಕ್ಕೆ 1500-2000 ರೂ. ವ್ಯಾಪಾರ ಮಾಡಿದರೆ ನಮ್ಮ ಹೋಟೆಲ್‌ನದು 30 ರೂ. ವ್ಯಾಪಾರವಷ್ಟೆ. ಆಗ ಹೋಟೆಲ್ ಮಾಡುತ್ತೇನೆ ಅಂದರೆ ಸಾಲ ಕೊಡುವವರು, ಸಾಮಗ್ರಿ ಒದಗಿಸುವವರು ಬೇಕಾದಷ್ಟು ಇದ್ದರು. ಕಾಫಿಪುಡಿ, ಖಾರದ ಪುಡಿ, ಹಾಲು ಒದಗಿಸುವವರು ಮೊದಲು ಸಾಮಗ್ರಿ ಕೊಟ್ಟು ಆಮೇಲೆ ಯಾವಾಗಲೋ ಹಣ ಪಡೆದುಕೊಳ್ಳುತ್ತಿದ್ದರು. ಕೆಲಸಕ್ಕೆ ಜನ ಬೇಕಾದರೂ ಕರೆದುಕೊಂಡು ಬರುವವರಿದ್ದರು. ಆಗೆಲ್ಲ ಸಾಕಷ್ಟು ಕೆಲಸಗಾರರು ಸಿಗುತ್ತಿದ್ದರು.

ಕಾಲೇಜು ಹುಡುಗರು ಅಂದು ಹೋಟೆಲ್‌ಗೆ ಬರುವುದು ಕಡಿಮೆಯಿತ್ತು. ಯಾಕೆಂದರೆ ಮಕ್ಕಳಿಗೆ ಪಾಕೆಟ್‌ಮನಿ ಕೊಡುವ ಪದ್ಧತಿ ಇರಲಿಲ್ಲ. ಮೇಷ್ಟ್ರುಗಳು, ಒಂದೆರಡು ಬ್ಯಾಂಕ್‌ಗಳ ನೌಕರರು, ಸರಕಾರಿ ಕಚೇರಿಗಳ ನೌಕರರು ಹೋಟೆಲ್‌ಗೆ ಬರುವಂಥವರು. ಹಾಗಾಗಿ ಹೋಟೆಲ್ ನಡೆಸುವುದು ಸುಲಭದ ಮಾತಾಗಿರಲಿಲ್ಲ' ಎಂದು ನೆನಪುಗಳ ಬುತ್ತಿ ಬಿಚ್ಚಿಡುತ್ತಾರೆ ಶಂಕರನಾರಾಯಣ ಅಡಿಗ.

ಹಲವು ವರ್ಷಗಳೇ ಸಂದುಹೋದವು. ಅಷ್ಟರಲ್ಲಿ ಸಂಸಾರವೂ ದೊಡ್ಡದಾಗಿತ್ತು. ಎಂಟು ಮಕ್ಕಳ ತುಂಬು ಕುಟುಂಬವಾಗಿ ಬೆಳೆದು ನಿಂತಿತ್ತು. ಈಗಾಗಲೇ ಕೊಂಡಳ್ಳಿಯಲ್ಲಿ ಜನಿಸಿದವರು ಶಂಕರನಾರಾಯಣ, ರುಕ್ಮಿಣಿ, ಬೆಂಗಳೂರಿನಲ್ಲಿ ಹುಟ್ಟಿದವರು ಗಣೇಶ, ಪರಮೇಶ್ವರ, ಪದ್ಮಾ, ರಮಾ, ವಾಸುದೇವ, ಎಂಟನೆ ಹಾಗೂ ಕೊನೆಯ ಕುಡಿ – ರಾಧಾಕೃಷ್ಣ. ಮನೆಯಲ್ಲಿ ಮಕ್ಕಳ ಕಲರವ.

ಯಾರಿಗೂ ಚಿಂತೆ ಅರಿಯುವ ವಯಸ್ಸಲ್ಲ. ಎಲ್ಲರೂ ಖುಷಿಯಾಗಿದ್ದರು. ನಾಗೇಶ ಅಡಿಗರಿಗೂ ಚಿಂತೆ ಇದ್ದಿದ್ದು ಎಲ್ಲರಿಗೂ ಹೊಟ್ಟೆ ತುಂಬ ಊಟ ಹಾಕುವುದು ಹೇಗೆ ಎಂಬುದಷ್ಟೆ. ಹೋಟೆಲ್ ಲಾಭದ ದಡ ಸೇರಲೇ ಇಲ್ಲ. ಆಗ ನೆರವಿಗೆ ಬಂದಿದ್ದು ಬಾಲ್ಯದಲ್ಲಿ ಕಲಿತಿದ್ದ ವೇದಮಂತ್ರಗಳು. ಮನೆಯಲ್ಲಿ ಶ್ರಾದ್ಧಕರ್ಮ ಮಾಡಿಸುತ್ತಿದ್ದರು. ಮನೆಯಲ್ಲೇ ಮಾಡಿಸಲು ಮುಖ್ಯ ಕಾರಣ ಮಕ್ಕಳಿಗೆ ಊಟ ಸಿಗುತ್ತದೆ ಎನ್ನುವುದಾಗಿತ್ತು. ಜೊತೆಗೆ ಪ್ರತಿ ಮಗುವಿಗೂ ನಾಲ್ಕಾಣೆ ದಕ್ಷಿಣೆ ಕೂಡ ಸಿಗುತ್ತಿತ್ತು. ಹಾಗೆ ವರ್ಷಕ್ಕೆ ಏಳೆಂಟು ಶ್ರಾದ್ಧಗಳು ಮಾತ್ರ ಸಿಗುತ್ತಿದ್ದುದು. ಇನ್ನು ಆಸ್ತಿಕರ ಮನೆಗಳಲ್ಲಿ ಪೌರೋಹಿತ್ಯಕ್ಕೂ ಕರೆ ಬರುತ್ತಿತ್ತು. ಆದರೆ ಹೇಳಿಕೊಳ್ಳುವ ಆದಾಯ ಇರಲಿಲ್ಲ. ಮಧ್ಯೆ ಮಧ್ಯೆ ಆಹ್ವಾನವಿದ್ದಾಗ ಸತ್ಯನಾರಾಯಣ ಪೂಜೆ ಇತ್ಯಾದಿಗಳನ್ನೂ ಮಾಡಿಸುತ್ತಿದ್ದರು. ಅಂಥ ದಿನಗಳಲ್ಲಿ ಮಕ್ಕಳಿಗೆಲ್ಲ ಹೊಟ್ಟೆತುಂಬ ಊಟ ಹಾಕಿಸಬಹುದಲ್ಲ ಎಂಬುದೇ ಅವರಿಗಿದ್ದ ದೊಡ್ಡ ಸಮಾಧಾನ. ಅಲ್ಲದೆ ಒಂದಿಷ್ಟು ಅಕ್ಕಿ, ಧಾನ್ಯ ಸಿಗುತ್ತದೆ ಎಂಬ ನಿರೀಕ್ಷೆ. ಕೈಗೆ ನಾಲ್ಕು ಕಾಸು ದಕ್ಷಿಣೆ ಸಿಗುತ್ತದೆ ಎಂಬ ಪ್ರತೀಕ್ಷೆ. ಪುರೋಹಿತರಿಗೆ ಆಗ ಬಹಳ ಬೇಡಿಕೆಯೇನೂ ಇರಲಿಲ್ಲ. ಇದ್ದಾಗ ಕರೆದಾರು ಕರೆದಾಗ ಹೋದೇನು ಎಂಬಂಥ ಅನಿಶ್ಚಿತತೆ. ಹಾಗಾಗಿ ಹೋಟೆಲ್ ಸ್ಥಗಿತಗೊಳಿಸಿ ಪೌರೋಹಿತ್ಯಕ್ಕೆ ಮರಳುವ ಮಾತೇ ಇರಲಿಲ್ಲ. ಎರಡನ್ನೂ ತೂಗಿಸಿಕೊಂಡು ಹೋಗುವುದು ಅನಿವಾರ್ಯವೇ ಆಗಿತ್ತು ನಾಗೇಶ ಅಡಿಗರಿಗೆ. ಅದಕ್ಕಿಂಥ ಹೆಚ್ಚಾಗಿ ಅವರಿಗೆ ಹೋಟೆಲ್ ಕೆಲಸದ ಮೇಲೆ ಹೇಳಲಾಗದ ಮಮಕಾರವಿತ್ತು. ಆದರೆ ಇರುವ ಹೋಟೆಲ್ ನಷ್ಟದಲ್ಲಿ ಮುಚ್ಚುವ ಪರಿಸ್ಥಿತಿ ಬಂದೊದಗಿತು. ಮೈಮೇಲೆ ಸಾವಿರದ ಐನೂರು ರೂಪಾಯಿ ಸಾಲದ ಹೊರೆ!

ಆಗ ಬೇರೆ ದಾರಿ ಇಲ್ಲದೇ ಶುರು ಮಾಡಿದ್ದು ಬಾದಾಮಿ ಪೌಡರ್ ತಯಾರಿಸಿ ಪೊಟ್ಟಣ ಮಾಡಿ ಮಾರಾಟ. ರಾಧಾಕೃಷ್ಣ ಅಡಿಗರ ದೊಡ್ಡಕ್ಕ ರುಕ್ಮಿಣಿ ಹೇಳುವಂತೆ 'ಬಾದಾಮಿ ಪುಡಿ ಪ್ಯಾಕೆಟ್‌ಗೆ ಇಟ್ಟಿದ್ದ ಹೆಸರು ಶ್ರೀಕೃಷ್ಣ ಆಲ್ಮಂಡ್ ಮಾಲ್ಟ್. ಸೂಚನೆ: ಒಂದು ಲೋಟ ಹಾಲಿಗೆ ಒಂದು ಟೀ ಸ್ಪೂನ್ ಮಾಲ್ಟ್ ಉಪಯೋಗಿಸುವುದು. ಗೃಹ ಕೈಗಾರಿಕೆಗೆ ಪ್ರೋತ್ಸಾಹಿಸಿರಿ' ಅಂತ ಪ್ಯಾಕೆಟ್‌ನಲ್ಲಿ ಚೀಟಿ ಇರಿಸುತ್ತಿದ್ದರಂತೆ. ಹಾಲುಪುಡಿ ಡಬ್ಬಕ್ಕೆ ಪೇಪರ್‌ಸುತ್ತಿ ಮೇಲೆ ಕೆಳಗೆ ರಬ್ಬರ್ ಸ್ಟಾಂಪ್ ಹೊಡೆದು ಪ್ಯಾಕ್ ಮಾಡುತ್ತಿದ್ದರು. ದೊಡ್ಡ ಅಣ್ಣ ಶಂಕರನಾರಾಯಣರಿಗೆ ಆಗ 15 ವರ್ಷ. ಜವಾಬ್ದಾರಿ ವಹಿಸಿಕೊಳ್ಳುವುದರಲ್ಲಿ ಅವರು ದೊಡ್ಡ ಅಣ್ಣನೇ ಆಗಿದ್ದರು. ಅಡಿಗರ ಕುಟುಂಬ ಒಂದು ನೆಲೆ ಕಂಡುಕೊಳ್ಳಲು ಅವರ ಶ್ರಮ ಅಪಾರ. ಓದಿದ್ದರೂ ಅಪ್ಪಯ್ಯನಿಗೆ ಹೆಗಲು ಕೊಟ್ಟು ನಿಂತರು.

'ಮನೆಯಲ್ಲಿ ಅತ್ಯಂತ ಕಷ್ಟದ ದಿನಗಳನ್ನು ಎದುರಿಸುವಾಗಲೂ ಅಪ್ಪಯ್ಯ-ಅಮ್ಮನ ಜೊತೆ ಅಣ್ಣನೇ ಸಾಥಿ. ಅಮ್ಮ ಮನೆಯಲ್ಲೇ ಬಾದಾಮಿ ಪುಡಿ ತಯಾರಿಸಿ ಕೊಡುತ್ತಿದ್ದಳು. ಬಾದಾಮಿ ಕುಟ್ಟಿಕುಟ್ಟಿ ಅಂಗೈ ಮೇಲೆ ಬೊಬ್ಬೆ ಏಳುತ್ತಿದ್ದವು. ಆದರೆ ಹೊಟ್ಟೆಪಾಡು ಅದಕ್ಕಿಂತ ದೊಡ್ಡ ನೋವು. ಪ್ಯಾಕೆಟ್‌ಗಳನ್ನು ಚೀಲದಲ್ಲಿ ತುಂಬಿಕೊಂಡು ಸೈಕಲ್ ಮೇಲೆ ಬೆಂಗಳೂರನ್ನೆಲ್ಲ ಸುತ್ತುತ್ತಿದ್ದರು ಶಂಕರನಾರಾಯಣ.

ಬೇಗೂರು, ಹೊಸೂರು, ರಾಮನಗರ ಎಲ್ಲ ಕಡೆಗೂ ಹೋಗಿ ಮಾರಾಟ ಮಾಡಿ ಬರುತ್ತಿದ್ದರು. ಬಂದ ದುಡ್ಡನ್ನು ಅಮ್ಮನ ಕೈಗೆ ಇಡುತ್ತಿದ್ದರು. ಅವರಿಗೆ ಸಿನಿಮಾ ನೋಡುವುದಕ್ಕೆ 65 ಪೈಸೆ ಕೊಟ್ಟರೆ ಮುಗಿಯಿತು. ಬಹಳ ಖುಷಿ. ಮಾಡಿದ ಹೋಟೆಲ್‌ಗಳೆಲ್ಲ ನಷ್ಟದಿಂದ ಮುಚ್ಚಿದಾಗ ಜೀವನಾಧಾರ ಅಂದರೆ ಅಮ್ಮ ಮಾಡಿದ ಅಣ್ಣ ಮಾರಿದ ಬಾದಾಮಿ ಪೌಡರ್ ಪ್ಯಾಕೆಟ್‌ಗಳೇ. ಬಳಸುವವರ ಮನಸ್ಸಿನಲ್ಲಿ ಅಡಿಗರ ಬಾದಾಮ್ ಪುಡಿ ಎಂದೇ ಜನಪ್ರಿಯವೂ ಆಗಿತ್ತು. ಇವೆಲ್ಲ ಹೋರಾಟವೂ ತಾನು ಹುಟ್ಟುವುದಕ್ಕಿಂತ ಮೊದಲು; ಅಪ್ಪಯ್ಯ, ಅಮ್ಮ, ಅಣ್ಣ ಹೇಳುತ್ತಿದ್ದ ವಿಷಯಗಳು, ತನಗೂ ದೊಡ್ಡಣ್ಣನಿಗೂ 16 ವರ್ಷ ಅಂತರ' ಎಂದು ನೆನೆಸಿಕೊಳ್ಳುತ್ತಾರೆ ರಾಧಾಕೃಷ್ಣ ಅಡಿಗರು.

ಹುರಿದಿದ್ದು ಹದವಾಗಿ

ನಷ್ಟದ ಮೇಲೆ ನಷ್ಟ ಅನುಭವಿಸಿದರೂ ಸದಾ ಹೋಟೆಲ್‌ನದೇ ಧ್ಯಾನದಲ್ಲಿರುತ್ತಿದ್ದ ನಾಗೇಶ ಅಡಿಗರಿಗೆ ಕೊನೆಗೂ ದೇವರು ಕಣ್ಣು ತೆರೆದ! ರವೆ ಹುರಿದಿದ್ದು ಹದಕೆಂಪಾಗಿ ಉಪ್ಪಿಟ್ಟು ಮಾಡಲು ಸಮಯ ಕೂಡಿ ಬಂತು.

ಶಂಕರಪುರದಲ್ಲಿ ರಂಗರಾವ್ ರಸ್ತೆಯ ಒಂದು ಮೂಲೆಮನೆಯ ಕಾರ್‌ಶೆಡ್‌ನಲ್ಲಿ ಪದ್ಮನಾಭ ರಾವ್ ಎನ್ನುವವರು ಹೋಟೆಲ್ ಶುರು ಮಾಡಬೇಕೆಂದು ತಯಾರಿ ನಡೆಸಿದ್ದರು. ಆದರೆ ಅನುಭವ ಇರಲಿಲ್ಲ. ಅವರು ದೂರವಾಣಿ ವಿನಿಮಯ ಕೇಂದ್ರದ ಮಾಜಿ ಅಧಿಕಾರಿ. ನಾಗೇಶ ಅಡಿಗರು ಮೊದಲು ಹೋಟೆಲ್ ಶುರು ಮಾಡಬೇಕು ಅಂತ ಅಂದುಕೊಂಡಿದ್ದು ಇನ್ನೊಬ್ಬರ ಸಹಭಾಗಿತ್ವದಲ್ಲಿ. ಜಂಟಿ ವ್ಯವಹಾರ ಪ್ರಸ್ತಾಪ ಇಟ್ಟವರು ಜಟಕಾ ಸ್ಟ್ಯಾಂಡ್ ಬಳಿ ಅಡಿಗರು ನಷ್ಟ ಅನುಭವಿಸಿದ್ದ ಹೋಟೆಲ್ ಕೊಂಡುಕೊಂಡ ವ್ಯಕ್ತಿ. ಆದರೆ ಆ ಹೋಟೆಲ್‌ನಲ್ಲಿ ಅವರೂ ನಷ್ಟ ಅನುಭವಿಸಿದ್ದರು. ಹಾಗಾಗಿ ಜಂಟಿಯಾಗಿ ಮತ್ತೆ ಹೋಟೆಲ್ ಶುರು ಮಾಡುವ ಪ್ರಸ್ತಾಪ ಮಾತಿನಲ್ಲೇ ಉಳಿಯಿತು. ಅತ್ತ ಪದ್ಮನಾಭ ರಾಯರು ಶುರು ಮಾಡಿ ಶುರು ಮಾಡಿ ಎಂದು ಒತ್ತಾಯಿಸತೊಡಗಿದರು. ಅಲ್ಲಿದ್ದುದು ಎರಡು ಕಟ್ಟಿಗೆ ಒಲೆ ಹಾಗೂ ಒಂದು ಮರದ ಕೌಂಟರ್ ಅಷ್ಟೆ.

ಅವರಿಗೆ ಹೋಟೆಲ್ ನಡೆಸಿ ಅನುಭವ ಇರಲಿಲ್ಲ. ಇವರಿಗೆ ನಷ್ಟದ ಕಹಿ ಅನುಭವವಿತ್ತು. ಸ್ವಲ್ಪ ಹಿಂಜರಿದರು. ಆ ವ್ಯಕ್ತಿ ಅಷ್ಟಕ್ಕೇ ಬಿಡಲಿಲ್ಲ. 'ಎಷ್ಟು ಹಣ ಕೊಡಲು ಸಾಧ್ಯವೋ ಅಷ್ಟೇ ಕೊಡಿ. ಉಳಿದಿದ್ದನ್ನು ಹಂತಹಂತವಾಗಿ ಕೊಡಿ. ನಾನೇ ಲೈಸೆನ್ಸ್ ಸಹ ಮಾಡಿಸಿಕೊಡುತ್ತೇನೆ' ಎಂದರು. ಆಗ ನಾಗೇಶ ಅಡಿಗರು ತನ್ನ ಬಳಿ ಇದ್ದ 500 ರೂಪಾಯಿ ಮುಂದಿಟ್ಟರು. ಅವರಿಗೆ ಹಿಂದಿನ ಹೋಟೆಲಿಗಾಗಿ ಮಾಡಿದ್ದ 1500 ರೂ ಸಾಲ ತೀರಿಸಲೇಬೇಕಿತ್ತು. ಹಳೆಯ ಸಾಲ ತೀರಿಸಲು ಮತ್ತೊಂದು ಹೋಟೆಲ್ ಶುರು ಮಾಡಬೇಕಾದುದು ಅನಿವಾರ್ಯವೂ ಆಗಿತ್ತು.

ಆಗಲೇ ಶುರುವಾಗಿದ್ದು ಶಂಕರಮಠ ಪ್ರದೇಶದ ಈಗಿರುವ ಸ್ಥಳದಲ್ಲಿ 150 ಚದರ ಅಡಿಯಲ್ಲಿ ಎರಡು ಕಟ್ಟಿಗೆ ಒಲೆ ಹೂಡಿಕೊಂಡು ಶುರು ಮಾಡಿದ ಬ್ರಾಹ್ಮಣರ ಕಾಫಿಬಾರ್. ಇದು ಆರಂಭಗೊಂಡಿದ್ದ ಆ ಶುಭದಿನ 1965 ಜನವರಿ 27. ಅದಕ್ಕೆ ಆ ಹೆಸರಿಡುವ ಹಿಂದೆ ಇದ್ದ ಸಣ್ಣ ಮಾರುಕಟ್ಟೆ ತಂತ್ರ, ಎಂದರೆ ಆಗೆಲ್ಲ ಉಡುಪಿ ಬ್ರಾಹ್ಮಣರು ಹೋಟೆಲ್ ಉದ್ಯಮದಲ್ಲಿ ಮುಂಚೂಣಿಯಲ್ಲಿದ್ದರು. ಆಹಾರದ ಶುಚಿ-ರುಚಿಗೆ ಹೆಸರಾಗಿದ್ದರು. ಹಾಗಾಗಿ ಬ್ರಾಹ್ಮಣ ಟ್ರೇಡ್ ಮಾರ್ಕ್ ಗ್ರಾಹಕರನ್ನು ಸೆಳೆಯಲು ಸಹಾಯ ಮಾಡಬಹುದು ಎನ್ನುವ ಒಂದೇ ಒಂದು ಉದ್ದೇಶ, ತರ್ಕ. ನಾಗೇಶ ಅಡಿಗರ ಮನಸ್ಸಿನಲ್ಲಂತೂ ಮೇಲುಕೀಳು ಭೇದಭಾವ ಯಾವತ್ತೂ ಕಿಂಚಿತ್ತೂ ಸುಳಿಯುತ್ತಿರಲಿಲ್ಲ. ಮಕ್ಕಳಿಗೂ ಹಾಗೆಯೇ ನಡೆದುಕೊಳ್ಳಲು ಕಲಿಸಿದ್ದರು. ಇದಲ್ಲದೇ ಸನಿಹದಲ್ಲೇ ಟೆಲಿಕಾಂ ಆಫೀಸ್ ಇತ್ತು. ಅಲ್ಲಿಂದ ಗ್ರಾಹಕರು ಬರುತ್ತಾರೆ, ವ್ಯಾಪಾರ ಚೆನ್ನಾಗಿ ಆಗುತ್ತದೆ ಎಂಬ ನಿರೀಕ್ಷೆ.

ಇನ್ನು ಜನವರಿ 27ರ ಆರಂಭ ಮುಹೂರ್ತ ಸೂಚಿಸಿದ್ದ ಪುರೋಹಿತರು, ಇನ್ನು ನೂರು ವರ್ಷ ಇಂಥ ಮುಹೂರ್ತ ದೊರಕುವುದಿಲ್ಲ, ಅಪರೂಪದ ಮುಹೂರ್ತ, ನಿಮ್ಮ ಹೋಟೆಲ್ ಬಹಳ ಅಭಿವೃದ್ಧಿ ಹೊಂದುತ್ತದೆ ಎಂದು ಹೇಳಿದ್ದರಂತೆ. ಹಾಗಂತ ಅಪ್ಪಯ್ಯ ಹೇಳುತ್ತಿದ್ದರೆಂದು ರಾಧಾಕೃಷ್ಣ ಅಡಿಗರು ನೆನಪಿಸಿಕೊಳ್ಳುತ್ತಾರೆ. ಆದರೆ ಒಂದೇ ವಾರದಲ್ಲಿ ಅವರ ಅಕ್ಕನ ಮದುವೆ ಮುಹೂರ್ತ ನಿಗದಿಯಾಗಿದೆ- ಫೆಬ್ರವರಿ 5, 1965. ಅದೂ ಕೊಂಡಳ್ಳಿಯಲ್ಲೇ ಮದುವೆ. ಆ ಮುಹೂರ್ತ ಬಿಡುವ ಹಾಗಿಲ್ಲ; ಈ ಮುಹೂರ್ತ ಬಿಡಲು ಮನಸ್ಸಿಲ್ಲ! ಕೊನೆಗೂ ಎರಡನ್ನೂ ಬಿಡದೆ ನಡೆಸಿಕೊಡುವ ನಿರ್ಧಾರ ಮಾಡಲಾಯಿತು. ಅಂತೂ ಶುಭ ಮುಹೂರ್ತದಲ್ಲಿ ಹೋಟೆಲ್ ಬ್ರಾಹ್ಮಣರ ಕಾಫಿ ಬಾರ್ ಶುರುವಾಗಿಯೇ ಬಿಟ್ಟಿತು.

ಮೂವತ್ತೈದು ವರ್ಷಗಳ ಆ ತಪಸ್ಸು, ಆ ಪರಿಶ್ರಮ ಫಲ ಕೊಡುವ ಯೋಗ ಒದಗಿದ್ದರಿಂದ ನಾಗೇಶ ಅಡಿಗರು ಮತ್ತೆ ಹಿಂದಿರುಗಿ ನೋಡುವ ಪ್ರಮೇಯವೇ ಬರಲಿಲ್ಲ. ಅಡಿಗ ಪರಿವಾರಕ್ಕೆ ಹೊಸ ದಿಕ್ಕು, ಹೊಸ ಗಾಳಿ, ಹೊಸ ಬೆಳಕು, ಹೊಸ ಚೈತನ್ಯ ದೊರೆಯುವ ಕಾಲ ಕೂಡಿ ಬಂದಿತ್ತು.

ಆ ಅಮೃತ ಘಳಿಗೆಯಲ್ಲಿ ಬ್ರಾಹ್ಮಣರ ಕಾಫಿಬಾರ್ ಆರಂಭ ಮಾಡಿ ಪೂಜೆ ನೆರವೇರಿಸಿ ಊರಿಗೆ ಹೋಗಿ ದೊಡ್ಡ ಮಗಳು ರುಕ್ಮಿಣಿ ಮದುವೆಯನ್ನು ಅಂದುಕೊಂಡ ಮುಹೂರ್ತದಲ್ಲೇ ನೆರವೇರಿಸಿದ ನಾಗೇಶ ಅಡಿಗರು ಎರಡೇ ದಿನಗಳಲ್ಲಿ ಪುನಃ ಬಂದು ಹೋಟೆಲ್ ಕೆಲಸಗಳಲ್ಲಿ ಮಗ್ನರಾದರು. ಆಗೆಲ್ಲ ವಾಹನ ಸೌಲಭ್ಯವೂ ಇರಲಿಲ್ಲ, ಹೋಗಲು ಎರಡು ದಿನ ಬರುವುದಕ್ಕೆ ಎರಡು ದಿನ. ಅದು ಹೇಗೋ ಎಲ್ಲವನ್ನೂ ನಿಭಾಯಿಸಿದರು.

ಹೋಟೆಲ್ ನಡೆಸಲು ಆರಂಭದಲ್ಲಿ ಕಟ್ಟಿಗೆ ಒಲೆ ಬದಲಿಗೆ ಸೀಮೆಎಣ್ಣೆ ಸ್ಟೋವ್ ಅನ್ನೇ ಬಳಸುತ್ತಿದ್ದುದು ದೊಡ್ಡ ವಿಷಯ. ಮೊದಲು ಬತ್ತಿ ಸ್ಟೋವ್ ಇತ್ತು, ಕ್ರಮೇಣ ಪಂಪ್ ಸ್ಟೋವ್ ಬಂತು. ಆರಂಭದಲ್ಲಿ ಒಂದು ಕಾಫಿ ಬೆಲೆ 4 ಪೈಸೆ! ಜೊತೆಗೆ ಬಾದಾಮಿ ಹಾಲು ಕೂಡ ಲಭ್ಯವಿತ್ತು. ಇಡ್ಲಿ ವಡೆ ಶುರು ಮಾಡಿರಲಿಲ್ಲ.

ಹೋಟೆಲ್‌ನಲ್ಲಿ ಮೊದಮೊದಲು ಕಾಫಿ ಹಾಗೂ ಬಿಸ್ಕತ್ತು ಮಾತ್ರ ಕೊಡಲು ಶಕ್ಯವಾಗುತ್ತಿತ್ತು. ಕಾಫಿ ಜೊತೆ ಬನ್ ಮಾರುವ ಉಪಾಯ ಮಾಡಿದ್ದು ಮೂರನೆ ಪುತ್ರ ಪರಮೇಶ್ವರ ಅಡಿಗರು. ಮೊದಲು ದಿನಕ್ಕೆ ಐವತ್ತು ಬನ್ನಿಂದ ಶುರುವಾಗಿ ಇನ್ನೂರು ಮುನ್ನೂರು, ಏಳೆಂಟು ನೂರು ಬನ್ ಪ್ರತಿದಿನ ಖಾಲಿ ಆಗುತ್ತಿತ್ತು. ವಿವಿ ಪುರ ವೃತ್ತದಲ್ಲಿರುವ ವಿವಿ ಬೇಕರಿ ಜೊತೆಗೆ ರಾಮವಿಲಾಸ ಬೇಕರಿ, ರತ್ನವಿಲಾಸ ಬೇಕರಿ ಹೀಗೆ ದೊಡ್ಡದೊಡ್ಡ ಮೂರು ಬೇಕರಿಯಿಂದಲೂ ಬನ್ ಖರೀದಿ ಮಾಡುವಂತಾಯಿತು.

ಆಗಿನ್ನೂ ಇಡ್ಲಿ, ಉಪ್ಪಿಟ್ಟು, ಕೇಸರಿಬಾತ್ ಯಾವುದನ್ನೂ ಆರಂಭಿಸಿರಲಿಲ್ಲ. ಕಾರಣ ಸಂಪನ್ಮೂಲ ಕೊರತೆ! ಹಾಗೆಯೇ ಕೆಲವು ವರ್ಷ ಕಳೆದವು.